4715.

N12<529139520 021
LS
ubTÜBINGEN

BOUND BY
L. Joshua
Mangalore.

BASE

B

LITURGY

OF THE

BASEL GERMAN EVANGELICAL MISSION CHURCHES

IN

SOUTH-WESTERN INDIA

ಸುವಾರ್ತಾವಲಂಬಿತವಾದ

ಬಾಸಲ್ ಜರ್ಮನ್ ಮಿಶನ್ ಸಭೆಗಳ

ದೇವಾರಾಧನಾಪದ್ಧತಿ

K. UNIV. BIBL. TÜBINGEN

MISSIONS-BIBLIOTHEK IN BASEL

MANGALORE
BASEL MISSION BOOK & TRACT DEPOSITORY
1878 Ci XIV. 105

PRINTED AT THE BASEL MISSION PRESS

A.

ಪ್ರಾರ್ಥನೆಗಳು.

Gebete.

I. ಆದಿ

Zuers
die Kanz

ಪ್ರಸಂ
ರಿಗೆ ತಾನು

ನ
ತಿಯೂ
ಆಮೆನ್

ನ
ನಿಂದಲು

A.

ಪ್ರಾರ್ಥನೆಗಳು.

Gebete.

I. ಆದಿತ್ಯವಾರದ ಪ್ರಾತಃಕಾಲದಲ್ಲಿ ಆಗುವ ದೇವಾರಾಧನೆ.

Sonntag Morgengottesdienst.

Zuerst tritt der Prediger an den Altar, oder wo keiner vorhanden ist, auf die Kanzel, und spricht den Kanzelgruss, wozu die Gemeinde aufsteht.

ಪ್ರಸಂಗಿ ಮೇಜಿನ ಬಳಿಯಲ್ಲಿ ಅಥವಾ ಪ್ರಸಂಗಪೀಠದಲ್ಲಿ ನಿಂತಾಗ ಎದ್ದು ಕೊಂಡ ಸಭೆಯವರಿಗೆ ತಾನು ಹೇಳುವ

a. ಆರಂಭದ ಆಶೀರ್ವಾದವಚನಗಳು.

Kanzelgrüsse beim Auftritt.

1. ಸಾಧಾರಣವಾದ ಆದಿತ್ಯವಾರಗಳಲ್ಲಿ.

An gewöhnlichen Sonntagen.

ನಮ್ಮ ಒಡೆಯನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮದ ಅನ್ಯೋನ್ಯವೂ ನಿಮ್ಮೆಲ್ಲರ ಸಂಗಡ ಇರಲಿ! ಆಮೆನ್! (೨ ಕೊರಿ. ೧೩, ೧೪.)

ಅಥವಾ oder

ನಮ್ಮ ತಂದೆಯಾದ ದೇವರಿಂದಲೂ ಒಡೆಯನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ! (೨ ಕೊರಿ. ೧, ೨.)

ಅಥವಾ oder

ತಂದೆಯಾದ ದೇವರಿಂದಲೂ ತಂದೆಯ ಮಗನಾಗಿರುವ ಯೇಸು ಕ್ರಿಸ್ತ ಒಡೆಯನಿಂದಲೂ ಕೃಪೆಯೂ ಕರುಣೆಯೂ ಸಮಾಧಾನವೂ, ಸತ್ಯದಲ್ಲಿಯೂ ಪ್ರೀತಿಯಲ್ಲಿಯೂ, ನಿಮ್ಮ ಸಂಗಡ ಇರಲಿ! (೨ ಯೋಹಾ. ೩.)

ಅಥವಾ oder

ನಮ್ಮ ಆರಂಭವು ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ಆಗಲಿ! ಆಮೆನ್!

2. ಹಬ್ಬದ ದಿವಸಗಳಲ್ಲಿ.
An Festtagen.

ಕ್ರಿಸ್ತನ ಆಗಮನಕ್ಕೆ. Advent.

ದಾವೀದನ ಮಗನಿಗೆ ಹೊಸನ್ನ! ಯೆಹೋವನ ಹೆಸರಿನಲ್ಲಿ ಬರುವಾತನಿಗೆ ಸ್ತೋತ್ರವಾಗಲಿ! ಅತ್ಯುನ್ನತದಲ್ಲಿ ಹೊಸನ್ನ! (ಮತ್ತಾ. ೨೧, ೯.)

ಅಥವಾ oder

ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾದ, ನಂಬಿಕೆಯಾಗಿರುವ ವಾಕ್ಯವು ಇದೇ—ಕ್ರಿಸ್ತ ಯೇಸುವು ಪಾಪಿಗಳನ್ನು ರಕ್ಷಿಸುವದಕ್ಕೆ ಭೂಲೋಕಕ್ಕೆ ಬಂದನು. (೧ ತಿಮೊ. ೧, ೧೫.)

ಕ್ರಿಸ್ತನ ಜನನಕ್ಕೆ. Christtag.

ಇಗೋ, ಜನರಿಗೆಲ್ಲಾ ಉಂಟಾಗುವ ಮಹಾ ಸಂತೋಷವನ್ನು ನಿಮಗೆ ಪ್ರಸಂಗಿಸುತ್ತೇನೆ; ಏನಂದರೆ, ಈ ಹೊತ್ತು ಕ್ರಿಸ್ತ ಒಡೆಯನೆಂಬ ರಕ್ಷಕನು ದಾವೀದನ ಪಟ್ಟಣದಲ್ಲಿ ನಿಮಗೋಸ್ಕರ ಹುಟ್ಟಿದ್ದಾನೆ. (ಲೂಕ. ೨, ೧೦. ೧೧.)

ಅಥವಾ oder

ಅತ್ಯುನ್ನತದಲ್ಲಿ ದೇವರಿಗೆ ಮಹಿಮೆ! ಮತ್ತು ಭೂಮಿಯ ಮೇಲೆ ಸಮಾಧಾನವು, ಮನುಷ್ಯರಲ್ಲಿ ದಯವು! (ಲೂಕ. ೨, ೧೪.)

ಯುಗಾದಿಗೆ. Neujahr.

ಇರುವಾತನೂ ಇದ್ದಾತನೂ ಬರುವಾತನೂ ಆಗಿರುವಾತನಿಂದಲೂ, ಈತನ ಸಿಂಹಾಸನದ ಮುಂದೆ ಇರುವ ಏಳು ಆತ್ಮಗಳಿಂದಲೂ, ನಂಬಿಕೆಯುಳ್ಳ ಸಾಕ್ಷಿಯೂ ಸತ್ತವರಲ್ಲಿಂದ ಬಂದ ಚೊಚ್ಚಲನೂ ಭೂರಾಜರ ನಾಯಕನೂ ಆಗಿರುವ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ! (ಪ್ರಕ. ೧, ೪.)

ಅಥವಾ oder

ದೇವರು ನಮಗೆ ಆಶ್ರಯವೂ ಬಲವೂ ಆಗಿದ್ದಾನೆ; ಇಕ್ಕಟ್ಟುಗಳಲ್ಲಿ ವಿಶೇಷವಾಗಿ ಸಹಾಯಕನಾಗಿ ಕಾಣಿಸಿ ಕೊಳ್ಳುತ್ತಾನೆ. (ಕೀರ್ತ. ೪೬, ೧.)

ಪ್ರತ್ಯಕ್ಷತೆಯ ಹಬ್ಬಕ್ಕೆ. Erscheinungsfest.

ಏಳು! ಬೆಳಗು! ಯಾಕಂದರೆ ನಿನ್ನ ಬೆಳಕು ಬಂತು; ಯೆಹೋವನ ಮಹಿಮೆ ನಿನ್ನ ಮೇಲೆ ಉದಯವಾಯಿತು. (ಯೆಶಾ. ೬೦, ೧.)

ಕ್ರಿಸ್ತನ ಮರಣದಿನಕ್ಕೆ. Charfreitag.

ಕೊಲ್ಲಲ್ಪಟ್ಟ ಕುರಿಮರಿಯು ಬಲ ಐಶ್ವರ್ಯ ಜ್ಞಾನ ಶಕ್ತಿ ಘನ ಮಹಿಮೆ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯವಾಗಿದೆ. (ಪ್ರಕ. ೫, ೧೨.)

ಕ್ರಿಸ್ತನ ಉತ್ಥಾನಕ್ಕೆ. Ostern.

ಯೇಸು ಕ್ರಿಸ್ತ ಒಡೆಯನ ತಂದೆಯಾದ ದೇವರಿಗೆ ಸ್ತೋತ್ರವು! ಈತನು ತನ್ನ ಅಧಿಕವಾದ ಕರುಣೆಯ ಮೇರೆಗೆ, ಯೇಸು ಕ್ರಿಸ್ತನು ಸತ್ತವರೊಳಗಿಂದ ಪಡೆದ ಉತ್ಥಾನದ ಮೂಲವಾಗಿ, ನಮ್ಮನ್ನು ಜೀವವುಳ್ಳ ಪ್ರತೀಕ್ಷೆಗೆ, ಅಕ್ಷಯವಾದಂಥ, ನಿಷ್ಕಳಂಕವಾದಂಥ, ಬಾಡದಂಥ ಬಾಧ್ಯತೆಗೆ ತಿರಿಗಿ ಹುಟ್ಟಿಸಿದ್ದಾನೆ. (೧ ಪೇತ್ರ. ೧, ೩. ೪.)

ಅಥವಾ oder

ನಿತ್ಯ ಒಡಂಬಡಿಕೆಯ ರಕ್ತದಿಂದ ಕುರಿಗಳ ದೊಡ್ಡ ಕುರುಬನಾಗಿರುವ ನಮ್ಮ ಒಡೆಯನಾದ ಯೇಸುವನ್ನು ಸತ್ತವರೊಳಗಿಂದ ತಿರಿಗಿ ಬರಮಾಡಿದ ಸಮಾಧಾನದ ದೇವರು, ತನ್ನ ಚಿತ್ತವನ್ನು ನೀವು ಮಾಡುವ ಹಾಗೆ, ನಿಮ್ಮನ್ನು ಸಕಲ ಸತ್ಕ್ರಿಯೆಗಳಿಗೆ ಸವರಿಸಿ, ತನ್ನ ಸಮ್ಮುಖದಲ್ಲಿ ಸಮರ್ಪಕವಾದದನ್ನು, ಯೇಸು ಕ್ರಿಸ್ತನ ಮುಖಾಂತರ, ನಿಮ್ಮಲ್ಲಿ ಉಂಟು ಮಾಡಲಿ! ಆತನಿಗೆ ಯುಗಯುಗಾಂತರಗಳಿಗೂ ಮಹಿಮೆ ಆಗಲಿ! ಆಮೆನ್! (ಇಬ್ರಿ. ೧೩, ೨೦. ೨೧.)

ಕ್ರಿಸ್ತನ ಸ್ವರ್ಗಾರೋಹಣಕ್ಕೆ. Himmelfarth.

ಕೀರ್ತಿಸಿರಿ! ದೇವರನ್ನು ಕೀರ್ತಿಸಿರಿ! ಕೀರ್ತಿಸಿರಿ! ನಮ್ಮ ಅರಸನನ್ನು ಕೀರ್ತಿಸಿರಿ! ಯಾಕಂದರೆ ದೇವರು ಎಲ್ಲಾ ಭೂಮಿಗೆ ಅರಸನು. ಬುದ್ಧಿಯಿಂದ ಕೀರ್ತಿಸಿರಿ! ದೇವರು ಜನಾಂಗಗಳನ್ನು ಆಳುತ್ತಾನೆ. ದೇವರು ತನ್ನ ಪವಿತ್ರವಾದ ಗದ್ದಿಗೆಯಲ್ಲಿ ಕೂತಿದ್ದಾನೆ. (ಕೀರ್ತ. ೪೭, ೬—೮.)

ಪಂಚಾಶತ್ತಿನ ಹಬ್ಬಕ್ಕೆ. Pfingsten.

ನೀವು ಮಕ್ಕಳಾಗಿರುವದರಿಂದ ದೇವರು ತನ್ನ ಮಗನ ಆತ್ಮವನ್ನು ನಿಮ್ಮ ಹೃದಯಗಳೊಳಗೆ ಕಳುಹಿಸಿ ಕೊಟ್ಟನು, ಅಪ್ಪಾ! ತಂದೆಯೇ! ಎಂದು ಕೂಗುವಂಥಾದನ್ನೇ. (ಗಲಾ. ೪, ೬.)

ತ್ರಯೈಕತ್ವದ ಹಬ್ಬಕ್ಕೆ. Dreieinigkeitsfest.

ಇದ್ದಾತನೂ ಇರುವಾತನೂ ಬರುವಾತನೂ ಆಗಿರುವಂಥ, ಸರ್ವಶಕ್ತನಾದ ದೇವರಾಗಿರುವಂಥ ಒಡೆಯನು ಪವಿತ್ರ, ಪವಿತ್ರ, ಪವಿತ್ರನೇ! (ಪ್ರಕ. ೪, ೮.)

b. ಗೀತವು. Gesang.

c. ಪ್ರಾರ್ಥನೆಗಳು. Gebete.

1. ಪೀಠಿಕೆ. Einleitung.

ನಮ್ಮ ಯೇಸು ಕ್ರಿಸ್ತ ಒಡೆಯನ ಸ್ವರ್ಗರಾಜ್ಯಕ್ಕೆ ಕರೆಯಲ್ಪಟ್ಟ ಪ್ರಿಯ ಸಭೆಯವರೇ! ಮನ ಮುಟ್ಟ ಪ್ರಾರ್ಥಿಸಿ, ನಿಮ್ಮ ಬಿನ್ನಹಗಳನ್ನು ವಿನಯದಿಂದಲೂ ಭಕ್ತಿಯಿಂದಲೂ ದೇವರಿಗೆ ಹೇಳಿ ಕೊಳ್ಳಿರಿ! ಇಲ್ಲಿಯೂ ದೇವರ ಮನೆಯೂ ಸ್ವರ್ಗದ ಬಾಗಲೂ ಅದೆ. ಆತನ ಅತಿ ಪ್ರಿಯ ಕುಮಾರನಾದ ಯೇಸು ಕ್ರಿಸ್ತನಲ್ಲಿ ಪ್ರತ್ಯಕ್ಷವಾದಂಥ, ಪುತ್ರಸ್ವೀಕಾರದ ಪವಿತ್ರಾತ್ಮದ ಮೂಲವಾಗಿ ದೊರಕುವಂಥ ಆತನ ಮಹಿಮಾತಿಶಯವನ್ನು ನಾವು, ಆತನ ಪರಮ ಕೃಪೆಯಿಂದ, ಇಲ್ಲಿಯೂ ಕಂಡು ಅನುಭವಿಸ ಬಹುದು. ಹ್ಯಾಗಂದರೆ, ಇಲ್ಲಿ ನಮ್ಮ ದೇವರು ಆಶ್ಚರ್ಯವುಳ್ಳ ಜ್ಞಾನ ತಿಳುವಿಕೆಗಳ ಬೆಳಕನ್ನು ತನ್ನ ವಾಕ್ಯದಿಂದ ರಾಜ್ಯದ ಮಕ್ಕಳ ಮೇಲೆ ಮೂಡಿಸುತ್ತಾನೆ; ಇಲ್ಲಿ ದೇವರು ಎಲ್ಲಾ ಬುದ್ಧಿ ಮೀರುವ ಆದರಣೆ ಸಮಾಧಾನ ಆನಂದಗಳಿಂದ ಭರಿತವಾದಂಥ ದಿವ್ಯ ಜೀವದ ಬಲವನ್ನು ತನ್ನ ಪವಿತ್ರ ಸಂಸ್ಕಾರಗಳಿಂದ ಅವರಲ್ಲಿ ಬೆಳಸುತ್ತಾ ಬರುತ್ತಾನೆ; ಇಲ್ಲಿ ಆತನು ಉತ್ತಮವಾದ ಎಲ್ಲಾ ವರಗಳನ್ನು ಜೀವದ ಬುಗ್ಗೆಯಿಂದ ಹರಿಯ ಮಾಡುತ್ತಾನೆ. ಹೀಗಿರಲಾಗಿ, ಒಡೆಯನಲ್ಲಿ ಪ್ರಿಯರೇ, ನೀವು ಯೇಸುವಿನ ನಾಮದಲ್ಲಿ ನಿರಾತಂಕಪ್ರವೇಶ ಕೊಟ್ಟಿರುವ ಕೃಪಾಸನಕ್ಕೆ, ತ್ರಯೈಕದೇವರ ಅತಿ ಪವಿತ್ರಸ್ಥಾನಕ್ಕೆ, ಧೈರ್ಯವಾಗಿ ಬಂದು, ಸದ್ಭಾವದಿಂದ ಪ್ರಾರ್ಥಿಸಿ, ಯೆಹೋವನ ಉಪಕಾರಗಳನ್ನು ನೆನಸಿ, ಸ್ತೋತ್ರದ ಅರ್ಪಣೆ ಮಾಡುತ್ತಾ, ಪವಿತ್ರತ್ವದ ಅಲಂಕಾರದಲ್ಲಿ ಆತನನ್ನು ಸೇವಿಸುತ್ತಾ ಇರುವದು ಬಹಳ ಬಹಳ ಯೋಗ್ಯವಾಗಿದೆ. ಆದದರಿಂದ ನಿಮ್ಮ ಹತ್ತರ ಬೇಡಿ ಕೊಳ್ಳುತ್ತೇನೆ — ಸತ್ಯವಾಗಿ ತಗ್ಗಿದ ಹೃದಯದಿಂದಲೂ ಕೂಸುಗಳಂತೆ ನಂಬುವ ಭರವಸದಿಂದಲೂ ದೇವರ ಬಳಿಗೆ ಬನ್ನಿರಿ! ಮತ್ತು ಮೊದಲು ಯಥಾರ್ಥವಾದ ಪಶ್ಚಾತ್ತಾಪದಿಂದ ನಿಮ್ಮ ಪಾಪಗಳನ್ನು ನನ್ನ ಕೂಡ ಅರಿಕೆ ಮಾಡಿರಿ!

2. ಪಾಪದ ಅರುಹಿಕೆಯೂ ಕ್ಷಮಾವಚನಗಳೂ.

Sündenbekenntniss und Absolution.

ಪಾಪದ ಅರುಹಿಕೆ a. Sündenbekenntniss.

ಸ್ವರ್ಗದಲ್ಲಿರುವ ತಂದೆಯಾದ ದೇವರ ಮುಂದೆ ನಾವು, ಬಡ ಕಂಗಾಲ ಪಾಪಿಗಳಾಗಿದ್ಧೇವೆಂದು, ದುಃಖಗೊಂಡು, ಅರಿಕೆ ಮಾಡುತ್ತೇವೆ. ಅಕಟಾ! ನಾವು ಬದುಕಿದ ಎಲ್ಲಾ ಕಾಲವೂ ನಮ್ಮ ಕೈ ಬಾಯಿ ಮನಸುಗಳಿಂದ ನಮ್ಮ ದೇವರ ಮುಂದೆ ಬಹಳ ಪಾಪ ಮಾಡಿದ್ಧೇವೆ; ನಾವು ಆತನ ಅನಂತ ಕೃಪೆಯನ್ನು ನೆನಸದೆ, ಸಹೋದರಪ್ರೀತಿಯಲ್ಲಿ ನಡೆಯದೆ, ಅಶುದ್ಧತ್ವ ಅವಿಶ್ವಾಸ ಅಪಕಾರ ಗರ್ವ ಮತ್ಸರ ದ್ವೇಷ ರೋಷ ದುರಿಚ್ಛೆ ದ್ರವ್ಯಾಶೆ ಮುಂತಾದವುಗಳಲ್ಲಿ ಬಿದ್ದು, ದೇವರ ಪವಿತ್ರವಾದ ಕಟ್ಟಳೆಗಳನ್ನು ಯಾವಾಗಲೂ ಎಲ್ಲಾ ಬಗೆಯಿಂದಲೂ ಮೀರುತ್ತಾ, ಸ್ವಾಮಿದ್ರೋಹಿಗಳಾಗಿದ್ಧೇವೆ. ಹೀಗೆ ನಾವು ದೇವರ ನ್ಯಾಯವಾದ ದಂಡಕ್ಕೂ ಇಹಪರಗಳಲ್ಲಿ ವಿನಾಶಕ್ಕೂ ಗುರಿಯಾದೆವೆಂಬದು ನಿಶ್ಚಯವೇ! ಆದರೆ ಈಗ ನಾವು ನಮ್ಮ ಎಲ್ಲಾ ಪಾಪಗಳಿಗಾಗಿ ಎದೆಗುಂಡಿಯಲ್ಲಿ ಪಶ್ಚಾತ್ತಾಪ ಪಟ್ಟು, ಮನಃಪೂರ್ವಕವಾಗಿ ನೊಂದು ಕೊಳ್ಳುತ್ತೇವೆ; ದೇವರ ಸುವಾರ್ತೆಯಲ್ಲಿ ಸಾರಲ್ಪಟ್ಟಂಥ, ನಮ್ಮ ಅಪರಾಧಕ್ಕಿಂತ ಮಿಗಿಲಾದಂಥ ಆತನ ಕೃಪೆಯೂ ನಮ್ಮ ಯೇಸು ಕ್ರಿಸ್ತ ಒಡೆಯನ ಪುಣ್ಯವೂ ಅಲ್ಲದೆ, ಬೇರೆ ದಿಕ್ಕು ಕಾಣೆವು. ದೇವರೇ! ಅಪ್ಪಾ! ತಂದೆಯೇ! ನಾವು ಸ್ವರ್ಗದ ಮೇಲೆಯೂ ನಿನ್ನ ಮುಂದೆಯೂ ಪಾಪ ಮಾಡಿದ್ಧೇವೆ, ಇನ್ನು ಮೇಲೆ ನಿನ್ನ ಮಕ್ಕಳೆಂದು ಕರೆಯಲ್ಪಡ ನಾವು ಯೋಗ್ಯರಲ್ಲ! ಆದಾಗ್ಯೂ ನಿನ್ನ ಕೃಪೆಯನ್ನು ಹಾರೈಸಿ, ಈ ಕೃಪೆಯ ಸಮಯದಲ್ಲಿ ಬಂದು, ಪಾಪಪರಿಹಾರವನ್ನೂ ನಿನ್ನ ಕಡೆಗೆ ಹೊಸ ಧೈರ್ಯವನ್ನೂ ನಿನ್ನ ಆತ್ಮದಿಂದ ಶುದ್ಧೀಕರಣಕ್ಕೆ ಬಲವನ್ನೂ ಬೇಡಿ ಕೊಳ್ಳುತ್ತೇವೆ. ಆಮೆನ್!

Hierauf erhebt sich der Liturgus und spricht
ಬಳಿಕ ಪ್ರಸಂಗಿಯು ಎದ್ದು ನುಡಿಯ ತಕ್ಕ

ಕ್ಷಮಾವಚನ a. Absolution.

ನಿಮ್ಮ ನಿಮ್ಮ ಪಾಪಗಳನ್ನು ತಿಳಿದು ಕೊಂಡು, ನಿಜ ದುಃಖದಿಂದ
ಅರಿಕೆ ಮಾಡಿ, ಸದ್ವಿಶ್ವಾಸವುಳ್ಳ ಹೃದಯದಿಂದ ದಯ ಕ್ಷಮೆಗಳನ್ನು
ಬಯಸುವವರೇ! ಪಾಪಕ್ಷಮೆಯ ವಿಷಯದಲ್ಲಿ ಸುವಾರ್ತೆಯ ಆದರಣೆ
ಯ ವಾಕ್ಯವನ್ನು ಕೇಳಿರಿ! ಸರ್ವಶಕ್ತನಾದ ದೇವರು, ನಮ್ಮ ಯೇಸು
ಕ್ರಿಸ್ತ ಒಡೆಯನ ತಂದೆ ನಿಮ್ಮ ಮೇಲೆ ಕರುಣೆ ಇಟ್ಟಿದ್ದಾನೆ; ತನ್ನ ಪ್ರಿಯ
ಮಗನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ಮರಣ ತಾಳಿ, ನಿ
ಮ್ಮ ನೀತಿನಿರ್ಣಯಕ್ಕೋಸ್ಕರ ಎದ್ದ ಕಾರಣ ನಿಮ್ಮ ಪಾಪಗಳನ್ನೆಲ್ಲಾ
ಕ್ಷಮಿಸಿದ್ದಾನೆ. ಹೀಗಿರಲಾಗಿ, (ಕ್ರಿಸ್ತನ ಸಭೆಯ ಸೇವಕನಾದ) ನಾನು
ನಮ್ಮ ಯೇಸು ಕ್ರಿಸ್ತ ಒಡೆಯನ ಹೆಸರನ್ನು ಎತ್ತಿ, ಯಾರ ಪಾಪಗಳನ್ನಾ
ದರೂ ನೀವು ಬಿಟ್ಟರೆ, ಅವರಿಗೆ ಬಿಟ್ಟವೆ, ಯಾರವನ್ನಾದರೂ ಹಿಡಿದರೆ,
ಹಿಡಿದವೆ ಎಂಬುವ ಆತನ ವಾಕ್ಯವನ್ನು ಆಧಾರ ಮಾಡಿ ಕೊಂಡು, ನಿಮ್ಮ
ಲ್ಲಿ ಈಗ ನಿಜ ಮಾನಸಾಂತರ ಪಟ್ಟು ನಂಬುವಂಥವರೆಲ್ಲರಿಗೂ ಸಾರು
ತ್ತೇನೆ: ನೀವು ನಿಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾಗಿದ್ದೀರಿ; ಅವು
ಗಳ ಹಂಗು ತಡೆ ನಿಮಗೆ ಇನ್ನು ಇರದು; ಯಾಕಂದರೆ, ಯೇಸು ಕ್ರಿಸ್ತನು
ತಾನು ತಾಳಿದ ಶ್ರಮ ಮರಣಗಳಿಂದ ಪ್ರಾಯಶ್ಚಿತ್ತವನ್ನು ಕೊಟ್ಟು, ಪಾ
ಪವನ್ನು ಪರಿಹರಿಸಿ, ಪಾಪವಿಮೋಚನೆಯ ವಾಕ್ಯವನ್ನು ಸುವಾರ್ತೆ
ಯಿಂದ ಎಲ್ಲಾ ಲೋಕದಲ್ಲಿ ಸಾರಲಿಕ್ಕೆ ಅಪ್ಪಣೆ ಕೊಟ್ಟಿದ್ದಾನೆ. ಹೀಗಿರ
ಲಾಗಿ, ನಾನು ಈಗ ನಿಮಗೆ ತಿಳಿಸಿದ ಈ ಆದರಣೆಯ ನುಡಿಯನ್ನು
ನೀವು ನಿಮ್ಮ ಸಮಾಧಾನಕ್ಕಾಗಿ ಹಿಡಿದು ಕೊಂಡು, ನಿಮ್ಮ ಮನಸ್ಸಾಕ್ಷಿ
ಯನ್ನು ಈ ಆಧಾರದಿಂದ ಸಂತೈಸಿ, ನಿಮ್ಮ ಪಾಪಗಳು ನಿಮಗೆ ನಿಶ್ಚಯ
ವಾಗಿ ಬಿಟ್ಟವೆ ಎಂದು, ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ
ಹೆಸರಿನಲ್ಲಿ ದೃಢವಾಗಿ ನಂಬಿರಿ!

ಆದರೆ ಮಾನಸಾಂತರವೂ ವಿಶ್ವಾಸವೂ ಇಲ್ಲದವರೆಲ್ಲರಿಗೆ ನಾನು ತಿಳಿಯ ಪಡಿಸುವದೇನಂದರೆ: ಅವರ ಪಾಪಗಳು ಅವರಿಗೆ ಹಿಡಿದವೆ. ಅವರು ತಿರುಗಿ ಕೊಂಡು, ಮಾನಸಾಂತರ ಪಟ್ಟು, ಕ್ರಿಸ್ತನಲ್ಲಿ ವಿಶ್ವಾಸವಿಡದೆ ಹೋದರೆ, ದೇವರು ಅವರನ್ನು ಇಹದಲ್ಲಿಯೂ ಪರದಲ್ಲಿಯೂ ದಂಡಿಸದೆ ಇರನು. ಆದದರಿಂದ ನಾನು ನಮ್ಮೊಡೆಯನೂ ವಿಮೋಚಕನೂ ಆಗಿರುವ ಯೇಸು ಕ್ರಿಸ್ತನ ಅಪ್ಪಣೆಯ ಮೇರೆಗೆ ಇದನ್ನು ಅವರಿಗೆ ಸಾರಿ ತಿಳಿಸಿ, ಅವರು ಮಾನಸಾಂತರ ಪಟ್ಟು, ಸುವಾರ್ತೆಯನ್ನು ನಂಬಿ, ದೇವರ ಬಲುಮೆ ಪಡಕೊಳ್ಳ ಬೇಕು ಎಂದು ಬೇಡಿ ಕೊಳ್ಳುತ್ತೇನೆ.

ಅಥವಾ oder

ಪಾಪದ ಅರುಹಿಕೆ b. Sündenbekenntniss.

ಸರ್ವಶಕ್ತಿಯೂ ಕರುಣೆಯೂ ಉಳ್ಳ ಯೆಹೋವನೇ! ನಮ್ಮೊಡೆಯನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ತಂದೆಯೇ! ಗತಿಗೆಟ್ಟ ಪಾಪಿಗಳಾದ ನಾವು ಮನೋವ್ಯಥೆ ಪಟ್ಟು, ಒಬ್ಬನೇ ಸ್ವಾಮಿಯಾದ ನಿನ್ನ ಸನ್ನಿಧಾನದಲ್ಲಿ ನಮ್ಮ ಮಹಾ ದುಷ್ಟತ್ವವನ್ನು ಅರಿಕೆ ಮಾಡುತ್ತೇವೆ. ಪಾಪದಲ್ಲಿ ಉಂಟಾಗಿ ಹುಟ್ಟಿದವರಾದ ನಾವು ಕೋಪದ ಮಕ್ಕಳಾಗಿದ್ದು, ಹುಟ್ಟಿದಂದಿನಿಂದ ಮನಸ್ಸಿನಲ್ಲಿಯೂ ನಡೆನುಡಿಗಳಲ್ಲಿಯೂ ಬಗೆಬಗೆಯಾಗಿ ನಿನ್ನ ನ್ಯಾಯವಾದ ಕೋಪವನ್ನು ಎಡೆಬಿಡದೆ ಎಬ್ಬಿಸುತ್ತಾ ಬಂದವರಾಗಿದ್ದೇವಕಟಾ! ನಮ್ಮ ನಿರ್ಮಾಣಿಕನೂ ವಿಮೋಚಕನೂ ಪವಿತ್ರೀಕರಿಸುವವನೂ ಆಗಿರುವ ನಿನ್ನನ್ನು ನಮ್ಮ ಪೂರ್ಣ ಹೃದಯದಿಂದಲೂ ನಮ್ಮ ಪೂರ್ಣ ಪ್ರಾಣದಿಂದಲೂ ನಮ್ಮ ಪೂರ್ಣ ಬುದ್ಧಿಯಿಂದಲೂ ಪ್ರೀತಿಸದೆಯೂ, ನಮ್ಮ ನೆರೆಯವರನ್ನು ನಮ್ಮ ಹಾಗೆಯೇ ಪ್ರೀತಿಸದೆಯೂ ನಡೆದಂಥವರಾಗಿದ್ದೇವೆ. ಹೀಗಿರಲಾಗಿ, ನಿನ್ನ ಕೋಪಕ್ಕೂ ದಂಡನಿರ್ಣಯಕ್ಕೂ ನಿತ್ಯ ಮರಣಕ್ಕೂ ಗುರಿಯಾಗಿದ್ದೇವೆ ಎಂಬದು ನಿಶ್ಚಯವೇ! ಆದರೆ ಯೇಸುವಿನಲ್ಲಿ ಉದಯಿಸಿದ, ನೆಲೆಗಾಣದ ನಿನ್ನ ಕನಿಕರದ ಮರೆ ಹೊಕ್ಕು, ನಾವು ನಿನ್ನ ಕೃಪೆಯನ್ನು ಅರಸುತ್ತೇವೆ;

ಅದನ್ನೇ ಬಯಸಿ, ಎದೆಗುಂಡಿಯಿಂದ ನಿನಗೆ ಬಿನ್ನವಿಸುತ್ತೇವೆ. ನಮ್ಮನ್ನು ಕರುಣಿಸೈ! ನಮ್ಮ ಪಾಪಗಳನ್ನೆಲ್ಲಾ ದಯದಿಂದ ನಮಗೆ ಬಿಟ್ಟು, ಯಥಾರ್ಥವೂ ಸ್ಥಿರವೂ ಆದ ಮಾನಸಾಂತರಕ್ಕೂ ತಿದ್ದುಪಡಿಗೂ ನಿನ್ನ ಕೃಪೆಯನ್ನು ಕೊಡು! ನಿನ್ನ ಪ್ರಿಯ ಮಗನೂ ನಮ್ಮೊಡೆಯನೂ ರಕ್ಷಕನೂ ಆದ ಯೇಸು ಕ್ರಿಸ್ತನಿಗಾಗಿ, ನಿನ್ನ ಪರಮ ಪವಿತ್ರವಾದ ಹೆಸರಿನ ಮಹಿಮೆಗೋಸ್ಕರ ನಮಗೆ ಒಲಿದು, ನಮ್ಮನ್ನು ಸಲಹು, ನಮ್ಮೊಡೆಯಾ! ಆಮೆನ್!

ಕ್ಷಮಾವಚನವು b. Absolution.

ಹೃದಯಪೂರ್ವಕವಾದ ಪಶ್ಚಾತ್ತಾಪದಿಂದ ನಿಮ್ಮ ಪಾಪಗಳಿಗಾಗಿ ದುಃಖಿಸಿ, ಕ್ರಿಸ್ತವಿಮೋಚಕನಲ್ಲಿ ನಂಬಿಕೆ ಇಟ್ಟು, ನಿಮ್ಮ ಹೃದಯವನ್ನೂ ನಡತೆಗಳನ್ನೂ ನಿಜವಾಗಿ ತಿದ್ದಿಕೊಳ್ಳ ಬೇಕೆಂದು ಇರುವವರೆಲ್ಲರೇ! ಸುವಾರ್ತೆಯಲ್ಲಿ ಕೊಟ್ಟಿರುವ ಪಾಪಕ್ಷಮೆಯನ್ನು ಕುರಿತ ಆದರಣೆಯ ಮಾತನ್ನು ಕೇಳಿರಿ! ಸರ್ವಶಕ್ತ ದೇವರು ನಿಮ್ಮ ಮೇಲೆ ಕರುಣೆಯಿಟ್ಟು, ನಮ್ಮ ಪಾಪಗಳಿಗಾಗಿ ಮರಣ ತಾಳಿದಂಥಾ, ನಮ್ಮ ನೀತಿನಿರ್ಣಯಕ್ಕೋಸ್ಕರ ಎದ್ದಂಥಾ ತನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನನ್ನು ನೋಡಿ, ನಿಮ್ಮ ಪಾಪಗಳನ್ನೆಲ್ಲಾ ನಿಮಗೆ ಕ್ಷಮಿಸಿದ್ದಾನೆ. ಹೀಗಿರಲಾಗಿ, (ಕ್ರೈಸ್ತಸಭಾಸೇವಕನಾದ) ನಾನು ನಮ್ಮ ಯೇಸು ಕ್ರಿಸ್ತ ಒಡೆಯನ ಅಪ್ಪಣೆಯ ಮೇರೆಗೆ, ನಿಮ್ಮ ಪಾಪಗಳೆಲ್ಲಾ ಪರಿಹಾರವಾಗಿವೆ ಎಂತ ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ನಿಮಗೆ ಸಾರಿ ಹೇಳುತ್ತೇನೆ. ಆದರೆ ಮಾನಸಾಂತರ ವಿಶ್ವಾಸಗಳಿಲ್ಲದವರಿಗೆ ಪಾಪಗಳು ಹಿಡಿದವೆ. ತಿರುಗಿ ಕೊಳ್ಳದೆ ಮಾನಸಾಂತರ ಪಡದೆ ಇರುವಂಥವರ ಮೇಲೆ ದೇವರ ಕೋಪವು ನೆಲೆಯಾಗಿರುತ್ತದೆ ಎಂದು ನಮ್ಮೊಡೆಯನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ಆತನ ಅಪ್ಪಣೆಯಿಂದ ಸಾರುತ್ತೇನೆ. ಆಮೆನ್!

ಬಳಿಕ ಎಲ್ಲರೂ ಎದ್ದು ನಿಂತ ಮೇಲೆ ವಿಶ್ವಾಸಾರ್ಥಸೂತ್ರಗಳ ಸೂಚನೆ ಬರ ತಕ್ಕದ್ದು.

3. ವಿಶ್ವಾಸಾರ್ಥಸೂತ್ರಗಳ ಸೂಚನೆ.

Vorwort zum Glaubensbekenntniss.

ಅಂತಃಕರಣವುಳ್ಳ ದೇವರು ನಮ್ಮಲ್ಲಿ ನಿಜ ಮಾನಸಾಂತರ ಪಟ್ಟವರಿಗೆ ಪಾಪಗಳನ್ನು ಬರೇ ಕೃಪೆಯಿಂದ ಬಿಟ್ಟ ಮಹಾ ಉಪಕಾರವನ್ನು ಹೊಂದಿದ ಕಾರಣ ನೀವು ಕರ್ತನಿಗೆ ನಂಬಿಕೆಯುಳ್ಳಂಥ ಪ್ರಜೆಯಾಗಿ ತ್ರಯೈಕ ದೇವರನ್ನು ಬಿಗಿ ಹೊಂದಿ ಕೊಂಡು, ಹೃದಯದ ನವೀಕರಣದೊಡನೆ ಆತನಲ್ಲಿಟ್ಟಿರುವ ನಿಮ್ಮ ವಿಶ್ವಾಸವನ್ನು ಯಾವಾಗಲೂ ಎಲ್ಲೆಲ್ಲಿಯೂ ನಡೆನುಡಿಗಳಿಂದ ಕಾಣಿಸಿರಿ ಎಂದು ನಿಮಗೆ ಬುದ್ಧಿ ಹೇಳುತ್ತೇನೆ. ಹೀಗಿರಲಾಗಿ, ಇಲ್ಲಿ ಸಹ ಈಗ ನಿಮ್ಮ ಹೃದಯವನ್ನು ಎಚ್ಚರಿಸಿ ಕೊಂಡು, ನನ್ನ ಕೂಡ ಹೇಳಿರಿ!

4. ವಿಶ್ವಾಸವಿಧಿ. Glaubensbekenntniss.

ಸ್ವರ್ಗ ಪೃಥ್ವಿಗಳ ನಿರ್ಮಾಣಿಕನಾದ, ಸರ್ವಶಕ್ತಿಯುಳ್ಳ ತಂದೆಯಾದ ದೇವರಲ್ಲಿ ವಿಶ್ವಾಸವಿಡುತ್ತೇನೆ.

ಮತ್ತು ಆತನ ಒಬ್ಬನೇ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುತ್ತೇನೆ. ಈತನು ಪವಿತ್ರಾತ್ಮದಿಂದ ಗರ್ಭಕ್ಕೆ ಬಂದು, ಕನ್ಯೆ ಮರಿಯಳಲ್ಲಿ ಹುಟ್ಟಿದನು; ಪೊಂತೀಯ ಪಿಲಾತನ ಕಾಲದಲ್ಲಿ ಶ್ರಮ ಪಟ್ಟು, ಕ್ರೂಜಿಸಲ್ಪಟ್ಟು, ಮರಣ ತಾಳಿ, ಹೂಣಲ್ಪಟ್ಟನು; ಪಾತಾಳಕ್ಕೆ ಇಳಿದು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಎದ್ದನು; ಸ್ವರ್ಗಕ್ಕೆ ಏರಿ, ಅಲ್ಲಿ ಸರ್ವಶಕ್ತ ತಂದೆಯಾಗಿರುವ ದೇವರ ಬಲಗಡೆಯಲ್ಲಿ ಕೂತು ಕೊಂಡಿದ್ದಾನೆ; ಅಲ್ಲಿಂದ ಆತನು ತಿರಿಗಿ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯ ತೀರಿಸುವನು.

ಮತ್ತು ಪವಿತ್ರಾತ್ಮದಲ್ಲಿಯೂ ವಿಶ್ವಾಸವಿಡುತ್ತೇನೆ. ಒಂದೇ ಪವಿತ್ರ ಕ್ರೈಸ್ತ ಸಭೆಯೂ ಪವಿತ್ರರ ಅನ್ಯೋನ್ಯವೂ ಪಾಪಗಳ ಕ್ಷಮೆಯೂ ದೇಹದ ಉತ್ಥಾನವೂ ನಿತ್ಯಜೀವವೂ ಉಂಟು. ಆಮೆನ್!

ಬಳಿಕ ಸಭೆಯವರು ನಿಂತಿರಲಾಗಿ, ಪ್ರಸಂಗಿಯು ಸ್ತೋತ್ರ ಹೇಳುವದು.
Hierauf sagt der Liturgus während Alle stehen:

5. ಸ್ತೋತ್ರವು. Lobgebet.

ಸರ್ವಶಕ್ತನಾದ ದೇವರೇ! ಕರುಣೆಯುಳ್ಳ ತಂದೆಯೇ! ನಿನ್ನ ಅಯೋಗ್ಯ ಸೇವಕರಾದ ನಮ್ಮಲ್ಲಿ ಒಬ್ಬೊಬ್ಬನಿಗೂ ಒಬ್ಬೊಬ್ಬಳಿಗೂ ಎಲ್ಲಾ ಮನುಷ್ಯರಿಗೂ ನೀನು ತೋರಿಸುತ್ತಾ ಬರುವ ದಯಕ್ಕಾಗಿಯೂ ಒಲುಮೆಗಾಗಿಯೂ ನಿನಗೆ ದೈನ್ಯದಿಂದಲೂ ಪೂರ್ಣಹೃದಯದಿಂದಲೂ ಸ್ತೋತ್ರ ಹೇಳುತ್ತೇವೆ.[1] ನೀನು ನಮ್ಮನ್ನು ಉಂಟು ಮಾಡಿ, ಸಾಕಿ, ಸಲಹಿದದಕ್ಕಾಗಿಯೂ, ಸುಖದುಃಖಗಳಲ್ಲಿ ನಮಗೆ ಮಾಡಿದ ಎಲ್ಲಾ ಸಹಾಯಕ್ಕಾಗಿಯೂ ನಿನ್ನನ್ನು ಹೊಗಳುತ್ತೇವೆ; ಆದರೆ ಎಲ್ಲಾದಕ್ಕಿಂತಲೂ ಹೆಚ್ಚಾಗಿ, ನಮ್ಮ ಯೇಸು ಕ್ರಿಸ್ತ ಒಡೆಯನಿಂದ ನೀನು ಮಾಡಿದ ಲೋಕವಿಮೋಚನೆಯಲ್ಲಿ ಪ್ರಕಟವಾದ ನಿನ್ನ ಅಪಾರ ಪ್ರೀತಿಗಾಗಿಯೂ, ನಿನ್ನ ಪವಿತ್ರ ವಾಕ್ಯಕ್ಕಾಗಿಯೂ, ನೀನು ಸ್ಥಾಪಿಸಿದ ಸ್ನಾನ ರಾತ್ರಿಭೋಜನಗಳೆಂಬ ಪ್ರಸಾದಗಳಿಗಾಗಿಯೂ, ನಿತ್ಯಜೀವದ ಪ್ರತೀಕ್ಷೆಗಾಗಿಯೂ ನಿನ್ನನ್ನು ಕೊಂಡಾಡುತ್ತೇವೆ. ನಿನ್ನ ಸಕಲ ಅನುಗ್ರಹಗಳನ್ನು ಅನುಭವಿಸಿ, ತಕ್ಕಂತೆ ನೆನಸಿ, ಬಾಯಿಯಿಂದ ಮಾತ್ರವಲ್ಲ, ನಡತೆಯಿಂದ ಸಹ, ನಿನ್ನನ್ನು ಸನ್ಮಾನಿಸುವವರಾಗಿ, ನಮ್ಮನ್ನು ನಿನ್ನ ಸೇವೆಗೆ ಒಪ್ಪಿಸಿ ಕೊಟ್ಟು, ನಾವು ಇರುವ ದಿನವೆಲ್ಲಾ ಪವಿತ್ರತ್ವದಲ್ಲಿಯೂ ನೀತಿಯಲ್ಲಿಯೂ ನಿನ್ನ ಮುಂದೆ ನಡಕೊಳ್ಳುವ ಹಾಗೆ, ದಯ ಮಾಡ ಬೇಕೆಂದು ನಮ್ಮೊಡೆಯನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿ ಕೊಳ್ಳುತ್ತೇವೆ. ಆತನಿಗೂ ನಿನಗೂ ಪವಿತ್ರಾತ್ಮಕ್ಕೂ ಯುಗಯುಗಾಂತರಕ್ಕೆ ಮಾನವೂ ಮಹಿಮೆಯೂ ಆಗಲಿ! ಆಮೆನ್!

---

1) ಯಾವನೊಬ್ಬನಾಗಲಿ, ಯಾವಳೊಬ್ಬಳಾಗಲಿ, ತನತನಗೆ ಆದ ವಿಶೇಷ ಕೃಪೆಯ ಅನುಭವಕ್ಕೋಸ್ಕರ ದೇವರಿಗೆ ಸಭೆಯವರ ಮುಂದೆ ಸ್ತೋತ್ರವಾಗಲೆಂದು ಬಯಸಿದರೆ, ಮೇಲಿನದರಲ್ಲಿ ತಕ್ಕ ಮಾತನ್ನು ಸೇರಿಸ ಬಹುದು.

6. ಪರಿಶಿಷ್ಟದಲ್ಲಿಂದ ತೆಗೆದ ಪ್ರಾರ್ಥನೆಗಳು.

Einschaltungen.

ಇಲ್ಲಿ ಆದಿತ್ಯವಾರದ ಪ್ರಾರ್ಥನೆಗಳೆಂಬ A, a, ಪರಿಶಿಷ್ಟದಲ್ಲಿಂದ ಅವಶ್ಯವಿದ್ದ ಹಾಗೆ ಒಂದೆರಡು ಪ್ರಾರ್ಥನೆಗಳನ್ನು ತೆಗೆದು ಹೇಳ ಬಹುದು.

Eines, oder nach Bedürfniss zwei der unter Beilage A, a, enthaltenen Gebete wird hier eingeschaltet. Sodann folgt die allgemeine und besondere Fürbitte.

7. ಸಾಮಾನ್ಯ ವಿಜ್ಞಾಪನೆ.

Allgemeine Fürbitte.

ಸರ್ವತ್ರಾಣಿಯಾದ ಕರುಣೆಯುಳ್ಳ ದೇವರೇ! ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ನಿನ್ನ ಪ್ರಿಯ ಮಗನ ಮೂಲವಾಗಿ ನಮಗೆ ಒಲೆಯುವಾತನಾಗಿರು. ಕರುಣಾಸಾಗರನೇ! ನಮ್ಮ ಮೇಲೆ ಕರುಣೆ ಇಟ್ಟು, ನಿನ್ನ ಅಮಿತ ದಯಾಭಾವದಿಂದ ನಮ್ಮ ಪಾಪಗಳನ್ನು ಅಳಿಸಿ ಬಿಡು! ನಮ್ಮ ಮೇಲೆ ನ್ಯಾಯವಿಚಾರಣೆಗೆ ಬಾರದೆ, ನಮ್ಮ ಮಧ್ಯಸ್ಥನಾದ ಯೇಸು ಕ್ರಿಸ್ತನ ಸಲುವಾಗಿ ನಮ್ಮ ಅಪರಾಧಗಳನ್ನು ಕ್ಷಮಿಸು! ನಿನ್ನ ಸಭೆಯನ್ನು ಆಳಿ ಕೊಂಡು ಪಾಲಿಸು! ನಿನ್ನ ವಾಕ್ಯವನ್ನು ಯಾವಾಗಲೂ ಅಚ್ಚಾಗಿ ನಮ್ಮಲ್ಲಿ ಸಾರಿಸಿ, ಸ್ನಾನ ರಾತ್ರಿಭೋಜನಗಳೆಂಬ ನಿನ್ನ ಪ್ರಸಾದಗಳನ್ನು ಕೃಪೆ ಆದರಣೆಗಳಿಂದ ಭರಿತವಾಗಿ ನಮಗೆ ಉಳಿಸು! ನಿನ್ನ ಬೆಳೆಗೆ ನಂಬಿಕೆಯುಳ್ಳ ಆಳುಗಳನ್ನು ಕಳುಹಿಸು! ನಿನ್ನ ವಾಕ್ಯವನ್ನು ಸಾರುವವರಿಗೆ ನಿನ್ನ ಆತ್ಮವನ್ನೂ ನಿನ್ನ ಬಲವನ್ನೂ ಕೊಡು! ನಿನ್ನ ಸುವಾರ್ತೆಯನ್ನು ಎಲ್ಲಾ ಭೂಮಿಯಲ್ಲಿ ಪ್ರಸಂಗ ಮಾಡಿಸು! ಜನಾಂಗಗಳಿಗೆ ಮಾನಸಾಂತರವನ್ನೂ ವಿಸ್ವಾಸವನ್ನೂ ಹುಟ್ಟಿಸಿ ಕೊಟ್ಟು, ಚದರಿ ಹೋದ ಇಸ್ರಯೇಲ ಕುರಿಗಳನ್ನು ಕೂಡಿಸು![1] ಎಲ್ಲಾ ಎಡತಡೆಗಳನ್ನು ನಮ್ಮಲ್ಲಿಂದ ತೆಗೆದು ಹಾಕು! ಹಾದಿ ತಪ್ಪಿದವರನ್ನೂ ಮೋಸಗೊಂಡವರನ್ನೂ ರಕ್ಷಣೆಯ ಮಾರ್ಗಕ್ಕೆ ತಿರುಗಿಸಿ ತಾ! ಲೋಕಕ್ಕೆ ಎದುರಾಗಿಯೂ ನಮ್ಮ ಮಾಂಸಭಾವಕ್ಕೆ ವಿರೋಧವಾಗಿಯೂ ನಮಗಿರುವ ಹೋರಾಟದಲ್ಲಿ ನಾವು ಜಯ ಹೊಂದುವ ಹಾಗೆ ನಮ್ಮನ್ನು ಬಲ ಪಡಿಸು!

1) B. ಪರಿಶಿಷ್ಟದ ೧ನೆಯ ಬಿನ್ನಹವನ್ನು ಮೇಲೆ ಶೇರಿಸ ಬಹುದು.

ಅರಸುಗಳ ಅರಸನಾದ ಒಡೆಯನೇ! ನಮ್ಮ ಸಂಸ್ಥಾನದ ಪರಿಪಾಲ ಕರಿಗೋಸ್ಕರವೂ ನಿನ್ನ ಹತ್ತರ ಬೇಡುತ್ತೇವೆ. ನಮ್ಮನ್ನು ಆಳುವವರಿಗೆ ಜ್ಞಾನ ವಿವೇಕಗಳ ಆತ್ಮವನ್ನು ಕೊಟ್ಟು, ಪ್ರಜಾಪಾಲನೆಗೆ ಬೇಕಾದ ಒಳ್ಳೇ ಆಲೋಚನೆಗಳನ್ನು ಅವರಲ್ಲಿ ಹುಟ್ಟಿಸಿ, ನಮ್ಮ ದೇಶದಲ್ಲಿ ಪರೋಪಕಾರವೂ ಪ್ರಾಮಾಣಿಕತ್ವವೂ ನೀತಿಯೂ ಸಮಾಧಾನವೂ ಮಾನ ಮರ್ಯಾದೆಯೂ ಇದ್ದು ಉಳಿಯುವ ಹಾಗೆ ದಯ ಮಾಡು!1)

ಅನುದಿನದ ಅನ್ನಪಾನಗಳನ್ನು ನಮ್ಮೆಲ್ಲರಿಗೂ ದೊರಕಿಸಿ ಕೊಡು! ನಿನ್ನ ಹೆಸರಿನಲ್ಲಿ ನಾವು ನಡಿಸುತ್ತಿರುವ ಉದ್ಯೋಗ ವ್ಯಾಪಾರ ವ್ಯವಸಾಯ ಮೊದಲಾದ ಕೆಲಸಗಳನ್ನು ಅನುಕೂಲಿಸಿ, ಸಫಲವಾಗ ಮಾಡು! ನಮಗೆ ತಕ್ಕ ಕಾಲದಲ್ಲಿ ಮುಂಗಾರೆ ಹಿಂಗಾರೆ ಮಳೆಗಳನ್ನು ಕೊಟ್ಟು, ನಮ್ಮ ಗದ್ದೆ ಹೊಲ ತೋಟಗಳ ಹುಟ್ಟುವಳಿಯನ್ನು ಚನ್ನಾಗಿರಿಸಿ, ಬೆಳೆಗಳನ್ನು ಕಾಪಾಡು!2)

ಗಂಡ ಹೆಂಡರಲ್ಲಿಯೂ ಕುಟುಂಬಗಳಲ್ಲಿಯೂ ಸಮಾಧಾನವನ್ನೂ ಪರಸ್ಪರ ಪ್ರೀತಿಯನ್ನೂ ನೆಲೆಗೊಳ್ಳಿಸಿ, ಮನೆಗಳಲ್ಲಿಯಾಗಲಿ ಶಾಲೆಗಳಲ್ಲಿಯಾಗಲಿ ಬಾಲರನ್ನೂ ಯೌವನರನ್ನೂ ಪಾಲಿಸಿ, ಕಲಿಸುವವರಿಗೆ ನಿನ್ನ ಬುದ್ಧಿ ಕೊಟ್ಟು, ಅವರ ಪ್ರಯತ್ನಗಳನ್ನು ಸಾಗಿಸು! ನಮ್ಮ ಎಲ್ಲಾ ಮಕ್ಕಳ ಹೃದಯಗಳನ್ನು ನಿನ್ನ ಪವಿತ್ರಾತ್ಮದಿಂದ ಸನ್ಮಾರ್ಗಕ್ಕೆ ನಡಿಸು!

ನಮ್ಮ ಊರು ನಾಡುಗಳನ್ನೂ ನಮ್ಮ ಶೀಮೆ ರಾಜ್ಯಗಳನ್ನೂ ಕಾಪಾಡು! ಯುದ್ಧ ಕಾಟಕಾಯಿಗಳಿಗೂ,3) ಘಾಳಿ ಸಿಡಿಲು ನೀರು ಬೆಂಕಿಗಳ ದೆಸೆಯ ಆಪತ್ತಿಗೂ,4) ಸೋಕುರೋಗ5) ಬರಗಳಿಗೂ, ಫಕ್ಕನೆ ಬರುವ ದುರ್ಮರಣಕ್ಕೂ ನಮ್ಮನ್ನು ತಪ್ಪಿಸು! ನಮ್ಮ ಸುತ್ತಲೂ ಇದ್ದು, ನಮ್ಮ ಹಾದಿಗಳಲ್ಲಿ ನಮ್ಮನ್ನು ಕಾಯುವದಕ್ಕೆ ನಿನ್ನ ದೂತರನ್ನು ಕಳುಹಿಸಿ ಕೊಡು!

ಬಡವರಿಗೂ ದಿಕ್ಕಿಲ್ಲದವರಿಗೂ ಸಂರಕ್ಷಕನೂ, ವಿಧವೆಗಳಿಗೂ ತಂದೆ ತಾಯಿ ಇಲ್ಲದ ಮಕ್ಕಳಿಗೂ ಆದರಿಕನೂ, ಬಲಹೀನರಿಗೂ ರೋಗಿಗಳಿಗೂ ಸಹಾಯಕನೂ ಆಗಿರು!6)

---

1) B. ೨. 2) B. ೩. 3) B. ೫. 4) B. ೪. 5) B. ೬. 6) B. ೭.

ಆತ್ಮಕ್ಕೆ ಹತ್ತುವ ಎಲ್ಲಾ ಸಂಕಟ ಗಂಡಾಂತರಳಿಗೆ ನಮ್ಮನ್ನು ತಪ್ಪಿಸು! ಸ್ಥಿರವಾದ ವಿಶ್ವಾಸ ಜಾಗ್ರುತೆ ಪ್ರಾರ್ಥನೆಗಳಿಂದ ನಮ್ಮ ರಕ್ಷಣೆಯ ಶತ್ರುಗಳನ್ನು ಎದುರಿಸುವದಕ್ಕೆ ನಮ್ಮನ್ನು ಗಟ್ಟಿಗರಾಗ ಮಾಡು! ನಾವು ಪ್ರೀತಿ ಸಮಾಧಾನ ವಿನಯ ದೈನ್ಯ ನಿರ್ಮಲತ್ವ ಮಿತಾನುಭವಗಳು ಉಳ್ಳವರಾಗಿ ಬದುಕುವ ಹಾಗೆಯೂ ಕಡೇ ತನಕ ಒಳ್ಳೇದರಲ್ಲಿ ನೆಲೆಗೊಂಡಿರುವ ಹಾಗೆಯೂ ನಮ್ಮನ್ನು ಬಲಗೊಳ್ಳಿಸು!

ಮತ್ತು ಕಡೆಯಲ್ಲಿ ನಾವು ಜೀವ ಬಿಡುವಾಗ, ಮರಣಸಂಕಟದಲ್ಲಿ, ನೀನು ನಿನ್ನ ಸರ್ವತ್ರಾಣವುಳ್ಳ ಕೃಪೆಯಿಂದ ನಮಗೆ ಅಭಯ ಕೊಟ್ಟು, ನಾವು ವಿಶ್ವಾಸದಲ್ಲಿ ನಮ್ಮ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿ, ಸಮಾಧಾನದಲ್ಲಿ ಇಹವನ್ನು ಬಿಟ್ಟು, ನಿನ್ನ ಬಳಿಗೆ ಬರುವ ಹಾಗೆ ಕೈ ಕೊಡು! ಆ ದಿನದಲ್ಲಿ ನೀನು ನಮ್ಮನ್ನು ಅಂಗೀಕರಿಸುವಾಗ, ನಾವು ನಿನ್ನ ಪವಿತ್ರ ಮುಖವನ್ನು ಆನಂದದಿಂದ ನೋಡಿ, ನಿನ್ನ ಸಮಸ್ತ ದೂತರ ಸಂಗಡಲೂ ನೀನು ಆದು ಕೊಂಡ ಮಕ್ಕಳ ಸಂಗಡಲೂ ನಿನ್ನನ್ನು ನಿತ್ಯ ನಿರಂತರವಾಗಿ ಹೊಗಳುತ್ತಾ ಕೊಂಡಾಡುತ್ತಾ ಇರುವಂತೆ ನಮ್ಮನ್ನು ನಿನ್ನ ಮಹಿಮೆಯ ರಾಜ್ಯದಲ್ಲಿ ಶೇರಿಸು! ಆಮೆನ್!

ಅಥವಾ oder

ಕರುಣೆಯುಳ್ಳ ದೇವರೇ! ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ನೀನು ಎಡೆಬಿಡದೆ ನಮಗೆ ಮಾಡುತ್ತಾ ಬಂದ ಎಲ್ಲಾ ಉಪಕಾರಕ್ಕೂ ನೀನು ಕೈಕೊಂಡು ನಮಗೆ ತೋರಿಸುತ್ತಾ ಬಂದ ಎಲ್ಲಾ ನಂಬಿಕೆಗೂ ನಾವು ಕೇವಲ ಅಯೋಗ್ಯರೇ! ಕರ್ತನೇ, ನಮ್ಮನ್ನು ಕರುಣಿಸಿ, ನಮ್ಮ ಪಾಪಗಳನ್ನು ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ಸಲವಾಗಿ ಕ್ಷಮಿಸು! ಭಯ ಕಳೆದು ಬಿಟ್ಟು, ಲಘು ಮನಸ್ಸಿನಿಂದ ಪಾಪದಲ್ಲಿ ಬದುಕುವವರನ್ನು ನೀನು ಎಚ್ಚರಿಸಿ, ಅವರು ಪಶ್ಚಾತ್ತಾಪ ಪಟ್ಟು, ಪೂರ್ಣ ಹೃದಯದಿಂದ ನಿನ್ನ ಕಡೆಗೆ ತಿರುಗಿ ಕೊಳ್ಳುವ ಹಾಗೆ ಮಾಡು! ಪುನರ್ಜನ್ಮ ಪಟ್ಟವರನ್ನು ಒಳಮನುಷ್ಯನಲ್ಲಿ ಬಲಗೊಳ್ಳಿಸಿ, ಯೇಸು

ಕ್ರಿಸ್ತನ ಸುವಾರ್ತೆ ವಿಶ್ವಾಸಿಗಳಿಗೆ ರಕ್ಷಣೆಗೋಸ್ಕರವಾದ ದೇವರ ಬಲವೇ ಎಂಬದಕ್ಕೆ ತಮ್ಮ ನಡತೆಯಿಂದಲೂ ಸಾಕ್ಷಿ ಕೊಡುವವರಾಗಿರ ಮಾಡು! ಜೀವಕಾಲದಲ್ಲಿಯೂ ಮರಣಕಾಲದಲ್ಲಿಯೂ ನಮಗೆ ಒಂದೇ ಆಧಾರವಾಗಿರುವ ನಿನ್ನ ಸುವಾರ್ತೆಯನ್ನು ನಮ್ಮಲ್ಲಿಯೂ ನಮ್ಮ ಮಕ್ಕಳಲ್ಲಿಯೂ ಅಚ್ಚವಾಗಿ ಉಳಿಸು! ನಿನ್ನ ದಿವ್ಯ ಸತ್ಯವನ್ನು ತಳ್ಳಿ ಬಿಡುವ ಅಪನಂಬಿಕೆಗೂ ನಮ್ಮ ಒಂದೇ ಗತಿಯಾಗಿರುವ ನಿನ್ನಿಂದ ನಮ್ಮನ್ನು ಅಗಲಿಸುವ ಮರುಳುನಂಬಿಕೆಗೂ ನಮ್ಮನ್ನು ತಪ್ಪಿಸು!

ಪವಿತ್ರಾತ್ಮಕ್ಕೆ ವಶವಾಗಿರುವಂಥ, ನಿನ್ನ ಸೇವೆಯಲ್ಲಿ ಆಸಕ್ತರಾಗಿ ನಂಬಿಕೆಯುಳ್ಳಂಥ ಬೋಧಕರನ್ನು ಯಾವಾಗಲೂ ನಿನ್ನ ಸಭೆಗೆ ಕೊಡು! ನಾವೆಲ್ಲರೂ ಒಂದೇ ವಿಶ್ವಾಸವೂ ನಿನ್ನ ಮಗನ ನಿಜ ತಿಳುವಿಕೆಯೂ ಉಳ್ಳವರಾಗಿ, ಕ್ರಿಸ್ತನ ಪ್ರಾಯಪ್ರಮಾಣಕ್ಕೆ ಸರಿಯಾದ ಸಂಪೂರ್ಣ ಪುರುಷರಾಗುವ ತನಕ, ಕ್ರಿಸ್ತನ ಶರೀರವಾಗಿರುವ ಸಭೆಯನ್ನು ಪೋಷಿಸುವದಕ್ಕೂ ಸಂಸಿದ್ಧ ಮಾಡುವದಕ್ಕೂ ನೇಮಿಸಿರುವ ಎಲ್ಲಾ ಬೋಧಕರಿಗೆ ಬೇಕಾದ ಸದ್ಗುಣಗಳನ್ನೂ ಉತ್ಸಾಹವನ್ನೂ ದಯ ಮಾಡು!

ಒಡೆಯರಿಗೆ ಒಡೆಯನಾಗಿರುವ ದೇವರೇ! ನಮ್ಮ ಮೇಲೆ ದೊರೆತನ ಮಾಡುವ ಕೈಸರನನ್ನು (ಕೈಸರಳನ್ನು) ನೀನು ಆಶೀರ್ವದಿಸಬೇಕು! ಆತನಿಗೂ (ಆಕೆಗೂ) ಆತನ (ಆಕೆಯ) ಮಂತ್ರಿಗಳಿಗೂ, ಮುಖ್ಯವಾಗಿ ನಮ್ಮ ಜನ್ಮದೇಶದ ಕಾರ್ಯಗಳನ್ನು ನಡಿಸುವ ಮಂತ್ರಿಗಳಿಗೂ, ಸಂಸ್ಥಾನಕರಣೀಕನಿಗೂ, ಸರ್ವಾಧಿಪತಿ ಅಧಿಪತಿಗಳಿಗೂ, ಎಲ್ಲಾ ಅಧಿಕಾರಿಗಳಿಗೂ ನೀನು ಮೆಚ್ಚುವಂಥ ಬುದ್ಧಿಯನ್ನೂ ವಿವೇಕವನ್ನೂ ಕೊಟ್ಟು, ಅವರು ನ್ಯಾಯ ನೀತಿಗಳನ್ನು ಪಕ್ಷಪಾತವಿಲ್ಲದೆ ನಡಿಸಿ, ಪ್ರಜೆಗಳ ಸುಖ ದುಃಖಗಳನ್ನು ನೋಡಿ, ಹಿತಾಹಿತಗಳನ್ನು ಪರ್ಯಾಲೋಚಿಸಿ, ಈ ಪ್ರಕಾರ ಸಕಲ ಪ್ರಜೆಯ ಸೌಖ್ಯ ಸಮೃದ್ಧಿಗಾಗಿ ರಾಜ್ಯವನ್ನು ಆಳಿ, ಪರಿಪಾಲಿಸುವ ಹಾಗೆ ಮಾಡ ಬೇಕೆಂದು, ಬೇಡಿ ಕೊಳ್ಳುತ್ತೇವೆ.

ಕರುಣೆಯುಳ್ಳ ತಂದೆಯೇ! ನಮ್ಮೆಲ್ಲರ ಮೇಲೆ ದಯವಿಟ್ಟು, ದಿನ ದಿನ ಬೇಕಾದ ಅನ್ನಪಾನಗಳನ್ನು ನಮಗೆ ಕೊಟ್ಟು, ನಮ್ಮ ಉದ್ಯೋಗ

ವ್ಯಾಪಾರ ವ್ಯವಸಾಯ ಮೊದಲಾದ ಕೆಲಸಗಳನ್ನೆಲ್ಲಾ ಆಶೀರ್ವದಿಸಿ ಸಾಗಿಸು! ನಿನ್ನ ದಯದಿಂದ ತಕ್ಕ ಸಮಯದಲ್ಲಿ ಮಳೆಯೂ ಬಿಸಿಲೂ ಬರಲಿ! ನಿನ್ನ ಕೃಪೆಯ ಸ್ತುತಿಗೋಸ್ಕರ ನಮ್ಮ ಹೊಲ ಗದ್ದೆ ತೋಟಗಳ ಬೆಳೆ ಚನ್ನಾಗಲಿ! ನಮ್ಮ ಸೀಮೆ ನಿನ್ನ ಮಹಿಮೆಯಿಂದ ತುಂಬಲಿ! ನಿನ್ನ ಉಪಕಾರಗಳನ್ನು ಅನುಭೋಗಿಸಿ, ನಾವು ಸೊಕ್ಕಿ ಹೋಗದೆ, ಬಡವರಿಗೂ ದಿಕ್ಕಿಲ್ಲದವರಿಗೂ ಆಪತ್ತಿನಲ್ಲಿರುವವರಿಗೂ ನಿರ್ದಯರಾಗಿರದೆ, ನಿನ್ನ ದಯವನ್ನು ತಕ್ಕ ಹಾಗೆ ಅರಿತು, ನಮ್ಮ ತಂದೆಯಾದ ನೀನು ಕರುಣೆಯುಳ್ಳಾತನಾಗಿರುವಂತೆ ನಾವು ಸಹ ಕರುಣೆಯುಳ್ಳವರಾಗಿರುವ ಹಾಗೆ, ಕರುಣೆಯ ಶೀಲವನ್ನು ನಮ್ಮಲ್ಲಿ ಹುಟ್ಟಿಸಿ ಹೆಚ್ಚಿಸು!

ಒಡೆಯನೇ! ನಮ್ಮ ದೇಶಕ್ಕೆ ಸಮಾಧಾನವನ್ನು ದಯ ಮಾಡಿ, ನಮ್ಮ ಮನೆಗಳಲ್ಲಿ ನೀನೇ ಯಜಮಾನನಾಗಿ, ಗಂಡ ಹೆಂಡರಿಗೆ ಒಳ್ಳೇ ಒಕ್ಕಟ್ಟನ್ನೂ ಪ್ರೀತಿಯನ್ನೂ, ತಂದೆ ತಾಯಿಗಳಾದವರಿಗೆ ಮಕ್ಕಳನ್ನು ಸಾಕಿ ಬೆಳಸಿ, ಸನ್ಮಾರ್ಗದಲ್ಲಿ ನಡಿಸುವದಕ್ಕೆ ಬೇಕಾದ ಮಮಕಾರವನ್ನೂ ಬುದ್ಧಿಯನ್ನೂ ಭಕ್ತಿಯನ್ನೂ, ಮನೆಯ ಹಿರಿಯರಿಗೆ ಬದುಕು ಸಾಗಿಸಲಿಕ್ಕೆ ಬೇಕಾದ ವಿವೇಕವನ್ನೂ ಸಾಹಸವನ್ನೂ ದಯ ಪಾಲಿಸು! ತಂದೆ ತಾಯಿಗಳ ಮಾತಿಗೆ ಮನ ಒಡ್ಡಿ ಒಳಗಾಗಿ, ಅವರನ್ನು ಸನ್ಮಾನಿಸಿ, ಪ್ರೀತಿ ಮಾಡುವ ಮನಸ್ಸನ್ನು ಕಿರಿಯರಿಗೆ ಕೊಡು! ಆಳುಗಳಲ್ಲಿಯೂ ಚಾಕರಿಯವರಲ್ಲಿಯೂ ವಿಧೇಯತ್ವವನ್ನೂ ವಿನಯವನ್ನೂ ನಿಷ್ಕಪಟವನ್ನೂ ಹುಟ್ಟಿಸು! ಯಜಮಾನರು, ತಮಗೆ ಸಹ ಸ್ವರ್ಗದಲ್ಲಿ ಯಜಮಾನನು ಇದ್ಧಾನೆಂಬದನ್ನು ಬಿಡದೆ ನೆನಸಿ ಕೊಳ್ಳುವ ಹಾಗೆ ಮಾಡು!

ಮನುಷ್ಯರೆಲ್ಲರೂ ನಿನ್ನ ಪರಾಮರಿಕೆಯಲ್ಲಿ ಇರಲಿ! ಮಾರ್ಗ ತಪ್ಪಿದವರನ್ನು ನಿನ್ನ ಮಾರ್ಗಕ್ಕೆ ತಿರುಗಿಸಿ ತಾ! ಒಬ್ಬರಿಗೊಬ್ಬರು ಹಗೆ ಮಾಡುವವರಲ್ಲಿ ಏಕತ್ವವನ್ನೂ ಅನ್ಯೋನ್ಯ ಸ್ನೇಹವನ್ನೂ ಹುಟ್ಟಿಸು! ದುಃಖಶೋಕ ಪಡುವವರನ್ನು ಸಂತೈಸು! ಬಡವರಿಗೆ ಸಂರಕ್ಷಕನೂ, ವಿಧವೆಗಳಿಗೂ ತಂದೆ ತಾಯಿ ಇಲ್ಲದ ಮಕ್ಕಳಿಗೂ ಪಾಲಕನೂ, ಇಕ್ಕಟ್ಟಿನಲ್ಲಿ

ಇರುವವರಿಗೆ ಕೈ ಕೊಡುವಾತನೂ, ರೋಗಿಗಳಿಗೆ ವೈದ್ಯನೂ, ಸಾಯುವವರಿಗೆ ಜೀವದಾಯಕನೂ ಆಗಿರು!

ಕಡೆಯಲ್ಲಿ ನಮ್ಮನ್ನು ಭಾಗ್ಯವೂ ನಿತ್ಯಾನಂದವೂ ಉಳ್ಳ ನಿನ್ನ ರಾಜ್ಯದಲ್ಲಿ ಶೇರಿಸು! ಅತ್ಯುತ್ತಮ ಪಿತನೇ! ಅಲ್ಲಿ ನೀನು ನಿನ್ನ ಮಕ್ಕಳ ಕಣ್ಣೀರನ್ನೆಲ್ಲಾ ಒರಸಿ, ಅವರ ಹೃದಯದ ಬಯಕೆಯನ್ನೆಲ್ಲಾ ದೊರಕಿಸಿ ತೀರಿಸುವಿ! ನಾವು ಈಗ ಬೇಡಿದ್ದನ್ನೆಲ್ಲಾ ಯೇಸು ಕ್ರಿಸ್ತನಿಗಾಗಿ ಕೃಪೆಯಿಂದ ದಯ ಪಾಲಿಸು! ಆಮೆನ್!

ಅಲ್ಲಲ್ಲಿ B ಎಂಬ ಪರಿಶಿಷ್ಟದಲ್ಲಿಂದ ಬಿನ್ನಹಗಳನ್ನು ಸಮಯಾನುಸಾರವಾಗಿ ಶೇರಿಸ ಬಹುದು.

In diese Fürbitte kann auch nach Bedürfniss irgend eines der in Beilage B gesammelten Gebete eingefügt werden.

ಬಳಿಕ ಪ್ರಸಂಗಿಯು ಕರ್ತನ ಪ್ರಾರ್ಥನೆಯನ್ನು ಹೇಳುವಾಗ ಸಭೆಯವರು ಕೂಡ ಹೇಳುವದು.

Hierauf wird das Vater Unser gebetet und von der Gemeinde vernehmlich nachgesprochen.

8. ಕರ್ತನ ಪ್ರಾರ್ಥನೆ.

Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಶೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

d. ಗೀತವು.

Sodann wird ein Liedervers gesungen.

e. ಸುವಾರ್ತೆಪತ್ರಿಕೆಗಳ ನೇಮಕಭಾಗದ ಪಾರಾಯಣವು,
ಅಥವಾ ದಿನೋಚಿತ ಪಾಠಗಳ ಪಾರಾಯಣವು.

Hierauf folgt die Lesung des Evangeliums und der Epistel, oder der beiden Lectionen des Tages.

f. ಮುಖ್ಯ ಗೀತವು.

Demnächst das Hauptlied.

g. ಪ್ರಸಂಗಿ ಹೃತ್ಪ್ರೇರಿತ ಪ್ರಾರ್ಥನೆಯನ್ನು ಹೇಳುವದು.

Dann ein einleitendes freies Gebet.

h. ಪ್ರಸಂಗವು. Die Predigt.

i. ಪ್ರಸಂಗಿ ಹೃತ್ಪ್ರೇರಿತ ಪ್ರಾರ್ಥನೆಯನ್ನು ಹೇಳುವದು.

Ein beschliessendes Gebet.

k. ಗೀತವು. Absingung eines weiteren Liederverses.

l. ವಿವಾಹ ರಾತ್ರಿಭೋಜನ ಮುಂತಾದ್ದನ್ನು ತಿಳಿಸುವದು.

(ಮನಸ್ಸಿದ್ದರೆ ಇಂಥ ಸಂಗತಿಗಳನ್ನು ಪಾರಾಯಣದ ತರುವಾಯ ತಿಳಿಸಲಿಕ್ಕೂ ಅಡ್ಡಿ ಇಲ್ಲ.)

Etwaige Ankündigungen, namentlich in Betreff von Hochzeiten, Abendmahl, etc.

Das Ganze wird mit dem Segen beschlossen.

ಕಡೆಯಲ್ಲಿ ಆಶೀರ್ವಾದ ಹೇಳುವದು.

m. ಅಂತ್ಯದ ಆಶೀರ್ವಾದವಚನಗಳು.

Segenssprüche am Ende.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! (ಅಂಕೆ. ೬, ೨೪—೨೬.)

ಅಥವಾ oder

ಎಲ್ಲಾ ಬುದ್ಧಿಯನ್ನು ಮೀರುವ ದೇವರ ಸಮಾಧಾನವು ನಿಮ್ಮ ಹೃದಯಗಳನ್ನೂ ಇಂದ್ರಿಯಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ! (ಫಿಲಿ. ೪, ೭.)

ಅಥವಾ oder

ಸಮಾಧಾನದ ದೇವರು ತಾನೇ ನಿಮ್ಮನ್ನು ಸಂಪೂರ್ಣವಾಗಿ ಪವಿತ್ರ ಮಾಡಲಿ! ಮತ್ತು ನಿಮ್ಮ ಪೂರ್ಣ ಆತ್ಮ ಪ್ರಾಣ ದೇಹಗಳು ನಮ್ಮ ಯೇಸು ಕ್ರಿಸ್ತ ಒಡೆಯನ ಆಗಮನದಲ್ಲಿ ದೋಷವಿಲ್ಲದ್ದಾಗಿರುವಂತೆ ಕಾಪಾಡಲ್ಪಡಲಿ! (೧ ಥೆಸ್ಸ. ೫, ೨೩.)

ಅಥವಾ oder

ಕ್ರಿಸ್ತ ಯೇಸುವಿನಲ್ಲಿ ತನ್ನ ನಿತ್ಯ ಮಹಿಮೆಗೆ ನಮ್ಮನ್ನು ಕರೆದ ಸರ್ವ ಕೃಪೆಯುಳ್ಳ ದೇವರು ತಾನೇ ಸ್ವಲ್ಪ ಕಾಲ ಶ್ರಮೆ ಪಟ್ಟವರಾದ ನಿಮ್ಮನ್ನು ಸ್ಥಿರ ಪಡಿಸಿ, ಬಲ ಪಡಿಸಿ, ನೆಲೆಗೊಳಿಸಲಿ! ಆತನಿಗೆ ಯುಗ ಯುಗಾಂತರಗಳಿಗೆ ಮಹಿಮೆಯೂ ಪರಾಕ್ರಮವೂ! ಆಮೆನ್! (೧ ಪೇತ್ರ. ೫, ೧೦—೧೧.)

ಅಥವಾ oder

ನಮ್ಮಲ್ಲಿ ಯತ್ನೈಸುವ ತನ್ನ ಬಲದ ಮೇರೆಗೆ ನಾವು ಬೇಡುವದಕ್ಕಿಂತಲೂ ನೆನಸುವದಕ್ಕಿಂತಲೂ ಅಧಿಕಾಧಿಕವಾದ್ದನ್ನು ಮಾಡ ಶಕ್ತನಿಗೆ, ಕ್ರಿಸ್ತ ಯೇಸುವಿನಲ್ಲಿ, ಸಭೆಯೊಳಗೆ, ಯುಗಯುಗಾಂತರಗಳ ಎಲ್ಲಾ ತಲಾಂತರಗಳಿಗೂ ಮಹಿಮೆಯಾಗಲಿ! ಆಮೆನ್! (ಎಫೆ. ೩, ೨೦—೨೧.)

II. ಆದಿತ್ಯವಾರ ಮಧ್ಯಾಹ್ನದ ಮೇಲಿನ ದೇವಾರಾಧನೆ.

Nachmittags-Gottesdienst.

Der Prediger spricht den Kanzelgruss, lässt sodann einen Vers singen, worauf eines der unter Beilage A, a gegebenen Gebete, oder eines der folgenden gesprochen wird.

ಪ್ರಸಂಗಿಯು ಪೀಠಕ್ಕೆ ಬಂದು, ಆರಂಭದ ಆಶೀರ್ವಾದವಚನಗಳಲ್ಲಿ ಒಂದನ್ನು ಹೇಳಿ, ಗೀತ ಹಾಡಿಸಿ, A, a ಎಂಬ ಪರಿಶಿಷ್ಟದ ಪ್ರಾರ್ಥನೆಗಳಲ್ಲಿ ಇಲ್ಲವೆ ಈ ಮುಂದಣ ಪ್ರಾರ್ಥನೆಗಳಲ್ಲಿ ಒಂದನ್ನು ಹೇಳುವದು.

ಪ್ರಾರ್ಥನೆ.

ಸ್ವರ್ಗದಲ್ಲಿರುವ ತಂದೆಯೇ! ನೀನು ನಮ್ಮನ್ನು ನಿನ್ನ ವಾಕ್ಯದಿಂದ ನಿನ್ನ ರಾಜ್ಯದ ಮಕ್ಕಳಾಗಲಿಕ್ಕೆ ಕರೆದು, ಇಂದು (ಇನ್ನೊಮ್ಮೆ) ನಿನ್ನ ಪವಿತ್ರ ಸನ್ನಿಧಿಗೆ ಕೂಡಿ ಬರ ಗೊಡಿಸಿದ್ದಕ್ಕಾಗಿ ನಿನ್ನನ್ನು ಹೊಗಳುತ್ತೇವೆ. ನಮ್ಮೊಡೆಯನೇ! ನೀನು ಪವಿತ್ರನೂ ದಯಾಪರನೂ ಆಗಿದ್ದೀ. ಆದರೆ ನಾವು ನಿನ್ನ ದಿವ್ಯ ಕರಹದ ಮಹತ್ತನ್ನೂ ಅದರಲ್ಲಿ ದೊರಕುವ ಭಾಗ್ಯವನ್ನೂ ತಕ್ಕ ಹಾಗೆ ಗಣ್ಯ ಮಾಡದೆ, ನೆನಸದೆ ಹೋದದಕ್ಕೆ ನಾಚಿ ಕೊಳ್ಳುತ್ತೇವೆ. ಎಷ್ಟೋ ಸರ್ತಿ ನಾವು ನಿನ್ನ ಪವಿತ್ರಾತ್ಮದ ಕೃಪಾಭರಿತವಾದ ಯತ್ನಕ್ಕೆ ಎದುರಿಸಿದೆವು! ಎಷ್ಟೋ ಸಾರಿ ನಿನ್ನ ವಾಕ್ಯದ ಬೀಜವು ಈ ಲೋಕದ ಮೋಹ ಚಿಂತೆ, ಅವಿಶ್ವಾಸಗಳೆಂಬ ಮುಳ್ಳುಗಳಿಂದ ನಮ್ಮಲ್ಲಿ ಅಣಗಿ, ನಿಷ್ಫಲವಾಗಿ ಹೋಯಿತು! ಕರ್ತಾ! ಉಪಕಾರ ನೆನಸದ ನಮ್ಮ ದುರ್ಬುದ್ಧಿಗಾಗಿ ನಮ್ಮನ್ನು ದಂಡಿಸ ಬೇಡ! ನಿನ್ನ ಸತ್ಯದ ಬೆಳಕನ್ನು ನಮ್ಮಿಂದ ತೆಗೆಯ ಬೇಡ! ನಿನ್ನ ಕೃಪೆಯ ರಾಜ್ಯವನ್ನು ನಮ್ಮಲ್ಲಿಂದ ಹರಕೊಳ್ಳ ಬೇಡ! ನಮ್ಮ ಅಪರಾಧಗಳನ್ನು ನಿನ್ನ ಪ್ರಿಯ ಮಗನ ಅಮೂಲ್ಯವಾದ ರಕ್ತದಿಂದ ಅಳಿಸಿ ಬಿಡು! ನಿನ್ನ ಪವಿತ್ರ ವಾಕ್ಯವೂ ಸ್ನಾನ ರಾತ್ರಿಭೋಜನಗಳೂ ಇನ್ನು ಮುಂದೆಯೂ ನಮ್ಮಲ್ಲಿ ಬೆರಿಕೆ ಇಲ್ಲದೆ ಅಚ್ಚಾಗಿ ಉಳಿಯಲೀಸು! ನಿನ್ನನ್ನು ಹೊಗಳುತ್ತಾ, ಕರುಣಾಸಾಗರನಾದ ನಿನಗೆ ಬಿನ್ನವಿಸುತ್ತಾ, ನಿನ್ನ ವಾಕ್ಯದ ಬಲದಿಂದ ಬೆಳಕನ್ನೂ ಪವಿತ್ರತ್ವವನ್ನೂ ನಿತ್ಯಜೀವದ ಭರವಸ

ವನ್ನೂ ಪಡಕೊಳ್ಳುವದೇ ಪರಮ ಪದವಿ ಎಂತ ನಮಗೆ ಕಲಿಸು! ನಿರ್ಮಲತ್ವವೂ ವಿಶ್ವಾಸವೂ ಆಸಕ್ತಿಯೂ ಉಳ್ಳಂಥ ಮನಸ್ಸನ್ನು ನಮ್ಮಲ್ಲಿ ಹುಟ್ಟಿಸು! ಈ ಉದ್ದಿಶ್ಯಕ್ಕಾಗಿ ನಿನ್ನ ಸಭೆಗೆ ನಿನಗೆ ಒಪ್ಪುವ ಬೋಧಕರನ್ನೂ ಪಾಲಕರನ್ನೂ ಕೊಡು!

ನಮ್ಮ ಮನೆಗಳನ್ನೂ ಕುಟುಂಬಗಳನ್ನೂ ನಿನ್ನ ಆತ್ಮದಿಂದ ಆಳಿಕೋ! ನಮ್ಮ ಶಾಲೆಗಳಲ್ಲಿ ಕಲಿಯುವವರನ್ನೂ ಕಲಿಸುವವರನ್ನೂ ಆಶೀರ್ವದಿಸು!

ನಮ್ಮನ್ನಾಳುವ ಕ್ರೈಸ್ತ ಕೈಸರನ (ಳ) ಹೆಸರಿನಲ್ಲಿ ರಾಜ್ಯಕಾರ್ಯ ನಡಿಸುವ ಅಧಿಕಾರಿಗಳು ತಮ್ಮ ತಮ್ಮ ಅಧಿಕಾರದ ಸಕಲ ವಿಷಯಗಳಲ್ಲಿಯೂ ನಿನ್ನ ಮಾನವನ್ನು ಬಗೆದು, ಎಡೆಬಿಡದೆ ನಿನ್ನ ಸಭೆಯ ಬಾಳ್ವಿಕೆ ಬೆಳವಣಿಗೆಗಳನ್ನೂ ಸದ್ಧರ್ಮವನ್ನೂ ಅಪೇಕ್ಷಿಸಿ, ಪ್ರಜೆಯವರೆಲ್ಲರ ಹಿತವನ್ನೂ ಬಯಸುತ್ತಾ ನಡೆದು ಮೆರೆಯುವಂತೆ ಅವರಿಗೆ ಬುದ್ಧಿಯನ್ನೂ ಬಲವನ್ನೂ ದಯ ಪಾಲಿಸು! ರಾಜಾಧಿರಾಜನೇ! ನಮ್ಮ ಜನ್ಮದೇಶವನ್ನು ಕಾಪಾಡು!

ಒಡೆಯಾ! ನಿನ್ನ ಪ್ರಜೆಯನ್ನು ಸಲಹು! ನಿನ್ನ ಚಿಕ್ಕ ಮಂದೆಯನ್ನು ಪಾಲಿಸು! ನಿನ್ನ ಸಭೆಗೆ ಎದುರ್ನಿಲ್ಲುವ ಕುಯುಕ್ತಿ ಬಲಾತ್ಕಾರಗಳನ್ನೆಲ್ಲಾ ಹಿಮ್ಮೆಟ್ಟಿಸು! ನಿನ್ನ ಪವಿತ್ರವಾದ ಹೆಸರನ್ನು ಅರಿಕೆ ಮಾಡಿದ್ದಕ್ಕಾಗಿ ಹಿಂಸೆ ಪಡುವವರೆಲ್ಲರನ್ನು ಬಲಗೊಳಿಸಿ, ಬಿಡುಗಡೆ ಮಾಡು! ಈ ಭೂಮಂಡಲದಲ್ಲಿರುವ ಮನುಷ್ಯರೆಲ್ಲರ ಹೃದಯಗಳಲ್ಲಿ ನಿನ್ನ ಸುವಾರ್ತೆಯ ಬೆಳಕನ್ನು ಮೂಡಿಸು. ದುಃಖಾಕ್ರಾಂತರು, ದಿಕ್ಕಿಲ್ಲದವರು, ರೋಗಿಗಳು, ಬಡವರು ಮುಂತಾದವರ ನಷ್ಟ ಕಷ್ಟಗಳನ್ನು ಮನಸ್ಸಿಗೆ ತಂದುಕೋ! ಭೂಮಿಯ ಹುಟ್ಟುವಳಿಯನ್ನು ಕಾಪಾಡು! ಇಹದಲ್ಲಿ ನಮ್ಮ ಜೀವಾಧಾರ ಆದರಣೆ ಸಮಾಧಾನಗಳಿಗೆ ಬೇಕಾಗುವಂಥಾದ್ದನ್ನು ನಿನ್ನ ದಿವ್ಯ ದಯಾನಿಧಿಯಿಂದ ನಮಗೆ ಕೊಡುತ್ತಾ ಬಂದು, ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖಾಂತರ ನಮ್ಮನ್ನು ಈ ದುಃಖಸಾಗರವನ್ನು ದಾಟಿಸಿ, ನಿನ್ನ ನಿರಂತರವಾದ ವಿಶ್ರಾಂತಿಯಲ್ಲಿ ಶೇರಿಸು! ಆಮೆನ್!

ಅಥವಾ oder

ಸರ್ವತ್ರಾಣವುಳ್ಳ ದೇವರೇ! ಸ್ವರ್ಗ ಪೃಥ್ವಿಗಳಲ್ಲಿ ಎಲ್ಲಾ ಪಿತೃತ್ವಕ್ಕೆ ಹೆಸರು ಕೊಡುವಂಥ, ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯಾಗಿರುವಂಥ ವಿಶ್ವಕುಟುಂಬಿಯೇ! ನಾವು ನಿನ್ನ ಪವಿತ್ರ ಸನ್ನಿಧಾನಕ್ಕೆ ಬಂದು, ನಿನ್ನ ಮಹೋಪಕಾರಗಳನ್ನು ನೆನಸಿ, ಸ್ತೋತ್ರದ ಯಜ್ಞವನ್ನು ನಿನಗೆ ಅರ್ಪಿಸುತ್ತೇವೆ.

ನೀನು ನಮ್ಮನ್ನು ನಿನ್ನ ಪ್ರತಿರೂಪವಾಗಿ ನಿರ್ಮಿಸಿ, ಪುಣ್ಯ ಯೋಗ್ಯತೆಗಳೇನೂ ಇಲ್ಲದಂಥಾ ನಮ್ಮನ್ನು ಚಿಕ್ಕಂದಿನಿಂದ ಇಂದಿನ ವರೆಗೂ ಕಾಪಾಡಿ, ದೇಹಾತ್ಮಗಳಿಗೆ ನಾನಾ ವರಗಳನ್ನು ಕೊಟ್ಟು, ನಮ್ಮನ್ನು ಆಶೀರ್ವದಿಸುತ್ತಾ ಬಂದದಕ್ಕೆ ನಿನ್ನನ್ನು ಕೊಂಡಾಡುತ್ತೇವೆ. ಬಡ ಪಾಪಿಗಳಾದ ನಮ್ಮ ಮೇಲೆ ಮಹಾ ಕರುಣೆಯನ್ನಿಟ್ಟು, ನಿನ್ನ ಅತಿಪ್ರಿಯ ಮಗನಾದ ಯೇಸು ಕ್ರಿಸ್ತನನ್ನು ನಮಗೋಸ್ಕರ ಕೊಟ್ಟು, ಈತನಲ್ಲಿ ಈ ಹೊತ್ತಿನ ವರೆಗೂ ಆದರಣೆ ಸಮಾಧಾನ ನಿತ್ಯಜೀವದ ಪ್ರತೀಕ್ಷೆಗಳಿಂದ ನಮ್ಮನ್ನು ತುಂಬಿಸುವ ನಿನ್ನ ಪವಿತ್ರಾತ್ಮವನ್ನು ನಿನ್ನ ಭಕ್ತರ ಹೃದಯಗಳೊಳಗೆ ಕಳುಹಿಸುತ್ತಾ ಬಂದಿದ್ಧೀ. ನಮ್ಮ ದೇವರಾದ ಯೆಹೋವಾ! ಈ ನಿನ್ನ ದೊಡ್ಡ ಉಪಕಾರಗಳಗೋಸ್ಕರ ನಾವು ನಿನಗೆ ಮನಃಪೂರ್ವಕವಾಗಿ ಮಾಡುವ ಕೃತಜ್ಞಾಪನೆಯ ಅರ್ಪಣೆಯನ್ನು ದಯದಿಂದ ಅಂಗೀಕರಿಸಬೇಕೆಂತ ಬೇಡಿ ಕೊಳ್ಳುತ್ತೇವೆ.

ನಿನ್ನನ್ನು ಅರಿಯದವರೆಲ್ಲರನ್ನೂ ನಿಶ್ಚಿಂತರಾಗಿ ಕಾಲ ಹರಣ ಮಾಡುವ ಪಾಪಿಗಳೆಲ್ಲರನ್ನೂ ದೇವಬಲವಾದ ನಿನ್ನ ವಾಕ್ಯದ ಧ್ವನಿಯಿಂದ ಎಚ್ಚರಿಸಿ, ಎಬ್ಬಿಸು! ನಿನ್ನ ಸಭೆಯನ್ನು ಬದುಕಿಸುವ ನಿನ್ನ ಆತ್ಮದಿಂದ ತುಂಬಿಸು! ಮರಣಾಂಧಕಾರದಲ್ಲಿ ಕೂತು ಕೊಂಡಿರುವ ಜನಾಂಗಗಳನ್ನು ಕರುಣಿಸಿ, ಅವರಿಗೆ ನಿನ್ನ ಬೆಳಕನ್ನೂ ನಿನ್ನ ಸತ್ಯವನ್ನೂ ಕಳುಹಿಸಿ ಕೊಡು! ಎಲ್ಲಾ ದೇಶಗಳಲ್ಲಿ ಸುವಾರ್ತೆಯ ಪ್ರಸಂಗಿಗಳನ್ನು ಕಾಪಾಡು! ಅವರನ್ನು ಕೈ ಹಿಡಿದು ನಡಿಸಿ ಕೊಂಡು, ಕೆಲಸಕ್ಕೆ ಬೇಕಾದ ಬುದ್ಧಿಯನ್ನೂ ಬಲವನ್ನೂ ತಾಳ್ಮೆಯನ್ನೂ ಅವರಿಗೆ ದಯ ಪಾಲಿಸು! ಯೇಸು

ಕ್ರಿಸ್ತನ ತಂದೆಯೇ! ಸಮಸ್ತ ಕ್ರೈಸ್ತ ಸಭೆಯನ್ನು ಪರಾಂಬರಿಸಿ, ಅದರ ಸುಖದುಃಖಗಳನ್ನು ಚಿಂತಿಸಿ, ಇಷ್ಟಾರ್ಥಗಳನ್ನು ದಯ ಪಾಲಿಸು!

ಕ್ರೈಸ್ತ ಅಧಿಕಾರಿಗಳಿಗೆ ನೀನು ಒಲಿದು, ಅವರನ್ನು ನಡಿಸಿ, ಕೇಡಿಗೆ ತಪ್ಪಿಸಿ, ಕಾಯ ಬೇಕೆಂದು ಬೇಡುತ್ತೇವೆ. ಅವರು ನಿನ್ನ ಚಿತ್ತಕ್ಕನುಸಾರವಾಗಿ ರಾಜ್ಯಭಾರ ಮಾಡುವ ಹಾಗೆ, ಅವರನ್ನು ನಿನ್ನ ಆತ್ಮದಿಂದ ಬೋಧಿಸಿ, ನಡಿಸು! ಕ್ರಿಸ್ತನ ಸುವಾರ್ತೆಯ ಬಲವನ್ನು ಅನುಭವಿಸಿದಂಥಾ, ಊಳಿಗದಲ್ಲಿ ಸ್ವಾರ್ಥವನ್ನು ಬಿಟ್ಟು, ನಿನ್ನ ಮಾನವನ್ನೂ ಕ್ರಿಸ್ತನ ಮುಂದೆಯ ಬಾಳಿಕೆಯನ್ನೂ ಬಯಸುವಂಥಾ, ನಂಬಿಕೆಯುಳ್ಳ ಭಕ್ತರನ್ನು ಪ್ರಸಂಗೋದ್ಯೋಗದಲ್ಲಿ ಇರಿಸು! ಗಂಡ ಹೆಂಡರ ಬಗತನವನ್ನು ಆಶೀರ್ವದಿಸು! ಬದುಕು ಬಾಳಿಗೂ ಸದಾಚಾರಕ್ಕೂ ಬೇಕಾದ ವರಗಳನ್ನು ಅವರಿಗೆ ದಯ ಪಾಲಿಸು! ತಮ್ಮ ಮಕ್ಕಳನ್ನು ನಿನ್ನ ಭಯಭಕ್ತಿಯಲ್ಲಿ ಸಾಕಿ, ಸಾಧಿಸಿ, ನಡಿಸುವದಕ್ಕೆ ತಂದೆ ತಾಯಿಗಳಿಗೆ ಸಹಾಯ ಮಾಡು! ಉಪಕಾರ ನೆನಸುವಂಥ, ಮಾತು ಕೇಳುವಂಥ ಮನಸ್ಸನ್ನು ಮಕ್ಕಳಲ್ಲಿ ಹುಟ್ಟಿಸಿ, ಹೆಚ್ಚಿಸು!

ಕ್ಷೇಮಕರವಾದಂಥಾ, ಭೂಮಿ ಸಾರವತ್ತಾಗುವಂಥಾ ಬಿಸಿಲು ಘಾಳಿ ಮಳೆಗಳನ್ನು ಕಾಲೋಚಿತವಾಗಿ ನಮಗೆ ದಯ ಮಾಡಿ, ಭೂಮಿಯ ಬೆಳೆಯನ್ನು ಕಾಪಾಡಿ, ಸೋಕುರೋಗ ಯುದ್ಧ ಮುಂತಾದ ಕೇಡುಗಳನ್ನು ಕೃಪೆಯಿಂದ ನಮಗೆ ದೂರ ಮಾಡು! ಚಿಂತಾಕ್ರಾಂತರಿಗೂ ರೋಗಿಗಳಿಗೂ ಉಪದ್ರವ ಪಡುವವರಿಗೂ ವಿಧವೆಗಳಿಗೂ ತಂದೆ ತಾಯಿ ಇಲ್ಲದ ಮಕ್ಕಳಿಗೂ ದಿಕ್ಕಿಲ್ಲದವರಿಗೂ ಇಕ್ಕಟ್ಟಿನಲ್ಲಿರುವವರೆಲ್ಲರಿಗೂ ನೀನಲ್ಲದೆ ಬೇರೆ ಸಹಾಯಕನೂ ರಕ್ಷಕನೂ ಇಲ್ಲದ ನಮ್ಮೆಲ್ಲರಿಗೂ ಪ್ರಸನ್ನನಾಗಿ, ಉಪದ್ರವಗಳನ್ನೂ ಚಿಂತೆಗಳನ್ನೂ ಎಲ್ಲಾ ಮುಗಿಸಿ, ಇಷ್ಟವಾದ ಸದ್ಗತಿಯನ್ನು ದಯ ಮಾಡು!

ಕ್ರೈಸ್ತರೆಂದು ಅನ್ನಿಸಿ ಕೊಳ್ಳುವ ಜನಾಂಗಗಳಲ್ಲಿ ಅನ್ಯಾಯ ಹಿಂಸೆ ಬಲಾತ್ಕಾರ ಮುಂತಾದ್ದನ್ನು ನಿಲ್ಲಿಸಿ ಬಿಡು! ನಿನ್ನ ಸಭೆಯನ್ನು ಆಶೀರ್ವದಿಸಿ, ಪಾಲನೆ ಮಾಡು! ಸಮಾಧಾನದ ರಾಜನೂ ನಿನ್ನ ಪ್ರಿಯ ಕುಮಾ

ರನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನ ಮುಖಾಂತರ ನಮ್ಮಲ್ಲಿಯೂ ನಮ್ಮ ಮಕ್ಕಳಲ್ಲಿಯೂ ನಿನ್ನ ಸುವಾರ್ತೆಯ ಸತ್ಯವನ್ನೂ ನಿನ್ನ ದಿವ್ಯ ಸಮಾಧಾನದ ಅನುಭವವನ್ನೂ ಉಳಿಸಿ, ಸ್ಥಿರ ಪಡಿಸು! ಆಮೆನ್!

ತರುವಾಯ ಪಾರಾಯಣದ ಪರಿಚ್ಛೇದ ಓದಿದ ಮೇಲೆ, ಮುಖ್ಯ ಗೀತ ಹಾಡಿಸುವದು. ಬಳಿಕ ಬೋಧಕನು ಹೃತ್ಪ್ರೇರಿತ ಪ್ರಾರ್ಥನೆ ಮಾಡಿ, ಪ್ರಸಂಗವಾದ ಮೇಲೆ, ಹಾಗೆಯೇ ಪ್ರಾರ್ಥನೆ ಮಾಡಿ, ೧೯ನೇ ಪಾನಿನಲ್ಲಿರುವ ಕರ್ತನ ಪ್ರಾರ್ಥನೆ ಹೇಳುವದು. ಆ ಮೇಲೆ ಗೀತವೂ ಸಮಾಪ್ತಿಯ ಆಶೀರ್ವಾದವೂ. (ಪಾನು ೨೦. ೨೧.)

Hierauf folgt die Vorlesung der Lection und sodann das Hauptlied. Weiter die Predigt, eingeleitet und beschlossen durch kurzes Herzensgebet. Dann Vater Unser, (siehe oben p. 19) Schlussvers, Segen. (p. 20. 21.)

III. ಪ್ರಶ್ನೋತ್ತರರೂಪವಾಗಿರುವ ಉಪದೇಶವು.

Kindergottesdienst.

ಆದಿತ್ಯವಾರಗಳಲ್ಲಿ ಮಧ್ಯಾಹ್ನದ ಮೇಲೆ ಆಗುವ ಉಪದೇಶದ ಆರಂಭಕ್ಕೆ ಆಶೀರ್ವಾದವೂ ಗೀತ ಗಾಯನವೂ ಆದ ಬಳಿಕ ಈ ಕೆಳಗೆ ಬರುವ ಪ್ರಾರ್ಥನೆಗಳಲ್ಲಿ ಒಂದು ಹೇಳುವದು.

(Die Kinderlehre, welche an jedem Sonntag Nachmittag gehalten wird, und an die Stelle des regulären Nachmittags-Gottesdienstes treten mag, beginnt mit dem Segen und Lied, nach welchem eines der folgenden Gebete gesprochen wird.)

ಪ್ರಾರ್ಥನೆ.

ನಮ್ಮೊಡೆಯನಾದ ಯೇಸು ಕ್ರಿಸ್ತನೇ! ಮಹಾ ಗುರುವೇ! ಮೂಥರ ಬೋಧಕನೇ! ಬಾಲಕರ ಉಪಾಧ್ಯಾಯನೇ! ನೀನು ಹನ್ನೆರಡು ವರುಷದ ಎಳೇ ಪ್ರಾಯದಲ್ಲಿ ದೇವಾಲಯದೊಳಗೆ ಬೋಧಕರ ನಡುವೆ ಕೂತು ಕೊಂಡು, ಅವರನ್ನು ಆಲೈಸುತ್ತಾ ಅವರಿಗೆ ಪ್ರಶ್ನೆ ಕೇಳುತ್ತಾ ಇದ್ದಿಯಲ್ಲಾ! ನಾವು ಸಹ ಈಗ ನಿನ್ನ ಮನೆಗೆ ಬಂದು, ರಕ್ಷಣೆಯ ಮಾರ್ಗವಾದ ಕ್ರೈಸ್ತ ವಿಶ್ವಾಸದ ಆಧಾರವನ್ನೂ ಭಕ್ತಿಬೋಧವನ್ನೂ ಕ್ರೈಸ್ತಧರ್ಮದ ಸತ್ಯ ಸೂತ್ರಗಳನ್ನೂ ಕಲಿತು ಕೊಂಡು, ಅವ

ನ್ನು ವಿವರಿಸುವ ಪ್ರಶ್ನೋತ್ತರಗಳಿಂದ ನಿನ್ನ ಜ್ಞಾನದಲ್ಲಿ ಹೆಚ್ಚಿ, ನೆಲೆಗೊಂಡು, ಸಿದ್ಧಿ ಹೊಂದ ಬೇಕೆಂದು ಇಲ್ಲಿ ನೆರೆದು ಕೊಂಡಿದ್ದೇವೆ. ಈ ಉದ್ದಿಶ್ಯಕ್ಕಾಗಿ ಪವಿತ್ರಾತ್ಮವನ್ನು ನಮಗೆ ಕೊಡು! ನಿನ್ನ ನ್ಯಾಯವಿಧಿಯಲ್ಲಿರುವ ಅದ್ಭುತಗಳನ್ನು ನಾವು ಕಾಣುವಂತೆ ನಮ್ಮ ಕಣ್ಣುಗಳನ್ನು ತೆರೆ! ನಮ್ಮೆಲ್ಲರ ಹೃದಯಗಳನ್ನು ಅರಳಿಸು! ನಾವು ನಿನ್ನ ಪರಿಶುದ್ಧ ವಾಕ್ಯವನ್ನು ಹೆಚ್ಚು ಹೆಚ್ಚಾಗಿ ತಿಳುಕೊಳ್ಳುವ ಹಾಗೆ ನಮಗೆ ಗ್ರಹಿಕೆಯನ್ನು ಕೊಟ್ಟು, ಬುದ್ಧಿಯನ್ನು ವಿಕಾಸ ಮಾಡು! ಅಪೊಸ್ತಲರ ಮತ್ತು ಪ್ರವಾದಿಗಳ ಅಸ್ತಿವಾರಕ್ಕೆ ಮೂಲೆಕಲ್ಲಾದ ನಿನ್ನ ಮೇಲೆ, ಯೇಸು ಕ್ರಿಸ್ತ ಒಡೆಯನೇ! ನಾವು ಸಜೀವ ಕಲ್ಲುಗಳಾಗಿ ಕಟ್ಟಲ್ಪಟ್ಟು, ಸೈತಾನನಿಂದಲೂ ಪ್ರಪಂಚದಿಂದಲೂ ನಮಗೆ ಬರುವ ವಿಘ್ನ ವಿಲೋಭನಗಳಿಗೆ ತಪ್ಪಿಸಿ ಕೊಂಡು, ಭದ್ರವಾಗಿದ್ದು, ನಮ್ಮ ವಿಶ್ವಾಸದ ಫಲವಾಗಿರುವ ನಿತ್ಯ ರಕ್ಷಣೆಯನ್ನು ಪಡಕೊಳ್ಳುವ ಹಾಗೆ ದಯ ಮಾಡು! ಆಮೆನ್!

ಅಥವಾ oder

ಕರುಣೆಯುಳ್ಳ ತಂದೆಯೇ! ಜ್ಞಾನಾಕರನಾದ ಏಕ ದೇವರೇ! ನಾವು ಪಾಪಿಗಳಾಗಿ ಹುಟ್ಟಿ, ನಮ್ಮನ್ನಾಗಲಿ, ಒಬ್ಬನೇ ನಿಜ ದೇವರಾಗಿರುವ ನಿನ್ನನ್ನಾಗಲಿ, ನೀನು ಲೋಕಕ್ಕೆ ಕಳುಹಿಸಿದ ಯೇಸು ಕ್ರಿಸ್ತನನ್ನಾಗಲಿ ತಿಳಿಯದ ಅಜ್ಞಾನಿಗಳಾಗಿದ್ದೇವೆ. ನಿತ್ಯಜೀವದ ಮೂಲವಾಗಿರುವ ನಿನ್ನ ತಿಳುವಿಕೆ ಇಲ್ಲದವರಾದ ನಾವು, ಕಿರಿಯರಾಗಲಿ ಹಿರಿಯರಾಗಲಿ, ಎಂಥವರಾದರೂ, ಈ ಹುಟ್ಟುಕುಂದನ್ನು ಪರಿಹರಿಸಿ ಕೊಂಡು, ನಿನ್ನ ಕಡೆಗೂ ನಿತ್ಯ ಜೀವದ ಕಡೆಗೂ ಹೋಗುವ ದಾರಿಯನ್ನು ಹಿಡುಕೊಂಡು, ತಪ್ಪದೆಯೂ ಸೋತುಹೋಗದೆಯೂ ನಡೆಯುವದು ಹ್ಯಾಗೆ? ನಮ್ಮ ಹೆಜ್ಜೆಗಳಿಗೆ ದೀವಟಿಗೆ, ನಮ್ಮ ಹಾದಿಗೆ ಬೆಳಕು ಆಗಿರುವ ನಿನ್ನ ವಾಕ್ಯವನ್ನು ಕೈಕೊಳ್ಳುವದರಿಂದಲ್ಲವೇ! ಹೀಗಿರಲಾಗಿ ಈ ಭೂಮಿಯಲ್ಲಿ ಹೆರರೂ ಪಯಣ ಮಾಡುವ ದಾರಿಗರೂ ಆಗಿರುವ ನಮಗೆ ನಿನ್ನ ವಾಕ್ಯವು ಮರೆಯಾಗಿರಗೊಡ ಬೇಡ ಎಂದು ಬಿನ್ನೈಸುತ್ತೇವೆ. ನಮಗೆ ಜ್ಞಾನದ ಆತ್ಮವನ್ನು ಕೊಟ್ಟು,

ನಮ್ಮ ಮನಸ್ಸನ್ನು ಬೆಳಗಿಸಿ, ಸತ್ಯವನ್ನು ನಮಗೆ ಅಚ್ಚವಾಗಿಯೇ ತಿಳಿಸು! ನಮ್ಮ ಹೃದಯವನ್ನೂ ನಮ್ಮ ಎಲ್ಲಾ ನಡತೆಯನ್ನೂ ಹೊಸತು ಮಾಡು! ನಮಗೆ ತಿಳಿದು ಬಂದ ಸತ್ಯಕ್ಕೆ ಅವು ಅನುರೂಪವಾಗಿಯೂ ಅನುಸಾರವಾಗಿಯೂ ಕಾಣ ಬರಲಿ! ಅವುಗಳಿಂದ ನಿನ್ನ ಮಹೋನ್ನತ ಮಹಿಮೆಗೆ ಎಷ್ಟು ಮಾತ್ರವಾದರೂ ಅಪಮಾನವಾಗದೆ ಇರಲಿ! ಮಾರ್ಗವೂ ಸತ್ಯವೂ ಜೀವವೂ ಆಗಿರುವ ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖಾಂತರ ನಾವು ಬೇಡಿದ್ದನ್ನು ದಯ ಮಾಡು! ಸದಾ ಪಿತನೇ! ಆತನ ಹೆಸರಿನಲ್ಲಿ ನಾವು ನಿನ್ನ ಬಳಿಗೆ ಬಂದು, ಮತ್ತೂ ಪ್ರಾರ್ಥಿಸುವದೇನಂದರೆ:

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಸೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ಬಳಿಕ ಪ್ರಶ್ನೋತ್ತರೋಪದೇಶ ತೀರಿದಾಗ ಹೃತ್ಪ್ರೇರಿತ ಪಾರ್ಥನೆ ಹೇಳಿ, ಗೀತ ಹಾಡಿಸಿ, ಸಮಾಪ್ತಿಯ ಆಶೀರ್ವಾದವನ್ನು ನುಡಿಯುವದು.

ಹೃತ್ಪ್ರಾರ್ಥನೆಗೆ ಪ್ರತಿಯಾಗಿ, ವಿಶೇಷವಾಗಿ ಬಹಳ ಜನರು ಬಂದಿರುವಲ್ಲಿ, ಕೆಳಗೆ ಬರುವ ಪ್ರಾರ್ಥನೆಗಳಲ್ಲಿ ಒಂದನ್ನು ಹೇಳ ಬಹುದು.

Hierauf folgt die Katechisation, welche mit einem freien Herzensgebet, Liedervers und Segen beschlossen wird.

Statt des Herzensgebets kann auch Nachfofgendes gelesen werden, namentlich wenn viele Kinder da sind.

ಪ್ರಾರ್ಥನೆ.

ನಮ್ಮೊಡೆಯನಾದ ಯೆಹೋವಾ! ನಿನ್ನ ಹೆಸರು ಭೂಮಂಡಲದ
ಲ್ಲೆಲ್ಲಾ ಎಷ್ಟೋ ಘನವಾಗಿದೆ! ಪರಾತ್ಪರನೇ! ನಿನ್ನ ಮಹಿಮೆ ಸ್ವರ್ಗಾ
ತೀತವಾಗಿದೆ. ಶಿಶುಗಳ ಬಾಯಿಯಲ್ಲಿ, ಮೊಲೆಕೂಸುಗಳ ಬಾಯಿಯಲ್ಲಿ
ಸಹ, ನಿನ್ನನ್ನು ಘನ ಪಡಿಸುವ ಬಲವನ್ನು ಸ್ಥಾಪಿಸಿದ್ದೀ. ನೀನು ನಮ್ಮನ್ನು
ಮಹಾ ಪ್ರೀತಿಯಿಂದ ಕರೆದು—ನನ್ನ ಮಗನೇ! ನನ್ನ ನ್ಯಾಯವನ್ನು ಮ
ರೆಯ ಬೇಡ! ನಿನ್ನ ಹೃದಯವು ನನ್ನ ಅಪ್ಪಣೆಗಳನ್ನು ಕೈಕೊಳ್ಳಲಿ! ಯಾ
ಕಂದರೆ ಅವು ದೀರ್ಘಾಯುಷ್ಯವನ್ನೂ ಸಮಾಧಾನದ ಸ್ಥಿತಿಗತಿಯನ್ನೂ
ನಿನಗೆ ದೊರಕಿಸಿ ಕೊಡುವವು. ಕೃಪೆಯೂ ನಂಬಿಕೆಯೂ ನಿನ್ನನ್ನು
ಬಿಡದಿರಲಿ! ಅವನ್ನು ನಿನ್ನ ಕೊರಳಿಗೆ ಕಟ್ಟಿ ಕೊಂಡು, ನಿನ್ನ ಹೃದಯ
ವೆಂಬ ಹಲಿಗೆಯಲ್ಲಿ ಬರೆದಿಡು! ಆಗ ಸುವಿವೇಕವನ್ನೂ, ದೇವರಲ್ಲಿಯೂ
ಮನುಷ್ಯರಲ್ಲಿಯೂ ದಯವನ್ನೂ ದೊರಕಿಸಿ ಕೊಳ್ಳುವಿ ಇಂತೆಂಬ
ಮಮಕಾರದ ಮಾತುಗಳನ್ನು ನುಡಿಯುತ್ತಾ ಇದ್ದೀ. ಮತ್ತು ನಿನ್ನ ಏಕಜ
ಕುಮಾರನಾದ ಯೇಸು ಕ್ರಿಸ್ತನು ಆಶೀರ್ವಾದ ಪಾಲಿಸುವ ಬಯಕೆ
ಯಿಂದ ಮಕ್ಕಳನ್ನು ತನ್ನ ಬಳಿಗೆ ಬರಗೊಡಿಸ ಬೇಕೆಂತಲೂ, ದೇವರ
ರಾಜ್ಯವು ಅಂಥವರದೆಂತಲೂ ಹೇಳಿ, ಎಂಥಾ ಪ್ರೀತಿಯನ್ನು ಕಾಣಿಸಿ
ದ್ದಾನೆ! ನೀನು ನಮ್ಮನ್ನು ಎಳೆ ಪ್ರಾಯದಲ್ಲಿಯೇ ನಿನ್ನ ಬಳಿಗೆ ಕರಿಸಿ
ಕೊಂಡು, ಪರಿಶುದ್ಧ ಸ್ನಾನದಲ್ಲಿ ನಿನ್ನ ಮಕ್ಕಳೆಂತ ಅಂಗೀಕರಿಸಿ, ನಿನ್ನ
ದಿವ್ಯ ವಾಕ್ಯದ ಅಚ್ಚ ಹಾಲನ್ನು ಉಣ್ಣಿಸಿ, ನಾವು ಪವಿತ್ರರೂ ಭಾಗ್ಯ
ವಂತರೂ ಆಗುವ ಹಾಗೆ ಮಾಡಿ, ನಮ್ಮನ್ನು ಸಾಕುತ್ತಾ ಬಂದ ನಿನ್ನ
ಕೃಪೆಯನ್ನು ಎದೆಗುಂಡಿಯಿಂದ ಕೊಂಡಾಡುತ್ತೇವೆ. ನಿನ್ನನ್ನು ತಿಳಿದು,
ಸನ್ಮಾನಿಸಿ, ನಿನ್ನಿಂದ ರಕ್ಷಿತವಾಗುವ ಪ್ರಜಾಜನರು, ಸೂರ್ಯ ಚಂದ್ರಾದಿ
ಗಳು ಇರುವನಕ ಭೂಮಿಯಲ್ಲಿ ಇಲ್ಲವಾಗದಂತೆ, ನಮ್ಮನ್ನು ನಿನ್ನ ಜೋ
ಕೆಯಲ್ಲಿ ಇಟ್ಟು ಕೊಂಡು, ಆತ್ಮದಲ್ಲಿ ಬಲಗೊಳಿಸಿ, ಪ್ರಾಯದಲ್ಲಿ ಮಾತ್ರ
ವಲ್ಲದೆ ನಿನ್ನ ಮತ್ತು ಎಲ್ಲಾ ಮನುಷ್ಯರ ದಯದಲ್ಲಿ ಸಹ ಬೆಳಸ ಬೇ

ಕೆಂತ ಬೇಡಿ ಕೊಳ್ಳುತ್ತೇವೆ. ನಂಬಿಕೆಯ ದೇವರೇ! ತಂದೆಯೇ! ನಮ್ಮೊಡೆಯನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮುಖಾಂತರ ನಾವು ಬೇಡಿದ್ದನ್ನು ದಯ ಮಾಡು! ಆಮೆನ್!

ಅಥವಾ oder

ಕೃಪೆಯುಳ್ಳ ದೇವರಾದ ತಂದೆಯೇ! ನೀನು ಈ ಹೊತ್ತು ಸಹ ನಮಗೆ ರಕ್ಷಣಾರ್ಥವಾದ ಉಪದೇಶ ಕೊಡಿಸಿದ ದಯಕ್ಕಾಗಿ ನಿನ್ನನ್ನು ಹೊಗಳುತ್ತೇವೆ. ನಾವು ಈಗ ಕೇಳಿದ ನಿನ್ನ ವಾಕ್ಯದ ಮೇಲೆ ಆಶೀರ್ವಾದವನ್ನು ಇಟ್ಟು, ಹಿರಿ ಕಿರಿಯರೆಲ್ಲರೂ ಅದನ್ನು ನಯಗುಣದ ಒಳ್ಳೇ ಹೃದಯದಲ್ಲಿ ಇಟ್ಟು ಕೊಳ್ಳುವ ಹಾಗೆ ಸಹಾಯ ಮಾಡು! ನನ್ನ ವಾಕ್ಯವೂ ನನ್ನ ಆತ್ಮವೂ ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಎಂದೆಂದಿಗೂ ಬಿಟ್ಟು ಹೋಗುವದಿಲ್ಲ ಎಂಬ ನಿನ್ನ ವಾಗ್ದತ್ತವನ್ನು ನಮ್ಮಲ್ಲಿ ನೆರವೇರಿಸು! ನಿನ್ನ ವಾಕ್ಯವನ್ನು ಲಕ್ಷಿಸಿ ಕೈಕೊಳ್ಳುವಂಥವರು ಮಾತ್ರ ಸನ್ಮಾರ್ಗದಲ್ಲಿ ತಪ್ಪದೆ ನಡಿಯಲಾಗುತ್ತದೆ ಎಂಬದನ್ನು ನಮ್ಮ ಮಕ್ಕಳಿಗೆ ಎಳೆ ಪ್ರಾಯದಲ್ಲಿಯೇ ತಿಳಿಸು. ಅವರೆಲ್ಲರೂ ತಮ್ಮ ನಿರ್ಮಾಣಿಕನಾದ ನಿನ್ನನ್ನು ಚಿಕ್ಕಂದಿನಿಂದಲೇ ನೆನಪು ಮಾಡಿ ಕೊಂಡು, ಕೇವಲ ಪವಿತ್ರ ಬಾಲಕನಾದ ಯೇಸುವಿನೋಪಾದಿಯಾಗಿ ಪ್ರಾಯದಲ್ಲಿ ಹ್ಯಾಗೋ ಹಾಗೆಯೇ ಜ್ಞಾನದಲ್ಲಿಯೂ ನಿನ್ನ ಮತ್ತು ಮನುಷ್ಯರ ಮೆಚ್ಚಿಗೆಯಲ್ಲಿಯೂ ಬೆಳೆದು, ಇಹಪರಗಳಲ್ಲಿ ಭಾಗ್ಯವಂತರಾಗುವ ಹಾಗೆ ದಯ ಮಾಡು! ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖ ನೋಡಿ ನಮ್ಮನ್ನು ಆಲೈಸು! ಆಮೆನ್!

A. ಆದಿತ್ಯವಾರಗಳಿಗೂ ಹಬ್ಬಗಳಿಗೂ ತಕ್ಕ ಪರಿಶಿಷ್ಟಗಳು.

Beilage.

a. ಆದಿತ್ಯವಾರಪ್ರಾರ್ಥನೆಗಳು.

Sonntagsgebete

೧

ನಮ್ಮ ದೇವರಾದ ಯೆಹೋವಾ! ನೀನು ಬೆಳಕು, ನಿನ್ನಲ್ಲಿ ಕತ್ತಲೆ ಇಲ್ಲ. ನಿನ್ನ ಒಬ್ಬನೇ ಮಗನನ್ನು ಅನುಚರಿಸುವವರು ಕತ್ತಲೆಯಲ್ಲಿ ನಡೆಯದೆ, ಜೀವದ ಬೆಳಕನ್ನು ಹೊಂದುವ ಹಾಗೆ ಆತನನ್ನು ಲೋಕಕ್ಕೆ ಕಳುಹಿಸಿ ಕೊಟ್ಟೆ. ಹೀಗಿರಲಾಗಿ ನಮ್ಮನ್ನು ನಡಿಸುವ ಬಗ್ಗೆ ನಿನ್ನ ಬೆಳಕನ್ನೂ ನಿನ್ನ ಸತ್ಯವನ್ನೂ ಇಂದು ಸಹ ನಮಗೆ ದೊರಕಿಸಿ ಕೊಟ್ಟು, ಈ ಹೊತ್ತು ನಮ್ಮಲ್ಲಿ ಸಾರಲಾಗುವ ವಾಕ್ಯವು ನಮ್ಮ ಕಾಲಿಗೆ ದೀವಟಿಗೆ ನಮ್ಮ ಹಾದಿಯಲ್ಲಿ ಬೆಳಕು ಆಗುವಂತೆ ದಯ ಮಾಡು! ನಿನ್ನ ಪವಿತ್ರಾತ್ಮದಿಂದ ನಮ್ಮ ಹೃದಯದ ಗುಟ್ಟನ್ನು ಇದ್ದಂತೆ ನಮಗೆ ತೋರಿಸು! ನಮ್ಮ ಹಮ್ಮನ್ನು ಆರಿಸಿ, ನಮ್ಮಲ್ಲಿರುವ ಬಿಂಕದ ಬಗೆಗಳನ್ನೆಲ್ಲಾ ಕಿತ್ತು ಬಿಡು! ನಮ್ಮನ್ನು ಹೆಚ್ಚಿಸಲಿಕ್ಕಾಗುವ ಹಾಗೆ ನಮ್ಮನ್ನು ತಗ್ಗಿಸು! ನಿನ್ನ ಕೃಪಾಪೂರ್ಣ ವರಗಳಿಂದ ನಮ್ಮನ್ನು ತುಂಬಿಸಿ, ನೀನು ನಮ್ಮಲ್ಲಿ ವಾಸ ಮಾಡಲಿಕ್ಕಾಗುವ ಹಾಗೆ ನಮ್ಮ ಮಾಂಸ ಆತ್ಮಗಳ ಮಾಸು ಮಸಕ ತೀರ ತೊಳದು ಬಿಡು! ನಮ್ಮನ್ನು ನಿನ್ನ ಮಹಿಮಾರೂಪಕ್ಕೆ ಸಾರೂಪ್ಯ ಮಾಡಿ, ನಿನ್ನ ಪರಮಾತಿಶಯ ಜ್ಞಾನವನ್ನು ನಮ್ಮಲ್ಲಿ ಮೂಡಿಸಿ, ಇಹದಲ್ಲಿಯೇ ನಿತ್ಯಜೀವವನ್ನು ನಮ್ಮಲ್ಲಿ ಬೇರೂರಿಸು! ಪವಿತ್ರವಾದ ಈ ನಿನ್ನ ದಿವಸದಲ್ಲಿ ನಮ್ಮನ್ನು ಅತಿಶಯವಾಗಿ ಆಶೀರ್ವದಿಸು! ಈ ಹೊತ್ತು ನಿನ್ನ ವಾಕ್ಯವನ್ನು ಹೇಳುವವರು ಕೇಳುವವರು ಓದುವವರು ಮುಂತಾದವರೆಲ್ಲರ ಹೃದಯಗಳಲ್ಲಿ ನಿನ್ನ ಆತ್ಮವು ವ್ಯಾಪಿಸಿ, ಬಲವಾಗಿ ಯತ್ನೈಸಲಿ! ನಿನ್ನ ಪರಿಶುದ್ಧ ಸುವಾರ್ತೆಯನ್ನು ಗಣನೆಗೆ ತಾರದವರಲ್ಲಿ ಸಹ ನಿನ್ನ ವಾಕ್ಯದ ಬಲವನ್ನು ಪ್ರಕಟ ಮಾಡು! ಹೀಗೆ ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು

ವರ್ಧಮಾನವಾಗಲಿ! ಅನೇಕಾನೇಕರಿಗೆ ರಕ್ಷಣೆ ಆಗಲಿ! ವಿಶ್ವಪತಿಯಾದ ತಂದೆಯೇ! ನಿನ್ನ ಪ್ರಿಯ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನಿಗಾಗಿ ನಮ್ಮ ಬಿನ್ನಹಗಳನ್ನು ನೆರವೇರಿಸು! ಆಮೆನ್!

೨

ಒಡೆಯನಾದ ದೇವರೇ! ಸ್ವರ್ಗೀಯ ತಂದೆಯೇ! ನಿನ್ನ ಹೆಸರನ್ನು ನೆನವರಿಕೆ ಮಾಡಿ, ನಾವು ಮಕ್ಕಳ ಭರವಸದಿಂದ ನಿನ್ನನ್ನು ಬಿನ್ನೈಸಲಿಕ್ಕೆ ಧೈರ್ಯಗೊಂಡು ಇದ್ದೇವೆ. ನಾವು ನಿನ್ನ ವಾಕ್ಯವನ್ನು ಮನಮುಟ್ಟಿ ಕೇಳಿ, ಕೈಕೊಂಡು, ಹೀಗೆ ನಿನ್ನ ವಿಶ್ರಾಂತಿಯ ದಿವಸವನ್ನು ತಕ್ಕ ಹಾಗೆ ಪವಿತ್ರ ಮಾಡುವಂತೆಯೂ ನಾವೂ ನಿನ್ನ ವಾಕ್ಯದ ಮುಖಾಂತರ ಪವಿತ್ರ ರಾಗುವಂತೆಯೂ ನಿನ್ನ ಪವಿತ್ರಾತ್ಮದಿಂದ ನಮ್ಮನ್ನು ಬೆಳಗಿಸಿ ಆಳಿಕೋ! ನಿನ್ನ ವಾಕ್ಯ ಪ್ರಸಂಗಿಸುವವರೆಲ್ಲರನ್ನು ಪವಿತ್ರಾತ್ಮದ ಬೆಳಕಿನಿಂದಲೂ ಬಲದಿಂದಲೂ ತುಂಬಿಸಿ, ಅವರು ಇಂದು ಯೇಸು ಕ್ರಿಸ್ತನ ಸುವಾರ್ತೆ ಯನ್ನು ಬೆರಿಕೆ ಇಲ್ಲದೆ ಅಚ್ಚವಾಗಿ ವಿಶ್ವಾಸಪೂರ್ವಕವಾದ ಹೃದಯ ದಿಂದ ಸಾರುವ ಹಾಗೆ ಮಾಡು! ಕಷ್ಟ ಪಟ್ಟು ಭಾರ ಹೊರುವವರು ರೋಗಿಗಳು ಸಾಯುವವರು ಮೊದಲಾದವರನ್ನು ಈ ಹೊತ್ತು ಪರಾಂಬ ರಿಸಿ, ಈ ವಿಶ್ರಾಂತಿದಿನದ ಆಶೀರ್ವಾದಗಳನ್ನು ಅನುಭವಿಸಲೀಸು! ನಾವು ನಿನ್ನ ಮಗನಾದ ಯೇಸು ಕ್ರಿಸ್ತನಲ್ಲಿ ನಮ್ಮ ಸಮಸ್ತ ಭರವಸ ವನ್ನೂ ಆಶೆಯನ್ನೂ ಇಟ್ಟು, ನಮ್ಮ ನಡತೆಯನ್ನೆಲ್ಲಾ ನಿನ್ನ ವಾಕ್ಯಕ್ಕೆ ಸರಿ ಬೀಳ ಮಾಡಿ, ಎಡತಡೆಗಳನ್ನೆಲ್ಲಾ ಸುರಕ್ಷಿತರಾಗಿ ದಾಟಿ, ಅಚಂಚಲ ವಿಶ್ವಾಸದಿಂದ ನಮ್ಮ ರಕ್ಷಕನ ಹೆಜ್ಜೆ ಹಿಡಿದು, ನಮ್ಮ ಭೂಯಾತ್ರೆಯನ್ನು ತೀರಿಸಿ, ಕಡೆಯಲ್ಲಿ ನಿನ್ನ ಸ್ವರ್ಗರಾಜ್ಯದಲ್ಲಿ ಶೇರುವ ಹಾಗೆ ನಮಗೆ ಕೃಪೆ ಕೊಡು! ಆಮೆನ್!

೩

ಒಡೆಯನಾದ ಯೇಸುವೇ! ಭಕ್ತಜನಕ್ಕೆ ಪರಮ ಪರಮಾನಂದವಾ ಗಿರುವ ಪರಿಪೂರ್ಣ ವಿಶ್ರಾಂತಿನಿಧಿಯಾಗಿರುವಾತನೇ! ಕಷ್ಟ ಪಟ್ಟು ಹೊರೆ

ಹೊರುವವರೆಲ್ಲರೇ, ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಡುವೆನೆಂದು ನೀನು ಹೇಳಿದ ಕಾರಣ, ನಾವು ಈ ಲೋಕದಲ್ಲಿ ನಿಜ ಸಮಾಧಾನವನ್ನೂ ತೃಪ್ತಿಯನ್ನೂ ಎಂದೂ ಹ್ಯಾಗೂ ಹೊಂದಲಾರೆವೆಂದು ತಿಳಿದವರಾಗಿ, ನಿನ್ನ ಬಳಿಗೆ ಬಂದಿದ್ದೇವೆ. ಈ ಲೋಕದಲ್ಲಿ ಅವತರಿಸಿ, ಶ್ರಮ ಮರಣಗಳನ್ನು ತಾಳಿ, ಲೋಕವನ್ನು ಜಯಿಸಿದ ನಮ್ಮೊಡೆಯನಾದ ಯೇಸುವೇ! ನಾವು ನಿನ್ನ ಪ್ರೀತಿಯಲ್ಲಿಯೂ ಆದರಣೆಯಲ್ಲಿಯೂ ಸಮಾಧಾನದಲ್ಲಿಯೂ ನಮ್ಮ ಆತ್ಮಕ್ಕೆ ನಿಜ ವಿಶ್ರಾಂತಿ ಹೊಂದುವ ಹಾಗೆ ಮಾಡು! ಎಂದು ಹೃದಯಪೂರ್ವಕವಾಗಿ ಬೇಡಿ ಕೊಳ್ಳುತ್ತೇವೆ. ನಿನ್ನನ್ನು ನಿಜವಾಗಿ ತಿಳುಕೊಂಡು, ನಿನ್ನೊಬ್ಬನನ್ನೇ ಬಯಸಿ, ನಿನ್ನಲ್ಲಿಯೇ ಸುಖಾನಂದವನ್ನು ಪಡಕೊಳ್ಳ ಬೇಕೆಂತ ನಿನ್ನ ಸನ್ನಿಧಾನಕ್ಕೆ ಬಂದಿರುವ ನಾವು ನಿತ್ಯಜೀವದ ವಿಶ್ರಾಂತಿಯನ್ನೂ ನಿನ್ನ ಸಮ್ಮುಖದಲ್ಲಿರುವ ಸಂತೋಷಗಳ ಪರಿಪೂರ್ಣತೆಯನ್ನೂ ನಿನ್ನ ಬಲಗಡೆಯಲ್ಲಿರುವ ನಿತ್ಯಾನಂದಗಳನ್ನೂ ಹೊಂದುವ ಹಾಗೆ ದಯ ಮಾಡು! ಆಮೆನ್!

೪

ನಮ್ಮ ದೇವರೇ! ತಂದೆಯೇ! ನಮ್ಮ ರಕ್ಷಣೆ ಆದರಣೆಗಳಿಗೆ ಸರ್ವಕಾಲಕ್ಕೂ ಮೂಲವಾಗಿರುವಾತನೇ! ನಾವು ಪವಿತ್ರ ಭಯಭಕ್ತಿಯಿಂದ ಆರಾಧನೆ ಮಾಡ ಬೇಕೆಂದು ನಿನ್ನ ಕೃಪೆಯಿಂದ ನಿನ್ನ ದಿವ್ಯ ಸನ್ನಿಧಾನಕ್ಕೆ ಕೂಡಿ ಬಂದಿದ್ದೇವೆ. ನಾವು ಮಣ್ಣೂ ಬೂದಿಯೂ ಆಗಿದ್ದರೂ, ನಿನ್ನ ಸನ್ನಿಧಿಯಲ್ಲಿ ಬಿನ್ನೈಸ ಧೈರ್ಯ ತೆಕ್ಕೊಂಡೆವು. ನನ್ನ ಮುಖವನ್ನು ಅರಸಿರಿ! ಎಂದು ನೀನು ಹೇಳಿದ್ದೀಯಲ್ಲವೋ? ಈ ಕೃಪಾಭಾವದ ವಚನವನ್ನು ನಾವು ಘಟ್ಟಿ ಹಿಡಿದು ಕೊಂಡು, ನಿನ್ನ ಮುಖವನ್ನು ಅರಸ ಬಂದಿದ್ದೇವೆ. ಸ್ತೋತ್ರದ ಧ್ವನಿ ಕೇಳಿಸುವಂಥ, ನಿನ್ನ ಸಮಸ್ತ ಅದ್ಭುತ ಕಾರ್ಯಗಳ ಹೊಗಳಿಕೆಯಾಗುವಂಥ ನಿನ್ನ ಮನೆಯನ್ನೂ ನಿನ್ನ ಮಹಿಮೆಯ ನಿವಾಸವನ್ನೂ ಪ್ರೀತಿ ಮಾಡಿ, ನೆರವಿ ಕೊಂಡಿದ್ದೇವೆ. ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇವರೇ! ನಿನಗೆ ಸ್ತೋ

ತ್ರವಾಗಲಿ! ನೀನು ಕ್ರಿಸ್ತನ ಮೂಲವಾಗಿ ಸಕಲ ಆತ್ಮೀಕ ವರಗಳಿಂದ ನಮ್ಮನ್ನು ಆಶೀರ್ವದಿಸಿದ್ದೀ. ನಾವು ಇಗಲೂ ಯಾವಾಗಲೂ ನಿನ್ನ ಆಶೀರ್ವದಿಸಲ್ಪಟ್ಟವರಾಗಿರುವ ಹಾಗೆ ಆತನಲ್ಲಿಯೂ ಆತನ ಮುಖಾಂತ ರವಾಗಿಯೂ ನಮ್ಮನ್ನು ಈಗಲೂ ಯಾವಾಗಲೂ ಆಶೀರ್ವದಿಸುತ್ತಿರು! ನಮ್ಮನ್ನು ಎಲ್ಲಾ ಸತ್ಯದಲ್ಲಿ ಶೇರಿಸುವದಕ್ಕೆ ನಮಗೆ ನಿನ್ನ ಪವಿತ್ರಾತ್ಮ ವನ್ನು ಕೊಡು! ವಿಶ್ವಾಸದಲ್ಲಿ ನಮ್ಮನ್ನು ನೆಲೆಗೊಳಿಸುವದಕ್ಕೆ ಕೃಪೆಯ ಆತ್ಮವನ್ನು ಕಳುಹಿಸು! ನಿನ್ನ ಅನ್ಯೋನ್ಯದಲ್ಲಿ ನಮ್ಮನ್ನು ಕಾಪಾಡುವ ದಕ್ಕೆ ಪ್ರಾರ್ಥನೆಯ ಆತ್ಮವನ್ನು ನಮ್ಮ ಮೇಲೆ ಇಳಿಸು! ಬಳ್ಳೀ ಹೋ ರಾಟಕ್ಕೆ ನಮ್ಮನ್ನು ಬಲಗೊಳಿಸುವದಕ್ಕಾಗಿ ಶಕ್ತಿಯ ಆತ್ಮವನ್ನು ನಮ್ಮ ಮೇಲೆ ಎರೆ! ನಮ್ಮ ಹೃದಯಗಳನ್ನೂ ಇಂದ್ರಿಯಗಳನ್ನೂ ಕ್ರಿಸ್ತ ಯೇ ಸುವಿನಲ್ಲಿ ನಿತ್ಯ ಜೀವ ಪ್ರಾಪ್ತಿಗೆ ಕಾಪಾಡುವದಕ್ಕಾಗಿ ಸಮಾಧಾನ ಪ್ರತೀ ಕ್ಷೆಗಳ ಆತ್ಮವನ್ನು ನಮಗೆ ದಯ ಪಾಲಿಸು! ಆಮೆನ್!

೫೪

ಅತ್ಯಧಿಕ ಸ್ತೋತ್ರಕ್ಕೆ ಯೋಗ್ಯನಾದ ಒಡೆಯನೇ! ನೀನು ನಿನ್ನ ಪರಿ ಶುದ್ಧ ವಾಕ್ಯವನ್ನೆಲ್ಲಾ ನಮ್ಮ ಬೋಧನೆಗೋಸ್ಕರ ಬರೆಸಿರಲಾಗಿ, ನಾವು ಅದನ್ನು ತಕ್ಕ ಹಾಗೆ ಕೇಳಿ, ಓದಿ, ಧ್ಯಾನಿಸಿ, ಕಲಿತು, ನಮ್ಮ ಹೃದಯ ದಲ್ಲಿ ತೆಕ್ಕೊಂಡು, ಹೀಗೆ ತಾಳ್ಮೆಯಿಂದಲೂ ನಿನ್ನ ಪರಿಶುದ್ಧ ವಾಕ್ಯದ ಆದ ರಣೆಯಿಂದಲೂ ತುಂಬಿದವರಾಗಿ, ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಮುಖಾಂತರ ನೀನು ನಮಗೆ ದಯ ಪಾಲಿಸಿದ ನಿತ್ಯಜೀವದ ಮಂಗಳ ವಾದ ಪ್ರತೀಕ್ಷೆಯನ್ನು ಹಿಡಿದು ಕೊಂಡು, ಬಿಡದೆ ಕಾಯುವ ಶೀಲವನ್ನು ನಮ್ಮಲ್ಲಿ ಹುಟ್ಟಿಸು! ಆಮೆನ್!

೬

ತ್ರಿಜಗದೀಶನಾದ ದೇವರೇ! ಅತ್ಯಧಿಕ ಸ್ತೋತ್ರಕ್ಕೆ ಯೋಗ್ಯನಾದ ನಿನ್ನ ಮಗನು ಸೈತಾನನ ಕೃತ್ಯಗಳನ್ನು ಅಳಿಸಿ ಬಿಡುವದಕ್ಕೂ, ನಮಗೆ ನಿನ್ನ ಮಕ್ಕಳೂ ನಿತ್ಯ ಜೀವದ ಬಾಧ್ಯಸ್ಥರೂ ಆಗುವ ಅಧಿಕಾರವನ್ನು

ಕೊಡುವದಕ್ಕೂ ಪ್ರತ್ಯಕ್ಷನಾದನಲ್ಲವೇ! ಹೀಗಿರಲಾಗಿ ಆತನು ಪವಿತ್ರನಾಗಿರುವಂತೆ ನಾವು ನಮ್ಮನ್ನು ಪವಿತ್ರ ಮಾಡಿ ಕೊಂಡು, ಆತನು ಬಲದಲ್ಲಿಯೂ ಮಿಗಿಲಾದ ಮಹಿಮೆಯಲ್ಲಿಯೂ ತಿರಿಗಿ ಪ್ರತ್ಯಕ್ಷನಾಗುವ ದಿನದಲ್ಲಿ ನಾವು ಆತನ ನಿತ್ಯ ಮಹಿಮೆಯ ರಾಜ್ಯದಲ್ಲಿ ಆತನಿಗೆ ಸಾರೂಪ್ಯರಾಗುವ ಪದವಿಗೆ ನಮ್ಮನ್ನು ಮುಟ್ಟಿಸು! ಅಲ್ಲಿ ತಂದೆಯ ಸಂಗಡಲೂ ಪವಿತ್ರಾತ್ಮದ ಸಂಗಡಲೂ ಯುಗಯುಗಾಂತರಗಳಿಗೂ ಆಳುತ್ತಾ ಬಾಳುತ್ತಾ ಇರುವ ಜಗದ್ರಕ್ಷಕನಿಗೆ ಮಹಿಮೆಯಾಗಲಿ! ಆಮೆನ್!

b. ಹಬ್ಬಗಳಿಗೆ ಪ್ರಾರ್ಥನೆಗಳು.

Festtagsgebete.

1. ಕ್ರಿಸ್ತನ ಆಗಮನಕ್ಕೆ. Advent.

ಸರ್ವತ್ರಾಣಿಯಾದ ನಿತ್ಯ ದೇವರೇ! ನಿನ್ನ ಏಕ ಪುತ್ರನಾದ ಯೇಸು ಕ್ರಿಸ್ತನನ್ನು, ಕಾಲವು ತುಂಬಿದಾಗ, ನಮ್ಮ ಬಳಿಗೆ ಇಳಿದು ಬರಲೀಸಿದದಕ್ಕಾಗಿ ನಿನ್ನನ್ನು ಎದೆಗುಂಡಿಯಿಂದ ಹೊಗಳುತ್ತೇವೆ. ಆತನು ನರಾವತಾರವನ್ನೆತ್ತಿ ಕೊಂಡು ಬಂದನೆಂಬ ಆದರಣೆಯ ಸುವಾರ್ತೆಯನ್ನು ನಾವು ಯಾವಾಗಲೂ ಬಿಮ್ಮಗೆ ಹಿಡುಕೊಂಡು, ಆತನು ಬಡ ಪಾಪಿಗಳಾದ ನಮ್ಮನ್ನು ರಕ್ಷಿಸುವ ಬಗ್ಯೆ ನರಲೋಕಕ್ಕೆ ಬಂದನೆಂಬ ನಂಬಿಕೆಯಲ್ಲಿ ನಾವು ನೆಲೆಗೊಂಡು, ಗೆಲುವಾಗಿ ಬಾಳುವ ಹಾಗೆ ನಮಗೊಲಿದು ದಯ ಮಾಡು! ನಂಬಿಕೆಯುಳ್ಳ ದೇವರೇ! ನಿನ್ನ ಮಗನು ಈಗ ತನ್ನ ವಾಕ್ಯದಲ್ಲಿಯೂ ಸ್ನಾನ ರಾತ್ರಿಭೋಜನಗಳೆಂಬ ಪ್ರಸಾದಗಳಲ್ಲಿಯೂ ನಮ್ಮ ಬಳಿಗೆ ಬಂದು, ನಮ್ಮ ಹೃದಯಗಳನ್ನು ತನ್ನ ನಿತ್ಯ ವಾಸಸ್ಥಾನವಾಗ ಮಾಡುವ ಹಾಗೆ ದಯ ಪಾಲಿಸು! ಮತ್ತು ನಾವು ಆತನ ಮುಂದಿನ ಮಹತ್ತಾದ ಆಗಮನವನ್ನು ಮನಃಪೂರ್ವಕವಾಗಿ ಬಯಸುವ ಹಾಗೆಯೂ, ಆತನು ನ್ಯಾಯ ತೀರಿಸುವದಕ್ಕೆ ಬರುವಲ್ಲಿ ನಾವು ಆತನನ್ನು ಸಂತೋಷದಿಂದ ಎದುರ್ಗೊಂಡು, ಆತನೊಡನೆ ಆತನ ನಿತ್ಯ ಮಹಿ

ಮೆಯ ರಾಜ್ಯದಲ್ಲಿ ಶೇರುವ ಹಾಗೆಯೂ ಸಹಾಯ ಮಾಡು! ಯುಗ ಯುಗಾಂತರಕ್ಕೆ ಆಳುತ್ತಿರುವ ಸದಾಸ್ವಾಮಿಯಾದ ನಿನಗೂ ನಿನ್ನೊಡನೆ ಆಳಿ ಬಾಳುತ್ತಿರುವ ನಿನ್ನ ಮಗನಿಗೂ ಯುಗಯುಗಾಂತರಗಳಿಗೂ ಸಭೆ ಯಲ್ಲಿ ಮಾನವೂ ಮಹಿಮೆಯೂ ಆಗಲಿ! ಆಮೆನ್!

ಅಥವಾ oder

ನಂಬಿಕೆಯೂ ಕರುಣೆಯೂ ಉಳ್ಳ ದೇವರೇ! ನೀನು ನಿನ್ನ ಏಕ ಪುತ್ರನಾದ ಮೆಸ್ಸೀಯನ ಆಗಮನವನ್ನು ಹಳೆ ಒಡಂಬಡಿಕೆಯ ಕಾಲದ ಲ್ಲಿದ್ದ ಪಿತೃಗಳಿಗೆ ವಾಗ್ದತ್ತ ಮಾಡಿ, ನಿನ್ನ ಸೇವಕರಾದ ಪ್ರವಾದಿಗಳ ಬಾ ಯಿಯಿಂದ ಮುಂತಿಳಿಸಿದ ಮೇರೆಗೆ ಕಾಲವು ತುಂಬಲಾಗಿ ಆತನು ನಿನ್ನ ಆಲೋಚನೆ ಅಪ್ಪಣೆಗಳನ್ನೆಲ್ಲಾ ನಮಗೆ ಪ್ರಕಟ ಮಾಡುವ ಹಾಗೆಯೂ, ಭೂಮಿಯ ಸಕಲ ಜನಾಂಗಗಳ ಮೇಲೆ ನಿನ್ನ ಆಶೀರ್ವಾದವನ್ನು ತಂದಿ ಕ್ಕುವ ಹಾಗೆಯೂ ನೀನು ಆತನನ್ನು ಭೂಲೋಕಕ್ಕೆ ಕಳುಹಿಸಿದ್ದಕ್ಕಾಗಿ ನಿನಗೆ ಸ್ತುತಿ ಸ್ತೋತ್ರವಾಗಲಿ! ನಾವು ಆತನಿಗೆ ಸಂತೋಷದಿಂದ ನಮ್ಮ ಹೃದಯದ ಬಾಗಲು ತೆರೆದು, ಆತನನ್ನು ನಮ್ಮೊಳಗೆ ಶೇರಿಸಿ ಕೊಂಡು, ಆತನು ಸ್ವರ್ಗದಿಂದ ಕೊಂಡು ಬಂದಂಥಾ ಕ್ಷೇಮಕರವಾದ ವರಗಳನ್ನು ಪಡಕೊಂಡು, ಎಂದಿಗೂ ಆತನು ನಮ್ಮಲ್ಲಿ ವಾಸ ಮಾಡುವ ಹಾಗೆ ನಿನ್ನ ಕೃಪೆಯನ್ನು ನಮಗೆ ದಯ ಪಾಲಿಸು. ಆತನು ತನ್ನ ವಾಕ್ಯದಿಂದಲೂ ಆತ್ಮದಿಂದಲೂ ಯಾವಾಗಲೂ ನಮ್ಮ ಅಂತರ್ಯದಲ್ಲಿ ಮಾತಾಡಿ, ನಮ್ಮಲ್ಲಿ ಪಾಪದ ಬಲವನ್ನು ಮುರಿದು, ಸಿದ್ಧಿ ಹೊಂದಿದ ನೀತಿವಂತರ ಅನ್ಯೋನ್ಯ ದಲ್ಲಿ ಶೇರಲಿಕ್ಕೆ ನಮ್ಮನ್ನು ತಕ್ಕವರಾಗ ಮಾಡುವದಾಗಲಿ! ನಮ್ಮೊಡೆಯ ನಾದ ಯೇಸು ಕ್ರಿಸ್ತನು ತಿರಿಗಿ ಬರುವ ದಿವಸದಲ್ಲಿ ನಾವು ನಿರಪರಾಧಿಗ ಳಾಗಿ ಕಾಣಿಸಿ ಕೊಳ್ಳುವಂತೆ ನಿನ್ನ ನಂಬಿಕೆಯ ಮೇರೆಗೆ ನಮ್ಮನ್ನು ಕಡೇ ವರೆಗೂ ಗಟ್ಟಿಗರಾಗ ಮಾಡಿ ಕಾಪಾಡು! ಆಮೆನ್!

2. ಕ್ರಿಸ್ತನ ಜನ್ಮಕ್ಕೆ. Weihnacht.

ಒಡೆಯನಾದ ದೇವರೇ! ಸ್ವರ್ಗೀಯ ತಂದೆಯೇ! ನಿನ್ನ ಏಕ ಕುಮಾರನನ್ನು ನೀನು ಜಗದುತ್ಪತ್ತಿಗೆ ಮುಂಚೆ ನಮ್ಮ ರಕ್ಷಕನೆಂತ ನೇಮಿಸಿ, ಕಾಲ ತುಂಬಿದಾಗ, ಮನುಷ್ಯನಾಗಿ ಹುಟ್ಟಲೀಸಿದ್ದಕ್ಕಾಗಿ ನಿನ್ನನ್ನು ಮನಃಪೂರ್ವಕವಾಗಿ ಕೊಂಡಾಡಿ ಹೊಗಳುತ್ತೇವೆ. ಮಾಂಸಭಾವಿಗಳಾದ ನಾವು ನಮ್ಮ ಹುಟ್ಟು ದುರ್ಗುಣಗಳನ್ನು ಕಳದು, ನ್ಯಾಯಪ್ರಮಾಣದ ಶಾಪದಿಂದಲೂ ಪಾಪ ಮರಣಗಳ ಅಧಿಕಾರದಿಂದಲೂ ಬಿಡುಗಡೆಯಾಗಿ, ನಿನ್ನ ಮಕ್ಕಳೂ ಸ್ವರ್ಗರಾಜ್ಯದ ಬಾಧ್ಯಸ್ಥರೂ ಆಗುವ ಹಾಗೆ, ಕೃಪಾಸಾಗರನಾದ ನೀನು ಆತನನ್ನು ದಿಕ್ಕಿಲ್ಲದ ಮನುಷ್ಯಜಾತಿಗೆ ದಯ ಮಾಡಿದ್ದೀ! ಕರುಣಾಪಿತನೇ! ನಿನ್ನ ಪ್ರಿಯ ಮಗನಾದ ನಮ್ಮ ವಿಮೋಚಕನ ತಿಳುವಿಕೆಯಲ್ಲಿ ನಮ್ಮನ್ನು ನಿನ್ನ ಆತ್ಮದಿಂದ ಕಾಪಾಡಿ, ನಾವು ಆತನ ಪವಿತ್ರ ಅವತಾರದಲ್ಲಿ ಯಾವಾಗಲೂ ನಂಬಿಕೆ ಇಟ್ಟು, ಆದರಣೆ ಸಮಾಧಾನಗಳನ್ನು ಹೊಂದುವ ಹಾಗೆ ನಮ್ಮನ್ನು ಬಲಗೊಳಿಸು. ಇದಲ್ಲದೆ ನಾವು ಪವಿತ್ರಾತ್ಮದ ಬಲದಿಂದ ತಿರಿಗಿ ಹುಟ್ಟಿ, ತಂದೆಯ ಅಪ್ಪಣೆಗೊಳಗಾದ ಮಕ್ಕಳಾಗಿದ್ದು, ಜೀವಾಂತ್ಯದ ವರೆಗೆ ನಮ್ಮ ತನುಮನಧನಗಳನ್ನೂ ಸರ್ವಸ್ವವನ್ನೂ ನಿನ್ನ ಸೇವೆಯಲ್ಲಿಟ್ಟು, ಪರದಲ್ಲಿ ನಿನ್ನ ಸಮಸ್ತ ದೂತರ ಸಂಗಡಲೂ ನೀನು ಆದು ಕೊಂಡ ವಿಮುಕ್ತರ ಸಂಗಡಲೂ ನಿನ್ನನ್ನು ಎಂದೆಂದಿಗೂ ಕೊಂಡಾಡಿ ಹೊಗಳುವಂಥವರಾಗುವ ಹಾಗೆ ನಿನ್ನ ಪ್ರಿಯ ಮಗನಾಗಿರುವ ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖಾಂತರ ನಮಗೆ ಸಹಾಯ ಮಾಡು! ಆಮೆನ್!

ಅಥವಾ oder

ಸರ್ವತ್ರಾಣವುಳ್ಳ ದೇವರೇ! ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ನಿನ್ನ ಪವಿತ್ರ ನಾಮಕ್ಕೆ ಇಂದೂ ಎಂದೆಂದಿಗೂ ಸ್ತೋತ್ರವಾಗಲಿ! ನೀನು ನಮಗೆ ಮಹೋಪಕಾರವನ್ನು ಮಾಡಿದ್ದೀ ಎಂದು ಹಿಗ್ಗಿಕೊಳ್ಳುತ್ತೇವೆ; ಹ್ಯಾಗಂದರೆ, ಈ ಹೊತ್ತು ಕ್ರಿಸ್ತ ಒಡೆಯನಾದ ರಕ್ಷಕನು ನಮಗೋಸ್ಕರ ಹುಟ್ಟಿದ್ದಾನೆ. ನೀನು ನಮ್ಮನ್ನು ಮಿಗಿಲಾಗಿ ಪ್ರೀತಿ

ಮಾಡಿ, ನಿನ್ನ ಮಗನನ್ನು, ನಾವು ಆತನ ಮೂಲವಾಗಿ ಬದುಕ ಬೇಕೆಂತ, ಭೂಲೋಕಕ್ಕೆ ಕಳುಹಿಸಿದ್ದಕ್ಕಾಗಿ ನಿನ್ನನ್ನು ಪೂರ್ಣ ಹೃದಯದಿಂದ ಹೊಗಳುತ್ತೇವೆ. ಜಗದ್ರಕ್ಷಕನಾದ ಯೇಸುವೇ! ನಮ್ಮೊಡೆಯನೇ! ನಿನಗೆ ಮಾನವೂ ಮಹಿಮೆಯೂ ಆಗಲಿ! ನಾವು ದೇವರ ಮಕ್ಕಳಾಗುವ ಹಾಗೆ ನೀನು ಮನುಷ್ಯನ ಮಗನಾದಿಯಲ್ಲವೋ? ನಾವು ಐಶ್ವರ್ಯವಂತರಾಗುವ ಹಾಗೆ ನೀನು ಬಡವನಾದಿಯಲ್ಲವೋ? ನಾವು ದೇವರ ಪ್ರತಿರೂಪಕ್ಕೆ ಮಾರ್ಪಟ್ಟವರಾಗುವ ಹಾಗೆ ನೀನು ನಿನ್ನನ್ನು ತಗ್ಗಿಸಿ ಕೊಂಡು, ದಾಸರೂಪ ಧರಿಸಿ ಕೊಂಡಿ. ನಾವೆಲ್ಲರೂ ಕತ್ತಲೆಯಲ್ಲಿಯೂ ಮರಣಾಂಧಕಾರದಲ್ಲಿಯೂ ಕೂತು ಕೊಂಡಿರಲಾಗಿ ನೀನು ದೇವರ ಮಹಾ ಕರುಣೆಯನ್ನು ನಮ್ಮ ಮೇಲೆ ಮೂಡಿಸಲಿಕ್ಕೆ ಇಳಿದು ಬಂದು, ಸಮಾಧಾನವನ್ನೂ ಆನಂದವನ್ನೂ ನಮಗೆ ತಂದು ಕೊಟ್ಟದ್ಧೀ. ನಿನ್ನ ಪರಿಪೂರ್ಣತೆಯೊಳಗಿಂದ ನಾವೆಲ್ಲರೂ ಕೃಪೆಯ ಮೇಲೆ ಕೃಪೆಯನ್ನು ಹೊಂದುತ್ತೇವೆ. ಆದದರಿಂದ ನಮ್ಮ ಪ್ರಾಣವು ಆನಂದಭರಿತವಾಗಿ, ಮಹೋನ್ನತದಲ್ಲಿ ದೇವರಿಗೆ ಮಹಿಮೆಯೂ ಭೂಮಿಯ ಮೇಲೆ ಸಮಾಧಾನವೂ ಮನುಷ್ಯರಲ್ಲಿ ಒಲುಮೆಯೂ ಎಂದು ಹೊಗಳಿ ಹಾಡುತ್ತಿರುವದು. ನಮ್ಮ ರಕ್ಷಕನಾದ ಒಡೆಯಾ! ಈಗ ನಿನ್ನನ್ನು ಬಯಸುವ ನಮ್ಮ ಹೃದಯಗಳೊಳಗೆ ಬಾ! ನಿನ್ನ ಸಮಸ್ತ ದಿವ್ಯ ವರಗಳಿಂದ ನಮ್ಮನ್ನು ತುಂಬಿಸು! ನಿನ್ನ ಆತ್ಮದಿಂದ ನಮ್ಮನ್ನು ಆಳಿಕೋ! ನಿನ್ನ ಕೃಪೆಯ ಮದ್ದಿನಿಂದ ನಮ್ಮ ಪಾಪರೋಗವನ್ನು ಪರಿಹರಿಸು! ನಮ್ಮ ವಿಮೋಚಕನೇ! ನಂಬಿಕೆಯುಳ್ಳ ದುಃಖತಾರಕನೇ! ಎಲ್ಲಾ ದುಃಖಗಳಲ್ಲಿ ನಮ್ಮನ್ನು ಆದರಿಸು; ಎಲ್ಲಾ ಇಕ್ಕಟ್ಟುಗಳಲ್ಲಿ ನಮಗೆ ಕೈ ಕೊಡು! ಈ ದುಷ್ಟ ಲೋಕದ ಎಲ್ಲಾ ಶೋಧನೆಗಳಲ್ಲಿ ನಮ್ಮನ್ನು ಬಲ ಪಡಿಸು! ಕಡೆಯ ಕಡು ಹೋರಾಟದಲ್ಲಿ ನಮಗೆ ಮಂಗಳವಾದ ಕೋರಿಕೆಯ ಗುರಿಯನ್ನು ತೋರಿಸಿ ದಯ ಪಾಲಿಸು! ಯೇಸುವೇ! ನಮ್ಮನ್ನು ಕರುಣಿಸಿ, ನಿನ್ನ ಸಮಾಧಾನವನ್ನು ನಮಗೆ ದಯ ಪಾಲಿಸು! ಆಮೆನ್!

3. ವರ್ಷಾದಿಗೆ. Neujahrsgebete.

ಸದಾಸ್ವಾಮಿಯಾದ ದೇವರೇ! ಸ್ವರ್ಗೀಯ ತಂದೆಯೇ! ನೀನು ನಿನ್ನ ಮಗನನ್ನು ಭೂಲೋಕಕ್ಕೆ ಕಳುಹಿಸಿ, ಆತನು ಪರಿಚ್ಛೇದನೆ ಹೊಂದಿ, ನಿನ್ನ ಇಸ್ರಯೇಲ್ ಪ್ರಜೆಯ ಅಂಗವಾದ ದಿವಸದಲ್ಲಿ ಆತನಿಗೆ ಯೇಸು ವೆಂಬ ಮನೋಹರವಾದ ಮಂಗಳ ನಾಮವನ್ನು ಇಡಿಸಿದ್ದಕ್ಕಾಗಿ ನಿನ್ನನ್ನು ಹೊಗಳುತ್ತೇವೆ. ನಿನ್ನ ಒಡಂಬಡಿಕೆಯನ್ನು ನೀನು ನೆನಪು ಮಾಡಿ ಕೊಂಡು, ಅಬ್ರಹಾಮನ ಬೀಜದಿಂದ ಭೂಮಿಯ ಸಕಲ ಜನಾಂಗಗಳಿಗೆ ಆಶೀರ್ವಾದವು ಬರುವದೆಂಬ ವಾಗ್ದಾನವನ್ನು ನೆರವೇರಿಸಿದ ಮೇಲೆ, ಉಳಿಕೆಯ ನಿನ್ನ ಎಲ್ಲಾ ವಾಗ್ದಾನಗಳೂ ಕ್ರಿಸ್ತ ಯೇಸುವಿನಲ್ಲಿ ಹೌದು ಆಮೆನ್ ಆಗಿ, ನೆರವೇರುವವು. ಆದದರಿಂದ ನಾವು ನಿನ್ನ ಹತ್ತರ ಎದೆಗುಂಡಿಯಿಂದ ಬೇಡಿ ಕೊಳ್ಳುವದೇನಂದರೆ:—ಮನುಷ್ಯನಾಗಿ ಹುಟ್ಟಿ ಪ್ರತ್ಯಕ್ಷನಾದಾತನಲ್ಲಿಯೂ ಯೇಸು ಎಂಬ ಆತನ ಮನೋಹರವಾದ ಹೆಸರಿನಲ್ಲಿಯೂ ನಾವು ಯಾವಾಗಲೂ ದಿಟವಾದ ನಂಬಿಕೆ ಇಟ್ಟು, ಹಳೇ ಮನುಷ್ಯನನ್ನು ನಿಗ್ರಹ ಮಾಡಿ, ಹೊಸ ವರ್ಷವನ್ನು ಭಕ್ತಿಯಲ್ಲಿ ತೊಡಗಿ, ನಿನ್ನ ಕೃಪೆಯ ಮರೆ ಹೊಕ್ಕು, ಸಮಾಧಾನದಿಂದ ಈ ವರ್ಷವನ್ನು ಮುಗಿಸುವ ಹಾಗೆ ನಿನ್ನ ಪವಿತ್ರಾತ್ಮದಿಂದ ನಮ್ಮಲ್ಲಿ ಯತ್ನೈಸು! ಸದಾಪಿತನೇ! ನಮ್ಮ ಹೋಗೋಣ ಬರೋಣಗಳನ್ನು ಸಾಗಿಸಿ, ನಮ್ಮನ್ನು ಕಾಪಾಡು! ಆಮೆನ್!

ಅಥವಾ oder

ದೇವರಾದ ಯೆಹೋವನೇ! ನೀನು ತಲತಲಾಂತರಗಳಲ್ಲಿ ನಮ್ಮ ವಾಸಸ್ಥಾನವಾಗಿದ್ದೀ. ಬೆಟ್ಟಗಳು ಹುಟ್ಟುವದಕ್ಕಿಂತಲೂ ನೀನು ಭೂಮಿಯನ್ನೂ ಲೋಕವನ್ನೂ ನಿರ್ಮಿಸುವದಕ್ಕಿಂತಲೂ ಮುಂಚೆಯೇ ನೀನು ದೇವರು! ನಾವು ನಿನ್ನೆಯವರೂ ಮಣ್ಣೂ ಬೂದಿಯೂ ಆಗಿದ್ದೇವೆ; ನಮ್ಮ ಆಯುಷ್ಯವು ನೆರಳಿನಂತೆ ಹಾದು ಹೋಗುತ್ತದೆ. ಆದರೆ ನೀನು ಇದ್ದಂತೆ ಇರುತ್ತೀ; ನಿನ್ನ ವರುಷಗಳು ಮುಗಿಯವು. ನಾವು ಪಾಪಿಗಳು; ನಮ್ಮ ಅಪರಾಧವು ನಿನ್ನ ಮುಂದೆ ಬೈಲಾಗಿದೆ. ಆದರೆ ನೀನು,

ಸರ್ವಕರ್ತಾ! ನಮ್ಮ ತಂದೆಯೂ ವಿಮೋಚಕನೂ ಆಗಿದ್ದೀ; ಪುರಾತನದಿಂದಲೂ ಇದೇ ನಿನ್ನ ಹೆಸರು. ನೀನು ನಡಿಸಿದ ಪರಾಕ್ರಮಕ್ರಿಯೆಗಳನ್ನು ವಿವರಿಸಲಿಕ್ಕೂ ನಿನ್ನ ಅದ್ಭುತಕಾರ್ಯಗಳನ್ನು ಹೊಗಳಲಿಕ್ಕೂ ಶಕ್ತನು ಯಾರು? ನೀನು ನಮಗೆ ಮಾಡುತ್ತಾ ಬರುವ ಉಪಕಾರಗಳಿಗೆ ಪ್ರತ್ಯುಪಕಾರ ಮಾಡುವವನು ಯಾರು? ನಿನ್ನ ಒಲುಮೆ ಎಷ್ಟೋ ಆಶ್ಚರ್ಯವಾದದು! ಹೀಗಿರುವದರಿಂದ ಮನುಜರು ನಿನ್ನ ರೆಕ್ಕೆಗಳ ನೆರಳನ್ನು ಆಶ್ರಯಿಸುತ್ತಾರೆ. ನೀನು ಯುಗಯುಗಕ್ಕೂ ನಮ್ಮ ಸಹಾಯವೂ ಆದರಣೆಯೂ ಆಗಿದ್ದೀ. ನೀನು ನಮಗೆ ದಯ ಮಾಡಿದ ಇಂದಿನ ವರುಷಾದಿಯಲ್ಲಿ ನಮ್ಮ ಪ್ರಾಣವು ನಿನ್ನನ್ನು ಅರಸುವದು. ನಮ್ಮ ಮುಂದಿನ ದಿವಸಗಳೆಲ್ಲಾ ನಿನ್ನ ಪುಸ್ತಕದಲ್ಲಿ ಬರೆದವೆ; ನಮ್ಮ ದೇಹ ಪ್ರಾಣ ಆತ್ಮಗಳನ್ನು ನಿನ್ನ ಕೈಗೆ ಒಪ್ಪಿಸಿ ಕೊಡುತ್ತೇವೆ. ನಿನ್ನ ಒಬ್ಬನೇ ಮಗನಾದ ಯೇಸು ಕ್ರಿಸ್ತನು ಬೆಳಕನ್ನೂ ಜೀವವನ್ನೂ ತಂದು ಹಬ್ಬಿಸುವ ನಿತ್ಯ ನೀತಿಸೂರ್ಯನಾಗಿ ನಮ್ಮ ಹೃದಯಗಳಲ್ಲಿ ಹೊಸತಾಗಿ ಮೂಡುವ ಹಾಗೆ ಮಾಡು! ಈ ಭೂಸಂಚಾರದಲ್ಲಿ ನಮ್ಮ ಅಡಿಗಳು ಕದಲದೆ, ನಮ್ಮ ಕಾಲುಗಳು ಎಡವದೆ ಇರುವ ಹಾಗೆ ಜೀವಮಾರ್ಗದಲ್ಲಿ ನಮ್ಮನ್ನು ನಡಿಸುವದಕ್ಕೆ ನಿನ್ನ ಪವಿತ್ರಾತ್ಮವನ್ನು ನಮಗೆ ನಾಯಕನಾಗಿ ಕೊಡು! ಇಸ್ರಯೇಲನ್ನು ಜೋಕೆಯಾಗಿ ಕಾಪಾಡುವಾತನೇ! ನೀನು ತೂಕಡಿಸುವದಿಲ್ಲ, ನಿದ್ದೆ ಗೈಯುವದಿಲ್ಲ. ನಮ್ಮನ್ನು ಹೊಸತಾಗಿ ನಿನ್ನ ಸರ್ವಶಕ್ತಿಯುಳ್ಳ ಆಶ್ರಯದಲ್ಲಿ ಶೇರಿಸು! ನಮ್ಮ ಎಲ್ಲಾ ಹಾದಿಗಳಲ್ಲಿ ನಮ್ಮ ಜೀವದ ಬೆಳಕೂ ಬಲವೂ ಆಗಿರು! ಆದ್ಯಂತವಿಲ್ಲದ ದೇವರೇ! ನಿನ್ನ ಕೈಯನ್ನು ನಮ್ಮಿಂದ ಹಿಂದೆಗೆಯ ಬೇಡ, ನಮ್ಮನ್ನು ಕೈ ಬಿಡ ಬೇಡ! ನಿನ್ನ ರಕ್ಷಣೆಯನ್ನು ಎದುರು ನೋಡುತ್ತೇವೆ. ಯೆಹೋವಾ, ಸಲುಹು! ಯೆಹೋವಾ, ಸಿದ್ಧಿ ದಯ ಪಾಲಿಸು! ಆಮೆನ್!

4. ಪ್ರತ್ಯಕ್ಷತೆಯ ಹಬ್ಬಕ್ಕೆ. Epiphanias.

ಸದಾಪ್ರಭು ದೇವರೇ! ಪರಂಜ್ಯೋತಿಯೇ! ಕತ್ತಲೆಯಲ್ಲಿಯೂ ಮರಣಾಂಧಕಾರದಲ್ಲಿಯೂ ಕೂತವರಿಗೆ ಬೆಳಕು ಕೊಡುವದಕ್ಕೂ ನಮ್ಮ ಅಡಿಗಳನ್ನು ಸಮಾಧಾನದ ಹಾದಿಯಲ್ಲಿ ಸರಿಯಾಗಿ ಶೇರಿಸುವದಕ್ಕೂ ಉನ್ನತದಿಂದ ನೀತಿಸೂರ್ಯನನ್ನು ಮೂಡಿಸಿದ ನಿನ್ನ ಕರುಣೆಯನ್ನು ಕೊಂಡಾಡುತ್ತೇವೆ. ನಿನ್ನ ಕೃಪೆಯಿಂದ ಕ್ರಿಸ್ತನು ನಮ್ಮಾತನಾಗಿದ್ದಾನೆ. ಆತನು ನಮ್ಮ ಸಮಾಧಾನವು. ಆತನು ನಿನ್ನ ಅಪಾರ ಜ್ಞಾನ ಬಲುಮೆಗಳನ್ನು ಪ್ರಕಟ ಮಾಡುವದಕ್ಕಾಗಿ ಭೂಮಿಯ ಎಲ್ಲಾ ಜನಾಂಗಗಳೊಳಗಿಂದ ತನಗೆ ಒಂದು ಸಭೆಯನ್ನು ಕೂಡಿಸಿ ಕೊಳ್ಳುವಾತನು. ಕರುಣೆಯುಳ್ಳ ತಂದೆಯೇ! ನೀನು ನಮಗೆ ಪ್ರಜೆಯೆಂದೂ ಮಕ್ಕಳೆಂದೂ ಹೆಸರನ್ನಿಟ್ಟು, ಯಾರೂ ನುಡಿಯಲಿಕ್ಕೆ ಕೂಡದಷ್ಟು ಮಹತ್ತಾಗಿರುವ ಉಪಕಾರವನ್ನು ಮಾಡಿದ್ದಕ್ಕೋಸ್ಕರ ನಿನ್ನನ್ನು ಹೊಗಳುತ್ತೇವೆ. ನಿನ್ನ ಪ್ರೀತಿ ನಮಗೋಸ್ಕರ ಕೊಟ್ಟ ನಿನ್ನ ಮಗನ ಮುಖಾಂತರ ನಾವು ಅರ್ಪಿಸುವ ಕೃತಜ್ಞಾಪನೆಯ ಯಜ್ಞವನ್ನು ದಯದಿಂದ ಅಂಗೀಕರಿಸು! ನಿನ್ನ ರಾಜ್ಯವನ್ನು ನೀನು ಹೆಚ್ಚು ಹೆಚ್ಚಾಗಿ ಹಬ್ಬಿಸಿ, ಭೂಮಂಡಲದಲ್ಲಿರುವ ಸಕಲ ಜನಾಂಗಗಳು ನಿನ್ನ ಬೆಳಕನ್ನು ನೋಡಿ, ನಿನ್ನ ದಿವ್ಯ ಮಹಿಮೆಯ ಹೊಳಪಿನಲ್ಲಿ ಸಂತೋಷ ಪಡುವ ಹಾಗೆ ಮಾಡು! ಮತ್ತು ನಿನ್ನ ಕೃಪೆಯ ಪ್ರಥಮ ಫಲಗಳನ್ನು ಹೊಂದಿದವರಾದ ನಾವು ಬೆಳಕಿನ ಮಕ್ಕಳಾಗಿ, ನಿನ್ನ ಬೆಳಕಿನಲ್ಲಿ ನಡೆದು ಕೊಂಡು, ಕತ್ತಲೆಯ ವ್ಯರ್ಥ ಕ್ರಿಯೆಗಳನ್ನು ಹೇಸಿ, ಹಗೆ ಮಾಡಿ, ಬಿಡುವಂತೆ ನಿನ್ನ ಪವಿತ್ರಾತ್ಮದಿಂದ ನಮ್ಮನ್ನು ವ್ಯಾಪಿಸಿ, ಆಳಿಕೋ! ಕಡೆಯಲ್ಲಿ ನಾವು ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖದಲ್ಲಿ ನಿನ್ನ ಮಹಿಮೆಯನ್ನು ನೋಡಿ, ನಿನ್ನನ್ನು ಯುಗಯುಗಾಂತರಕ್ಕೂ ಕೊಂಡಾಡುವ ಹಾಗೆ ನಮ್ಮನ್ನು ಸ್ವರ್ಗದಲ್ಲಿ ಶೇರಿಸಿ, ನಿನ್ನ ಗದ್ದಿಗೆಯ ಮುಂದೆ ನಿಂತಿರಿಸು! ಆಮೆನ್!

ಅಥವಾ oder

ನಿತ್ಯ ದೇವರೇ! ಬೆಳಕಿನ ತಂದೆಯೇ! ಉತ್ತಮವೂ ಸಂಪೂರ್ಣವೂ ಆದ ವರಗಳ ಮೂಲವಾಗಿರುವಾತನೇ! ನಿನ್ನ ಒಬ್ಬನೇ ಮಗನಾಗಿರುವ ನಮ್ಮೊಡೆಯನಾದ ಯೇಸು ಕ್ರಿಸ್ತನನ್ನು ನೀನು ಮನುಷ್ಯರ ನಿಜವಾದ ಬೆಳಕಾಗಿ ಈ ಲೋಕಕ್ಕೆ ಕಳುಹಿಸಿ, ಆತನ ಮುಖಾಂತರ ಸಕಲ ಜನಾಂಗಗಳಲ್ಲಿ ನಿನ್ನನ್ನು ಪ್ರಕಟಿಸಿ, ನಿನ್ನ ಪರಿಶುದ್ಧ ಸುವಾರ್ತೆಯಿಂದ ನಮ್ಮನ್ನು ಕತ್ತಲೆಯೊಳಗಿಂದ ನಿನ್ನ ಆಶ್ಚರ್ಯವಾದ ಬೆಳಕಿಗೆ ಕರೆದದಕ್ಕಾಗಿ ನಿನ್ನನ್ನು ಹೊಗಳುತ್ತೇವೆ. ಈ ದಿವ್ಯ ಬೆಳಕನ್ನು ನಿನ್ನ ಕೃಪೆಯಿಂದ ಯಾವಾಗಲೂ ನಮ್ಮ ಹೃದಯಗಳಲ್ಲಿಯೂ ನಮ್ಮ ಸಭೆಗಳಲ್ಲಿಯೂ ಹೊಳೆಯಿಸು! ಎಲ್ಲವರ ಕಣ್ಣುಗಳನ್ನು ತೆರೆದು, ಸರ್ವರೂ ನಿನ್ನನ್ನೂ ನೀನು ಕಳುಹಿಸಿದ ನಿನ್ನ ಮಗನಾದ ಯೇಸು ಕ್ರಿಸ್ತನನ್ನೂ ತಿಳಿದು ಕೊಳ್ಳುವ ಹಾಗೆ, ನಂಬಿಕೆಯುಳ್ಳ ಸತ್ಯ ಸಾಕ್ಷಿಗಳ ಊಳಿಗದಿಂದ ಈ ಲೋಕದ ಕತ್ತಲೆಯನ್ನು ಹೋಗಲಾಡಿಸಿ, ಬೆಳಕಿನ ಕಾಲವನ್ನು ಬರಲೀಸು! ಮಾಂಸಭಾವಿಗಳಾದ ಎಲ್ಲಾ ಮನುಷ್ಯರ ಮೇಲೆ ನಿನ್ನ ಪವಿತ್ರಾತ್ಮವನ್ನು ಎರೆ! ನಿನ್ನ ವಾಕ್ಯವು ಎಲ್ಲರನ್ನು ಹೊಸಬರೂ ಪವಿತ್ರರೂ ಆಗ ಮಾಡಿ, ಸಂತೈಸಿ, ರಕ್ಷಿಸುವ ಹಾಗೆ, ಅದಕ್ಕೆ ಹೃದಯಗಳಲ್ಲಿ ಸೇರುವ ಹಾದಿಯನ್ನು ಸರಾಗ ಮಾಡು!

ಕರುಣಾಪಿತನೇ! ನಿನ್ನ ದೊಡ್ಡ ಬೆಳೆ ಕೊಯ್ಯುವದಕ್ಕೆ ಊಳಿಗದವರನ್ನು ಕರೆದು, ನೇಮಿಸಿರಿಸು! ಜನಾಂಗಗಳನ್ನು ಕತ್ತಲೆಯೊಳಗಿಂದ ನಿನ್ನ ಬೆಳಕಿನಲ್ಲಿ ಸೇರಿಸ ತಕ್ಕ ಆಳುಗಳನ್ನು ಕಳುಹಿಸಿ ಕೊಡು! ಎಲ್ಲಾ ಹೋರಾಟಗಳಲ್ಲಿ ಅವರಿಗೆ ಧೈರ್ಯವನ್ನು ಕೊಟ್ಟು, ಎಲ್ಲಾ ಗಂಡಾಂತರಗಳಲ್ಲಿ ಅವರಿಗೆ ಆಶ್ರಯವಾಗಿರು! ಅವರ ಪ್ರಸಂಗಕ್ಕೆ ನಿನ್ನ ಬಲ ಕೊಡು! ವಿಗ್ರಹಾರಾಧನೆ ಬಿದ್ದು ಹೋಗುವ ಹಾಗೆಯೂ ಜನಾಂಗಗಳು ನಿನ್ನನ್ನು ಸನ್ಮಾನಿಸುವ ಹಾಗೆಯೂ ದೂರ ದೂರವಾದ ದ್ವೀಪಗಳೂ ದೇಶಗಳೂ ನಿನ್ನ ಹೆಸರನ್ನು ಹೊಗಳುವ ಹಾಗೆಯೂ ಸಹಾಯಕನಾಗಿ ನಿನ್ನ ಆಳುಗಳೊಡನೆ ಕಾಳಗಕ್ಕೆ ಹೊರಟು ಹೋಗು. ಎಲ್ಲಾ ಒಡೆಯರ ಒಡೆಯನೇ!

ನಿನ್ನ ರಾಜ್ಯವು ಹೆಚ್ಚೆಚ್ಚಾಗಿ ಹಬ್ಬಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ಆಮೆನ್!

5. ಶ್ರೀಶುಕ್ರವಾರಕ್ಕೆ. Charfreitag.

ಒಡೆಯನಾದ ಯೇಸು ಕ್ರಿಸ್ತನೇ! ದೇವರ ಕುರಿಮರಿಯೇ! ನೀನು ಲೋಕದ ಪಾಪವನ್ನು ಹೊತ್ತು ಕೊಂಡು, ಶ್ರಮ ಮರಣಗಳನ್ನು ತಾಳಿ, ನಮಗೋಸ್ಕರ ಪ್ರಾಯಶ್ಚಿತ್ತಾರ್ಥಕ ಆಹುತಿಯಾದ್ದಕ್ಕೆ ಕೃತಜ್ಞರಾಗಿ, ಎದೆಗುಂಡಿಯಿಂದ ನಿನ್ನನ್ನು ಹೊಗಳುತ್ತೇವೆ. ನಮಗಾಗಿ ನಿನ್ನನ್ನು ನೀನೇ ಪಾಪಿಗಳ ಕೈಗೆ ಒಪ್ಪಿಸಿ ಕೊಟ್ಟು, ಅಪಹಾಸ್ಯ ನಿಂದೆಗಳನ್ನು ತಾಳಿ, ಕೊರಡೆಯ ಪೆಟ್ಟನ್ನೂ ಮುಳ್ಳುಮುಡಿವೇದನೆಯನ್ನೂ ಸಹಿಸಿ, ಕ್ರೂಜಿಸಲ್ಪಟ್ಟೆಯಲ್ಲಕಟಾ! ನಿನ್ನ ಶ್ರಮ ಮರಣಗಳ ಧ್ಯಾನದಿಂದ ನಾವು ಮನಃಪೂರ್ವಕವಾಗಿ ತಗ್ಗಿಸಿ ಕೊಂಡು, ಜೀವಕಾಲದಲ್ಲಿಯೂ ಮರಣ ಕಾಲದಲ್ಲಿಯೂ ಬರುವ ಶೋಧನೆಗಳಲ್ಲಿ ಸಮಾಧಾನವುಳ್ಳವರಾಗಿ, ಪಾಪಕ್ಕೂ ಲೋಕಕ್ಕೂ ಎದುರಾಗಿ ಹೋರಾಡಿ ಗೆಲ್ಲುವದಕ್ಕೆ ಕೃಪೆಯಿಂದ ಬಲವನ್ನು ಕೊಡು! ಪ್ರಾಣಪ್ರಿಯನಾದ ನಮ್ಮೊಡೆಯನೇ! ನಾವು ನಿನ್ನ ಹೆಜ್ಜೆ ಹಿಡಿದು ನಡಿಯುವ ಹಾಗೆ, ನಮಗೆ ಮಾದರಿಯನ್ನು ಇಟ್ಟದ್ದೀ. ನಮ್ಮ ವಿಶ್ವಾಸವನ್ನು ಪೂರೈಸುವ ನಾಯಕನಾದ ನಿನ್ನ ಮೇಲೆ ನಾವು ಕಣ್ಣಿಟ್ಟು, ನಮ್ಮ ಪಂಥದ ಗುರಿಗೆ ತಾಳ್ಮೆಯಿಂದ ಓಡಿ, ಕಡೆಯಲ್ಲಿ ನಮ್ಮ ವಿಶ್ವಾಸದ ಅಂತ್ಯವಾದ ಪ್ರಾಣರಕ್ಷಣೆಯನ್ನು ಪಡಕೊಂಡು, ಯಾರೂ ಬಣ್ಣಿಸಿ ತೀರಿಸಲಾಗದ ನಿನ್ನ ಪ್ರೀತಿಗಾಗಿ ನಿನ್ನನ್ನು ಯುಗಯುಗಾಂತರಗಳಿಗೂ ಹೊಗಳಿ ಕೊಂಡಾಡುವ ಪದವಿಯನ್ನು ನಮಗೆ ದಯಮಾಡು! ಆಮೆನ್!

ಅಥವಾ oder

ಒಡೆಯನಾದ ಯೇಸುವೇ! ನೀನು ಮರಣದ ಅಧಿಕಾರವಿದ್ದ ಪಿಶಾಚನನ್ನು ನಿನ್ನ ಮರಣದಿಂದ ವಿನಾಶ ಮಾಡಿ, ಬದುಕುವಷ್ಟು ಕಾಲವೆಲ್ಲಾ ಮರಣಕ್ಕೆ ಅಂಜುವ ದಾಸತ್ವದಲ್ಲಿದ್ದ ನಮ್ಮನ್ನು ಬಿಡುಗಡೆ ಮಾಡಿ

ದ್ದಕ್ಕಾಗಿ ನಾವು ನಿನ್ನನ್ನು ಮನಃಪೂರ್ವಕ ಕೃತಜ್ಞತೆಯಿಂದ ಕೊಂಡಾಡುತ್ತಾ, ವಿನಯಪೂರ್ವಕವಾಗಿ ಬೇಡಿ ಕೊಳ್ಳುವದೇನಂದರೆ—ನಾವು ನಿನ್ನ ಮರಣದ ಅನ್ಯೋನ್ಯದಲ್ಲಿ ಶೇರಿ, ನಮಗೂ ಪಾಪಕ್ಕೂ ಸತ್ತು, ಇನ್ನು ಮುಂದೆ ನಿನ್ನ ಸಂಗಡ ಹೊಸ ಜೀವದಲ್ಲಿ ಬದುಕುತ್ತಾ, ನಿನ್ನ ಆಳುಗಳಾಗಿ ನಡಕೊಳ್ಳುತ್ತಾ ಇರುವ ಹಾಗೆ ದಯ ಪಾಲಿಸು! ನಾವು ಸಾಯುವ ಘಳಿಗೆಯಲ್ಲಿಯೂ ನಮಗೆ ನಿನ್ನ ಅಮೂಲ್ಯ ಪುಣ್ಯದ ಫಲವನ್ನು ಸವಿಯಲಿಕ್ಕೆ ಕೊಟ್ಟು, ನಮ್ಮನ್ನು ಸಂತೈಸಿ, ನಮ್ಮ ಆತ್ಮವನ್ನು ತೆಗೆದುಕೋ! ಒಡೆಯನಾದ ಯೇಸುವೇ! ನಂಬಿಕೆಯುಳ್ಳ ರಕ್ಷಕನೇ! ನೀನೇ ನಮ್ಮ ವಿಮೋಚಕನಲ್ಲವೋ? ಆಮೆನ್!

ಅಥವಾ oder

ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ನೀನು ನಿನ್ನ ಏಕಪುತ್ರನನ್ನು, ಆತನಲ್ಲಿ ವಿಶ್ವಾಸವಿಡುವವರೆಲ್ಲರೂ ನಾಶವಾಗದೆ, ನಿತ್ಯಜೀವ ಹೊಂದ ಬೇಕೆಂದು ನಮಗೋಸ್ಕರ ಕೊಟ್ಟು ಬಿಟ್ಟದಕ್ಕಾಗಿ ನಿನ್ನನ್ನು ಹೃದಯಪೂರ್ವಕವಾಗಿ ಕೊಂಡಾಡುತ್ತೇವೆ. ನಮಗೆ ಸಮಾಧಾನ ಬರುವ ಹಾಗೆ ನೀನು ನಮ್ಮ ಶಿಕ್ಷೆಯನ್ನು ಆತನ ಮೇಲೆ ಇಟ್ಟೆ. ಆತನ ಘಾಯಗಳಿಂದ ನಾವು ವಾಶಿಯಾದೆವು. ಕರುಣೆಯ ತಂದೆಯೇ! ಅಶುದ್ಧ ಪಾಪಿಗಳೆಂಬದಾಗಿ ನೀನು ನಮ್ಮನ್ನು ನೋಡದೆ, ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನವರೆಂತ ನಮ್ಮನ್ನು ದೃಷ್ಟಿಸು! ಆತನು ಗೆತ್ಸೇಮನೆಯಲ್ಲಿಯೂ ಗೊಲ್ಗಥದಲ್ಲಿಯೂ ನಮಗಾಗಿ ಅರ್ಪಿಸಿದ ಸಂಪೂರ್ಣವಾದ ಆಹುತಿಗಾಗಿ ನಮ್ಮ ಲೆಖ್ಖ ಮಿತಿ ಇಲ್ಲದ ಅಪರಾಧಗಳನ್ನು ಕ್ಷಮಿಸು.

ನಮ್ಮ ಪ್ರಿಯ ಈಶನೇ! ಯೇಸುವೇ! ನೆಲೆಗಾಣದ ನಿನ್ನ ಪ್ರೀತಿಯನ್ನು ನೀನು ಈ ಹೊತ್ತು ನಮ್ಮ ಕಣ್ಣ ಮುಂದೆ ಸರಿಯಾಗಿ ಇಡು! ಮರಣದ ಪರ್ಯಂತರ ನಮ್ಮನ್ನು ಪ್ರೀತಿ ಮಾಡಿದ ನಿನ್ನೊಬ್ಬನನ್ನೇ ಎಲ್ಲಾದಕ್ಕಿಂತ ಹೆಚ್ಚಾಗಿ ಪ್ರೀತಿ ಮಾಡುವ ಪರಿಶುದ್ಧ ಪ್ರೀತಿಯ ಉರಿಯನ್ನು ಚಳಿಗಟ್ಟಿ ನಿರ್ಜೀವವಾದ ನಮ್ಮ ಹೃದಯಗಳಲ್ಲಿ ಹೊತ್ತಿಸು!

ನೀನು ನಮಗಾಗಿ ತಾಳಿದ ಶ್ರಮಗಳನ್ನು ಪಶ್ಚಾತ್ತಾಪವುಳ್ಳ ಹೃದಯದಿಂದಲೂ ಜೀವವುಳ್ಳ ವಿಶ್ವಾಸದಿಂದಲೂ ಧ್ಯಾನಿಸಿ ನೋಡುವದಕ್ಕೆ ನಮಗೆ ಸಾಮರ್ಥ್ಯ ಕೊಡು! ನಿನ್ನ ನ್ಯಾಯವೂ ನಮ್ಮ ಮನಸ್ಸಾಕ್ಷಿಯೂ ನಮ್ಮ ಮೇಲೆ ಲೆಖ್ಖವಿಲ್ಲದ ನಮ್ಮ ಅಪರಾಧಗಳನ್ನು ಸ್ಥಾಪಿಸಿ, ನಮಗೆ ಆಜ್ಞೆ ನಿರ್ಣಯ ಮಾಡಿ, ಪೀಡೆ ಕೊಡುವಲ್ಲಿ, ನೀನು ಅಂತಃಕರಣ ಪಟ್ಟು, ನಮ್ಮನ್ನು ನಿನ್ನ ಕ್ರೂಜೆಯ ಮರೆಯಲ್ಲಿ ಶೇರಿಸು! ನಮ್ಮ ಸ್ವರ್ಗೀಯ ಪ್ರಧಾನಯಾಜಕನೇ! ನಮ್ಮ ಕಾರ್ಯಕರ್ತನಾಗಿ ನಡುವೆ ಬಂದು— ತಂದೆಯೇ, ಅವರಿಗೆ ಮನ್ನಿಸು! ಎಂದು ನಮಗೋಸ್ಕರ ಬಿನ್ನಹ ಮಾಡುವದನ್ನು ಬಿಡ ಬೇಡ!

ನಂಬಿಕೆಯುಳ್ಳ ರಕ್ಷಕನೇ! ನಾವು ಪಾಪವನ್ನು ಹೇಸಿ, ಹಗೆ ಮಾಡಿ, ನಮ್ಮ ಮಾಂಸವನ್ನು ಅದರ ಇಚ್ಛೆ ದುರಾಶೆಗಳ ಸಹಿತವಾಗಿ ಕ್ರೂಜಿಸಿ, ಇಹದಲ್ಲಿ ನಿನಗೆ ಮಾತ್ರ ಬದುಕುವ ಹಾಗೆ ನಿನ್ನ ಮರಣದ ಫಲವು ನಮ್ಮಲ್ಲಿ ವ್ಯಾಪಿಸಲಿ! ಮತ್ತು ನೀನು ನಮ್ಮನ್ನು ನಿನ್ನ ಶ್ರಮಗಳಲ್ಲಿ ಪಾಲುಗಾರರಾಗ ಮಾಡ ಬೇಕೆಂದಿದ್ದರೆ, ನಾವು ನಿನ್ನ ಕೂಡ ಮಹಿಮೆಯಲ್ಲಿಯೂ ಪಾಲುಗಾರರಾಗುವ ಹಾಗೆ ಇಹದಲ್ಲಿ ನಿನ್ನ ಕೂಡ ಶ್ರಮ ತಾಳುವ ಮನಸ್ಸನ್ನು ನಮಗೆ ದಯ ಪಾಲಿಸು! ಆಮೆನ್!

6. ಉತ್ಥಾನಕ್ಕೆ. Ostern.

ಮಹಾ ಘನವುಳ್ಳ, ಅನಂತ ಸ್ತೋತ್ರಕ್ಕೆ ಯೋಗ್ಯನಾದ ರಕ್ಷಕನೇ! ನಮ್ಮೊಡೆಯನಾಗಿರುವ ಯೇಸು ಕ್ರಿಸ್ತನೇ! ವಿಶ್ವಾಸಿಸುವ ಭಕ್ತಜನರ ಆದರಣೆಗಾಗಿಯೂ ನಿನ್ನ ಹೆಸರಿನ ಮಹಿಮೆಗಾಗಿಯೂ ಸಮಾಧಿಯೊಳಗಿಂದ ಹೊರಟು ಬಂದ ಜಯಶಾಲಿಯೇ! ನಿನ್ನ ಹೆಸರಿನಲ್ಲಿ ನಿನ್ನ ಸಭೆ ಆಚರಿಸುವ ಈ ವಿಜಯದಿನದ ಹಬ್ಬದಲ್ಲಿ ನಾವು ನಿನ್ನನ್ನು ತಕ್ಕಂತೆ ಹೊಗಳುವದು ಹ್ಯಾಗೆ? ನೀನು ಮೃತ್ಯುಂಜಯನಾಗಿ ಎದ್ದಿ. ನೀನು ನಿತ್ಯಜೀವದ ಅಧಿಪತಿ ಎಂದು ಬಲ್ಲೆವು. ನೀನು ಆ ದಿವಸದ ಮಟ್ಟಿಗೂ ನಮ್ಮ ನಿಕ್ಷೇಪವನ್ನು ಕಾಪಾಡ ಶಕ್ತನಾಗಿದ್ಧೀ. ನೀನು ಸಂಕಟದಿಂದಲೂ

ನ್ಯಾಯತೀರ್ವಿಕೆಯಿಂದಲೂ ಪಾರಾಗಿ ಎದ್ದದರಿಂದ ನಿನ್ನೊಡನೆ ಹೊಸ ಜೀವಕ್ಕೆ ಏಳುವವರೆಲ್ಲರನ್ನೂ ಶಾಪಕ್ಕೂ ದಂಡಕ್ಕೂ ಎಂದೆಂದಿಗೂ ತಪ್ಪಿಸಿದ್ದೀ. ಒಡೆಯನಾದ ಯೇಸುವೇ! ನೀನೇ ಜೀವವೂ ಉತ್ಥಾನವೂ ಆಗಿದ್ದೀ. ನೆಲೆಗಾಣದ ನಿನ್ನ ಪ್ರೀತಿ ಕರುಣೆಗಳಿಗಾಗಿ ಇಂದು ನಿನ್ನನ್ನು ಹೊಗಳಿ ಕೊಂಡಾಡುವವರಾದ ನಮ್ಮಲ್ಲಿ ನೀನು ಯಾವಾಗಲೂ ಬದುಕು! ಏಳದವರೆಲ್ಲರನ್ನೂ ನಿನ್ನ ಪವಿತ್ರಾತ್ಮದ ಶಕ್ತಿಯಿಂದ ಪಾಪದ ನಿದ್ರೆತಿಳಿದೇಳ ಮಾಡು! ಮತ್ತು ನಮ್ಮ ಮರ್ತ್ಯ ಶರೀರದಲ್ಲಿ ನಿನಗೆ ವಿರುದ್ಧವಾಗಿ ಇನ್ನೂ ದೊರೆತನ ಮಾಡಲಿಕ್ಕೆ ಏಳುವ ದುರಾಶೆಯನ್ನೆಲ್ಲಾ ನಾವು ಕೊಂದು ಹಾಕಿ, ಎಡೆಬಿಡದೆ ಯಥಾರ್ಥವಾದ ಪಶ್ಚಾತ್ತಾಪದಿಂದಲೂ ನಿಷ್ಕಪಟವಾದ ವಿಶ್ವಾಸದಿಂದಲೂ ನಿನ್ನ ಮುಂದೆ ಹೊಸ ಜೀವದಲ್ಲಿ ನಡೆಯುವ ಹಾಗೆ ನಮ್ಮನ್ನು ಸರಿಗೊಳಿಸು! ಪರಾಕ್ರಮಶಾಲಿಯೇ! ನಮ್ಮಲ್ಲಿರುವ ಪ್ರಪಂಚಭಾವವನ್ನು ಸೋಲಿಸಿ ಕಿತ್ಥಾಕು! ನೀನು ಮಾತು ಕೊಟ್ಟ ಹಾಗೆ ನಿನ್ನ ಭಕ್ತರ ಮಧ್ಯದಲ್ಲಿ ಇದ್ದು, ಶಕ್ತಿ ಆದರಣೆ ಜಯ ನಿತ್ಯಾನಂದ ಭಾಗ್ಯ ಮುಂತಾದ ದಿವ್ಯ ವರಗಳಿಂದ ತುಂಬಿರುವ ನಿನ್ನ ಜೀವದ ಸಂಪೂರ್ಣ ಸಮಾಧಾನವನ್ನು ನಮಗೆ ದಯ ಪಾಲಿಸು!

ಒಡೆಯನಾದ ಯೇಸುವೇ! ನೀನು ಸ್ವರ್ಗದಲ್ಲಿರುವ ನಮ್ಮ ತಲೆಯಾಗಿದ್ದೀ. ನೀನು ನಿನ್ನನ್ನು ಪ್ರತ್ಯಕ್ಷವಾಗಿ ಕಾಣಿಸಿ ಕೊಳ್ಳುವಾಗ, ನಾವು ಸಹ ನಿನ್ನೊಡನೆ ನಿನ್ನ ಮಹಿಮೆಯಲ್ಲಿ ಪ್ರತ್ಯಕ್ಷವಾಗುವೆವು. ಆಗ್ಯೆಕ್ಷಯವಾದದು ಅಕ್ಷಯತ್ವವನ್ನು, ಮತ್ತು ಮರ್ತ್ಯವಾದದು ಅಮರತ್ವವನ್ನು ಹೊದ್ದು ಕೊಳ್ಳುವದು. ಈಗ ಹೋರಾಟ ಸಂಕಟಗಳಲ್ಲಿರುವಾಗ ನಿನ್ನ ಉತ್ಥಾನದ ಬಲವನ್ನು ತಮ್ಮ ಆಧಾರ ಮಾಡಿ ಕೊಂಡವರೆಲ್ಲರೂ ಆಗ ಜಯಧ್ವನಿ ಮಾಡಿ—ಮರಣವೇ! ನಿನ್ನ ಕೊಂಡಿ ಎಲ್ಲಿ? ಪಾತಾಳವೇ! ನಿನ್ನ ಜಯವೆಲ್ಲಿ? ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖಾಂತರ ನಮಗೆ ಜಯ ಕೊಟ್ಟ ದೇವರಿಗೆ ಸ್ತೋತ್ರವಾಗಲಿ! ಎಂದು ಹರ್ಷದಿಂದ ಕೊಂಡಾಡುವರು. ಆಮೆನ್!

ಅಥವಾ oder

ನಮ್ಮ ತಂದೆಯಾದ ದೇವರೇ! ನೀನು ನಿನ್ನ ಮಗನಾದ ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಏಳ ಮಾಡಿ, ಮಹಿಮೆ ಮಾನಗಳ ಕಿರೀಟ ವನ್ನು ಆತನಿಗಿಟ್ಟು, ಆತನು ಯುಗಯುಗಾಂತರಗಳಿಗೂ ತನ್ನ ಸಭೆಗೆ ಜೀವವುಳ್ಳ ತಲೆಯೂ ಒಡೆಯನೂ ಆಗಿರುವ ಹಾಗೆ ಆತನನ್ನು ಊರ್ಧ್ವ ಸ್ಥಾನದಲ್ಲಿ ನಿನ್ನ ಬಲಗಡೆಯಲ್ಲಿ ಕುಂಡ್ರಿಸಿದ್ದಕ್ಕಾಗಿ ನಿನಗೆ ಅಧಿಕಾಧಿಕ ಸ್ತುತಿಸ್ತೋತ್ರವಾಗಲಿ! ಕ್ರಿಸ್ತ ಯೇಸುವಿನಲ್ಲಿ ನೀನು ನಮಗೆ ಮಾಡಿದ ನಿನ್ನ ಮಹಾ ಪ್ರೀತಿಯನ್ನು ಪೂರ್ಣ ಹೃದಯದಿಂದ ಕೊಂಡಾಡುತ್ತೇವೆ. ನಾವು ಅಕ್ರಮಗಳಲ್ಲಿ ಸತ್ತವರಾಗಿದ್ದಾಗ, ನೀನು ನಮ್ಮನ್ನು ಆತನ ಕೂಡ ಬದುಕಿಸಿ, ಕೂಡ ಎಬ್ಬಿಸಿ, ಸ್ವರ್ಗೀಯ ಪದವಿಯಲ್ಲಿ ಕುಂಡ್ರಿಸಿದ್ದೀ.

ಮರಣ ತಾಳಿ, ಈಗ ಯುಗಯುಗಾಂತರಗಳಿಗೂ ಬದುಕುವ ಒಡೆಯನಾದ ಯೇಸುವೇ! ನಿನಗೂ ಸ್ತುತಿ ಸ್ತೋತ್ರವು ಆಗಲಿ! ನಾನು ಬದುಕುತ್ತೇನೆ, ನೀವು ಸಹ ಬದುಕುವಿರಿ ಎಂದು ನೀನು ಇಂದು ನಮಗೆ ತಿರಿಗಿ ಸಾರುತ್ತೀ. ಈ ಮಾತನ್ನು ನಂಬಿ ಕೊಳ್ಳುವವರಾದ ನಮ್ಮನ್ನು ನೀನು ಅದರಿಂದ ನಿನ್ನ ಕೂಡ ನಿಜ ಜೀವಕ್ಕೆ ಎಬ್ಬಿಸಿ, ನಿನ್ನ ಮಹಾ ಜಯದಲ್ಲಿಯೂ ನಿನ್ನ ಮರಣ ಉತ್ಥಾನಗಳ ಎಲ್ಲಾ ದಿವ್ಯ ಫಲಗ ಳಲ್ಲಿಯೂ ಪಾಲುಗಾರರಾಗ ಮಾಡುತ್ತೀ. ನಾವೆಲ್ಲರೂ ಏಕವಾಗಿ ಇಂದಿ ನಿಂದ ನಮಗಾಗಿ ಬದುಕದೆ, ನಮಗೋಸ್ಕರ ಮರಣ ತಾಳಿ ಎದ್ದ ನಿನ ಗಾಗಿಯೇ ಬದುಕುವ ಹಾಗೆ ನಮಗೆ ಕೃಪೆ ಕೊಡು! ಎಚ್ಚರವಾಗು, ನಿದ್ದೆ ಗೈಯುವವನೇ! ಸತ್ತವರೊಳಗಿಂದ ಏಳು! ಕ್ರಿಸ್ತನು ನಿನ್ನನ್ನು ಬೆಳಗಿಸುವನು ಎಂದು ಕೃಪೆಯಿಂದ ಸಕಲ ಮನುಷ್ಯರಿಗೆ ಕರೆದು ಹೇಳು!

ಯೇಸು ಕ್ರಿಸ್ತನ ತಂದೆಯೂ ಆತನಲ್ಲಿ ನಮ್ಮ ತಂದೆಯೂ ಆಗಿರು ವಾತನೇ! ನಿತ್ಯ ಒಡಂಬಡಿಕೆಯ ರಕ್ತದ ಮುಖಾಂತರ ಕುರಿಗಳ ದೊಡ್ಡ ಕುರುಬನಾಗಿರುವ ಯೇಸು ಒಡೆಯನನ್ನು ಸತ್ತವರೊಳಗಿಂದ ಹೊರ ಬರ ಮಾಡಿದ ಸಮಾಧಾನದ ದೇವರೇ! ನಿನ್ನ ಅಪ್ಪಣೆಯನ್ನು ಕೈಕೊಂಡು ನಡಿಸುವಂತೆ ನಮ್ಮನ್ನು ಸಕಲ ಸತ್ಕ್ರಿಯೆಗಳಲ್ಲಿ ಸಂಸಿದ್ಧರಾಗ ಮಾಡಿ,

ನಿನಗೆ ಮೆಚ್ಚುವದನ್ನೆಲ್ಲಾ ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖಾಂತರ ನಮ್ಮಲ್ಲಿ ಸಾಧಿಸಿ ಸಾಗಿಸು. ಆತನಿಗೆ ಯುಗಯುಗಾಂತರಗಳಿಗೂ ಮಾನವೂ ಮಹಿಮೆಯೂ ಆಗಲಿ! ಆಮೆನ್!

7. ಸ್ವರ್ಗಾರೋಹಣಕ್ಕೆ. Himmelfahrt.

ಒಡೆಯನಾದ ಯೇಸು ಕ್ರಿಸ್ತನೇ! ಸಕಲ ಮನುಷ್ಯರ ಉದ್ಧಾರಕನೇ! ನೀನು ನಮ್ಮ ರಕ್ಷಣೆಯ ಕೆಲಸವನ್ನು ತೀರಿಸಿದ ಬಳಿಕ ಸ್ವರ್ಗಕ್ಕೆ ಏರಿ ಹೋಗಿ, ನಿನ್ನ ತಂದೆಯ ಬಲಗಡೆಯಲ್ಲಿ ಕೂತು ಕೊಂಡಿ. ನೀನು ಏರಿ ಹೋದಲ್ಲಿಗೆ ನಾವು ವಿಶ್ವಾಸದಿಂದ ಕಣ್ಣೆತ್ತಿ, ನೀನು ತಿರಿಗಿ ದಿವ್ಯ ಮಹಿಮೆಯಲ್ಲಿ ಶೇರಿದ್ದಕ್ಕೆ ಆನಂದ ಪಡುತ್ತೇವೆ. ನಾವು ನಮ್ಮ ಮನೋರಥವನ್ನು ಅಳಿದು ಹೋಗುವ ಈ ಲೋಕದ ಮೇಲೆ ಹೋಗಗೊಡದೆ, ಪ್ರಪಂಚವನ್ನೆಲ್ಲಾ ತುಸವೆಂದು ಎಣಿಸಿ ಕೊಂಡು, ನಿನ್ನನ್ನೂ ಶಾಶ್ವತ ಪದವಿಯನ್ನೂ ಬಯಸೇ ಬಯಸುವ ಹಾಗೆ ನಮಗೆ ಕೃಪೆ ಕೊಡು! ನಾವು ನಮ್ಮ ಹೃದಯಗಳನ್ನು ಸ್ವರ್ಗದಲ್ಲೇ ಇರಿಸಿ, ಭೂಮಿಯ ಒಡವೆಗಳ ಹಂಬಲ ಬಿಟ್ಟು, ಮೇಲಿನ ಒಡವೆಗಳನ್ನು ಬಿಡದೆ ಅರಸುವ ಬುದ್ಧಿಯನ್ನು ನಮಗೆ ದಯ ಮಾಡು! ಮತ್ತು ಕಡೆಯಲ್ಲಿ ಈ ಒಡ ಜೀವವು ಕಳದು ಹೋದ ಬಳಿಕ ನಾವೂ ಏರಿ ಹೋಗಿ, ನಮ್ಮ ತಲೆಯೂ ಅರಸನೂ ಆಗಿರುವ ನಿನ್ನ ಮಹಿಮೆಯನ್ನು ಸದಾ ಕಣ್ಣಾರೆ ನೋಡುವ ಹಾಗೆ ನಮ್ಮನ್ನು ಮೇಲಿನ ಸ್ವರ್ಗರಾಜ್ಯದಲ್ಲಿ ಶೇರಿಸು! ಆಮೆನ್!

ಅಥವಾ oder

ಸರ್ವಶಕ್ತನಾದ ದೇವರೇ! ನಿನ್ನ ಮಗನೂ ನಮ್ಮ ರಕ್ಷಕನೂ ಆಗಿರುವ ಯೇಸು ಮಹಾ ಜಯಶಾಲಿಯಾಗಿ ಸ್ವರ್ಗಕ್ಕೆ ಏರಿ ಹೋದದರಿಂದ, ನಾವು ಹೃದಯಪೂರ್ವಕವಾಗಿ ಮಾಡುವ ಪ್ರಾರ್ಥನೆಯಿಂದಲೂ ಚುರುಕಾದ ನಂಬಿಕೆಯಿಂದಲೂ ಭಕ್ತಿಶೀಲದ ನಡತೆಯಿಂದಲೂ ಶಾಶ್ವತ ಮನೆಯ ಮೇಲೆ ಇಡುವ ಮನಃಪೂರ್ವಕ ಬಯಕೆಯಿಂದಲೂ, ಮತ್ತು ಕಡೆಗೆ

ಯೇಸು ಕ್ರಿಸ್ತನ ಹೆಸರಿನಲ್ಲಿ ಮಂಗಳವಾದ ಮರಣವನ್ನೂ ಉತ್ಥಾನವನ್ನೂ ಹೊಂದಿ, ಆತನ ಕೂಡ ದಿವಾರೋಹಣವಾಗಿ, ಮಹೋನ್ನತ ಪದವಿಯನ್ನು ಶೇರುವ ಹಾಗೆ ನಮಗೆ ದಯ ಮಾಡು! ಆಮೆನ್!

ಅಥವಾ oder

ಮೇಲಕ್ಕೆ ಏರಿ ಸ್ವರ್ಗದಲ್ಲಿ ನಿನ್ನ ತಂದೆಯ ಬಲಗಡೆಯಲ್ಲಿ ಕೂತುಕೊಂಡಂಥ ಯೇಸು ಕ್ರಿಸ್ತ ಒಡೆಯನೇ! ನೀನು ಪಾಪ ಮರಣಗಳ ಬೇಡಿಗಳಿಂದ ನಮ್ಮನ್ನು ಬಿಡುಗಡೆ ಮಾಡಿ, ನಮ್ಮ ಮುಕ್ತಿಯ ಎದುರಾಳಿಗಳನ್ನೆಲ್ಲಾ ಗೆದ್ದದಕ್ಕಾಗಿ ನಿನ್ನನ್ನು ಮಹಾ ಹರ್ಷದಿಂದ ಹೊಗಳುತ್ತೇವೆ. ಸ್ವರ್ಗದಲ್ಲಿಯೂ ಭೂಲೋಕದಲ್ಲಿಯೂ ಸಮಸ್ತ ಅಧಿಕಾರವು ನಿನಗೆ ಕೊಟ್ಟಿರುತ್ತದೆ. ಹೀಗಿರಲಾಗಿ ನೀನು ನಿನ್ನ ಸಭೆಯನ್ನು ಭೂಮಂಡಲದಲ್ಲೆಲ್ಲಾ ಹಬ್ಬಿಸಿ, ಸ್ಥಾಪಿಸಿ, ಸಲಹು! ನಿನ್ನ ಭಕ್ತರನ್ನು ಸಂತೈಸಿ, ಪವಿತ್ರರಾಗ ಮಾಡು! ನಿನ್ನ ವಾಕ್ಯದಿಂದಲೂ ನಿನ್ನ ಆತ್ಮದಿಂದಲೂ, ನಿನ್ನ ಮಾತಿನ ಪ್ರಕಾರ, ನಮ್ಮ ಸಂಗಡ ಇದ್ದುಳದು, ನೀನು ನಿನ್ನ ಮಹಿಮೆಯಲ್ಲಿ ಮರಳಿ ಕಾಣಿಸಿ ಕೊಳ್ಳುವ ಆ ದಿವಸದಲ್ಲಿ ನಮ್ಮನ್ನು ನಿನ್ನ ನಿತ್ಯ ರಾಜ್ಯದಲ್ಲಿ ಶೇರಿಸಿಕೋ, ನಮ್ಮೊಡೆಯಾ! ಆಮೆನ್!

8. ಪಂಚಾಶತ್ತಿನ ಹಬ್ಬಕ್ಕೆ. Pfingsten.

ದೇವರೇ! ಭಕ್ತರ ಹೃದಯಗಳನ್ನು ನಿನ್ನ ಪವಿತ್ರಾತ್ಮದಿಂದ ಬೆಳಗಿಸಿ, ಬೋಧಿಸಿ, ಕ್ರೈಸ್ತ ಸಭೆಯನ್ನು ಸ್ಥಾಪಿಸಿದಾತನೇ! ನಾವು ಅದೇ ಆತ್ಮದ ಬೋಧನೆಯಿಂದ ಎಲ್ಲಾ ವಿಷಯಗಳಲ್ಲಿಯೂ ಜ್ಞಾನವುಳ್ಳವರಾಗಿ, ಅದರ ಆದರಣೆಯಿಂದ ಯಾವಾಗಲೂ ಸಂತೋಷ ಪಡುತ್ತಾ ಇದ್ದು, ಅದರ ಶಕ್ತಿಯಿಂದಲೂ ಸಹಾಯದಿಂದಲೂ ಪವಿತ್ರವಾದ ಹೃದಯವುಳ್ಳವರಾಗಿ, ಎಲ್ಲಾ ಕೇಡಿಗೂ ತಪ್ಪಿಸಿ ಕೊಂಡು, ಸಭೆಯ ಹಗೆಗಾರರ ಉಪಾಯ ತಂತ್ರಗಳಿಂದ ದಾರಿ ತಪ್ಪದೆ, ಎಲ್ಲಾ ಸತ್ಯದಲ್ಲಿ ಶೇರಿ ನಡೆಯುವ ಹಾಗೆ, ನಮಗೆ ಕೃಪೆ ಮಾಡು! ನಿನ್ನ ಸಂಗಡ ಪವಿತ್ರಾತ್ಮದ ಐಕ್ಯದಲ್ಲಿ ಸತ್ಯ ದೇವರಾಗಿ ಯುಗಯುಗಾಂತರಕ್ಕೆ ಆಳುತ್ತಾ ಬಾಳುತ್ತಾ

ಇರುವ ನಿನ್ನ ಮಗನೂ ನಮ್ಮ ಪ್ರಿಯ ಒಡೆಯನೂ ಆಗಿರುವ ಯೇಸು ಕ್ರಿಸ್ತನು ದಯ ಮಾಡಿದ ವಾಗ್ದಾನಗಳನ್ನೆಲ್ಲಾ ನೆರವೇರಿಸು! ಆಮೆನ್!

ಅಥವಾ oder

ದಯಾಪರನಾದ ದೇವರೇ! ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ಆದರಿಕನಾದ ಪವಿತ್ರಾತ್ಮವನ್ನು ನೀನು ಲೋಕಕ್ಕೆ ಕಳುಹಿಸಿ, ಸ್ವರ್ಗದಲ್ಲಿ ನಮಗಿರುವ ಬಾಧ್ಯತೆಯ ಮುಂಗಡವಾಗಿ ನಮಗೆ ಕೊಟ್ಟದಕ್ಕಾಗಿ ನಿನ್ನನ್ನು ಹೊಗಳುತ್ತೇವೆ.

ಯೇಸು ಕ್ರಿಸ್ತನಲ್ಲಿರುವ ಸಭೆಯ ಮೇಲೆ ನಿನ್ನ ಆತ್ಮವನ್ನು ಇನ್ನೂ ಹೆಚ್ಚೆಚ್ಚಾಗಿ ಎರೆ! ನಿನ್ನ ರಾಜ್ಯವನ್ನು ನಮ್ಮ ಹೃದಯಗಳಲ್ಲಿ ಸ್ಥಾಪಿಸು! ನಮ್ಮನ್ನು ಕತ್ತಲೆಯೊಳಗಿಂದ ನಿನ್ನ ಬೆಳಕಿಗೂ, ಪಾಪದ ದಾಸತ್ವದೊಳಗಿಂದ ನಿನ್ನ ಮಕ್ಕಳ ಮಹಿಮೆಯುಳ್ಳ ಬಿಡುಗಡೆಗೂ ತಂದು ಮುಟ್ಟಿಸು!

ಪವಿತ್ರಾತ್ಮನೇ, ಬಾ! ನಮ್ಮೆಲ್ಲರಲ್ಲಿ ಈ ಹೊತ್ತು ನಿನ್ನ ಸಾಕ್ಷಿಯನ್ನು ಪಾಲಿಸು! ಭಕ್ತರನ್ನೆಲ್ಲಾ ನಿನ್ನ ವರಗಳಿಂದ ಮಿಗೆ ಆಶೀರ್ವದಿಸು! ಚಂಚಲ ಮನಸ್ಸಿನವರನ್ನು ಸ್ಥಿರ ಪಡಿಸು! ಪಾಪಗಳಲ್ಲಿ ಮುಣುಗಿ ಹೋಗಿ ಸತ್ತವರನ್ನು ಹೊಸ ಜೀವಕ್ಕೆ ಎಬ್ಬಿಸು! ಬಲವಿಲ್ಲದವರಾದ ನಮ್ಮಲ್ಲಿ ನಿನ್ನ ಬಲವನ್ನು ತುಂಬಿಸು! ನಾವು ಶೋಧನೆಯಲ್ಲಿ ಬೀಳದಂತೆ ಎಚ್ಚರವಾಗಿದ್ದು, ಪ್ರಾರ್ಥನೆ ಮಾಡುವದಕ್ಕೆ ನಮಗೆ ಸಹಾಯ ಮಾಡು! ವಿಶ್ವಾಸ ಪ್ರೀತಿ ವಿಧೇಯತ್ವ ಸಹನಗಳಲ್ಲಿ ನಮ್ಮನ್ನು ನೆಲೆಗೊಳಿಸು! ಕ್ರಿಸ್ತನನ್ನು ನಮ್ಮಲ್ಲಿ ಮಹಿಮೆ ಪಡಿಸಿ, ನಾವು ಆತನ ಶರೀರದ ಅಂಗಗಳೂ ದೇವರ ಮಕ್ಕಳೂ ಆಗಿದ್ದೇವೆಂಬ ಸಾಕ್ಷಿಯನ್ನು ನಮ್ಮ ಆತ್ಮಕ್ಕೆ ಕೊಡು!

ಕತ್ತಲೆಯಲ್ಲಿಯೂ ಮರಣಾಂಧಕಾರದಲ್ಲಿಯೂ ಕೂತು ಕೊಂಡು, ನಿನ್ನನ್ನು ಅರಿಯದವರ ಮೇಲೆ ಸಹ ಉನ್ನತದಿಂದ ನಿನ್ನ ದೊಡ್ಡ ಬೆಳಕನ್ನು ಮೂಡಿಸು! ನೀನು ನಡಿಸಿದ ಮಹಾ ಕಾರ್ಯಗಳು ಮನುಷ್ಯರೆಲ್ಲರಿಗೆ ಗೊತ್ತಾಗುವಂತೆ ನಿನ್ನ ಸುವಾರ್ತೆಯನ್ನು ಅವರವರ ಭಾಷೆಗಳಲ್ಲಿ ಬಲಪೂರ್ಣವಾಗಿ ಸಾರಿಸು! ಯೇಸು ಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಡುವವರನ್ನು ದಿನ ದಿನಕ್ಕೆ ನಿನ್ನ ಸಭೆಗೆ ಕೂಡಿಸು!

ಕ್ರೈಸ್ತ ಸರ್ವಸಭೆಯನ್ನು ನಿನ್ನ ಅನ್ಯೋನ್ಯದಲ್ಲಿಯೂ ಸಮಾಧಾನದ ಬಂಧದಲ್ಲಿಯೂ ಕಾಪಾಡು! ನಮ್ಮೆಲ್ಲರನ್ನು ವಿಶ್ವಾಸದ ಒಂದೇ ನಿಜಾರ್ಥಕ್ಕೂ ಯೇಸು ಕ್ರಿಸ್ತನ ತಿಳುವಿಕೆಗೂ ಮುಟ್ಟಿಸು! ಒಂದೇ ಶರೀರವಾಗುವದಕ್ಕೆ ನಮ್ಮನ್ನು ಕರೆದಿದ್ದೀಯಲ್ಲವೋ? ಹೀಗೆ ಒಬ್ಬನೇ ಕುರುಬನೂ ಒಂದೇ ಮಂದೆಯೂ ಆಗುವದೆಂಬ ಮಾತು ನೆರವೇರಲಾಗಿ, ದೇವರು ಎಲ್ಲಾದರಲ್ಲಿ ಎಲ್ಲವು ಆಗುವನೆಂಬ ಸಭೆಯ ಪ್ರತೀಕ್ಷೆ ಈಡೇರಲಿ! ಆಮೆನ್!

9. ತ್ರಯೈಕ್ಯದ ಹಬ್ಬಕ್ಕೆ. Dreieinigkeitsfest.

ಎಂದೆಂದಿಗೂ ಅಧಿಕಾಧಿಕ ಸ್ತೋತ್ರಕ್ಕೆ ಯೋಗ್ಯ ಯೆಹೋವನೇ! ನಿಜ ದೇವರಾದ ನಿನ್ನ ಸ್ವಭಾವದ ಮಹಾ ಮರ್ಮವನ್ನು ಯಾವ ಮನುಷ್ಯನಾದರೂ ಎಂದೂ ತನ್ನ ಸ್ವಬುದ್ಧಿಯಿಂದ ತಿಳಿದು ಕೊಂಡು, ನಿನ್ನನ್ನು ಯೋಗ್ಯವಾಗಿ ಆರಾಧಿಸಲಿಕ್ಕೆ ಶಕ್ತನಲ್ಲ. ನೀನು ತಂದೆ ಮಗ ಪವಿತ್ರಾತ್ಮ ಆಗಿರುವ ತ್ರಯೈಕ ದೇವರು ಎಂದು ಉಪದೇಶ ಕೊಡುವ ನಿನ್ನ ವಾಕ್ಯವನ್ನು ನಾವು ಕೇಳಿ, ನಂಬಿ ಕೊಂಡು, ನಿನ್ನ ಬೆಳಕಿನಲ್ಲಿ ಬೆಳಕನ್ನು ಕಂಡು, ನಿನ್ನನ್ನು ಆರಾಧಿಸಿ, ಸೇವಿಸಿ, ಅರಿಕೆ ಮಾಡುವದು ನಿನ್ನ ದೊಡ್ಡ ದಯೆಯಿಂದಲೇ ಕೂಡಿತು. ಇದಕ್ಕಾಗಿ ನಿನ್ನನ್ನು ಪೂರ್ಣಹೃದಯದಿಂದ ಕೊಂಡಾಡುತ್ತೇವೆ. ನಾವು ಯಾವ ಬಗೆಯಿಂದಲಾದರೂ ಗುರಿ ತಪ್ಪದ ಹಾಗೆ ಈ ದಿವ್ಯ ಜ್ಞಾನವನ್ನು ನೀನು ನಮ್ಮಲ್ಲಿ ನೆಲೆಗೊಳಿಸಿ, ಹೆಚ್ಚಿಸಿ, ಫಲವತ್ತಾಗ ಮಾಡ ಬೇಕೆಂದು ಬೇಡಿ ಕೊಳ್ಳುತ್ತೇವೆ. ಆದ್ಯಂತವಿಲ್ಲದ ದೇವರೇ! ನಿನ್ನ ಮಹಾ ಕರುಣೆಯಿಂದ ನಮ್ಮನ್ನು ನಿರ್ಮಿಸಿ, ರಕ್ಷಿಸಿ, ಪವಿತ್ರ ಮಾಡಿದಂತೆ ಇನ್ನು ಮುಂದೆಯೂ ನಿನ್ನ ಪ್ರೀತಿ ಕೃಪೆ ಅನ್ಯೋನ್ಯಗಳ ಅನುಭವವನ್ನು ನಮಗೆ ದಯ ಪಾಲಿಸು! ನಾವು ಇಹದಲ್ಲಿ ನಂಬಿದ್ದನ್ನು ಪರದಲ್ಲಿ ಕಣ್ಣಾರೆ ಕಂಡು, ಸಮಸ್ತ ದೂತರ ಸಂಗಡಲೂ ಆಯಲ್ಪಟ್ಟವರ ಸಂಗಡಲೂ ತ್ರಯೈಕ ದೇವರಾದ ನಿನ್ನನ್ನು ಯುಗಯುಗಾಂತರಗಳಿಗೂ ಹೊಗಳಿ ಕೊಂಡಾಡುವ

ಹಾಗೆ ನಮ್ಮನ್ನು ಕಡೆಯಲ್ಲಿ ನಿನ್ನ ನಿತ್ಯ ಮಹಿಮೆಯ ರಾಜ್ಯದಲ್ಲಿ ನಿನ್ನ ಬಳಿಗೆ ಶೇರಿಸಿಕೋ! ಆಮೆನ್!

ಒಂದು ಸಭೆಯ ಸ್ಥಾಪನ ಜ್ಞಾಪಕಾರ್ಥ ದಿನಕ್ಕೆ.

Gedenktag der Gründung einer Station.

ಅದನ್ನು ಮರು ಆದಿತ್ಯವಾರದಲ್ಲಿ ಆಚರಿಸುವದು.

Auf den nächstfolgenden Sonntag zu feiern.

ನಮ್ಮ ದೇವರಾದ ಯೆಹೋವನೇ! ಸ್ವರ್ಗಸ್ಥನಾದ ತಂದೆಯೇ! ನೀನು ನಿನ್ನ ವಾಕ್ಯದಿಂದಲೂ ನಿನ್ನ ಪವಿತ್ರಾತ್ಮದಿಂದಲೂ ನಮ್ಮಲ್ಲಿ . . . ವರುಷಗಳ ಹಿಂದೆ ಒಂದು ಸಭೆಯನ್ನು ಸ್ಥಾಪಿಸಿ, ಅದನ್ನು ಇಂದಿನ ವರೆಗೂ ಜೋಕೆಯಾಗಿ ಸಲಹಿ, ನಿನ್ನ ಸುವಾರ್ತೆಯನ್ನೂ ಸಭೆ ಒಟ್ಟು ಕೂಡಿ ನಿನ್ನನ್ನು ಆರಾಧಿಸುವ ಈ ಮನೆಯನ್ನೂ ನಮಗೆ ದಯದಿಂದ ಕಾಪಾಡಿ ಉಳಿಸಿದ್ದಕ್ಕಾಗಿ ನಿನ್ನನ್ನು ಹೊಗಳುತ್ತೇವೆ. ನೀನು ನಮ್ಮ ಸಭೆಯೆಂಬ ಗಿಡವನ್ನು ನೆಟ್ಟು, ನೀರು ಹಾಕುತ್ತಾ ಬಂದ ದಿವಸಗಳು ಬಹಳವಾಗಿದ್ದರೂ, ನಮ್ಮಲ್ಲಿ ನಿನಗೆ ಉಂಟಾದ ಫಲಗಳು ಸ್ವಲ್ಪ ಮಾತ್ರವಕಟಾ! ಎಂದು ದುಃಖಿಸಿ ಅರಿಕೆ ಮಾಡುತ್ತೇವೆ. ಹೀಗಿರಲಾಗಿ ನಾವು ಈಗ ನಿನಗೆ ಅಡ್ಡ ಬಿದ್ದು—ನಮ್ಮ ಆಲಸ್ಯ ಅಪನಂಬಿಕೆಗಳನ್ನೆಲ್ಲಾ ಮನ್ನಿಸಿ, ನಮ್ಮ ನಡೆ ನುಡಿಗಳನ್ನೂ ನಮ್ಮ ಪ್ರೀತಿಯನ್ನೂ ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ರಕ್ತದಿಂದ ಹೊಸತು ಮಾಡ ಬೇಕೆಂದು ಪ್ರಾರ್ಥಿಸುತ್ತೇವೆ. ನಮ್ಮನ್ನೂ ನಮ್ಮ ಮಕ್ಕಳನ್ನೂ ಸದ್ವಿಶ್ವಾಸದ ಅಸ್ತಿವಾರದಲ್ಲಿಯೂ ಪರಿಶುದ್ಧರೆಲ್ಲರ ಅನ್ಯೋನ್ಯದಲ್ಲಿಯೂ ಕಾಪಾಡು! ಯಾವಾಗಲೂ ಸದ್ಭಕ್ತಿಯ ಬೋಧಕರನ್ನು ಕೊಡು! ಅವರು ನಿನ್ನ ಮಂದೆಯನ್ನು ನೆಟ್ಟಗೆ ಮೇಯಿಸಿ, ನಿನ್ನ ವಾಕ್ಯವನ್ನು ಸರಿಯಾಗಿ ಹಂಚಿ ಕೊಟ್ಟು, ನಮ್ಮ ಪ್ರಾಣರಕ್ಷಣೆಗೆ ಬೇಕಾದ ಯಾವ ಬೋಧನೆಯನ್ನಾದರೂ ಮರೆ ಮಾಡದಿರುವದರಲ್ಲಿ ನಂಬಿಕೆಯುಳ್ಳ ಉಗ್ರಾಣಿಕರಾಗಿರಲಿ! ಸಭೆಯವರು ನಿನ್ನ ವಾಕ್ಯವನ್ನು ಸಂತೋಷದಿಂದ ಕೇಳುವವರು ಮಾತ್ರವಾಗಿರದೆ,

ಮಾಡುವವರು ಸಹ ಆಗುವ ಹಾಗೆ ಅವರೆಲ್ಲರ ಹೃದಯವನ್ನು ನಿನ್ನ ಕೃಪೆಯಿಂದ ಆಳು! ನಿನ್ನ ರಾಜ್ಯವನ್ನು ಎಲ್ಲಾ ಕಡೆಯಲ್ಲಿಯೂ ಹೆಚ್ಚಿಸು! ಈ ಸ್ಥಳದಲ್ಲಿ ಆಗುವ ನಿನ್ನ ವಾಕ್ಯದ ಪ್ರಸಂಗವನ್ನು ಆಶೀರ್ವದಿಸು! ನಮ್ಮ ಮನೆಗಳಲ್ಲಿ ನಿನ್ನ ವಾಕ್ಯವು ಎಲ್ಲರಿಗೂ ಪರಮವಾದ ಅನ್ನವಾಗಿರಲಿ! ಕಡೆಯಲ್ಲಿ ನಮ್ಮೆಲ್ಲರನ್ನೂ ಸ್ವರ್ಗದಲ್ಲಿರುವ ನಿನ್ನ ಪರಿಶುದ್ಧ ಮಂದಿರದಲ್ಲಿ ಶೇರಿಸು! ಅಲ್ಲಿ ಪವಿತ್ರತ್ವದ ಅಲಂಕಾರದಲ್ಲಿ ನಿನಗೆ ಸೇವೆ ಮಾಡಿ, ನಮ್ಮೊಡೆಯನಾದ ಯೇಸು ಕ್ರಿಸ್ತನ ಮುಖಾಂತರ ನಿನ್ನ ಮಹಿಮೆಯನ್ನು ನೋಡೇ ನೋಡುವ ಪದವಿಯನ್ನು ನಮಗೆ ದಯ ಮಾಡು! ಆಮೆನ್!

B ಪರಿಶಿಷ್ಟವು.

Beilage.

ದೇವರ ರಾಜ್ಯದ ವಿಸ್ತರಣಕ್ಕೋಸ್ಕರ.

Um Ausbreitung des Reiches Gottes.

ವಿವಿಧ ವಿಷಯವಿಶೇಷಗಳನ್ನು ಕುರಿತ ಪ್ರಾರ್ಥನೆ ಸ್ತೋತ್ರಗಳು.

Für besondere Zwecke Gebet und Danksagungen.

೧

ಕರುಣೆಯುಳ್ಳ ದೇವರೇ! ನೀನು ಎಲ್ಲಾ ಮನುಷ್ಯರನ್ನು ನಿರ್ಮಿಸಿ, ಉಂಟು ಮಾಡಿದದರಲ್ಲಿ ಒಂದನ್ನಾದರೂ ಹೇವರಿಸದೆ, ಪಾಪಿಯ ಮರಣವನ್ನಲ್ಲ, ಅವನು ಮಾನಸಾಂತರ ಪಟ್ಟು, ಬದುಕ ಬೇಕೆಂಬದನ್ನೇ ಅಪೇಕ್ಷಿಸುವಾತನು. ಈ ನಿನ್ನ ಕೃಪೆಯ ದೆಸೆಯಿಂದ ಎಲ್ಲಾ ಯೆಹೂದ್ಯರಿಗೂ ಮಹಮ್ಮದಿಯರಿಗೂ ವಿಗ್ರಹಾರಾಧಕರಿಗೂ ಎಲ್ಲಾ ಅವಿಶ್ವಾಸಿಗಳಿಗೂ ಪಾಷಂಡಿಗಳಿಗೂ ಕರುಣೆ ತೋರಿಸಿ, ಅವರವರೊಳಗಿಂದ ಎಲ್ಲಾ ಅಜ್ಞಾನವನ್ನೂ ಹೃದಯದ ಕಠಿಣತ್ವವನ್ನೂ ನಿನ್ನ ವಾಕ್ಯವನ್ನು ಜರಿದು ಬಿಡುವ ತಿರಸ್ಕಾರಭಾವವನ್ನೂ ಕಿತ್ತು, ಅವರವರಲ್ಲಿ ಅನೇಕರನ್ನು ನಿಜ ಇಸ್ರಯೇಲಿನ ಕೂಡ ರಕ್ಷಣೆ ಹೊಂದಿಸು! ನಿನ್ನ ಸಂಗಡಲೂ ಪವಿತ್ರಾತ್ಮದ ಸಂಗಡಲೂ ಯುಗಯುಗಾಂತರಕ್ಕೂ ಬಾಳುತ್ತಾ ಆಳುತ್ತಾ ಇರುವ ಯೇಸು ಕ್ರಿಸ್ತ ಒಡೆಯನೆಂಬ ಒಬ್ಬನೇ ಕುರುಬನ ಕೈಯ ಕೆಳಗೆ

ಒಂದೇ ಹಟ್ಟಿಯೊಳಗೆ ಒಂದೇ ಮಂದೆಯಾಗುವ ಹಾಗೆ ಅವರವರನ್ನು ತಿರುಗಿಸಿ, ನಿನ್ನ ಮನೆಗೆ. ನಡಿಸು! ಆಮೆನ್!

ಅಥವಾ oder

ನಮ್ಮೊಡೆಯನಾದ ಯೇಸು ಕ್ರಿಸ್ತನ ತಂದೆಯೇ! ನಿನ್ನ ಮಗನ ಮುಖಾಂತರ ನಿನ್ನ ಮಕ್ಕಳಾಗುವದಕ್ಕೂ ಆತನಲ್ಲಿ ಜೀವವನ್ನೂ ಆನಂದದ ಪರಿಪೂರ್ಣತೆಯನ್ನೂ ಪಡಕೊಳ್ಳುವದಕ್ಕೂ ನಮಗೆ ಅಧಿಕಾರ ಕೊಟ್ಟ ನಿನ್ನನ್ನು ಸ್ತುತಿಸುತ್ತೇವೆ. ಎಲ್ಲಾ ತಿಳುವಿಕೆ ಮಿಾರುವ ನಿನ್ನ ಸಮಾಧಾನವನ್ನು ನಿನ್ನ ಮಗನ ಸಭೆಯಿಂದ ಭೂಮಂಡಲದಲ್ಲೆಲ್ಲಾ ಹಬ್ಬಿಸು! ಇಂದಿನ ವರೆಗೂ ಎಷ್ಟೋ ಜನಾಂಗಗಳು ನಿನ್ನ ಕೃಪೆಯ ಬೆಳಕು ಕಾಣದೆ ಇದ್ದಾರೆ! ಹಾಗಾದರೆ ನಾವು ಮನಃಪೂರ್ವಕವಾಗಿ ಬಿನ್ನಹ ಮಾಡಿ, ಗೆಲವಿನಲ್ಲಿ ಕೈ ದೊಡ್ಡದು ಮಾಡಿ, ಉದಾರತ್ವವುಳ್ಳ ಕೃತಜ್ಞತೆಯ ಕಾಣಿಕೆಗಳನ್ನು ಅರ್ಪಿಸುವ ಮನಸ್ಸನ್ನೂ ನಿನ್ನ ಸುವಾರ್ತೆಯನ್ನು ಹಬ್ಬಿಸುವದಕ್ಕೆ ಬೇಕಾದ ಆಸಕ್ತಿಯನ್ನೂ ನಮ್ಮಲ್ಲಿ ಹುಟ್ಟಿಸು! ನಿನ್ನ ರಕ್ಷಣೆಯನ್ನು ಸಾರುವ ಆಳುಗಳ ಊಳಿಗದಿಂದ ನಿನ್ನ ರಾಜ್ಯದ ಮೇರೆಗಳು ನಾಲ್ಕು ದಿಕ್ಕಿಗೂ ಹೆಚ್ಚು ಹೆಚ್ಚಾಗಿ ವಿಸ್ತಾರವಾಗುವ ಹಾಗೆ ಅವರಿಗೆ ಆಧಾರ ಕೊಡು! ಅವರ ಮನೋವಾಕ್ಕಾಯಗಳನ್ನು ಪವಿತ್ರ ಮಾಡಿ, ಅವರನ್ನು ನಿನ್ನ ಮಾನಕ್ಕೆ ತಕ್ಕ ಕೈಯಾಳುಗಳಾಗ ಮಾಡು! ನಿನ್ನ ಹೆಸರನ್ನು ಅರಿಯದ ಜನಾಂಗಗಳು ನೀನು ಕಳುಹಿಸುವ ಸುವಾರ್ತಿಕರನ್ನು ಸಂತೋಷದಿಂದ ಸೇರಿಸಿ ಕೊಳ್ಳುವ ಹಾಗೆ ಅವರ ಮನಸ್ಸನ್ನು ಸವರಿಸು! ನಿನ್ನ ವಾಕ್ಯಕ್ಕೆ ಎಲ್ಲಾ ಕಡೆಯಲ್ಲಿಯೂ ಬಾಗಲು ತೆರೆದು, ನಿನ್ನ ಚಿತ್ತಕ್ಕೆ ಸರಿಯಾದ ಫಲವನ್ನೇ ಉಂಟು ಮಾಡು! ಎಲ್ಲೆಲ್ಲಿಯೂ ನಿನ್ನ ಭಕ್ತರಿಗೆ ವಿಶ್ವಾಸ ಪ್ರೀತಿ ಬುದ್ಧಿ ಬಲಗಳೆಂಬ ವರಗಳನ್ನು ದಯ ಪಾಲಿಸು! ಹೊತ್ತು ಮೂಡುವಲ್ಲಿಂದ ಮುಳುಗುವ ವರೆಗೂ ನಿನ್ನ ಹೆಸರಿಗೆ ಮಹಿಮೆ ಆಗಲಿ! ಯೇಸು ಕ್ರಿಸ್ತನೇ ಒಡೆಯನೆಂದು ಎಲ್ಲಾ ನಾಲಿಗೆಗಳು ನಿನ್ನ ಮಹಿಮೆಗಾಗಿ ಅರಿಕೆ ಮಾಡುವದಾಗಲಿ! ಆಮೆನ್!

೨

ಸರಕಾರಕ್ಕೋಸ್ಕರ.

Für die Regierung.

ಆದ್ಯಂತವಿಲ್ಲದ ಸರ್ವಶಕ್ತ ದೇವರೇ! ಅರಸು ಮೊದಲಾದ ಅಧಿಕಾರಿಗಳ ಹೃದಯಗಳು ನಿನ್ನ ಕೈಯಲ್ಲಿ ಇರುತ್ತವೆಂದೂ, ನೀನು ಅವರ ಮನಸ್ಸುಗಳನ್ನು ನೀರಿನ ಕಾಲಿವೆಗಳಂತೆ ಬೇಕಾದಲ್ಲಿಗೆ ತಿರುಗಿಸುತ್ತೀ ಎಂದೂ, ನಿನ್ನ ಪವಿತ್ರ ವಾಕ್ಯದಿಂದ ತಿಳುಕೊಂಡಿದ್ದೇವೆ. ಆದ್ದರಿಂದ ನಿನ್ನ ಆಳು ಆದ ನಮ್ಮ ಕೈಸರನ (-ಳ) ಹೃದಯವನ್ನೂ ಈ ದೇಶವನ್ನಾಳುವ ಸಮಸ್ತ ಅಧಿಕಾರಿಗಳ ಹೃದಯಗಳನ್ನೂ ನಡಿಸಿ, ಅವರು ತಮ್ಮ ಎಲ್ಲಾ ಆಲೋಚನೆ ಮಾತು ಕಾರ್ಯಗಳಲ್ಲಿ ಯಾವಾಗಲೂ ನಿನ್ನ ಹೆಸರಿನ ಮಾನವನ್ನೂ ನಿನ್ನ ರಾಜ್ಯದ ಹೆಚ್ಚುಗೆಯನ್ನೂ ಬಗೆದು, ಪಾಲನೆ ಪರಾಂಬರಿಕೆಗೋಸ್ಕರ ತಮಗೆ ಒಪ್ಪಿಸಿ ಇರುವ ನಿನ್ನ ಪ್ರಜೆಯ ಸೌಖ್ಯ ಸಮಾಧಾನ ಸದ್ಭಕ್ತಿಗಳನ್ನು ಕಾಪಾಡಲಿಕ್ಕೆ ನೋಡುವಂತೆ ಅವರನ್ನು ಪ್ರೇರೇಪಿಸಿ, ಆಳಿ ಕೊಳ್ಳ ಬೇಕೆಂದು ಬಿನ್ನೈಸುತ್ತೇವೆ. ಕರುಣಾಳು ತಂದೆಯೇ! ಈ ನಮ್ಮ ಬಿನ್ನಹವನ್ನು ನಿನ್ನ ಪ್ರಿಯ ಮಗನಾಗಿರುವ ಯೇಸು ಕ್ರಿಸ್ತ ಒಡೆಯನಿಗಾಗಿ ದಯ ಪಾಲಿಸು! ಆಮೆನ್!

೩

ಭೂಮಿಯ ಹುಟ್ಟುವಳಿಗೋಸ್ಕರ.

Für die Gewächse der Erde.

ಸರ್ವಶಕ್ತ ದೇವರೇ! ಕರುಣಾಳು ತಂದೆಯೇ! ನಿನ್ನ ದಿವ್ಯ ಬಲದಿಂದ ಎಲ್ಲವನ್ನೂ ನಿರ್ಮಿಸಿ, ಸಕಲ ಜೀವರಾಶಿಗಳನ್ನು ನಿನ್ನ ಒಲುಮೆಯಿಂದ ಸಾಕುತ್ತಾ ಬರುವಾತನು ನೀನಲ್ಲವೋ? ನಾವು ಈಗ ವಿನಯದಿಂದ ನಿನ್ನ ಹತ್ತರ ಬೇಡುವದನ್ನು ಆಲೈಸು! ನಮ್ಮ ಹೊಲ ಗದ್ದೆ ತೋಟಗಳನ್ನು ನೋಡಿ, ಪೈರು ಫಲಾದಿಗಳಿಗೆ ಬೇಕಾದ ಬಿಸಿಲು ಮಳೆಗಳನ್ನೂ ಕೊಯಿಲಿಗೆ ಒಳ್ಳೇ ಸಮಯವನ್ನೂ ನಮಗೆ ಕೊಟ್ಟು, ಮನುಷ್ಯರ ಊಟ

ಉಡಿಗೆಗಳಿಗಾಗಿ ಬೇಕಾದ್ದೆಲ್ಲವನ್ನು ಕೃಪೆಯಿಂದ ಬೆಳಿಸಿ, ನಮ್ಮನ್ನು ಸಲಹು! ಆದರೆ ಎಲ್ಲಾದಕ್ಕಿಂತಲೂ ಮೊದಲು ನಾವೇ ಬಹಳ ನೀತಿ ಫಲಗಳನ್ನು ಕೊಟ್ಟು, ನಿನ್ನ ದಯದ ದಾನಗಳನ್ನೆಲ್ಲಾ ಕೃತಜ್ಞತಾಭಾವ ದಿಂದ ನಿನ್ನ ನೆನವರಿಕೆಯಲ್ಲಿ ಅನುಭೋಗಿಸುವಂತೆ ನಿನ್ನ ವಾಕ್ಯವೆಂಬ ಬೀಜವನ್ನು ನಮ್ಮ ಹೃದಯಗಳಲ್ಲಿ ಬಿತ್ತಿ ಬೆಳಿಸ ಬೇಕೆಂದು ಬೇಡಿ ಕೊಳ್ಳುತ್ತೇವೆ. ಆಮೆನ್!

೪

ಇಕ್ಕಟ್ಟಿನಲ್ಲಿ ಸಹಾಯಕ್ಕೋಸ್ಕರ.

Um Hülfe in der Noth.

ನಮ್ಮ ದೇವರೂ ತಂದೆಯೂ ಆಗಿರುವ ಯೆಹೋವಾ! ವಿಪತ್ತಿನ ಆಳವಾದ ಕುಣಿಯೊಳಗಿಂದ ನಿನಗೆ ಕೂಗುತ್ತೇವೆ. ನಮ್ಮ ಕೂಗನ್ನು ಕೇಳು! ನಮ್ಮ ಬಿನ್ನಹವನ್ನು ಆಲೈಸು! ಒಡೆಯನೇ! ನೀನು ಪಾಪವನ್ನು ಎಣಿಸಿ ವಿಚಾರಿಸಲಿಕ್ಕೆ ಬಂದರೆ, ನಿನ್ನ ಮುಂದೆ ಯಾರು ನಿಂತಾರು? ಆದರೆ ನಿನ್ನ ಬಳಿಯಲ್ಲಿ ಅಮಿತ ಕರುಣೆಯೂ ಮಿಗಿಲಾದ ಕ್ಷಮೆಯೂ ಉಂಟು; ಆದದರಿಂದ ನಾವು ನಿನ್ನಲ್ಲಿ ನಮ್ಮ ಕೋರಿಕೆ ಇಟ್ಟಿದ್ದೇವೆ. ನಮ್ಮ ಮೇಲೆ ಕರುಣೆ ಇಡು! ನಮಗೆ ಬಂದಿರುವ ಆಪತ್ತನ್ನು ಹಗುರ ಮಾಡು! ಕರುಣಾಸಾಗರನೇ! ಹೆಚ್ಚು ಕಷ್ಟ ಬಾರದಂತೆ ಈ ಆಪತ್ತನ್ನು ನಿವಾ ರಿಸು! ಸಂಕಟ ಪಡುವವರನ್ನು ಸಂತೈಸಿ, ಬಲಗೊಳಿಸಿ, ಸಲಹು! ಈಗ ಬಂದಿರುವ ಆಪತ್ತಿನಿಂದಲೂ ಉಪದ್ರವದಿಂದಲೂ ನಮ್ಮ ಹೃದಯಗ ಳನ್ನು ನಿನ್ನ ಬಳಿಗೆ ಎಳೆಕೊಂಡು, ಇಹದಲ್ಲಿ ಕಣ್ಣೀರಿಡುತ್ತಾ ಬಿತ್ತುವವ ರಾದ ನಾವು ಪರದಲ್ಲಿ ಉತ್ಸಾಹಧ್ವನಿ ಗೈಯುತ್ತಾ ಕೊಯ್ಯುವವರಾಗುವ ಹಾಗೆ ಮಾಡು! ಓ ದೇವರೇ! ಯೇಸು ಕ್ರಿಸ್ತನ ಮುಖ ನೋಡಿ ನಮ್ಮನ್ನು ಕೇಳಿ ಸಲಹು! ಆಮೆನ್!

೫

ಯುದ್ಧಕಾಲದಲ್ಲಿ.

Im Krieg.

ಸರ್ವಶಕ್ತ ದೇವರೇ! ರಾಜಾಧಿರಾಜನೇ! ಸರ್ವಗಣಗಳ ಒಡೆಯನೇ! ಎಲ್ಲವನ್ನೂ ನಡಿಸುವ ಸರ್ವಾಧಿಕಾರಿಯೇ! ಯಾರಾದರೂ ಯಾವದಾದರೂ ಎದುರು ನಿಲ್ಲಲಾರದ ಬಲವುಳ್ಳಾತನೇ! ಪಾಪಿಗಳನ್ನು ದಂಡಿಸಲಿಕ್ಕೂ ನಿಜ ಮಾನಸಾಂತರ ಪಡುವವರಿಗೆ ಕರುಣೆ ತೋರಿಸಲಿಕ್ಕೂ ಅಧಿಕಾರವಿರುವ ಪರಮ ನ್ಯಾಯಾಧಿಪನೇ! ನಾವು ನಿನ್ನ ಅಡಿಗೆ ಬಿದ್ದು, ನಮ್ಮ ಎದುರಾಳಿಗಳ ಕೈಗೆ ನಮ್ಮನ್ನು ತಪ್ಪಿಸು ಎಂದು ಬೇಡಿ ಕೊಳ್ಳುತ್ತೇವೆ. ಅವರ ಸೊಕ್ಕನ್ನು ಮುರಿ! ಅವರ ಕೆಡಕುತನವನ್ನು ಅಣಗಿಸು! ಅವರ ಕುಯುಕ್ತಿ ತಂತ್ರಗಳನ್ನು ಕೆಡವಿ ಹಾಕು! ಮತ್ತು ನಾವು ನಿನ್ನ ಶಸ್ತ್ರಾಸ್ತ್ರಗಳನ್ನು ಧರಿಸಿ ಕೊಂಡು, ನಮಗೆ ಏನೊಂದೂ ಕೇಡು ಬಾರದಂತೆ ನಿನ್ನ ಮರೆಯಲ್ಲಿ ಭದ್ರರಾಗಿದ್ದು, ವಿಜಯದಾಯಕನಾದ ನಿನ್ನನ್ನು ತಕ್ಕಂತೆ ಹೊಗಳುವ ಹಾಗೆ ನಮಗೆ ದಯ ಮಾಡು! ನಿನ್ನ ಒಬ್ಬನೇ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನ ನಿಮಿತ್ತ ನಮ್ಮ ಪ್ರಾರ್ಥನೆಯನ್ನು ಆಲೈಸು! ಆಮೆನ್!

೬

ಸೋಕುರೋಗಾದಿಗಳ ಕಾಲದಲ್ಲಿ.

Gegen Seuchen.

ಸರ್ವತ್ರಾಣವುಳ್ಳ ದೇವರೇ! ಅರಣ್ಯದಲ್ಲಿ ನಿನ್ನ ಪ್ರಜೆಯವರು ಮೋಶೆ ಆರೋನರು ಎಂಬ ನಾಯಕರಿಗೆ ಮಾರ್ಮಲೆತಾಗ, ನೀನು ಅವರ ಮೇಲೆ ಸೋಕುರೋಗವ್ಯಾಧಿಗಳನ್ನು ಕಳುಹಿಸಿದರೂ, ಮತ್ತೆ ನಿನ್ನ ಕರುಣೆಯನ್ನು ತೋರಿಸಿದಿ ಅಲ್ಲವೇ? ಹಾಗೆಯೇ ಅರಸನಾದ ದಾವೀದನ ದಿನಗಳಲ್ಲಿ ವಿಷಗಾಳಿಯಿಂದ ಎಪ್ಪತ್ತು ಸಾವಿರ ಜನರನ್ನು ಅಳಿಸಿ ದಂಡಿಸಿದರೂ, ಮತ್ತೆ ಅಂತಃಕರಣ ಪಟ್ಟು, ಮಿಕ್ಕಾದವರನ್ನು ಉಳಿಸಿದಿ

ಅಲ್ಲವೇ? ಹಾಗಾದರೆ ಈಗ ಮಹಾವ್ಯಾಧಿಗೂ ಭಯಂಕರ ಮರಣಕ್ಕೂ ಗುರಿಯಾದ ಬಡ ಪಾಪಿಗಳಾಗಿರುವ ನಮ್ಮನ್ನು ಸಹ ಕರುಣಿಸು! ನಿನ್ನ ನೇಮವನ್ನು ಮೀರಿದವರಾದ ನಮ್ಮ ಪಾಪಗಳನ್ನು ಇನ್ನೂ ನೆನಸದೆ, ಕ್ಷಮಿಸಿ, ನಮ್ಮನ್ನು ಕರುಣಿಸಿ ರಕ್ಷಿಸು! ಆ ಸರ್ತಿ ಅರ್ಪಣೆಯಾದ ಪ್ರಾಯಶ್ಚಿತ್ತಕ್ಕೆ ನೀನು ಮೆಚ್ಚಿ, ಮರಣದೂತನಿಗೆ ಸಂಹಾರವನ್ನು ನಿಲ್ಲಿಸಲಿಕ್ಕೆ ಅಪ್ಪಣೆ ಕೊಟ್ಟಂತೆ ಈಗ ಸಹ ಈ ಮಹಾ ವ್ಯಾಧಿಯನ್ನು ನಮ್ಮಿಂದ ತೊಲಗಿಸ ಬೇಕೆಂದು ನಮ್ಮೊಡೆಯನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿ ಕೊಳ್ಳುತ್ತೇವೆ. ಆಮೆನ್!

೭

ರೋಗಿಗಳಿಗೋಸ್ಕರ.

Für einen Kranken.

ಕರುಣಾಸಾಗರ ದೇವರೇ! ಒಬ್ಬರಿಗೋಸ್ಕರ ಒಬ್ಬರು ಬಿನ್ನಹ ಮಾಡಿರಿ ಎಂದು ನೀನು ನಿನ್ನ ವಾಕ್ಯದಲ್ಲಿ ನಮಗೆ ಹೇಳಿರಲಾಗಿ, ನಾವು ರೋಗದಲ್ಲಿ ಬಿದ್ದ(*)ಗೋಸ್ಕರ ಬಿನ್ನೈಸುತ್ತೇವೆ. ಅವನು(-ಳು -ರು) ತನ್ನ (ತಮ್ಮ) ಉಪದ್ರವನ್ನು ಕ್ರೈಸ್ತರಿಗೆ ತಕ್ಕ ತಾಳ್ಮೆಯಿಂದಲೂ ದೀನಭಾವದಿಂದಲೂ ಸೈರಿಸುವ ಹಾಗೆ ಪಾಪಿಗಳಿಗೆ ಕ್ರಿಸ್ತನಲ್ಲಿ ನಿತ್ಯ ರಕ್ಷಣೆಯನ್ನು ಉಂಟು ಮಾಡಿದಂಥ ನಿನ್ನ ಕೃಪೆಯ ಧ್ಯಾನವು ಅವನಿ(-ಳ-ರಿ)ಗೆ ತಪ್ಪದೆ ಇದ್ದು, ಆದರಣೆ ಬಲಗಳನ್ನು ಕೊಡಲಿ! ಮತ್ತು ಮೈಯಲ್ಲಿಯೂ ಮನದಲ್ಲಿಯೂ ವೇದನೆ ಪಡುವ ಇವನ(-ಳ-ರ)ನ್ನು ನೀನು ತಂದೆಯಂತೆ ಜೋಕೆ ಮಾಡುತ್ತಾ ವಿಶೇಷವಾದ ಸಹಾಯದಿಂದ ಸಂತೋಷ ಪಡಿಸುತ್ತಾ ಇರುವಲ್ಲಿ, ಎಲ್ಲವನ್ನೂ ಹೊಸದೂ ಒಳ್ಳೇದೂ ಆಗ ಮಾಡುತ್ತೇನೆಂದು ನೀನು ಕೊಟ್ಟ ಮಾತನ್ನು ಮುಟ್ಟಿಸೇ ಮುಟ್ಟಿಸುವಿ ಎಂಬ ನಂಬಿಕೆಯನ್ನು ದಯ ಪಾಲಿಸಿ, ಅವನ (-ಳ -ರ) ದಣುಗೊಂಡ ಪ್ರಾಣವನ್ನು ಸಂತೈಸಿ, ಬಲ ಪಡಿಸು! ಆಮೆನ್!

---

* ಈ ಗುರುತಿರುವಲ್ಲಿ ಜನರ ಸಂಖ್ಯೆಯನ್ನಾಗಲಿ ಹೆಸರನ್ನಾಗಲಿ ಶೇರಿಸ ತಕ್ಕದ್ದು.

೮

ರೋಗಾದಿ ಆಪತ್ತು ಪರಿಹಾರವಾದ್ದಕ್ಕೆ ಸ್ತೋತ್ರವು.

Dank für Errettung.

ನಮ್ಮ ದೇವರಾದ ಒಡೆಯನೇ! ನಿನ್ನ ಒಲುಮೆ ಎಷ್ಟೋ ಅಮೂಲ್ಯವಾದದು! ಆದದರಿಂದ ಮನುಜರು ನಿನ್ನ ರೆಕ್ಕೆಗಳ ನೆರಳಿನ ಮರೆ ಹೊಗುತ್ತಾರೆ. ಬಹಳ ಭಯ ಸಂಕಟ ನಮ್ಮನ್ನು ಮುತ್ತಿ ಕೊಂಡಿತು. ನಮಗೆ ಬಂದ ಕಷ್ಟದಲ್ಲಿ ನೀನು ನಮ್ಮನ್ನು ಕಾಪಾಡುತ್ತಿರದಿದ್ದರೆ, ನಾವು ಅದರಲ್ಲಿ ಮುಣಿಗಿ ಹೋಗುತ್ತಿದ್ದೆವು. ದಯಾಪರ ಒಡೆಯನೇ! ನಿನಗೆ ಸ್ತೋತ್ರವೂ ಮಾನವೂ ಮಹಿಮೆಯೂ ಆಗಲಿ! ಯಾಕಂದರೆ ನಿನ್ನ ಬಲವಾದ ಡಾಲು ನಮ್ಮನ್ನು ಮುಚ್ಚಿ ಕಾಪಾಡಿತು; ನಿನ್ನ ಪರಾಕ್ರಮದ ಕೈ ನಮ್ಮನ್ನು ರಕ್ಷಿಸಿತು. ನಮ್ಮ ಸಹಾಯವು ಸ್ವರ್ಗ ಪೃಥ್ವಿಗಳನ್ನು ನಿರ್ಮಿಸಿದ ಯೆಹೋವನ ಹೆಸರಿನಲ್ಲಿಯೇ! ನಮ್ಮ ದೇವರಾದ ಕರ್ತನೇ! ನಿನ್ನನ್ನು ಹೊಗಳುತ್ತೇವೆ. ಅದ್ಭುತಗಳನ್ನು ನಡಿಸುವಾತನು ನೀನೊಬ್ಬನೇ! ನಿನ್ನ ಪವಿತ್ರ ನಾಮವನ್ನು ಎಂದೆಂದಿಗೂ ಕೊಂಡಾಡುತ್ತೇವೆ. ಆಮೆನ್!

C. ಪರಿಶಿಷ್ಟವು. Beilage.

ಪ್ರಾರ್ಥನೆಯ ಕೂಟದಲ್ಲಿ ಹೇಳ ತಕ್ಕ ವಿಶೇಷ ವಿಜ್ಞಾಪನೆ.

Litanei für Betstunden.

(ಆರಂಭದ ಪ್ರಾರ್ಥನೆ.)

ಒಡೆಯಾ, ಕರುಣಿಸು!
ಕ್ರಿಸ್ತಾ, ಕರುಣಿಸು!
ಒಡೆಯಾ, ಕರುಣಿಸು!

ಸ್ವರ್ಗೀಯ ತಂದೆಯಾದ ದೇವರೇ! ಒಡೆಯಾ!
ಜಗದ್ರಕ್ಷಕನಾಗಿರುವ ಮಗನಾದ ದೇವರೇ! ಒಡೆಯಾ!

ಪವಿತ್ರಾತ್ಮನಾದ ದೇವರೇ! ಒಡೆಯಾ!
ನಮ್ಮನ್ನು ಕರುಣಿಸು! ನಮಗೆ ಕೃಪೆಯಾಗಿರು!
ಪ್ರಸನ್ನನಾಗಿ ನಮ್ಮನ್ನು ಉಳಿಸು, ಪ್ರಿಯ ಒಡೆಯಾ!
ಎಲ್ಲಾ ಪಾಪಕ್ಕೂ ಎಲ್ಲಾ ಭ್ರಮಣಕ್ಕೂ ಎಲ್ಲಾ ಕೇಡಿಗೂ
ನಮ್ಮನ್ನು ತಪ್ಪಿಸು, ಪ್ರಿಯ ಒಡೆಯಾ! ದೇವರೇ!
ಸೈತಾನನ ತಂತ್ರ ಕುಯುಕ್ತಿಗಳಿಗೂ
ಫಕ್ಕನೆ ಬರುವ ದುರ್ಮರಣಕ್ಕೂ
ಮಹಾವ್ಯಾಧಿ ಬರಗಳಿಗೂ
ಯುದ್ಧ ನರಹತ್ಯಗಳಿಗೂ
ಮಾರ್ಮಲೆ ಕಲಹಗಳಿಗೂ
ಸಿಡಿಲು ಬಿರುಗಾಳಿಗಳಿಗೂ
ಬೆಂಕಿ ನೀರು ಗಂಡಕ್ಕೂ
ನಮ್ಮನ್ನು ತಪ್ಪಿಸು, ಪ್ರಿಯ ಒಡೆಯಾ! ದೇವರೇ!
ನಿನ್ನ ವಾಕ್ಯದ ತಿರಸ್ಕಾರಕ್ಕೂ
ಹೃದಯದ ಕೊಬ್ಬು ಹಗೆ ಹೊಟ್ಟೆಕಿಚ್ಚುಗಳಿಗೂ
ಗರ್ವ ಡಂಭಾಚಾರ ಕಪಟಗಳಿಗೂ
ಪಾಪದ ಮರುಳಿಗೂ ನಿತ್ಯ ಮರಣಕ್ಕೂ
ನಮ್ಮನ್ನು ತಪ್ಪಿಸು, ಪ್ರಿಯ ಒಡೆಯಾ! ದೇವರೇ!
ನಿನ್ನ ಪವಿತ್ರ ಜನನದಿಂದಲೂ
ನಿನ್ನ ಬಡತನ ಬೇನೆಗಳಿಂದಲೂ
ನಿನಗಾದ ಶೋಧನೆಗಳಿಂದಲೂ
ನಿನ್ನ ಪ್ರಾಣದ ಎಲ್ಲಾ ದುಃಖ ಶೋಕಗಳಿಂದಲೂ
ನಿನ್ನ ಪ್ರಾಣಸಂಕಟದ ಹೋರಾಟದಿಂದಲೂ
ನಿನ್ನ ರಕ್ತದ ಬೆವರಿನಿಂದಲೂ
ನಿನಗಾದ ಬಂಧನ ಹಾಸ್ಯ ಪೆಟ್ಟುಗಳಿಂದಲೂ
ನಿನ್ನ ಕ್ರೂಜೆಯ ಶ್ರಮಗಳಿಂದಲೂ

ನಿನ್ನ ಅಮೂಲ್ಯ ಮರಣದಿಂದಲೂ
ನಿನ್ನ ಮಹಿಮೆಯುಳ್ಳ ಉತ್ಥಾನದಿಂದಲೂ
ನಿನ್ನ ಸ್ವರ್ಗಾರೋಹಣದಿಂದಲೂ
ಪವಿತ್ರಾತ್ಮದ ಆಗಮನದಿಂದಲೂ
ನಮ್ಮ ಸಮಸ್ತ ಕಷ್ಟದಲ್ಲಿಯೂ
ಕಡೇ ಸಂಕಟದಲ್ಲಿಯೂ
ನ್ಯಾಯತೀರ್ಪಿನಲ್ಲಿಯೂ
ನಮ್ಮನ್ನು ಸಲುಹಿ ರಕ್ಷಿಸು, ಪ್ರಿಯ ಒಡೆಯಾ! ದೇವರೇ!
ಒಡ ಪಾಪಿಗಳಾದ ನಮ್ಮ ಬಿನ್ನಹಗಳಿಗೆ ಕಿವಿ ಕೊಡು! ಪ್ರಿಯ ಒಡೆಯಾ! ದೇವರೇ!
ನಿನ್ನ ಪವಿತ್ರ ಕ್ರೈಸ್ತ ಸಭೆಯನ್ನು ಆಳಿ ಕೊಂಡು ನಡಿಸು!
ನಿನ್ನ ಹೆಸರು ಇಟ್ಟು ಕೊಂಡವರೆಲ್ಲರಿಗೂ ನಿನ್ನ ಕ್ರೂಜೆಯ ಮರ್ಮವನ್ನು ಪ್ರಕಟ ಮಾಡು!
ದೇವರ ಮಕ್ಕಳೆಲ್ಲರನ್ನೂ ಪವಿತ್ರಾತ್ಮದ ಸಂಸರ್ಗದಲ್ಲಿ ಒಂದಾಗ ಮಾಡು!
ನಿನ್ನ ಸಭೆಯ ಎಲ್ಲಾ ಪಾಲಕರನ್ನೂ ಸೇವಕರನ್ನೂ ಸ್ವಸ್ಥವಾಕ್ಯದಲ್ಲಿಯೂ ಪವಿತ್ರ ನಡತೆಯಲ್ಲಿಯೂ ನೆಲೆಗೊಳಿಸಿ ಕಾಪಾಡು!
ಎಲ್ಲಾ ಮತಭೇದಗಳಿಗೂ ಎಡತಡೆಗಳಿಗೂ ಅಡ್ಡ ಕಟ್ಟು!
ತಪ್ಪಿ ಹೋದವರನ್ನೂ ಮೋಸಗೊಂಡವರನ್ನೂ ನಿನ್ನ ಮಾರ್ಗಕ್ಕೆ ತಿರುಗಿಸಿ ತಾ!
ಸೈತಾನನನ್ನು ನಮ್ಮ ಅಡಿಗಳ ಕೆಳಗೆ ಹಾಕಿ ಜಜ್ಜು!
ನಿನ್ನ ಬೆಳೆಗೆ ನಂಬಿಕೆಯುಳ್ಳ ಆಳುಗಳನ್ನು ಕಳುಹಿಸು!
ಪವಿತ್ರ ವಾಕ್ಯದ ಪ್ರಸಂಗಕ್ಕೆ ನಿನ್ನ ಆತ್ಮವನ್ನೂ ಶಕ್ತಿಯನ್ನೂ ದಯ ಪಾಲಿಸು!
ಎಲ್ಲಾ ದುಃಖಾಕ್ರಾಂತರನ್ನೂ ಧೈರ್ಯ ತಪ್ಪಿದವರನ್ನೂ ಸಂತೈಸು!
ನಮಗೆ ಕಿವಿ ಕೊಡು, ಪ್ರಿಯ ಒಡೆಯಾ! ದೇವರೇ!

ಎಲ್ಲಾ ಜನಾಂಗಗಳ ಬೆಳಕೂ ಆದರಣೆಯೂ ಆಗಿರುವಾತನೇ!
ನಿನ್ನ ಸುವಾರ್ತಿಕರಿಗೆ ನೆಲದಲ್ಲೂ ಕಡಲಲ್ಲೂ ಆಶ್ರಯವಾಗಿರು!
ಅವರು ಸಾರುವ ವಾಕ್ಯಕ್ಕೆ ನಿನ್ನ ಆತ್ಮದ ಬೆಂಕಿಯನ್ನು ಕೂಡಿಸು!
ಜನಾಂಗಗಳೊಳಗಿಂದ ನಿನಗೆ ಕೂಡಿಸಿ ಕೊಂಡವರನ್ನು ಕಾಯು!
ಉಳಿದ ಜನಾಂಗಗಳಿಗೆ ನಿನ್ನ ಮಹಿಮೆಯನ್ನು ತೋರಿಸು!
ನಿನ್ನ ಪ್ರಜೆಯಾದ ಇಸ್ರಯೇಲಿನ ಕುರುಡತನವನ್ನು ನಿವಾರಿಸು!
ಇಷ್ಮಯೇಲನು ಸಹ ನಿನ್ನ ಮುಂದೆ ಬದುಕಲಿ!
ನಮಗೆ ಕಿವಿ ಕೊಡು, ಪ್ರಿಯ ಒಡೆಯಾ! ದೇವರೇ!

ಎಲ್ಲಾ ಭೂಪತಿಗಳಲ್ಲಿ ಸಲಿಗೆಯನ್ನೂ ಒಕ್ಕಟ್ಟನ್ನೂ ಉಂಟು ಮಾಡು!
ಕೈಸರನ(-ಳ)ನ್ನೂ ಆತನ (ಆಕೆಯ) ಮನೆಯನ್ನೂ ಪ್ರಧಾನಿ ಮಂತ್ರಿ ಮೊದಲಾದ ಉದ್ಯೋಗಸ್ಥರೆಲ್ಲರನ್ನೂ ನಡಿಸಿ ಸಲುಹು!
ನಮ್ಮ ಸೀಮೆ ನಾಡು ಊರು ಸಭೆಗಳನ್ನೂ ಹಿರೆಕೂಟಗಳನ್ನೂ ದೇವಾಲಯ ಶಾಲೆಗಳನ್ನೂ ಗಂಡ ಹೆಂಡರನ್ನೂ ಮಕ್ಕಳು ಮರಿಗಳನ್ನೂ ಆಶೀರ್ವದಿಸಿ ಸಲುಹು!
ನಮಗೆ ಕಿವಿ ಕೊಡು, ಪ್ರಿಯ ಒಡೆಯಾ! ದೇವರೇ!

ಇಕ್ಕಟ್ಟು ಬಿದ್ದವರಿಗೂ ಗಂಡಾಂತರದಲ್ಲಿರುವವರಿಗೂ ಉಪದ್ರವ ಪಡುವವರಿಗೂ ಸಹಾಯಕನಾಗು!
ಎಲ್ಲಾ ಬಸುರಿಗಳನ್ನೂ ಹೆರುವವರನ್ನೂ ಮೊಲೆ ಉಣ್ಣಿಸುವವರನ್ನೂ ಅನುಗ್ರಹಿಸಿ, ವೃದ್ಧಿಯನ್ನು ಕೊಟ್ಟು, ಎಲ್ಲಾ ಕೂಸುಗಳನ್ನು ಜೋಪಾನ ಮಾಡಿ, ರೋಗಿಗಳನ್ನು ಸಾಕಿ ಸಲುಹು!
ಎಲ್ಲಾ ಮೈಗುಂದಿದವರನ್ನೂ ಮುಪ್ಪಾದವರನ್ನೂ ಎತ್ತಿ, ಹೊತ್ತು, ಆರೈಕೆ ಮಾಡು!
ನಿರಪರಾಧಿಗಳಾಗಿ ಶೆರೆಯಲ್ಲಿ ಬಿದ್ದವರೆಲ್ಲರನ್ನು ಬಿಡುಗಡೆ ಮಾಡು!
ಎಲ್ಲಾ ವಿಧವೆಯವರನ್ನೂ ತಂದೆ ತಾಯಿ ಇಲ್ಲದ ಮಕ್ಕಳನ್ನೂ ಎಲ್ಲಾ ಬಡವರನ್ನೂ ದಿಕ್ಕಿಲ್ಲದವರನ್ನೂ ಜೋಕೆ ಮಾಡಿ ಕಾಪಾಡು!

ಪ್ರಯಾಣಸ್ಥರನ್ನು ಎಲ್ಲಾ ಕಂಟಕಕ್ಕೆ ತಪ್ಪಿಸು!
ಎಲ್ಲಾ ಮನುಷ್ಯರನ್ನು ಕರುಣಿಸು!
ನಮಗೆ ಕಿವಿ ಕೊಡು, ಪ್ರಿಯ ಒಡೆಯಾ! ದೇವರೇ!
ನಮ್ಮ ಹಗೆಗಾರರನ್ನೂ ನಮ್ಮನ್ನು ಹಿಂಸಿಸುವವರನ್ನೂ ದೂಷಿಸುವವರನ್ನೂ ನೀನು ಕ್ಷಮಿಸಿ, ಮಾನಸಾಂತರ ಪಡಿಸು!
ಭೂಮಿಯ ಫಲಗಳನ್ನು ಬೆಳೆಯ ಮಾಡಿ, ಕಾಪಾಡು!
ನಮ್ಮ ಕೈಯ ಕೆಲಸವನ್ನು ಸಾಗಿಸು!
ನಮಗೆ ಕಿವಿ ಕೊಡು, ಪ್ರಿಯ ಒಡೆಯಾ! ದೇವರೇ!
ದೇವರ ಮಗನಾದ ಯೇಸು ಕ್ರಿಸ್ತನೇ! ನಮ್ಮನ್ನು ಕರುಣಿಸು!
ಲೋಕದ ಪಾಪವನ್ನು ಹೊತ್ತು ಕೊಂಡು ಹೋದ ದೇವರ ಕುರಿಮರಿಯೇ! ನಮ್ಮ ಮೇಲೆ ಕನಿಕರ ಇಡು!
ಲೋಕದ ಪಾಪವನ್ನು ಹೊತ್ತು ಕೊಂಡು ಹೋದ ದೇವರ ಕುರಿಮರಿಯೇ! ನಮಗೆ ನಿನ್ನ ಸಮಾಧಾನವನ್ನು ದಯ ಪಾಲಿಸು!
ಕ್ರಿಸ್ತಾ, ನಮ್ಮನ್ನು ಆಲೈಸು!
ಒಡೆಯಾ, ನಮ್ಮ ಮೇಲೆ ಕರುಣೆ ಇಡು! ಆಮೆನ್!

ಅಥವಾ oder

ಯೆಹೋವಾ! ದೇವರಾದ ಯೆಹೋವಾ! ಕರುಣಾಳು ದಯಾಳುವೇ! ದೀರ್ಘಶಾಂತಿಯೂ ಮಹಾ ಕೃಪೆಯೂ ಸತ್ಯವೂ ಉಳ್ಳಾತನೇ! ಸಾವಿರ ಸಾವಿರಗಳಿಗೆ ಕೃಪೆಯನ್ನು ಕೈಕೊಂಡು ಕೊಡುವಾತನೇ! ಅನ್ಯಾಯವನ್ನೂ ಅತಿಕ್ರಮವನ್ನೂ ಪಾಪವನ್ನೂ ಕ್ಷಮಿಸಿ ಬಿಡುವಾತನೇ! ಪಾಪಿಯ ಅಪರಾಧವನ್ನು ಹ್ಯಾಗೂ ವಿಚಾರಿಸದಿರದಂಥಾತನೇ! ಅಪರಾಧಿಗಳಿಗೆ ಆಜ್ಞೆ ನಿರ್ಣಯ ಮಾಡುವಾತನೇ! ನಾವು ನಿನ್ನ ಪವಿತ್ರ ಮುಖದ ಮುಂದೆ ಬಂದು, ಘನ ಸ್ತುತಿಗಳನ್ನೂ ಕೃತಜ್ಞಾಪನೆಗಳನ್ನೂ ಅರ್ಪಿಸುತ್ತೇವೆ. ಯಾಕಂದರೆ ನೀನು ಇಂದಿನ ವರೆಗೂ ದೇಹಾತ್ಮಗಳ ಸಂಬಂಧವಾದ ಆಶೀರ್ವಾದವನ್ನು ಹೇರಳವಾಗಿ ನಮ್ಮ ಮೇಲೆ ಸುರಿಸಿದ್ಧೀ.

ನಾನಾ ತರದ ಉಪದ್ರವಗಳಿಂದ ನಮ್ಮನ್ನು ಬಿಡಿಸಿ, ನಮಗೆ ಲೆಕ್ಕವಿಲ್ಲದ ಉಪಕಾರ ಮಾಡುತ್ತಾ ಬಂದಿದ್ದೀ. ನಮ್ಮೊಡೆಯನೇ! ನೀನು ಅನುದಿನ ನಮಗೆ ತೋರಿಸುವ ಎಲ್ಲಾ ಕರುಣೆಗೂ ಎಲ್ಲಾ ನಂಬಿಕೆಗೂ ನಾವು ಒಂದಿಷ್ಟಾದರೂ ತಕ್ಕವರಲ್ಲ. ನಾವು ಅಳಿದು ಹೋಗದೆ ಉಳಿದಿರುವದಕ್ಕೆ ನಿನ್ನ ದಯವೇ ಕಾರಣ! ನಿನ್ನ ಕರುಣೆ ಮುಗಿದು ಹೋಗುವದಿಲ್ಲ. ಅದು ಹೊತ್ತಾರೆ ಹೊತ್ತಾರೆ ಹೊಸತಾಗಿ ಮೂಡುತ್ತದೆ. ತಂದೆಯೇ! ನಿನ್ನ ಸತ್ಯತ್ವವು ದೊಡ್ಡದು! ಹ್ಯಾಗಂದರೆ ಇಂದಿನ ವರೆಗೂ ನಾವು ನಮ್ಮನ್ನು ತಿದ್ದಿ ಕೊಳ್ಳದೆ, ನಿನಗೆ, ಓ ನೀತಿಯುಳ್ಳ ದೇವರೇ! ಪೂರ್ಣ ತಿಳಿದಿರುವಂಥಾ, ನಾವು ಹ್ಯಾಗೂ ಅಲ್ಲಗಳೆಯಲಾರದಂಥಾ, ಘೋರ ಪಾಪಗಳಿಂದ ನಿನ್ನ ಕೋಪದ ಉರಿಯನ್ನು ಹೊತ್ತಿಸುತ್ತಾ ಬಂದಿದ್ದರೂ, ನೀನು ತಂದೆಯ ತಾಳ್ಮೆಗಿಂತಲೂ ಮಿಗಿಲಾದ ತಾಳ್ಮೆಯಿಂದ ನಮ್ಮನ್ನು ಸೈರಿಸಿ, ಉಳಿಸಿದ್ದೀ. ಫಲ ಫಲಿಸದ ಮರಗಳ ಬುಡಕ್ಕೆ ನೀನು ಕೊಡಲಿ ಮೊದಲೇ ಇಟ್ಟಿದ್ದರೂ, ಯೇಸು ಕ್ರಿಸ್ತನು ನಮಗಾಗಿ ಅರ್ಪಿಸಿದ ಬಿನ್ನಹವನ್ನು ನೀನು ನೆನಸಿ ಕೊಂಡು, ನಾವು ಒಂದು ವೇಳೆ ನಿನ್ನ ದಯವನ್ನೂ ದೀರ್ಘಶಾಂತಿಯನ್ನೂ ಮನಸ್ಸಿಗೆ ತಂದು ಕೊಂಡು, ಪಶ್ಚಾತ್ತಾಪ ಪಟ್ಟು, ಹೊಸಬರಾಗಿ, ಒಳ್ಳೇ ಫಲಗಳನ್ನು ಕೊಟ್ಟೇವೋ ಏನೋ? ಎಂದು ನೋಡುವದಕ್ಕಾಗಿ ನಮ್ಮನ್ನು ಕಡಿದು ಬಿಡದೆ, ನಿಲ್ಲಗೊಟ್ಟಿದ್ದೀ.

ಸ್ವರ್ಗೀಯ ಪ್ರಿಯ ತಂದೆಯೇ! ಪುಣ್ಯವೂ ಯೋಗ್ಯತೆಯೂ ಇಲ್ಲದವರಾದ ನಮಗೆ ನೀನು ಮಾಡಿದಂಥಾ ಉಪಕಾರವೆಲ್ಲಾ ಬರೇ ದಯವೇ ಎಂದು ನಾವು ಚನ್ನಾಗಿ ತಿಳಿದು ಕೊಂಡು, ಎಡೆಬಿಡದೆ ಅರಿಯುವವರಾಗಿದ್ದು, ಎಂದೂ ಹ್ಯಾಗೂ ನಿನ್ನ ಮಹಾ ಕರುಣೆಯನ್ನು ಒದ್ದು ಬಿಡದೆ, ದೇಹಾತ್ಮಗಳಿಗೆ ನೀನು ಕೊಡಲಿಕ್ಕಿರುವ ಆಶೀರ್ವಾದಗಳಿಗೆ ಅಪಾತ್ರರಾಗದೆ, ಮನಸ್ಸಾಕ್ಷಿಗೆ ಎಂದೂ ಎದುರಿಸದೆ, ಪವಿತ್ರಭಾವವನ್ನು ಪಡಕೊಳ್ಳ ಬೇಕೆಂದು ಎಡೆಬಿಡದೆ ಆಸಕ್ತಿ ಪಟ್ಟು, ಕಡೇ ವರೆಗೂ ಸದ್ವಿಶ್ವಾಸದಿಂದ ನಿನ್ನ ಕೃಪೆಯಲ್ಲಿ ನೆಲೆಗೊಂಡಿರುವಂತೆ ನಮಗೆ ಸಹಾಯ ಮಾಡು! ನಮ್ಮಲ್ಲಿ ಯಾರಾದರೂ ಎಂದಾದರೂ ತಿಳಿದು, ಬೇಕೆಂದು, ಪಾಪ ಮಾಡುವಂಥ

ಅಪರಾಧಿಯಾಗದೆ ಇರಲಿ! ನಾವು ನಿನಗೆ, ಪವಿತ್ರ ತಂದೆಯೇ! ಸರಿ ಬೀಳದಂಥಾದ್ದು ಎಲ್ಲವನ್ನೂ ಮನಃಪೂರ್ವಕವಾಗಿ ಬಿಟ್ಟೇ ಬಿಟ್ಟು, ನಿನ್ನ ಸಲಿಗೆಯಲ್ಲಿಯೂ ಸಮಾಧಾನದಲ್ಲಿಯೂ ಇದ್ದೇವೆಂಬ ಸಾಕ್ಷಿಯನ್ನು ನಮ್ಮ ಅಂತರ್ಯದಲ್ಲಿ ಹೊಂದಿ, ಯಾತರಿಂದಲೂ ತಪ್ಪದಂತೆ ನೋಡಿ ಕೊಳ್ಳುವ ಹಾಗೆ ನಮ್ಮೆಲ್ಲರಲ್ಲಿ ಕಪಟವಿಲ್ಲದ ಮಾನಸಾಂತರವನ್ನು ಉಂಟು ಮಾಡು! ನಿನ್ನ ಕೃಪೆಯನ್ನೂ ಇದರಿಂದ ಆತ್ಮ ದೇಹಗಳಿಗೆ ಬರುವ ಒಳ್ಳೇ ವರಗಳನ್ನೂ ಅಪಹರಿಸುವಂಥಾ ಎಲ್ಲಾ ಎಡತಡೆಗಳನ್ನು ಸರ್ವಶಕ್ತನಾದ ನೀನೇ ಹೋಗಲಾಡಿಸು!

ನಮ್ಮ ಕೈಸರನ(-ಳ)ನ್ನೂ ಅಧಿಪತಿಗಳನ್ನೂ ಅಧಿಕಾರಿಗಳನ್ನೂ ಆಶೀರ್ವದಿಸು! ನಿನ್ನ ಸಮಾಧಾನದ ಸುವಾರ್ತೆಯನ್ನು ಪವಿತ್ರಾತ್ಮದ ಬಲದಿಂದ ಅಚ್ಛಾಗಿ ಸಾರುವವರೂ ನಿನ್ನ ಮೆಚ್ಚಿಗೆಯುಳ್ಳ ಪಾಲಕರೂ ಆದಂಥ ಬೋಧಕರನ್ನು ನಮ್ಮ ಸಭೆಗಳಿಗೆ ಕೊಟ್ಟು ಕಾಪಾಡು! ಶಾಲೆಗಳಲ್ಲಿಯೂ ಮನೆಗಳಲ್ಲಿಯೂ ಬಾಲಕರನ್ನು ಸಾಕಿ ಕಲಿಸುವವರನ್ನು ಆಶೀರ್ವದಿಸು! ಬಹಳ ಜೋಕೆಯಿಂದ ಮಾಡ ತಕ್ಕ ಈ ಪ್ರಯಾಸದ ಕೆಲಸವನ್ನು ನಡಿಸುವವರೆಲ್ಲರಿಗೂ ಬುದ್ಧಿಯನ್ನೂ ನಂಬಿಕೆಯನ್ನೂ ತಾಳ್ಮೆಯನ್ನೂ ದಯ ಪಾಲಿಸು! ಚಿಕ್ಕವರನ್ನು ಪ್ರಪಂಚದ ಎಲ್ಲಾ ತರದ ಶೋಧನೆ ಎಡತಡೆಗಳಿಗೆ ತಪ್ಪಿಸಿ, ರಕ್ಷಿಸು!

ಎಲ್ಲಾ ಕಡೆಯಲ್ಲಿ ಗೃಹರಾಜ್ಯಕಾರ್ಯಗಳಲ್ಲಿಯೂ ಸಭಾಕಾರ್ಯಗಳಲ್ಲಿಯೂ ಸಕಲ ಸ್ಥಿತಿಗತಿಗಳಲ್ಲಿಯೂ ನಿನ್ನವರಿಗೆ ಸಮಾಧಾನವನ್ನು ಉಂಟು ಮಾಡಿ ಕೊಡು! ಸಭಾಭೇದಗಳಿಗೆಲ್ಲಾ ಅಡ್ಡ ಕಟ್ಟು! ನಿನ್ನ ಸಭೆಯನ್ನು ಭೂಮಂಡಲದಲ್ಲೆಲ್ಲಾ ಹಬ್ಬಿಸುತ್ತಾ ಇರು! ಅದರ ಹಗೆಗಾರರು ಬಗೆಯುವ ಮೋಸದ ಸಂಚು ಕುಯುಕ್ತಿಗಳನ್ನು ಹಿಮ್ಮೆಟ್ಟಿಸು! ನಿನ್ನ ಉಪಕಾರಗಳನ್ನು ತಕ್ಕಂತೆ ಅರಿಯದೆ, ಒಳ್ಳೇದರಲ್ಲಿ ಆಲಸ್ಯಗಾರರಾಗಿರುವ ನಮಗೆ ಬೇಸರ ಪಡದೆ, ನಮಗೆ ಒಪ್ಪಿಸಿದ ಪ್ರಿಯವಾದ ಸುವಾರ್ತೆಯ ಸತ್ಯವನ್ನು ನಮ್ಮಲ್ಲಿಂದ ಹಿಂದೆಗೆಯದೆ, ನಿನ್ನ ಮನಸ್ಸಿನ ಪ್ರಕಾರವೇ ನಮ್ಮನ್ನು ತಿದ್ದು! ನಮ್ಮನ್ನೂ ನಮ್ಮ ಮಕ್ಕಳನ್ನೂ ನಿನ್ನ ಒಡಂಬ

ಡಿಕೆಯ ಬಾಧ್ಯತೆಯಲ್ಲಿ ಶೇರಿಸು! ಎಂದೆಂದಿಗೂ ನಿನ್ನ ಹೆಸರು ನಮ್ಮಲ್ಲಿ ಮಹಿಮೆಯುಳ್ಳದಾಗಿರಲಿ! ನಮ್ಮ ವಿಶ್ವಾಸಾರ್ಥದ ಸತ್ಯದಲ್ಲಿ ಪಾಲುಗಾರರಾಗಿ, ಅದರ ನಿಮಿತ್ತ ಕಂಟಕದಲ್ಲಿಯೂ ಇಕ್ಕಟ್ಟಿನಲ್ಲಿಯೂ ಇರುವವರನ್ನು ಕನಿಕರಿಸಿ, ಅವರ ಆಶ್ರಯವೂ ಆಲೋಚನಾಕರ್ತನೂ ಸಹಾಯಕನೂ ರಕ್ಷಕನೂ ಆಗಿರು! ಮತ್ತು ನಾವು ಅವರನ್ನು ನಮ್ಮವರೇ ನಮ್ಮ ಸಭಾಂಗಗಳೇ ಎಂದು ನಮ್ಮ ಸಕಲ ಪ್ರಾರ್ಥನೆಗಳಲ್ಲಿ ನೆನಪು ಮಾಡುತ್ತಾ, ನಮ್ಮನ್ನು ನಾವೇ ಅಲ್ಲಗಳೆದು, ದುಷ್ಕಾಲಕ್ಕೆ ಸಿದ್ಧ ಮಾಡಿ ಕೊಳ್ಳುತ್ತಾ ಇರುವ ಹಾಗೆ ನಮಗೆ ಬುದ್ಧಿ ಕೊಡು! ಮುಖ್ಯವಾಗಿ ನೀನು ಸ್ನಾನದಲ್ಲಿ ನಮ್ಮೊಡನೆ ಮಾಡಿದ ಸಮಾಧಾನದ ಒಡಂಬಡಿಕೆಯನ್ನು ನಾವು ಜಾಗ್ರತೆಯಾಗಿ ಕೈಕೊಂಡಿರುವ ಹಾಗೆಯೂ, ನಿನ್ನ ಕೃಪಾಕರಣಗಳಾದ ವಾಕ್ಯ ಸ್ನಾನ ರಾತ್ರಿಭೋಜನಗಳನ್ನು ಕಪಟದಿಂದ ಪ್ರಯೋಗಿಸುವ ದ್ರೋಹವನ್ನು ಮಾಡದ ಹಾಗೆಯೂ, ನಿನ್ನ ಆತ್ಮದಿಂದ ನಮ್ಮನ್ನು ಎಚ್ಚರಿಸುತ್ತಿರು!

ನಮ್ಮ ಬದುಕು ಬಾಳಿಗೆ ಬೇಕಾದ್ದು ನಮಗೆ ದೊರಕುವಂತೆ ನಮ್ಮ ಸೀಮೆಯ ಮೇಲೆ ಸಾರ ಸುರಿಸಿ, ನಮ್ಮನ್ನು ಆಶೀರ್ವದಿಸು! ಎಲ್ಲರು ತಮ್ಮ ತಮ್ಮ ಕೆಲಸವನ್ನು ನೀತಿಯಲ್ಲಿ ನಡಿಸಿ, ಬಡವರಿಗೆ ದಾನ ಧರ್ಮ ಕೊಡುವದಕ್ಕೆ ಸಹ ಶಕ್ತರಾಗುವ ಹಾಗೆ ಕೃಷಿಕ ಪಂಚಾಳ ವರ್ತಕ ಮುಂತಾದವರ ಆರಂಬ ವ್ಯಾಪಾರ ವೃತ್ತಿಗಳನ್ನೂ ಉದ್ಯೋಗಿಗಳ ಉದ್ಯೋಗವನ್ನೂ ಆಶೀರ್ವದಿಸಿ, ಸಫಲವಾಗಿರಿಸು! ಬರವನ್ನೂ ಕಾಳಗ ಕಲಹಗಳನ್ನೂ ಬೆಂಕಿ ನೀರುಗಳ ದೆಶೆಯ ಆಪತ್ತುಗಳನ್ನೂ ಮನುಷ್ಯರಿಗೂ ಪಶುಗಳಿಗೂ ಹತ್ತುವ ರೋಗ ವ್ಯಾಧಿಗಳನ್ನೂ ನಿವಾರಿಸು! ನಮ್ಮನ್ನು ನಿನ್ನ ಆಜ್ಞೆನಿರ್ಣಯಕ್ಕೂ ದಂಡನೆಗೂ ಗುರಿಯಾಗ ಮಾಡುವ ನಮ್ಮ ಪಾಪ ಅಪರಾಧಗಳನ್ನೆಲ್ಲಾ ನಿನ್ನ ಮಗನಾದ ಯೇಸು ಕ್ರಿಸ್ತನ ಮುಖ ನೋಡಿ ಕ್ಷಮಿಸಿ, ನಮ್ಮ ಎಲ್ಲಾ ತಾಪ ಶ್ರಮಗಳಿಂದ ನಮ್ಮಲ್ಲಿ ಮಾನಸಾಂತರವನ್ನೂ ಸದ್ಭಕ್ತಿಯ ನಡತೆಯನ್ನೂ ಹುಟ್ಟಿಸು!

ನಮ್ಮ ಹಗೆಗಾರರಿಗೂ ಹಿಂಸಕರಿಗೂ ಪಾಪಗಳನ್ನು ಮನ್ನಿಸಿ, ಮಾನಸಾಂತರ ಪಡುವಂತೆ ದಯ ಪಾಲಿಸು! ಭೂಮಿಯ ಕೋಟಿ ಕೋಟಿ

ಬಡ ಪಾಪಿಗಳನ್ನು ಶೆರೆ ಹಿಡಿದಿರುವ ಅಂಧಕಾರದ ಬಂಧಗಳನ್ನು ಹರಿದು ಬಿಡು! ಕೆಡಕರ ಕೆಟ್ಟತನವನ್ನು ನಿಲ್ಲಿಸಿ, ನೀತಿವಂತರ ಪ್ರಯತ್ನಗಳನ್ನು ಸಾಗಿಸು! ಒಡೆಯಾ! ಭಕ್ತಜನರನ್ನು ಕಾಪಾಡಿ ಸಲುಹು! ನಿನ್ನ ಮಾರ್ಗದಿಂದ ತೊಲಗಿ, ಸೊಟ್ಟ ಹಾದಿಗಳಲ್ಲಿ ಶೇರಿದವರನ್ನು ಹಿಂದಿರುಗಿಸಿ, ಮಾನಸಾಂತರ ಪಡಿಸಿ, ಅವರಿಗೂ ನಮ್ಮೆಲ್ಲರಿಗೂ ನಿನ್ನ ಸಮಾಧಾನವನ್ನು ಕೊಡು! ಸ್ವಸ್ಥಳದಲ್ಲಿಯಾಗಲಿ ಪರಸ್ಥಳದಲ್ಲಿಯಾಗಲಿ ಇರುವವರೆಲ್ಲರನ್ನೂ ಕಾಪಾಡಿ, ಅವರವರಿಗೆ ಆಶ್ರಯದಾಯಕನಾಗಿರು! ಕಷ್ಟಪಡುವವರೆಲ್ಲರನ್ನೂ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ತಂದೆ ತಾಯಿ ಇಲ್ಲದ ಮಕ್ಕಳನ್ನೂ ಬಡವರನ್ನೂ ರೋಗಿಗಳನ್ನೂ ದುರವಸ್ಥೆಯಲ್ಲಿರುವವರನ್ನೂ ಸಾಯುವವರನ್ನೂ ವಿಲೋಭನ ವಿಘ್ನ ನಿರಾಶೆಗಳಿಗೆ ಗುರಿಯಾದವರನ್ನೂ ಕನಿಕರಿಸಿ, ಅವರನ್ನೂ ನಮ್ಮೆಲ್ಲರನ್ನೂ ಸದ್ವಿಶ್ವಾಸದಲ್ಲಿ ನೆಲೆಗೊಂಡವರೂ ಪ್ರೀತಿಯಲ್ಲಿ ಉರಿಯುವವರೂ ಪ್ರತೀಕ್ಷೆಯಲ್ಲಿ ಅದರದವರೂ ಪ್ರಾರ್ಥನೆಯಲ್ಲಿ ಭಕ್ತ್ಯಾಸಕ್ತಿಯುಳ್ಳವರೂ ಶ್ರಮೆಗಳಲ್ಲಿ ಭರವಸವುಳ್ಳವರೂ ಶೋಧನೆಗಳಲ್ಲಿ ಸ್ಥಿರರೂ ಪಾಪಕ್ಕೆ ವಿರೋಧವಾದ ಹೋರಾಟದಲ್ಲಿ ಬಲಾಢ್ಯರೂ ಸ್ವರ್ಗೀಯ ಕಿರೀಟವನ್ನು ಸಂಪಾದಿಸುವದಕ್ಕೆ ಆತುರ ಉಳ್ಳವರೂ ವಿಶ್ವಾಸವನ್ನೂ ಭಕ್ತಿಯನ್ನೂ ಕೈಕೊಂಡು ನಡಿಯುವದಕ್ಕೆ ಸತ್ಯವಂತರೂ ನಂಬಿಗಸ್ತರೂ ಆಗಿರ ಮಾಡು!

ಮನುಷ್ಯರೆಲ್ಲರನ್ನು ಕರುಣಿಸು! ಮತ್ತು ನಿನ್ನ ಪ್ರಜೆಗೆ ಕಡೇ ಗುರಿಯಾಗಿ ಇಟ್ಟಿರುವ ವಿಶ್ರಾಂತಿಯಲ್ಲಿ ನಾವು ಪ್ರವೇಶಿಸ ಜಾಗ್ರುತೆ ಪಟ್ಟು, ನಮ್ಮಲ್ಲಿ ಯಾರಾದರೂ ಹಿಂದುಳಿಯದೆ, ನಾವು ಎಚ್ಚತ್ತರೂ ನಿದ್ರೆಗೈದರೂ, ಬದುಕಿದರೂ ಸತ್ತರೂ, ನಿನ್ನವರಾಗಿರುವ ಹಾಗೆ ನಿನ್ನ ಪವಿತ್ರಾತ್ಮವನ್ನು ನಮಗೆ ದಯ ಪಾಲಿಸ ಬೇಕೆಂದು ಒಬ್ಬನೇ ರಕ್ಷಕನೂ ಮಧ್ಯವರ್ತಿಯೂ ಕಾರ್ಯಕರ್ತನೂ ಸಮಾಧಾನದ ರಾಜನೂ ಆಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿ ಕೊಳ್ಳುತ್ತೇವೆ. ಆಮೆನ್!

(ಅಂತದಪ್ರಾರ್ಥನೆ.)

ಸರ್ವಶಕ್ತ ದೇವರೇ! ಒಂದೇ ಮನಸ್ಸಿನಿಂದ ಈ ಕಾಲದಲ್ಲಿ ನಮ್ಮ ಬಿನ್ನಹಗಳನ್ನು ನಿನಗೆ ಅರಿಕೆ ಮಾಡುವದಕ್ಕೆ ನಮಗೆ ಕೃಪೆ ಕೊಟ್ಟೆ. ಇಬ್ಬರಾಗಲಿ ಮೂವರಾಗಲಿ ನನ್ನ ಹೆಸರಿನಲ್ಲಿ ಕೂಡಿ ಪ್ರಾರ್ಥನೆ ಮಾಡಿದರೆ, ಸ್ವರ್ಗದಲ್ಲಿರುವ ನನ್ನ ತಂದೆ ಅವರ ಪ್ರಾರ್ಥನೆಯನ್ನು ಕೇಳುವನು ಎಂದು ನಿನ್ನ ಮಗನಾದ ಯೇಸು ಕ್ರಿಸ್ತನು ವಾಗ್ದತ್ತ ಮಾಡಿದ ಮೇರೆಗೆ ಈಗ, ನಮ್ಮೊಡೆಯನೇ! ನಿನ್ನಾಳುಗಳ ಬಿನ್ನಹಗಳನ್ನು ಕೇಳಿ, ನಿನ್ನ ಚಿತ್ತಕ್ಕೂ ನಮ್ಮ ಹಿತಕ್ಕೂ ಸರಿ ಬೀಳುವಂತೆ ಇಹದಲ್ಲಿ ನಿನ್ನ ಸತ್ಯದ ತಿಳುವಿಕೆಯನ್ನೂ ಪರದಲ್ಲಿ ನಿತ್ಯಜೀವವನ್ನೂ ನಮಗೆ ದಯ ಪಾಲಿಸು! ಆಮೆನ್!

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಸೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ನಮ್ಮ ಒಡೆಯನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮದ ಅನ್ಯೋನ್ಯವೂ ನಿಮ್ಮೆಲ್ಲರ ಸಂಗಡ ಇರಲಿ! ಆಮೆನ್!

B.

ಸಂಸ್ಕಾರಗಳು.

Handlungen.

B.

ಸಂಸ್ಕಾರಗಳು.

Handlungen.

I. ಸ್ನಾನವು. Taufe.

1. ಶಿಶುಸ್ನಾನವು.

Kindertaufe in der Gemeinde.

ನಮ್ಮ ಒಡೆಯನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮದ ಅನ್ಯೋನ್ಯವೂ ನಿಮ್ಮೆಲ್ಲರ ಸಂಗಡ ಇರಲಿ! ಆಮೆನ್!

ಒಡೆಯನಲ್ಲಿ ಪ್ರಿಯರೇ! ನಿಮ್ಮ ಕೂಸು/ಕೂಸುಗಳು ನಮ್ಮ ಪ್ರಾರ್ಥನೆಯಿಂದ ದೇವರಿಗೆ ಸಮರ್ಪಿತವಾಗಿ, ನಮ್ಮ ಯೇಸು ಕ್ರಿಸ್ತ ಒಡೆಯನ ಅಪ್ಪಣೆಯ ಮೇರೆಗೆ ಸ್ನಾನ ಹೊಂದ ಬೇಕೆಂತ ಅದನ್ನು/ಅವನ್ನು ಇಲ್ಲಿಗೆ ತಂದಿದ್ಧೀರಿ.

ಹೀಗಿರಲಾಗಿ ನಮ್ಮ ಕ್ರಿಸ್ತ ಒಡೆಯನು ಸ್ನಾನದ ವಿಷಯದಲ್ಲಿ ತನ್ನ ಅಪೊಸ್ತಲರಿಗೆ ಕೊಟ್ಟ ಆಜ್ಞೆಯನ್ನೂ ವಾಗ್ದಾನವನ್ನೂ ಕೇಳಿರಿ.

ಮತ್ಥಾಯನ ಸುವಾರ್ತೆಯ ೨೮ನೇ ಸಂಧಿಯಲ್ಲಿ ಯೇಸು ಕ್ರಿಸ್ತನು ಹೇಳಿರುವದೇನಂದರೆ: ಸ್ವರ್ಗದಲ್ಲಿಯೂ ಪೃಥ್ವಿಯಲ್ಲಿಯೂ ಸರ್ವಾಧಿಕಾರವು ನನಗೆ ಕೊಟ್ಟದೆ. ಆದದರಿಂದ ನೀವು ಈಗ ಹೊರಟು ಹೋಗಿ, ತಂದೆಯ ಮತ್ತು ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿ, ಎಲ್ಲಾ ಜನಾಂಗಗಳನ್ನು ನನ್ನ ಶಿಷ್ಯಮಂಡಲಿಯಲ್ಲಿ

ಶೇರಿಸಿರಿ! ಮತ್ತು, ಇಗೋ, ಈ ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸಗಳಲ್ಲಿಯೂ ನಾನು ನಿಮ್ಮ ಸಂಗಡ ಇದ್ಧೇನೆ.

ಮತ್ತು ಮಾರ್ಕನ ೧೬ನೇ ಸಂಧಿಯಲ್ಲಿ ಒಡೆಯನು ಹೇಳಿರುವದೇನಂದರೆ: ವಿಶ್ವಾಸಿಸಿ ಸ್ನಾನ ಹೊಂದಿದವನು ರಕ್ಷಿಸಲ್ಪಡುವನು; ಆದರೆ ವಿಶ್ವಾಸಿಸದವನು ನ್ಯಾಯತೀರ್ಪಿಗೊಳಗಾಗುವನು.

ಆದರೆ ನಾವು ಈ ಕೂಸನ್ನು/ಕೂಸುಗಳನ್ನು ದೇವರಿಗೆ ಸಮರ್ಪಿಸಿ, ಅದಕ್ಕೋಸ್ಕರ/ಅವಕ್ಕೋಸ್ಕರ ಸ್ನಾನದಲ್ಲಿ ದೊರಕುವ ಕೃಪೆಯ ವರವನ್ನು ಬೇಡಿ ಕೊಳ್ಳುವದಕ್ಕೆ ಆಧಾರವೇನೆಂಬದನ್ನು ದೇವವಾಕ್ಯದಿಂದ ಇನ್ನು ಹೆಚ್ಚು ಉಪದೇಶ ಹೊಂದಿ, ತಿಳುಕೊಳ್ಳುವ ಬಗ್ಯೆ, ಕ್ರಿಸ್ತನು ಮಕ್ಕಳನ್ನು ಪ್ರೀತಿ ಮಾಡುತ್ತಾನೆಂತಲೂ ದೇವರ ರಾಜ್ಯವು ಅಂಥವರದೇ ಆಗಿರುತ್ತದೆಂತಲೂ ತಿಳಿಸುವ ಸುವಾರ್ತಾವಾಕ್ಯವನ್ನು ಕೇಳಿರಿ! ಅದು ಮಾರ್ಕನ ೧೦ನೇ ಸಂಧಿಯಲ್ಲಿ ಬರದಿರುತ್ತದೆ; ಹ್ಯಾಗಂದರೆ:

ಮತ್ತು ಮಕ್ಕಳನ್ನು, ಆತನು ಅವನ್ನು ಮುಟ್ಟ ಬೇಕೆಂತ ಯೇಸುವಿನ ಬಳಿಗೆ ತಕ್ಕೊಂಡು ಬಂದರು. ಆದರೆ ಶಿಷ್ಯರು ತಕ್ಕೊಂಡು ಬಂದವರನ್ನು ಗದರಿಸಿದರು. ಯೇಸು ಅದನ್ನು ನೋಡಿ, ಶಿಟ್ಟು ಮಾಡಿ, ಅವರಿಗೆ ಹೇಳಿದ್ದೇನಂದರೆ: ಮಕ್ಕಳನ್ನು ನನ್ನ ಬಳಿಗೆ ಬರಲೀಸಿರಿ! ಅವನ್ನು ತಡೆಯ ಬೇಡಿರಿ! ಯಾಕಂದರೆ ದೇವರ ರಾಜ್ಯವು ಅಂಥವರದೇ ಆಗಿದೆ. ಆಮೆನ್! ನಿಮಗೆ ಹೇಳುತ್ತೇನೆ: ಕೂಸಿನ ಹಾಗೆ ದೇವರ ರಾಜ್ಯವನ್ನು ಯಾವನು ತಕ್ಕೊಳ್ಳನೋ, ಅವನು ಅದರಲ್ಲಿ ಪ್ರವೇಶಿಸಲಿಕ್ಕಿಲ್ಲವೇ ಇಲ್ಲ. ಮತ್ತೆ ಅವನ್ನು ಅಪ್ಪಿ ಕೊಂಡು, ಅವುಗಳ ಮೇಲೆ ಕೈಗಳನ್ನಿಟ್ಟು, ಅವನ್ನು ಆಶೀರ್ವದಿಸಿದನು.

ನಮ್ಮೊಡೆಯನ ಈ ವಾಕ್ಯವನ್ನು ಆಧಾರ ಮಾಡಿ ಕೊಂಡು, ನಾವು ಈ ಕೂಸನ್ನು/ಕೂಸುಗಳನ್ನು ದೇವರ ಮುಂದೆ ತಂದಿಟ್ಟು, ಆತನು ಅದನ್ನು/ಅವನ್ನು ಯೇಸು ಕ್ರಿಸ್ತನ ಮುಖಾಂತರ ತನ್ನ ಕೃಪೆಯ ಒಡಂಬಡಿಕೆಯಲ್ಲಿ ಶೇರಿಸ ಬೇಕೆಂದು ಬೇಡುವದಕ್ಕಾಗಿ ಇಲ್ಲಿ ನೆರೆದು ಕೊಂಡಿದ್ಧೇವೆ. ಯಾಕಂದರೆ ಮನುಜರೆಲ್ಲರೂ ಹುಟ್ಟುಪಾಪಿಗಳಾಗಿ, ಪಾಪದಿಂದ ಬರುವ ಎಲ್ಲಾ

ಕೇಡಿಗೆ ಒಳಗಾಗಿದ್ಧಾರೆ. ಪೌಲನು ಹೇಳಿರುವಂತೆ, ಒಬ್ಬ ಮನುಷ್ಯನಿಂದ ಪಾಪವೂ, ಪಾಪದಿಂದ ಮರಣವೂ, ಲೋಕದಲ್ಲಿ ಪ್ರವೇಶಿಸಿದ್ದರಿಂದ, ಎಲ್ಲರೂ ಪಾಪ ಮಾಡಿದಲ್ಲಿ ಮರಣವು ಎಲ್ಲಾ ಮನುಷ್ಯರೊಳಗೆ ವ್ಯಾಪಿಸಿತು. ಆದರೆ ದೇವರ ರಕ್ಷಾಕೃಪೆ ಸಹ ಯೇಸು ಕ್ರಿಸ್ತನಲ್ಲಿ ಎಲ್ಲಾ ಮನುಷ್ಯರಿಗೆ ಕಾಣ ಬಂತು. ಈತನಲ್ಲಿ ನಿತ್ಯಜೀವವು ಸರ್ವರಿಗೆ ಪ್ರಾಪ್ಯವಾಗಿದೆ. ಮತ್ತು ತನ್ನ ಅಪ್ಪಣೆಯ ಮೇರೆಗೆ ವಿಶ್ವಾಸವಿಟ್ಟು, ಸ್ನಾನ ಹೊಂದುವವರೆಲ್ಲರು ತನ್ನ ಹೆಸರಿನ ಮೂಲವಾಗಿಯೂ ದೇವರ ಆತ್ಮದ ಮುಖಾಂತರವಾಗಿಯೂ ತೊಳಸಿ ಕೊಂಡು, ಶುಚಿಯಾಗಿ, ನೀತಿಯನ್ನೂ ಪವಿತ್ರತ್ವವನ್ನೂ ಪಡಕೊಂಡು, ತನ್ನ ವಿಮೋಚನೆಯಲ್ಲಿ ಪಾಲುಗಾರರಾಗುವ ಗುರುತಿಗಾಗಿಯೂ ಮುಂಗಡವಾಗಿಯೂ ಆತನು ಸ್ನಾನವನ್ನು ನೇಮಿಸಿದ್ಧಾನೆ. ಆದದರಿಂದ ನಮ್ಮ ಮನವು ಒಡೆಯನನ್ನು ಘನ ಪಡಿಸಲಿ! ನಮ್ಮ ಆತ್ಮವು ನಮ್ಮ ರಕ್ಷಕನಾದ ದೇವರಲ್ಲಿ ಆನಂದ ಪಡಲಿ! ಯಾಕಂದರೆ ಆತನು ನಮಗೆ ಅತಿಶಯವಾದದನ್ನು ಮಾಡಿ, ಬಾಲ್ಯದಲ್ಲಿಯೇ ನಮ್ಮನ್ನು ಮಹಾ ಕರುಣೆಯಿಂದ ಸ್ವೀಕರಿಸಿದನು. ನಮ್ಮ ಮಕ್ಕಳು ಸಹ ನೀರಿನಿಂದಲೂ ಆತ್ಮದಿಂದಲೂ ತಿರಿಗಿ ಹುಟ್ಟಿ, ನಿತ್ಯಜೀವಕ್ಕಾಗಿ ಕೃಪೆಯ ಪೂರ್ಣತೆಯನ್ನು ಪಡಕೊಳ್ಳುವ ಹಾಗೆ ನಾವು ಅವುಗಳನ್ನು ಸಂತೋಷದಿಂದ ಆತನ ಸನ್ನಿಧಾನಕ್ಕೆ ತಕ್ಕೊಂಡು ಬರ ತಕ್ಕದ್ದು.

ಹೀಗಿರಲಾಗಿ ನಿಮ್ಮ ಕೂಸು/ಕೂಸುಗಳು ಪವಿತ್ರಾತ್ಮದ ಬಲದಿಂದ ಪಾಪಕ್ಕೂ ಲೋಕಕ್ಕೂ ಎದುರಾಗಿ ಚನ್ನಾಗಿ ಕಾದಾಡಿ, ಅಂತ್ಯದ ಪರ್ಯಂತರ ನಂಬಿಕೆಯಿಂದಿದ್ದು, ಸ್ವರ್ಗೀಯ ನೀತಿಕಿರೀಟವನ್ನು ಹೊಂದುವ ಹಾಗೆ ನಾವು ಅದನ್ನು/ಅವನ್ನು ನಮ್ಮ ರಕ್ಷಕನ ಕೃಪೆಗೆ ಒಪ್ಪಿಸಿ ಕೊಟ್ಟು, ಇಹಪರಗಳಲ್ಲಿ ಬೇಕಾದ ಕೃಪೆ ಆಶೀರ್ವಾದಗಳನ್ನು ಆತನು ಅದಕ್ಕೆ/ಅವಕ್ಕೆ ದಯ ಪಾಲಿಸುವಂತೆ ಬೇಡಿ ಕೊಳ್ಳುವಾ!

ಪ್ರಾರ್ಥನೆ. Gebet.

ಸ್ವರ್ಗ ಪೃಥ್ವಿಗಳಲ್ಲಿ ಎಲ್ಲಾ ಪಿತೃತ್ವಕ್ಕೆ ಹೆಸರು ಕೊಡುವಂಥಾ ಸರ್ವಶಕ್ತ ದೇವರೇ! ನಮ್ಮ ಯೇಸು ಕ್ರಿಸ್ತ ಒಡೆಯನ ತಂದೆಯೇ! ಈಗ ಸ್ನಾನ ಹೊಂದಲಿಕ್ಕಿರುವ ಈ ಕೂಸಿಗೋಸ್ಕರ/ಕೂಸುಗಳಿಗೋಸ್ಕರ ನಾವು ನಿನಗೆ ಬಿನ್ನವಿಸುತ್ತೇವೆ. ತಂದೆಯೇ! ಅದನ್ನು/ಅವನ್ನು ಸ್ವೀಕರಿಸು! ಬೇಡಿರಿ! ಆಗ ನಿಮಗೆ ಕೊಡಲ್ಪಡುವದು; ಹುಡುಕಿರಿ! ಆಗ ಕಂಡು ಕೊಳ್ಳುವಿರಿ; ತಟ್ಟಿರಿ! ಆಗ ನಿಮಗೆ ತೆರೆಯಲ್ಪಡುವದು ಎಂದು ನಿನ್ನ ಪ್ರಿಯ ಮಗನು ಹೇಳಿದ ಮಾತನ್ನು ಹಿಡಿದು, ಪ್ರಾರ್ಥನೆ ಮಾಡುತ್ತೇವೆ. ಆದ್ಯಂತವಿಲ್ಲದ ದೇವರೇ! ನಮ್ಮೊಡೆಯನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ನಾವು ತಟ್ಟುವ ಬಾಗಲನ್ನು ಈ ಕೂಸಿಗೆ/ಕೂಸುಗಳಿಗೆ ತೆರೆದು, ಸ್ನಾನದ ಆಶೀರ್ವಾದವನ್ನೆಲ್ಲಾ ದೊರಕಿಸಿ ಕೊಟ್ಟು, ಯೇಸು ಕ್ರಿಸ್ತನಿಂದ ವಾಗ್ದತ್ತವಾದ ನಿತ್ಯಜೀವದ ರಾಜ್ಯದಲ್ಲಿ ಅದನ್ನು/ಅವನ್ನು ಶೇರಿಸು! ಆಮೆನ್!

ಅಥವಾ oder

ಸರ್ವಶಕ್ತ ದೇವರೇ! ಪ್ರೀತಿಸಾಗರನಾದ ಸ್ವರ್ಗೀಯ ತಂದೆಯೇ! ನಿಮಗೂ ನಿಮ್ಮ ಮಕ್ಕಳಿಗೂ ದೇವರೂ ತಂದೆಯೂ ಆಗಿರುತ್ತೇನೆಂಬ ವಚನವನ್ನು ನೀನು ನಮಗೆ ಕೊಟ್ಟದ್ದೀಯಲ್ಲವೋ? ಈ ವಚನವನ್ನು ನೀನು ಈ ಕೂಸಿನ/ಕೂಸುಗಳ ವಿಷಯದಲ್ಲಿಯೂ ಕೈಕೊಂಡು ಈಡೇರಿಸ ಬೇಕೆಂದು ವಿನಯದಿಂದ ಬೇಡುತ್ತೇವೆ. ನಿನ್ನ ಮಗನ ಮರಣದೊಳಗೆ ಎಂತಾಗುವ ಸ್ನಾನದಿಂದ ಅದನ್ನು/ಅವನ್ನು ಆತನ ಸಭೆಯಲ್ಲಿ ಶೇರಿಸು! ಕ್ರಿಸ್ತನಿಂದಾದ ವಿಮೋಚನೆಯಲ್ಲಿ ಅದಕ್ಕೆ/ಅವಕ್ಕೆ ಪಾಲು ಕೊಡು! ಅದು ನಿನ್ನ ಮಗುವಾಗಿ/ಅವು ನಿನ್ನ ಮಕ್ಕಳಾಗಿ ಕಡೆಯಲ್ಲಿ ನಿನ್ನ ಸ್ವರ್ಗರಾಜ್ಯದಲ್ಲಿ ಬಾಧ್ಯತೆ ಹೊಂದುವ ಹಾಗೆ ಅದನ್ನು/ಅವನ್ನು ನಿನ್ನ ಆತ್ಮದಿಂದ ಪವಿತ್ರ ಮಾಡು! ನಿನ್ನ ಕೃಪೆಯೂ ಮುಖಕಾಂತಿಯೂ ಸದಾ ಅದರ/ಅವುಗಳ ಮೇಲೆ ನೆಲೆಯಾಗಿರಲಿ! ಆಮೆನ್!

ಅಥವಾ oder

ಸ್ವರ್ಗೀಯ ತಂದೆಯೇ! ನೀನು ಈ ಕೂಸಿಗೆ/ಕೂಸುಗಳಿಗೆ ಜೀವವನ್ನೂ ನಿನ್ನ ಬಲುಮೆಯನ್ನೂ ಕೊಟ್ಟದ್ದೀ; ನಿನ್ನ ಪರಾಂಬರಿಕೆ ಅದರ/ಅವುಗಳ ಉಸುರನ್ನು ಕಾದು ಆಡಿಸುತ್ತದೆ. ಅದಲ್ಲದೆ ಈಗ ಅದನ್ನು/ಅವನ್ನು ಯೇಸು ಕ್ರಿಸ್ತನಲ್ಲಿ ನಿನ್ನ ಮಗು/ಮಕ್ಕಳು ಆಗುವ ಮಂಗಳವಾದ ಪದವಿಗೆ ಕರೆಯುತ್ತೀ. ಆದದರಿಂದ ನಾವು ಅದನ್ನು/ಅವನ್ನು ನಿನ್ನ ದಿವ್ಯ ಜೋಕೆಗೆ ಒಪ್ಪಿಸಿ ಕೊಟ್ಟು, ದೇಹಾತ್ಮಗಳಿಗೆ ಬರುವ ಎಲ್ಲಾ ಗಂಡಾಂತರಗಳಲ್ಲಿ ನೀನು ಅದಕ್ಕೆ/ಅವಕ್ಕೆ ಆಶ್ರಯವಾಗಿದ್ದು, ಅದರ/ಅವುಗಳ ಎಲ್ಲಾ ಹಾದಿಗಳಲ್ಲಿ ನಿನ್ನ ಮುಖವನ್ನು ಅದಕ್ಕೆ/ಅವಕ್ಕೆ ಹೊಳೆಯಲೀಸ ಬೇಕೆಂದು ಬೇಡುತ್ತೇವೆ.

ನಮ್ಮ ರಕ್ಷಕನೂ ಒಡೆಯನೂ ಆಗಿರುವ ಯೇಸು ಕ್ರಿಸ್ತನೇ! ನೀನು ಈ ಮಗುವಿಗೆ/ಮಕ್ಕಳಿಗೆ ಪ್ರೀತಿ ಮಾಡಿ, ಅದು ನಿನ್ನದು/ಅವು ನಿನ್ನವು ಆಗುವಂತೆ ಅದನ್ನು/ಅವನ್ನು ಮಹಾ ಬೆಲೆಗೆ ಕೊಂಡು ಕೊಂಡ ಮೇಲೆ, ನಾವು ಅದರ/ಅವುಗಳ ಪಕ್ಷದವರಾಗಿ ಈಗ ಬಿನ್ನೈಸಲಿಕ್ಕೆ ಧೈರ್ಯ ಪಟ್ಟು, ಅದನ್ನು/ಅವನ್ನು ನಿನ್ನ ಕೈಗೆ ಒಪ್ಪಿಸಿ ಕೊಟ್ಟು, ನೀನು ಸ್ನಾನದ ಸಂಪೂರ್ಣ ಆಶೀರ್ವಾದವನ್ನು ಅದಕ್ಕೆ/ಅವಕ್ಕೆ ದಯ ಮಾಡಿ, ಅದನ್ನು/ಅವನ್ನು ಕಡೆಯಲ್ಲಿ ಸ್ವರ್ಗದೊಳಗೆ ಬಾಡದಂಥ ಆಸ್ತಿಯಲ್ಲಿ ಶೇರಿಸ ಬೇಕೆಂದು ಬೇಡುತ್ತೇವೆ. ಪವಿತ್ರಾತ್ಮನೇ! ಈ ಮಗುವಿನ/ಮಕ್ಕಳ ಹೃದಯದಲ್ಲಿ ಇಳಿದು ಬಂದು, ಅದರಲ್ಲಿ/ಅವುಗಳಲ್ಲಿ ನಿನಗೆ ನಿವಾಸವನ್ನು ಉಂಟು ಮಾಡಿಕೋ! ನಿನ್ನ ವರಗಳಿಂದ ಅದನ್ನು/ಅವನ್ನು ತುಂಬಿಸಿ, ನೀನು ಹುಟ್ಟಿಸಿ ಕೊಟ್ಟ ಸದ್ವಿಶ್ವಾಸದಲ್ಲಿ ಪವಿತ್ರ ಮಾಡಿ, ಕಾಪಾಡು! ಅದನ್ನು/ಅವನ್ನು ಎಲ್ಲಾ ಸುಖ ದುಃಖಗಳಲ್ಲಿ ಬಲಗೊಳಿಸಿ, ಸಿದ್ಧಿ ಹೊಂದಿಸು! ತಂದೆ ಮಗ ಪವಿತ್ರಾತ್ಮ ಆಗಿರುವ ತ್ರಯೈಕ ದೇವರೇ! ತ್ರಾಹಿ! ತ್ರಾಹಿ! ನಾವೆಲ್ಲರೂ ಸಾಯುವ ವರೆಗೂ ನಿನಗೆ ನಂಬಿಗಸ್ತರಾಗಿದ್ದು, ವಿಶ್ವಾಸದ ಸಮಾಪ್ತಿಯಾದ ರಕ್ಷಣೆಯನ್ನು ಪಡಕೊಳ್ಳುವಂತೆ ನಮಗೆ ಕೈಕೊಟ್ಟು ಸಹಾಯ ಮಾಡು! ಆಮೆನ್!

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಸೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ಯೆಹೋವನು ನಿನ್ನ/ನಿಮ್ಮ ಹೋಗೋಣವನ್ನೂ ಬರೋಣವನ್ನೂ ಇಂದಿನಿಂದ ಎಂದೆಂದಿಗೂ ಕಾಪಾಡಲಿ! ಆಮೆನ್!

ಹೆತ್ತವರಿಗೂ ಸಾಕ್ಷಿಗಳಿಗೂ ಸಂಬೋಧನೆ.

Ansprache an die Eltern und Taufzeugen.

ಬಡೆಯನಲ್ಲಿ ಪ್ರಿಯರೇ! ಯೇಸು ಕ್ರಿಸ್ತನು ಬಹಳ ಪ್ರೀತಿ ಮಾಡಿ, ತನ್ನ ರಕ್ತವನ್ನು ಕ್ರಯವಾಗಿ ಕೊಟ್ಟು, ಕೊಂಡು ಕೊಂಡ ಮಕ್ಕಳನ್ನು ಆತನ ಹೆಸರಿನಲ್ಲಿ ಸ್ನಾನ ಹೊಂದಿದವರಾದ ನಾವು ಎಲ್ಲಾ ವಿಷಯಗಳಲ್ಲಿ ಚನ್ನಾಗಿ ಪರಾಂಬರಿಕೆ ಮಾಡ ಬೇಕೆಂಬ ಹಂಗನ್ನು ನೆನಪಿಗೆ ತಂದು ಕೊಳ್ಳಿರಿ! ಚಿಕ್ಕವರಾದ ಇವರಲ್ಲಿ ಒಬ್ಬನಿಗೆ ಎಡತಡೆ ಹಾಕುವ ಮನುಷ್ಯನಿಗೆ ಅಯ್ಯೋ! ಎಂದು ಕ್ರಿಸ್ತನೇ ಹೇಳಿದ್ದಾನೆ. ಅವರನ್ನು ಬೋಧಿಸಿ, ಸಂರಕ್ಷಿಸ ಬೇಕೆಂತ ದೇವರು ಕೊಟ್ಟ ಮಕ್ಕಳಿಗೆ ಸಾಕುವವರ ದೋಷದಿಂದ ಬರುವ ನಷ್ಟಕ್ಕೆ ಆತನು ಇವರಿಂದ ಲೆಕ್ಕ ಕೇಳುವನು; ಆದರೆ ಯಾರಾದರೂ ಪ್ರೀತಿಯಿಂದಲೂ ನಂಬಿಗಸ್ತಿಕೆಯಿಂದಲೂ ಈ ಚಿಕ್ಕವರಲ್ಲಿ ಒಬ್ಬನಿಗೆ ಮಾಡಿದ ಉಪಕಾರವನ್ನು ತನಗೆ ಮಾಡಿದ ಹಾಗೆ ಎಣಿಸುವನು. ಹೀಗಿರಲಾಗಿ [ಸರ್ವಶಕ್ತ ದೇವರ ದಯದಿಂದ ಈ ಮಗು/ಮಕ್ಕಳು ಹುಟ್ಟಿದ್ದಕ್ಕೆ ಸಂತೋಷ ಪಡುವ ತಂದೆ ತಾಯಿಗಳಾದ] ನೀವು ಎಚ್ಚರಿಕೆ

ಗೊಂಡು, ಅದರ/ಅವುಗಳ ಆತ್ಮಕ್ಕೆ ನಷ್ಟ ಬಾರದಂತೆಯೂ ಪವಿತ್ರಾತ್ಮದ ಕೆಲಸಕ್ಕೆ ಅದರಲ್ಲಿ/ಅವುಗಳಲ್ಲಿ ಅಡ್ಡಿ ಆಗದಂತೆಯೂ ನೋಡಿ, ಅದನ್ನು/ಅವನ್ನು ಒಡೆಯನ ಭಯದಲ್ಲಿಯೂ ಪ್ರೀತಿಯಲ್ಲಿಯೂ ಸಾಕಿ, ಶಿಕ್ಷಿಸಿ, ಬೋಧಿಸಿ, ಬೆಳಸುವದಕ್ಕೆ ಬಹಳ ಆಸಕ್ತರಾಗಿರ ಬೇಕು. [ಮತ್ತು ಈ ಸ್ನಾನಕ್ಕೆ ಸಾಕ್ಷಿಗಳಾಗಿ ಇರುವವರೇ (ಇರುವ ಹಿರಿಯರೇ)! ನೀವು ಸಹ ಈ ಕೂಸಿಗೆ/ಕೂಸುಗಳಿಗೆ ಯೇಸುವಿನ ಹೆಸರಿನಲ್ಲಿ ಮಮತೆ ತೋರಿಸುವದಕ್ಕೆ ಹಂಗಿಗರಾಗಿದ್ದೀರೆಂದು ನಿಮ್ಮನ್ನು ಎಚ್ಚರಿಸುತ್ತೇನೆ. ಈ ಮಗುವಿಗಾಗಿ/ಮಕ್ಕಳಿಗಾಗಿ ದೇವರ ಮುಂದೆ ಬಿಡದೆ ಮನಃಪೂರ್ವಕವಾಗಿ ಬಿನ್ನಹ ಮಾಡುವವರಾಗಿ, ಅದರ/ಅವುಗಳ ಇಹಪರಗಳ ಸುಖಕ್ಷೇಮಗಳಿಗೆ ಬೇಕಾದದನ್ನು ನಿಮ್ಮ ಕೈಲಾಗುವಷ್ಟರ ಮಟ್ಟಿಗೆ ಚಿಂತಿಸಿ, ಒದಗಿಸಿ ಕೊಡ ನೋಡಿ, ಅದಕ್ಕೆ/ಅವಕ್ಕೆ ಸಹಾಯಕರಾಗಿರ್ರಿ!]

ಆದರೆ ಈ ಮಗುವಿಗೆ/ಮಕ್ಕಳಿಗೆ ಯಾವ ವಿಶ್ವಾಸದ ಮೇಲೆ ಸ್ನಾನವಾಗುತ್ತದೆಂಬದು ಪ್ರಕಟವಾಗುವ ಹಾಗೆ ನಾನು ಈಗ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಿರಿ!

ಸ್ವರ್ಗ ಪೃಥ್ವಿಗಳ ನಿರ್ಮಾಣಿಕನಾದ, ಸರ್ವಶಕ್ತಿಯುಳ್ಳ ತಂದೆಯಾದ ದೇವರಲ್ಲಿ ವಿಶ್ವಾಸವಿಡುತ್ತೀರೋ?

ಮತ್ತು ಆತನ ಒಬ್ಬನೇ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು, ಈತನು ಪವಿತ್ರಾತ್ಮದಿಂದ ಗರ್ಭಕ್ಕೆ ಬಂದು*, ಕನ್ಯೆ ಮರಿಯಳಲ್ಲಿ ಹುಟ್ಟಿದನು; ಪೊಂತೀಯ ಪಿಲಾತನ ಕಾಲದಲ್ಲಿ ಶ್ರಮ ಪಟ್ಟು, ಕ್ರೂಜೆಸಲ್ಪಟ್ಟು, ಮರಣ ತಾಳಿ, ಹೂಣಲ್ಪಟ್ಟನು; ಪಾತಾಳಕ್ಕೆ ಇಳಿದು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಎದ್ದನು; ಸ್ವರ್ಗಕ್ಕೆ ಏರಿ, ಅಲ್ಲಿ ಸರ್ವಶಕ್ತ ತಂದೆಯಾಗಿರುವ ದೇವರ ಬಲಗಡೆಯಲ್ಲಿ ಕೂತು ಕೊಂಡಿದ್ದಾನೆ; ಅಲ್ಲಿಂದ ಆತನು ತಿರಿಗಿ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯ ತೀರಿಸುವನು ಎಂದು ನಂಬುತ್ತೀರೋ?

ಮತ್ತು ಪವಿತ್ರಾತ್ಮದಲ್ಲಿಯೂ ವಿಶ್ವಾಸವಿಟ್ಟು, ಒಂದೇ ಪವಿತ್ರ ಕ್ರೈಸ್ತ ಸಭೆಯೂ ಪವಿತ್ರರ ಅನ್ಯೋನ್ಯವೂ ಪಾಪಗಳ ಕ್ಷಮೆಯೂ

*"ಗರ್ಭಕ್ಕೆ ಬಂದು" ಎಂಬದಕ್ಕೆ ಬದಲಾಗಿ "ಗರ್ಭಾಗತನಾಗಿ" ಎಂತಲೂ ಓದಿ ಕೊಳ್ಳ ಬಹುದು.

ದೇಹದ ಉತ್ಥಾನವೂ ನಿತ್ಯಜೀವವೂ ಉಂಟು ಎಂದು ನಂಬುತ್ತೀರೋ? ನಂಬುತ್ತೀರಾದರೆ—

ಹೌದು, ನಂಬುತ್ತೇನೆ—ಅನ್ನಿರಿ!

ಸೈತಾನನನ್ನೂ ಅವನ ಎಲ್ಲಾ ಕಾರ್ಯಗಳನ್ನೂ ಲೋಕದ ಜಂಭ ಡಂಭ ಭೋಗಗಳನ್ನೂ ಮಾಂಸದ ದುರಾಶೆಗಳನ್ನೂ ಬಿಟ್ಟು ಎದುರಿಸುತ್ತೀರೋ? ಹೌದಾದರೆ—

ಹೌದು, ಬಿಟ್ಟು ಎದುರಿಸುತ್ತೇನೆ—ಅನ್ನಿರಿ!

ತಂದೆ ಮಗ ಪವಿತ್ರಾತ್ಮ ಆಗಿರುವ ದೇವರಿಗೆ ಎಂದೆಂದಿಗೂ ನಂಬಿಕೆಯುಳ್ಳವರಾಗಿ, ನಿಮ್ಮ ನಡೆನುಡಿಯನ್ನೆಲ್ಲಾ ಆತನ ವಾಕ್ಯಕ್ಕೆ ಸರಿ ಬೀಳ ಮಾಡ ಬೇಕೆಂಬ ಹಂಗನ್ನು ನಿಮ್ಮ ಮೇಲೆ ತೆಕ್ಕೊಳ್ಳುತ್ತೀರೋ? ಹೌದಾದರೆ—

ಹೌದು, ಪೂರ್ಣ ಮನಸ್ಸಿನಿಂದ—ಅನ್ನಿರಿ!

ತಂದೆ ತಾಯಿಗಳಿಗೆ ಪ್ರತ್ಯೇಕವಾಗಿ. Zu den Eltern.

ನಿಮ್ಮ ಮಗು/ಮಕ್ಕಳು ಈ ವಿಶ್ವಾಸದ ಮೇಲೆ ಸ್ನಾನ ಹೊಂದಿ, ಕ್ರಿಸ್ತನ ಸದ್ಭಕ್ತರಿಗೆ ತಕ್ಕ ಹಾಗೆ ಅದರಲ್ಲಿ ಸಾಕಲ್ಪಡ ಬೇಕೆಂದಿದ್ದೀರೋ? ಇದ್ದರೆ—

ಹೌದು—ಅನ್ನಿರಿ!

ಸಾಕ್ಷಿಗಳಿಗೆ ಪ್ರತ್ಯೇಕವಾಗಿ. Zu den Taufzeugen.

ಈ ಸ್ನಾನಕ್ಕೆ ಸಾಕ್ಷಿಗಳಾದವರೇ (ಸಾಕ್ಷಿಗಳಾದ ಹಿರಿಯರೇ)! ಈ ಮಗುವನ್ನು/ಮಕ್ಕಳನ್ನು ಒಡೆಯನ ಪ್ರೀತಿಯಲ್ಲಿಯೂ ಭಯದಲ್ಲಿಯೂ ಸಾಕಿ, ಶಿಕ್ಷಿಸಿ, ಬೋಧಿಸಿ, ಬೆಳಸ ಹಂಗಿಗರಾದವರಿಗೆ ಸಭೆಯ ಹೆಸರಿನಲ್ಲಿ ಸಹಾಯ ಮಾಡಲಿಕ್ಕೆ ನಿಮಗೆ ಮನಸ್ಸುಂಟೋ? ಇದ್ದರೆ—

ಹೌದು—ಅನ್ನಿರಿ!

ಪ್ರಸಂಗಿಯು ಮಗುವಿನ ತಲೆಯಲ್ಲಿ ಮೂರು ಸಾರಿ ನೀರು ಹನಿಸಿ ಹೇಳುವದು:
Der Geistliche benetzt die Stirne des Kindes dreimal mit Wasser und spricht:

(-ನೇ! -ಯೇ! -ಳೇ!) ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ನಿನಗೆ ಸ್ನಾನ ಕೊಡುತ್ತೇನೆ.

ಬಳಿಕ ಬಲಗೈಯನ್ನು ಮಗುವಿನ ತಲೆಯ ಮೇಲೆ ಇಟ್ಟು ಹೇಳುವದು:

Er legt seine rechte Hand auf des Kindes Stirne und spricht:

(-ನೇ! -ಯೇ! -ಳೇ!) ಯೇಸು ಕ್ರಿಸ್ತನ ಮೂಲವಾಗಿ ಪುನರ್ಜನ್ಮದ ತೊಳೆಯುವಿಕೆಯಿಂದ ತನ್ನ ಸಮಸ್ತ ಕೃಪೆಯನ್ನು ನಿನಗೆ ಉಚಿತವಾಗಿ ಕೊಡುವ ಸರ್ವಶಕ್ತ ದೇವರೂ ಯೇಸು ಕ್ರಿಸ್ತ ಒಡೆಯನ ತಂದೆಯೂ ಆದಾತನು ತನ್ನ ಆತ್ಮದಿಂದ ನಿನ್ನನ್ನು ನಿತ್ಯಜೀವಕ್ಕಾಗಿ ಬಲ ಪಡಿಸಲಿ! ಆಮೆನ್!

ಅಥವಾ oder

(-ನೇ! -ಯೇ! -ಳೇ!) ಪರಿಶುದ್ಧ ಸ್ನಾನದಿಂದ ನಿನ್ನನ್ನು ತನ್ನ ಮಗನಾದ ಯೇಸು ಕ್ರಿಸ್ತನ ಅನ್ಯೋನ್ಯದಲ್ಲಿ ಶೇರಿಸಿದ ಕರುಣೆಯುಳ್ಳ ದೇವರಾದ ತಂದೆ ನಿನ್ನನ್ನು ಕಡೇ ವರೆಗೂ ತನ್ನ ಕೃಪೆಯಲ್ಲಿ ಕಾಪಾಡಿ, ತನ್ನ ಆತ್ಮ ದಿಂದ ನಿತ್ಯಜೀವಕ್ಕಾಗಿ ಪವಿತ್ರ ಮಾಡಲಿ! ಆಮೆನ್!

ಅಥವಾ oder

(-ನೇ! -ಯೇ! -ಳೇ!) ನೀನು ವಿಶ್ವಾಸವನ್ನು ಕೈಕೊಂಡು, ಲೋಕ ವನ್ನು ಜೈಸಿ, ಭದ್ರವಾಗಿ ಪರಮ ನಿತ್ಯಜೀವದಲ್ಲಿ ಶೇರುವ ಹಾಗೆ ನಮ್ಮ ಯೇಸು ಕ್ರಿಸ್ತ ಒಡೆಯನ ತಂದೆಯಾದ ದೇವರು ನಿನಗೆ ಪವಿತ್ರಾತ್ಮದ ಕೃಪೆಯನ್ನು ದಯ ಪಾಲಿಸಲಿ! ಆಮೆನ್!

ಪ್ರಾರ್ಥನೆ. Gebet.

ಸರ್ವಶಕ್ತನೂ ಕರುಣಾಳುವೂ ಆದ ದೇವರೇ! ತಂದೆಯೇ! ನೀನು ನಿನ್ನ ಸಭೆಯನ್ನು ಕೃಪೆಯಿಂದ ಸಲುಹಿ ಬೆಳಸುತ್ತಾ ಇರುವಾತ ನಾಗಿ, ಈ ಕೂಸು / ಕೂಸುಗಳು ಈಗ ಸ್ನಾನ ಹೊಂದಿ, ಅದರಿಂದ ನಮ್ಮ ಯೇಸು ಕ್ರಿಸ್ತ ಒಡೆಯನಿಗೂ ಆತನ ಸಭೆಗೂ ಅವಯವವಾಗಿ (-ಗಳಾಗಿ) ಕೂಡಿ ಕೊಂಡು, ನಿನ್ನ ಮಗುವೂ / ಮಕ್ಕಳೂ ಆಗಿ, ಸ್ವರ್ಗರಾಜ್ಯದ ಬಾಧ್ಯತೆಯನ್ನು ಹೊಂ ದುವದಕ್ಕೆ ನೀನು ದಯ ಮಾಡಿದ್ದಕ್ಕಾಗಿ ನಿನ್ನನ್ನು ಹೊಗಳಿ ಕೊಂಡಾಡು

ತ್ತೇವೆ. ಈಗ ನಿನ್ನ ಮಗು/ಮಕ್ಕಳು ಆದ ಈ ಶಿಶು/ಶಿಶುಗಳು ನಿನ್ನ ಸಮಸ್ತ ಸುಚಿತ್ತಕ್ಕನುಸಾರವಾಗಿ ನಿನ್ನ ಪವಿತ್ರ ನಾಮದ ಕೀರ್ತಿಗಾಗಿ ಬಹಳ ನಂಬಿಕೆಯಿಂದಲೂ ಭಕ್ತ್ಯಾಸಕ್ತಿಯಿಂದಲೂ ಸಾಕಲ್ಪಟ್ಟು, ಈ ಪ್ರಪಂಚದ ಎಲ್ಲಾ ವಿಘ್ನ ವಿಲೋಭನಗಳಲ್ಲಿ ನಿನ್ನ ಮಾತು ಕೈಕೊಂಡು, ಪವಿತ್ರವಾದವರೆಲ್ಲರ ಜತೆಯಲ್ಲಿ ಸ್ವರ್ಗರಾಜ್ಯ ಪಡಕೊಳ್ಳುವ ಹಾಗೆ ನೀನು ಅದನ್ನು/ಅವನ್ನು ಸ್ನಾನದ ಕೃಪೆಯಲ್ಲಿ ನೆಲೆಗೊಳಿಸಿ, ಕಾಪಾಡ ಬೇಕೆಂದು ಯೇಸು ಕ್ರಿಸ್ತನ ಹೆಸರಿನಲ್ಲಿ ಎದೆಗುಂಡಿಯಿಂದ ಬೇಡಿ ಕೊಳ್ಳುತ್ತೇವೆ. ಆಮೆನ್!

ಅಥವಾ oder

ಕೇವಲ ಕರುಣಾಳುವಾಗಿರುವಂಥ ತಂದೆಯೇ! ನೀನು ಈ ಕೂಸನ್ನು/ಕೂಸುಗಳನ್ನು ದಯಾಭಾವದಿಂದ ನೋಡಿ, ಮಗು/ಮಕ್ಕಳು ಎಂದು ಸ್ವೀಕರಿಸಿ, ನಿನ್ನ ಪವಿತ್ರ ಸಭೆಯ ಅಂಗವು (ಅಂಗಗಳು) ಆಗಿರ ಮಾಡಿದ ಕಾರಣ, ನಿನ್ನನ್ನು ಹೃದಯಪೂರ್ವಕವಾಗಿ ಸ್ತುತಿಸುತ್ತೇವೆ. ಈ ಮಗುವು/ಮಕ್ಕಳು ಈಗ ಪಾಪಕ್ಕೆ ಸತ್ತು, ನೀತಿಗೆ ಬದುಕುತ್ತಾ, ಕ್ರಿಸ್ತನ ಸಂಗಡ ಹೂಣಲ್ಪಟ್ಟು, ಎದ್ದು, ಹೊಸ ಜೀವದಲ್ಲಿ ನಡೆಯುತ್ತಾ ಇರುವ ಹಾಗೆ ಅದಕ್ಕೆ/ಅವುಗಳಿಗೆ ಸಹಾಯ ಮಾಡ ಬೇಕೆಂದು ವಿನಯದಿಂದ ಬೇಡಿ ಕೊಳ್ಳುತ್ತೇವೆ. ಅದು/ಅವು ಈ ಪ್ರಕಾರ ನಿನ್ನ ಮಗನ ಮರಣದ ಅನ್ಯೋನ್ಯದಲ್ಲಿಯೂ ಆತನ ಉತ್ಥಾನದ ಅನ್ಯೋನ್ಯದಲ್ಲಿಯೂ ಇದ್ದು ಳಿದು, ಕಡೆಯಲ್ಲಿ ನಿನ್ನ ಸಭೆಯ ಸಂಗಡ ನಮ್ಮ ಯೇಸು ಕ್ರಿಸ್ತ ಒಡೆಯನ ಮುಖಾಂತರ ಸ್ವರ್ಗರಾಜ್ಯದಲ್ಲಿ ಶೇರುವ ಹಾಗೆ ದಯಪಾಲಿಸು! ಆಮೆನ್!

ಆಶೀರ್ವಾದವಚನವು. Segen.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

2. ಕ್ರೈಸ್ತಸಭೆಯಲ್ಲಿ ಹುಟ್ಟಿದವರ ಸ್ನಾನವು.

Heiden-Taufe.

ಒಡೆಯನಲ್ಲಿ ಪ್ರಿಯ ಸಭೆಯವರೇ! ಮನುಷ್ಯರೆಲ್ಲರೂ ಹುಟ್ಟುಪಾಪಿಗಳಾಗಿದ್ಧಾರೆಂತಲೂ, ಮಾಂಸದಿಂದ ಹುಟ್ಟಿದ್ದು ಮಾಂಸವಾಗಿದೆ ಎಂತಲೂ, ಮಾಂಸಭಾವದವರು ದೇವರಿಗೆ ಸರಿ ಬೀಳಲಾರದೆ, ಪಾಪಗಳಲ್ಲಿಯೂ ಅಕ್ರಮಗಳಲ್ಲಿಯೂ ಸತ್ತವರಾಗಿದ್ಧಾರೆಂತಲೂ ಬಲ್ಲೆವು. ಒಬ್ಬನು ತಿರಿಗಿ ಹುಟ್ಟದಿದ್ದರೆ, ಅಂದರೆ ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು ಎಂದು ನಮ್ಮ ರಕ್ಷಕನಾದ ಯೇಸು ಕ್ರಿಸ್ತನು ಹೇಳಿದ್ಧಾನೆ. ಹೀಗಿರಲಾಗಿ ನೀರಿನಿಂದಲೂ ಆತ್ಮದಿಂದಲೂ ಸ್ನಾನ ಹೊಂದಿ, ಕ್ರೈಸ್ತಸಭೆಯಲ್ಲಿ ಶೇರಿ, ಅದರಲ್ಲಿ ಜೀವವುಳ್ಳ ಅವಯವವು (-ಗಳು) ಆಗುವ ವರವನ್ನು ಪಡಕೊಳ್ಳ ಬೇಕೆಂದು ಬಂದ ಇವನಿಗೆ (-ಳಿಗೆ, -ರಿಗೆ) ತಂದೆಯಾದ ದೇವರು ತನ್ನ ದೊಡ್ಡ ಕರುಣೆಯಿಂದ ಅದನ್ನು ದಯ ಮಾಡ ಬೇಕೆಂದು ನಮ್ಮೊಡೆಯನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ಬೇಡಿ ಕೊಳ್ಳೋಣ!

ಪ್ರಾರ್ಥನೆ. Gebet.

ಕರುಣೆಯೂ ಕೃಪೆಯೂ ಉಳ್ಳ ದೇವರೇ! ತಂದೆಯೇ! ನಿನ್ನ ಬಲುಮೆ ದೊಡ್ಡದು, ನಿನ್ನ ಜ್ಞಾನವು ಅಪಾರವಾದ್ದು, ನಿನ್ನ ಶಕ್ತಿ ಮಿತಿ ಮೇರೆ ಇಲ್ಲದ್ದು; ನೀನು ನಮಗೆ ಮಾಡಿದಂಥ, ದಿನಾಲೂ ಮಾಡುತ್ತಿರುವಂಥ ಎಲ್ಲಾ ದಯಾತಿಶಯಕ್ಕಾಗಿ ನಿನ್ನನ್ನು ಹೊಗಳಿ ಕೊಂಡಾಡುತ್ತೇವೆ. ನೀನು ಮನುಷ್ಯನನ್ನು ನಿನ್ನ ತೇಜವುಳ್ಳ ಸ್ವರೂಪದಲ್ಲಿ ನಿರ್ಮಿಸಿದ ಮೇಲೆ, ಅವನು ನಿನಗೆ ಅವಿಧೇಯನಾಗಿ, ಪಾಪದಲ್ಲಿ ಬಿದ್ದು, ತನಗಿದ್ದ ದಿವ್ಯ ಮಹಿಮೆಯನ್ನು ಕಳಕೊಂಡಾಗ, ಪ್ರೀತಿನಿಧಿಯಾಗಿರುವ ನೀನು ಅವನನ್ನು ಕನಿಕರಿಸಿ, ಮನುಷ್ಯರಿಗೆಲ್ಲಾ ವಿಮೋಚನೆಯನ್ನುಂಟು ಮಾಡುವ ಬಗ್ಯೆ ನಿನ್ನ ಪ್ರೀತಿಯ ಮಗನಾದ ಯೇಸು ಕ್ರಿಸ್ತನು ವಿಮೋಚಕನೂ ರಕ್ಷಕನೂ ಆಗ ಬೇಕೆಂತ ಆತನನ್ನು ಕಳುಹಿಸಿ ಕೊಟ್ಟೆ. ಮತ್ತು ಎಲ್ಲರೂ ಸತ್ಯದ ತಿಳುವಿಕೆಗೆ ಬರುವ ಹಾಗೆ ನಿನ್ನ ಸುವಾರ್ತೆಯನ್ನು ಸಾರಿಸಿ,

ಜನಾಂಗಗಳನ್ನೆಲ್ಲಾ ನಿನ್ನ ರಾಜ್ಯಕ್ಕೆ ಕರೆಯುತ್ತಾ, ನಿನ್ನ ಕರಹವನ್ನು ಕೇಳಿ, ನಿನ್ನ ಬಳಗೆ ಬರುವಂಥವರನ್ನು ತಳ್ಳಿ ಬಿಡದೆ, ಸೇರಿಸಿ ಕೊಳ್ಳುತ್ತಾ ಇದ್ದೀ. ಇದಲ್ಲದೆ ನಿನ್ನ ಕೃಪಾಕರಣಗಳಾದ ಸ್ನಾನ ರಾತ್ರಿಭೋಜನಗಳನ್ನು ನಮ್ಮ ರಕ್ಷಣೆಗೆ ಸಹಾಯಾರ್ಥವಾಗಿ ನೇಮಿಸಿದ್ದೀ. ಒಡೆಯನೇ! ಕೆಟ್ಟ ಪಾಪಿಗಳಾದ ನಮಗೆ ನೀನು ಮಾಡುವ ಕೃಪೆ ಮಿಗುಮಿಗಿಲಾದದು! ಅದಕ್ಕೆ ತಕ್ಕ ಸ್ತೋತ್ರ ಮಾಡಲಶಕ್ತರಾಗಿದ್ದೇವೆ. ಸ್ನಾನಕ್ಕೋಸ್ಕರ ಬಂದ ಇವನು (-ಳು, -ರು) ವಿಗ್ರಹಾರಾಧಕರಲ್ಲಿ (ಮಹಮ್ಮದಿಯರಲ್ಲಿ, ಯೆಹೂದ್ಯರಲ್ಲಿ) ಹುಟ್ಟಿ, ಇಷ್ಟು ವರೆಗೆ ಕ್ರಿಸ್ತನೂ ನಿನ್ನ ಪ್ರಜೆಯ ಪಟ್ಟಣವಾಸಕ್ಕೆ ಬಾಧ್ಯತೆಯೂ ಇಲ್ಲದವನು (-ಳು, -ರು) ಆಗಿ ಇದ್ದರೂ, ಈಗ ನಿನ್ನ ಉಚಿತ ದಯದಿಂದಲೂ ನಿನ್ನ ಅಪಾರ ಕರುಣೆಯಿಂದಲೂ ಮಾನಸಾಂತರ ಪಟ್ಟು, ವಿಶ್ವಾಸದಿಂದ ಕ್ರಿಸ್ತನಿಗೆ ಕೂಡಿ ಕೊಂಡು, ಹತ್ತಿರ ಬಂದಿದ್ದಾನೆ (-ಳೆ, -ರೆ). ಮುಂಚೆ ಅವನು (-ಳು, -ರು) ನೋಡದೆಯೂ ನೋಡಲಾರದೆಯೂ ಇದ್ದಂಥಾದ್ದನ್ನು ಈಗ ನೋಡುವ ಹಾಗೆ, ನಿನ್ನ ಆತ್ಮವು ಸತ್ಯದ ಸುವಾರ್ತೆಯಿಂದ ಅವನನ್ನು (-ಳನ್ನು, -ರನ್ನು) ಬೆಳಗಿಸಿ, ಪಾಪಪರಿಹಾರದಲ್ಲಿರುವ ರಕ್ಷಣೆಯ ತಿಳಯುವಿಕೆಯನ್ನು ಅವನಿಗೆ (-ಳಗೆ, -ರಿಗೆ) ಕೊಟ್ಟದೆ. ಈಗ ನಿನ್ನ ವಾಕ್ಯವು ಅವನಲ್ಲಿ (-ಳಲ್ಲಿ, -ರಲ್ಲಿ) ಹುಟ್ಟಿಸಿದ ವಿಶ್ವಾಸದಿಂದ ಅವನು (-ಳು, -ರು) ತನ್ನ (ತಮ್ಮ) ರಕ್ಷಕನಲ್ಲಿಯೂ ಆತನ ಮಹಿಮೆಯಲ್ಲಿಯೂ ಆನಂದ ಪಟ್ಟು, ನಿನ್ನ ದಯವನ್ನು ಮನಃಪೂರ್ವಕವಾಗಿ ಸ್ತುತಿಸುತ್ತಾನೆ (-ಳೆ, -ರೆ). ಮಹಾ ಕರುಣೆಯುಳ್ಳ ತಂದೆಯೇ! ವಿಶ್ವಾಸಿಸಿ ಸ್ನಾನ ಹೊಂದಿದವನು ರಕ್ಷಿಸಲ್ಪಡುವನೆಂದು ನಿನ್ನ ಪ್ರಿಯ ಮಗನು ಹೇಳದ ಕಾರಣ, ಇಲ್ಲಿ ಬಂದು ನಿಂತಿರುವವನೂ (-ಳೂ, -ರೂ) ನಾವೆಲ್ಲರೂ ನಿನ್ನನ್ನು ಬೇಡಿ ಕೊಳ್ಳುವದೇನಂದರೆ—ನೀನು ಅವನಲ್ಲಿ (-ಳಲ್ಲಿ, -ರಲ್ಲಿ) ತೊಡಗಿದ ಕೆಲಸಕ್ಕೆ ನೀನೇ ನೇಮಿಸಿದ ಮರ್ಮಾಚರಣೆಯಾದ ಸ್ನಾನದಲ್ಲಿ ಮುದ್ರೆ ಹಾಕು! ದೇವರೇ! ಅವನಲ್ಲಿ (-ಳಲ್ಲಿ, -ರಲ್ಲಿ) ನಂಬಿಕೆಯನ್ನು ನೆಲೆಗೊಳಿಸು! ಪ್ರತೀಕ್ಷೆಯನ್ನು ಹೆಚ್ಚಿಸು! ಪ್ರೀತಿಯನ್ನು ಉರಿಯ ಮಾಡು! ಅವನು (-ಳು, -ರು) ಕ್ರಿಸ್ತನ ಆತ್ಮವನ್ನು ಹೊಂದಿ, ಕ್ರಿಸ್ತನ

ಲ್ಲಿಯ ಸತ್ಯವನ್ನು ಕೈಕೊಂಡು, ಮಾಂಸ ರಕ್ತಗಳಿಗೂ ಸೈತಾನನಿಗೂ ಲೋಕಕ್ಕೂ ವಿರೋಧವಾಗಿ ಕಡೇ ವರೆಗೂ ಒಳ್ಳೇ ಹೋರಾಟವನ್ನು ಮಾಡುವ ಹಾಗೆ, ನಿನ್ನ ಆತ್ಮದ ವರಗಳನ್ನು ಅವನಿಗೆ (-ಳಗೆ, -ರಿಗೆ) ಹೇರಳವಾಗಿ ದಯ ಪಾಲಿಸು! ಅವನನ್ನು (-ಳನ್ನು, -ರನ್ನು) ನಿನ್ನ ಒಡಂಬಡಿಕೆಯಲ್ಲಿ ಸ್ಥಿರ ಪಡಿಸು! ಎಲ್ಲಾ ಬುದ್ಧಿ ಮೀರುವ ನಿನ್ನ ಸಮಾಧಾನವು ಅವನ (-ಳ, -ರ) ಹೃದಯವನ್ನೂ ಇಂದ್ರಿಯಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡುವಂಥಾದ್ದಾಗಲಿ! ಕೆಲವರು ಮಾಡಿದಂತೆ ಅವನು (-ಳು, -ರು) ಎಂದಿಗಾದರೂ ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ತೊರೆದು ಬಿಡದೆ, ವಿಶ್ವಾಸವೆಂಬ ಹಡಗದ ನಷ್ಟ ಪಡದೆ, ನಿನ್ನ ಶಕ್ತಿಯಿಂದ ವಿಶ್ವಾಸದ ಮೂಲವಾಗಿ ನಿತ್ಯ ರಕ್ಷಣೆ ಹೊಂದುವ ಹಾಗೆ ದಯ ಮಾಡು! ಬೇಡಿರಿ! ಆಗ ನಿಮಗೆ ಕೊಡಲ್ಪಡುವದು; ಹುಡುಕಿರಿ! ಆಗ ಕಂಡು ಕೊಳ್ಳುವಿರಿ; ತಟ್ಟಿರಿ! ಆಗ ನಿಮಗೆ ತೆರೆಯಲ್ಪಡುವದು ಎಂತ ನಿನ್ನ ಅತಿಪ್ರಿಯ ಮಗನು ಹೇಳಿದನಲ್ಲ! ಆತನ ಹೆಸರಿನಲ್ಲಿಯೇ ನಾವು ಬೇಡಿ ಕೊಳ್ಳುತ್ತೇವೆ. ಈಗ ನಿನ್ನ ಆಳು (ಆಳುಗಳು) ಆದ ಇವನು (-ಳು, -ರು) ಬೇಡುವದನ್ನು ಕೊಡು! ಅವನು (-ಳು,-ರು) ಹುಡುಕುವದನ್ನು ದೊರಕಿಸು! ಇಹದಲ್ಲಿ ನಿನ್ನ ಕೃಪೆಯ ರಾಜ್ಯದ ಬಾಗಲನ್ನು ಉಚಿತವಾದ ದಯದಿಂದ ಅವನಿಗೆ (-ಳಗೆ, -ರಿಗೆ) ತೆರೆದು, ಪರದಲ್ಲಿ ಅವನಿಗೂ (-ಳಗೂ, -ರಿಗೂ) ನಮ್ಮೆಲ್ಲರಿಗೂ ನಿನ್ನ ನಿರಂತರ ಮಹಿಮೆಯ ರಾಜ್ಯದ ಬಾಗಲನ್ನೂ ತೆರೆ! ಆಮೆನ್!

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಶೇರಿಸದಿರು! ಆದರೆ ಕೇಡಿಗೆ ನಮ್ಮನ್ನು

ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ಸ್ನಾನಕ್ಕೆ ಬಂದವನಿಗೆ (-ಳಿಗೆ, -ರಿಗೆ) ಹೇಳುವದು.

Ansprache an den Täufling.

ಒಡೆಯನಲ್ಲಿ ಪ್ರಿಯನೇ (-ಳೇ, -ರೇ)! ಸತ್ತವರೊಳಗಿಂದ ಎದ್ದ ನಮ್ಮೊಡೆಯನು ತನ್ನ ಶಿಷ್ಯರಿಗೆ ಸ್ನಾನವನ್ನು ಆಜ್ಞಾಪಿಸಿ ಸ್ಥಾಪಿಸಿದ ಮಾತನ್ನು ಈಗ ಕೇಳು (-ಳಿರಿ)!

ಸ್ವರ್ಗದಲ್ಲಿಯೂ ಪೃಥ್ವಿಯಲ್ಲಿಯೂ ಸರ್ವಾಧಿಕಾರವು ನನಗೆ ಕೊಟ್ಟದೆ. ಆದದರಿಂದ ನೀವು ಹೊರಟು ಹೋಗಿ, ತಂದೆಯು ಮತ್ತು ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕೈಕೊಳ್ಳುವದಕ್ಕೆ ಅವರಿಗೆ ಬೋಧಿಸಿ, ಎಲ್ಲಾ ಜನಾಂಗಗಳನ್ನು ನನ್ನ ಶಿಷ್ಯಮಂಡಲಿಯಲ್ಲಿ ಸೇರಿಸಿರಿ! ಮತ್ತು, ಇಗೋ, ಈ ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸಗಳಲ್ಲಿಯೂ ನಾನು ನಿಮ್ಮ ಸಂಗಡ ಇದ್ದೇನೆ.

ನೀನು (-ವು) ತ್ರಯೈಕ ದೇವರ ಮಾರ್ಗವನ್ನು ಕುರಿತ ಉಪದೇಶ ಹೊಂದಿ, ಕ್ರಿಸ್ತನ ಶಿಷ್ಯನು (-ಳು, -ರು) ಆಗಲಿಕ್ಕೆ ಮನಸ್ಸು ತೋರಿಸಿದ ಕಾರಣ, ನೀನು (-ವು) ಹೃದಯದಲ್ಲಿ ನಂಬಿದ್ದನ್ನು ಈಗ ಬಾಯಿಯಿಂದ ಈ ಸಭೆಯ ಮುಂದೆ ಅರಿಕೆ ಮಾಡಿ, ಕ್ರಿಸ್ತನ ಕೃಪೆಯ ಒಡಂಬಡಿಕೆಯಲ್ಲಿ ಸೇರ ಬೇಕೆಂದು ನಿನಗೆ (ನಿಮಗೆ) ಹೇಳುತ್ತೇನೆ.

ಸ್ವರ್ಗ ಪೃಥ್ವಿಗಳ ನಿರ್ಮಾಣಿಕನಾದ, ಸರ್ವಶಕ್ತಿಯುಳ್ಳ ತಂದೆಯಾದ ದೇವರಲ್ಲಿ ವಿಶ್ವಾಸವಿಡುತ್ತೀಯೋ (-ರೋ)?

ಮತ್ತು ಆತನ ಒಬ್ಬನೇ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು, ಈತನು ಪವಿತ್ರಾತ್ಮದಿಂದ ಗರ್ಭಕ್ಕೆ ಬಂದು, ಕನ್ಯೆ ಮರಿಯಳಲ್ಲಿ ಹುಟ್ಟಿದನು; ಪೊಂತೀಯ ಪಿಲಾತನ ಕಾಲದಲ್ಲಿ ಶ್ರಮ ಪಟ್ಟು, ಕ್ರೂಜಿಸಲ್ಪಟ್ಟು, ಮರಣ ತಾಳಿ, ಹೂಣಲ್ಪಟ್ಟನು;

ಪಾತಾಳಕ್ಕೆ ಇಳಿದು, ಮೂರನೇ ದಿವಸದಲ್ಲಿ ಸತ್ತವರೊಳಗಿಂದ ಎದ್ದನು; ಸ್ವರ್ಗಕ್ಕೆ ಏರಿ, ಅಲ್ಲಿ ಸರ್ವಶಕ್ತ ತಂದೆಯಾಗಿರುವ ದೇವರ ಬಲಗಡೆಯಲ್ಲಿ ಕೂತು ಕೊಂಡಿದ್ದಾನೆ; ಅಲ್ಲಿಂದ ಆತನು ತಿರಿಗಿ ಬಂದು, ಬದುಕುವವರಿಗೂ ಸತ್ತವರಿಗೂ ನ್ಯಾಯ ತೀರಿಸುವನು ಎಂದು ನಂಬುತ್ತೀಯೋ (-ರೋ)?

ಮತ್ತು ಪವಿತ್ರಾತ್ಮದಲ್ಲಿಯೂ ವಿಶ್ವಾಸವಿಟ್ಟು, ಬಂದೇ ಪವಿತ್ರ ಕ್ರೈಸ್ತ ಸಭೆಯೂ ಪವಿತ್ರರ ಅನ್ಯೋನ್ಯವೂ ಪಾಪಗಳ ಕ್ಷಮೆಯೂ ದೇಹದ ಉತ್ಥಾನವೂ ನಿತ್ಯಜೀವವೂ ಉಂಟು ಎಂದು ನಂಬುತ್ತೀಯೋ (-ರೋ)? ನಂಬುತ್ತೀಯಾ(-ರಾ)ದರೆ—

ಹೌದು, ನಂಬುತ್ತೇನೆ—ಅನ್ನು (ಅನ್ನಿರಿ)!

ಸೈತಾನನನ್ನೂ ಅವನ ಎಲ್ಲಾ ಕಾರ್ಯಗಳನ್ನೂ ಲೋಕದ ಜಂಭ ಡಂಭ ಭೋಗಗಳನ್ನೂ ಮಾಂಸದ ದುರಾಶೆಗಳನ್ನೂ ಬಿಟ್ಟು ಎದುರಿಸುತ್ತೀಯೋ (-ರೋ)? ಹೌದಾದರೆ—

ಹೌದು, ಬಿಟ್ಟು ಎದುರಿಸುತ್ತೇನೆ—ಅನ್ನು (ಅನ್ನಿರಿ)!

ತಂದೆ ಮಗ ಪವಿತ್ರಾತ್ಮ ಆಗಿರುವ ದೇವರಿಗೆ ಎಂದೆಂದಿಗೂ ನಂಬಿಕೆಯುಳ್ಳವನಾಗಿ (-ಳಾಗಿ, -ರಾಗಿ), ನಿನ್ನ (ನಿಮ್ಮ) ನಡೆನುಡಿಯನ್ನೆಲ್ಲಾ ಆತನ ವಾಕ್ಯಕ್ಕೆ ಸರಿ ಬೀಳ ಮಾಡ ಬೇಕೆಂಬ ಹಂಗನ್ನು ನಿನ್ನ (ನಿಮ್ಮ) ಮೇಲೆ ತಕ್ಕೊಳ್ಳುತ್ತೀಯೋ (-ರೋ)? ಹೌದಾದರೆ—

ಹೌದು, ಪೂರ್ಣ ಹೃದಯದಿಂದ—ಅನ್ನು (ಅನ್ನಿರಿ)!

ಈಗ ಇಲ್ಲಿ ಅರಿಕೆ ಮಾಡಿದ ವಿಶ್ವಾಸದ ಮೇಲೆ ಸ್ನಾನ ಹೊಂದ ಬೇಕೆಂದಿದ್ದೀಯೋ (-ರೋ)? ಇದ್ದರೆ—

ಹೌದು—ಅನ್ನು (ಅನ್ನಿರಿ)!

ಸ್ನಾನವನ್ನು ಕೊಡುವದು. Taufact.

(-ನೇ! -ಯೇ! -ಳೇ!) ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ನಿನಗೆ ಸ್ನಾನ ಕೊಡುತ್ತೇನೆ.

(-ನೇ! -ಯೇ! -ಳೇ!) ಯೇಸು ಕ್ರಿಸ್ತನ ಮೂಲವಾಗಿ ಪುನರ್ಜನ್ಮದ ತೊಳಯುವಿಕೆಯಿಂದ ತನ್ನ ಸಮಸ್ತ ಕೃಪೆಯನ್ನು ನಿನಗೆ ಉಚಿತವಾಗಿ ಕೊಡುವ ಸರ್ವಶಕ್ತ ದೇವರೂ ಯೇಸು ಕ್ರಿಸ್ತ ಒಡೆಯನ ತಂದೆಯೂ ಆದಾತನು ತನ್ನ ಆತ್ಮದಿಂದ ನಿನ್ನನ್ನು ನಿತ್ಯಜೀವಕ್ಕಾಗಿ ಬಲ ಪಡಿಸಲಿ! ಯೆಹೋವನ ಸಮಾಧಾನವು ನಿನಗೆ ಇದ್ದೇ ಇರಲಿ! ಆಮೆನ್!

ಪ್ರಾರ್ಥನೆ. Gebet.

ಸರ್ವಶಕ್ತ ದೇವರೇ! ಸ್ವರ್ಗೀಯ ಪ್ರಿಯ ತಂದೆಯೇ! ನೀನು ನಿನ್ನ ಸಭೆಯನ್ನು ಕೃಪೆಯಿಂದ ಸಲುಹಿ ಬೆಳಸುತ್ತಾ ಇರುವಾತನಾಗಿ, ಈತನು (ಈಕೆ, ಇವರು) ಈಗ ಸ್ನಾನ ಪಡಕೊಂಡು, ಅದರಿಂದ ನಮ್ಮ ಯೇಸು ಕ್ರಿಸ್ತ ಒಡೆಯನಿಗೂ ಆತನ ಸಭೆಗೂ ಕೂಡಿ ಕೊಂಡು, ನಿನ್ನ ಮಕ್ಕಳ ಲೆಖ್ಖದಲ್ಲಿ ಶೇರಿ, ಸ್ವರ್ಗರಾಜ್ಯದ ಬಾಧ್ಯತೆಯನ್ನು ಹೊಂದುವ ದಕ್ಕೆ ನೀನು ದಯ ಮಾಡಿದದಕ್ಕೋಸ್ಕರ ನಿನ್ನನ್ನು ಹೊಗಳಿ ಕೊಂಡಾ ಡುತ್ತೇವೆ. ಮಹಾ ಮಮತೆಯುಳ್ಳ ತಂದೆಯೇ! ಈಗ ದೊರಕಿದ ದಯೆಯಲ್ಲಿ ಅವನನ್ನು(-ಳನ್ನು, -ರನ್ನು) ನೆಲೆಗೊಳಿಸಿ ಕಾಪಾಡು! ಅವನು (-ಳು, -ರು) ಸದ್ವಿಶ್ವಾಸದಲ್ಲಿಯೂ ಸದ್ಭಕ್ತಿಯಲ್ಲಿಯೂ ಚನ್ನಾಗಿ ಬಲ ಗೊಂಡು, ನಮ್ಮೆಲ್ಲರಿಗೂ ಒಂದೇ ತಲೆಯಾಗಿರುವ ಕ್ರಿಸ್ತನಲ್ಲಿ ಹೆಚ್ಚು ಹೆಚ್ಚಾಗಿ ಬೆಳೆದು, ಎಲ್ಲಾ ಬುದ್ಧಿಶುದ್ಧಿ ನೀತಿಗಳುಳ್ಳ ಸಂಪೂರ್ಣ ಪುರುಷ ಪರಿಮಾಣಕ್ಕೆ ಮುಟ್ಟಿ, ಯಾವ ಅಬದ್ಧ ಬೋಧನೆಯಿಂದಾಗಲೀ ಪ್ರಪಂ ಚದ ವಿಘ್ನ ವಿಲೋಭನಗಳಿಂದಾಗಲೀ, ಸೈತಾನನ ಕುಯುಕ್ತಿ ತಂತ್ರ ಗಳಿಂದಾಗಲೀ ಸತ್ಯಕ್ಕೆ ತೊಲಗದೆ, ನಿನಗೆ ದೂರವಾಗದೆ, ಪರಿಶುದ್ಧರೆಲ್ಲರ ಸಂಗಡ ವಾಗ್ದತ್ತವಾದ ಬಾಧ್ಯತೆಯನ್ನು ಹೊಂದುವ ಹಾಗೆ ಅವನಿಗೆ (-ಳಗೆ, -ರಿಗೆ) ನಿನ್ನ ಪ್ರಿಯ ಮಗನೂ ನಮ್ಮ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮುಖಾಂತರ ದಯ ಮಾಡು! ಆಮೆನ್!

ಅಥವಾ oder

ಒಡೆಯನಾದ ಯೇಸು ಕ್ರಿಸ್ತನೇ! ನರಕುಲದೀಪಕನಾದ ದೇವರ ಮಗನೇ! ನಾವು ಕೆಟ್ಟವರಾಗಿದ್ದರೂ, ನಮ್ಮ ಮಕ್ಕಳಿಗೆ ಒಳ್ಳೇ ದಾನಗಳನ್ನು ಕೊಡ ತಿಳಿದರೆ, ಎಷ್ಟ್ಯೋ ಹೆಚ್ಚಾಗಿ ಸ್ವರ್ಗದಲ್ಲಿರುವ ನಮ್ಮ ತಂದೆ ತನ್ನನ್ನು ಬೇಡಿ ಕೊಳ್ಳುವವರಿಗೆ ಪವಿತ್ರಾತ್ಮವನ್ನು ಕೊಡುವನು! ಎಂಬದಾಗಿಯೂ, ನಮ್ಮಲ್ಲಿ ಇಬ್ಬರು ಯಾವ ಕಾರ್ಯವನ್ನು ಕುರಿತಾದರೂ ಒಡಂಬಟ್ಟು, ಏಕಮನಸ್ಸಾಗಿ ಬೇಡಿದರೆ, ಸ್ವರ್ಗದಲ್ಲಿರುವ ತಂದೆ ಬೇಡಿದ್ದನ್ನು ಕೊಡುವನು ಎಂಬದಾಗಿಯೂ ನೀನು ಹೇಳಿ, ನಮಗೆ ಕೊಟ್ಟ ಅಭಯವನ್ನೂ ಆಧಾರವನ್ನೂ ನಾವು ಹಿಡುಕೊಂಡು, ಬೇಡಿ ಕೊಳ್ಳುತ್ತೇವೆ. ಈಗ ಸ್ನಾನ ಹೊಂದಿದವನು(-ಳು, -ರು) ನಿನ್ನ ಸುವಾರ್ತೆಗೆ ಯಾವಾಗಲೂ ವಿಧೇಯನಾಗಿ(-ಳಾಗಿ, -ರಾಗಿ), ಸೈತಾನನಿಗೂ ಪಾಪಕ್ಕೂ ಏನೂ ಇಂಬು ಕೊಡದೆ ಎದುರ್ನಿಂತು, ಗೆಲುವಾಗಿ ಕಾದಾಡುವ ಹಾಗೆಯೂ, ಪವಿತ್ರಾತ್ಮವನ್ನು ಎಂದಾದರೂ ದುಃಖ ಪಡಿಸದ ಹಾಗೆಯೂ, ನಿನ್ನ ಸಭೆಯವರಿಗೆ ಎಡತಡೆ ಆಗಿರದ ಹಾಗೆಯೂ, ಎಲ್ಲಾ ನಡೆನುಡಿಗಳಲ್ಲಿ ನಿನ್ನ ಕೀರ್ತಿಯನ್ನೂ ತನ್ನ (ತಮ್ಮ) ರಕ್ಷಣೆಯನ್ನೂ ಸಭೆಯ ಹಿತವನ್ನೂ ನೋಡಿ ಸಾಧಿಸುತ್ತಿರುವ ಹಾಗೆಯೂ, ನಿನ್ನ ಪವಿತ್ರಾತ್ಮದಿಂದ ಅವನನ್ನು (-ಳನ್ನು, -ರನ್ನು) ಬಲ ಪಡಿಸಿ, ಕಾಪಾಡಿ, ನಡಿಸುತ್ತಿರು! ಆಮೆನ್!

ಆಶೀರ್ವಾದವಚನವು. Segen.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

3. ಅವಸರಸ್ನಾನವು. Jäh-Taufe.

ಪ್ರಾರ್ಥನೆ. Gebet.

ಯೇಸು ಕ್ರಿಸ್ತ ಒಡೆಯನೇ! ಈ ಕೂಸನ್ನು/ಕೂಸುಗಳನ್ನು ನಾವು ನಿನಗೆ ಒಪ್ಪಿಸುತ್ತೇವೆ. ಮಕ್ಕಳನ್ನು ನನ್ನ ಬಳಿಗೆ ಬರಲೀಸಿರಿ! ಯಾಕಂದರೆ ದೇವರ ರಾಜ್ಯವು ಅಂಥವರದೇ ಎಂದು ನೀನು ಹೇಳಿದಂತೆ ಅದನ್ನು/ಅವನ್ನು ನಿನ್ನ ಮಗು/ಮಕ್ಕಳು ಎಂತ ಸ್ವೀಕರಿಸು! ಆಮೆನ್!

ಸ್ನಾನ ಕೊಡುವದು. Hierauf die Taufhandlung.

(-ನೇ! -ಯೇ! -ಳೇ!) ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ನಿನಗೆ ಸ್ನಾನ ಕೊಡುತ್ತೇನೆ.

ಆಶೀರ್ವಾದವಚನವು. Segen.

ಯೆಹೋವನು ನಿನ್ನನ್ನು/ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿನ್ನ/ನಿಮ್ಮ ಮೇಲೆ ಬೆಳಗಿಸಿ, ನಿನಗೆ/ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿನ್ನ/ನಿಮ್ಮ ಮೇಲೆ ಇರಿಸಿ, ನಿನಗೆ/ನಿಮಗೆ ಸಮಾಧಾನವನ್ನೀಯಲಿ! ಆಮೆನ್!

II. ದೃಢೀಕರಣವು. Confirmation.

ನಮ್ಮ ಆರಂಭವು ಸ್ವರ್ಗ ಪೃಥ್ವಿಗಳ ನಿರ್ಮಾಣಕರ್ತನಾದ ಯೆಹೋವನ ಹೆಸರಿನಲ್ಲಿ ಆಗಲಿ! ಆಮೆನ್!

ಯೇಸು ಕ್ರಿಸ್ತನಲ್ಲಿ ಪ್ರಿಯರೇ! ಸ್ನಾನದಿಂದ ದೇವರ ಕೃಪೆಯಲ್ಲಿ ನಮ್ಮ ಸಂಗಡ ಪಾಲುಗಾರರಾದ ಈ ಮಕ್ಕಳು ತಮ್ಮ ಒಡೆಯನೂ ರಕ್ಷಕನೂ ಆದಾತನಿಗೆ ತಮ್ಮನ್ನು ತಾವೇ ಒಪ್ಪಿಸಿ ಕೊಡಲಿಕ್ಕೂ ದೇವರ ಸಂಗಡ ಸ್ನಾನದಲ್ಲಾದ ಒಡಂಬಡಿಕೆಯನ್ನು ದೃಢ ಮಾಡಲಿಕ್ಕೂ ಇಲ್ಲಿ ನೆರೆದು ಬಂದಿದ್ದಾರೆ. ಅವರು ಸುವಾರ್ತಾಸತ್ಯದಲ್ಲಿ ಬೋಧನೆಯನ್ನು

ಹೊಂದಿ, ರಕ್ಷಣೆಯ ಮಾರ್ಗವನ್ನು ತಿಳಿದು, ಹಿಡಿಯಲಿಕ್ಕೆ ಶಕ್ತರಾಗಿ, ಯೇಸು ಕ್ರಿಸ್ತ ಒಡೆಯನು ತನ್ನ ಸಭೆಗೆ ದಯ ಮಾಡುವ ಸಕಲ ಆಶೀರ್ವಾದಗಳಲ್ಲಿ ತಾವು ಪಾಲುಗಾರರಾಗುವಂತೆ ಕೃಪಾಭರಿತವಾದ ರಾತ್ರಿ ಭೋಜನದಿಂದಲೂ ತಮ್ಮ ರಕ್ಷಕನ ಅನ್ಯೋನ್ಯಸಂಸರ್ಗದಲ್ಲಿ ವಿಶೇಷ ರೀತಿಯಾಗಿ ಶೇರ ಬೇಕೆಂದಿರುತ್ತಾರೆ. ಅದಲ್ಲದೆ ತಮ್ಮಲ್ಲಿ ಹುಟ್ಟಿರುವ ವಿಶ್ವಾಸದ ಮಂಗಳ ಪ್ರತೀಕ್ಷೆಗೆ ಆಧಾರವೇನು ಎಂಬದಕ್ಕೆ ತಕ್ಕ ಉತ್ತರವು ತಮಗೆ ಉಂಟೆಂದು ಇಲ್ಲಿಯೂ ತೋರಿಸುವದಕ್ಕೂ, ಬಾಲಸ್ನಾನದಲ್ಲಿ ತಮ್ಮ ಮೇಲೆ ತೆಕ್ಕೊಂಡ ವ್ರತವನ್ನು ಈಗ ಬಾಯಿ ತೆರೆದು, ದೇವರ ಮುಂದೆಯೂ ಸಭೆಯ ಮುಂದೆಯೂ ಪ್ರಮಾಣಪೂರ್ವಕವಾಗಿ ಸ್ಥಿರ ಪಡಿಸುವದಕ್ಕೂ, ಕ್ರೈಸ್ತ ವಿಶ್ವಾಸಾರ್ಥದ ಸೂತ್ರಗಳನ್ನು ಅರಿಕೆ ಮಾಡ ಬೇಕೆಂಬ ಬಯಕೆ ಅವರಲ್ಲಿ ಉಂಟು. ಹೀಗಿರಲಾಗಿ ನಾನು ನಿಮ್ಮೆಲ್ಲರನ್ನು ದೇವರ ಹೆಸರಿನಲ್ಲಿ ಎಚ್ಚರಿಸಿ, ಬೇಡುವದೇನಂದರೆ: ಈ ಹುಡುಗರು ಇಲ್ಲಿ ವಿಶ್ವಾಸಸೂತ್ರಗಳನ್ನು ಅರಿಕೆ ಮಾಡಿ, ಕ್ರೈಸ್ತ ಧರ್ಮವನ್ನು ಕೈಕೊಂಡು ನಡೆದು ಕೊಳ್ಳುತ್ತೇವೆಂಬ ವಚನ ಕೊಡುವದನ್ನು ನೀವು ತಕ್ಕ ಪ್ರೀತಿಭಾವದಿಂದಲೂ ಪ್ರಾರ್ಥನಾಭಾವದಿಂದಲೂ ಲಾಲಿಸಿರಿ! ದೇವರು ಅವರಲ್ಲಿ ತೊಡಗಿದ ಒಳ್ಳೇ ಕೆಲಸವನ್ನು ತನ್ನ ಪವಿತ್ರಾತ್ಮದಿಂದ ಸಾಗಿಸಿ, ಸಿದ್ಧಿ ಹೊಂದಿಸಿ, ತೀರಿಸ ಬೇಕೆಂದು ಅವರಿಗೋಸ್ಕರ ಮನಃಪೂರ್ವಕವಾಗಿ ಬೇಡಿ ಕೊಳ್ಳೋಣ!

ಪ್ರಾರ್ಥನೆ. Gebet.

ಸ್ವರ್ಗದಲ್ಲಿರುವ ಪ್ರಿಯ ತಂದೆಯೇ! ನೀನು ಈ ಮಕ್ಕಳನ್ನು ಪರಿಶುದ್ಧ ಸ್ನಾನದಲ್ಲಿ ಕ್ರಿಸ್ತನ ಮುಖಾಂತರ ಅಂಗೀಕರಿಸಿ, ನಿನ್ನ ಅನ್ಯೋನ್ಯದಲ್ಲಿ ಶೇರಿಸಿ ಕೊಂಡು, ಇಂದಿನ ವರೆಗೂ ಬಲುಮೆಯಿಂದ ಸಲುಹುತ್ತಾ, ನಿನ್ನ ಪ್ರಿಯ ಮಗನನ್ನು ತಿಳುಕೊಳ್ಳುವ ಹಾಗೆ ಅವರಿಗೆ ಉಪದೇಶ ಕೊಡಿಸುತ್ತಾ ಬಂದಿದ್ದೀ. ಈಗ ಸಹ, ಪ್ರಿಯ ತಂದೆಯೇ! ನಿನ್ನ ಮಗನಾದ ಯೇಸುವಿನ ಸಲವಾಗಿ ಅವರನ್ನು ಕರುಣಾಕಟಾಕ್ಷದಿಂದ ನೋಡಿ, ಜೀವಕರವಾದ ನಿನ್ನ ಜ್ಞಾನದ ಬೆಳಕನ್ನು ಅವರಲ್ಲಿ

ಮೂಡಿಸಿ, ಅವರು ತಿಳುಕೊಂಡ ಸತ್ಯದಲ್ಲಿ ದೃಢರಾಗಿ ನಿಂತು, ನಿತ್ಯ ಜೀವದ ಪದವಿಯಲ್ಲಿ ಶೇರುವ ಹಾಗೆ ನಿನ್ನ ಪವಿತ್ರಾತ್ಮದ ವರಗಳನ್ನು ಅವರಲ್ಲಿ ಹೆಚ್ಚಿಸಿ, ಅವರನ್ನು ನಿನ್ನ ಹೆಸರಿನಲ್ಲಿ ಕಾಪಾಡು! ಆಮೆನ್!

ಎಲ್ಲಾ ಬುದ್ಧಿಯನ್ನು ಮಿಾರುವ ದೇವರ ಸಮಾಧಾನವು ನಿಮ್ಮ ಹೃದಯಗಳನ್ನೂ ಇಂದ್ರಿಯಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ! ಆಮೆನ್!

ಈಗ ನಿಮ್ಮ ವಿಶ್ವಾಸಾರ್ಥವು ಏನೆಂತ ಅರಿಕೆ ಮಾಡಿರಿ!

ದೃಢೀಕರಣೀಯ ಹುಡುಗರು ಒಬ್ಬೊಬ್ಬರಾಗಿ ದೃಢೀಕರಣಪುಸ್ತಕದ ಪ್ರಶ್ನೆಗಳಿಗೆ ಉತ್ತರ ಕೊಟ್ಟ ತರುವಾಯ ಕೆಳಗೆ ಬರುವ ಪ್ರಶ್ನೆಗಳಿಗೆ ಒಟ್ಟಿಗೆ ಉತ್ತರ ಕೊಡುವದು:

Nachdem die Kinder einzeln auf die Fragen des Confirmationsbüchleins geantwortet haben, sind folgende Fragen an sie gemeinschaftlich zu richten:

ಪ್ರಶ್ನೆ—ಪ್ರಿಯ ಮಕ್ಕಳೇ! ನೀವು ಈಗ ಬಾಯಿಯಿಂದ ಅರಿಕೆ ಮಾಡಿದ ಕ್ರೈಸ್ತವಿಶ್ವಾಸಸೂತ್ರಗಳನ್ನು ನಿತ್ಯ ರಕ್ಷಣೆಯ ಅಸ್ತಿವಾರವೆಂದು ಎಡೆಬಿಡದೆ ನಂಬಿ, ಅವುಗಳಲ್ಲಿ ನೆಲೆಗೊಂಡು, ಸಾಯುವ ತನಕ ಅವುಗಳಿಗೆ ಸರಿಯಾಗಿ ನಡಕೊಳ್ಳುವದಕ್ಕೆ ಮನಸ್ಸುಳ್ಳವರಾಗಿದ್ದೀರೋ?

ಉತ್ತರ—ಹೌದು, ಪೂರ್ಣ ಮನಸ್ಸುಳ್ಳವರಾಗಿದ್ದೇವೆ.

ಪ್ರ.—ಸೈತಾನನನ್ನೂ ಅವನ ಎಲ್ಲಾ ಕಾರ್ಯಗಳನ್ನೂ ಲೋಕದ ಜಂಭ ಡಂಭ ಭೋಗಗಳನ್ನೂ ಮಾಂಸದ ದುರಾಶೆಗಳನ್ನೂ ಬಿಟ್ಟು ಎದುರಿಸುತ್ತೀರೋ?

ಉ.—ಹೌದು, ಬಿಟ್ಟು ಎದುರಿಸುತ್ತೇವೆ.

ಪ್ರ.—ತಂದೆ ಮಗ ಪವಿತ್ರಾತ್ಮ ಆಗಿರುವ ದೇವರಿಗೆ ನಾವು ಎಂದೆಂದಿಗೂ ನಂಬಿಕೆಯುಳ್ಳವರಾಗಿ, ನಮ್ಮ ನಡೆನುಡಿಯೆಲ್ಲಾ ಆತನ ವಾಕ್ಯಕ್ಕೆ ಸರಿ ಬೀಳುವಂತೆ ನಂಬಲಿಕ್ಕೂ ಬದುಕಲಿಕ್ಕೂ ಶ್ರಮ ತಾಳಲಿಕ್ಕೂ ಸಾಯಲಿಕ್ಕೂ ಸಿದ್ಧರಾಗಿದ್ದೇವೆ ಎಂಬ ಮಾತು ಕೊಡುತ್ತೀರೋ?

ಉ.—ಹೌದು, ಪೂರ್ಣ ಹೃದಯದಿಂದ ಈ ಮಾತು ಕೊಡುತ್ತೇವೆ. ಅದಕ್ಕಾಗಿ ದೇವರು ತನ್ನ ಪವಿತ್ರಾತ್ಮದ ಕೃಪೆಯನ್ನೂ ಬಲವನ್ನೂ ನಮಗೆ ದಯ ಪಾಲಿಸಲಿ! ಆಮೆನ್!

ಬಳಿಕ ದೃಢೀಕರಣೀಯರು ಒಬ್ಬೊಬ್ಬರಾಗಿ ಪೀಠದ ಮುಂದೆ ಮೊಣಕಾಲೂರಿ ಕೊಂಡಿರುವಾಗ ಬೋಧಕನು ಒಬ್ಬೊಬ್ಬರ ತಲೆಯ ಮೇಲೆ ಬಲಗೈಯನ್ನು ಇಟ್ಟು ಆಶೀರ್ವದಿಸುವದು:

Die Confirmanden knieen einzeln vor den Altar, der Geistliche legt jedem seine rechte Hand auf das Haupt und spricht:

ಸ್ವರ್ಗದಲ್ಲಿರುವ ತಂದೆ ಯೇಸು ಕ್ರಿಸ್ತನ ಮೂಲವಾಗಿ ಪವಿತ್ರಾತ್ಮದ ವರವನ್ನು ನಿನಗೆ ಕೊಟ್ಟು, ನಿನ್ನಲ್ಲಿ ಹೆಚ್ಚಿಸುತ್ತಾ, ನಿನ್ನ ವಿಶ್ವಾಸವನ್ನು ಬಲ ಪಡಿಸುತ್ತಾ, ಭಕ್ತ್ಯಾಸಕ್ತಿಯಿಂದ ನಡೆಯುವದಕ್ಕೆ ಶಕ್ತಿಯನ್ನೂ ಶ್ರಮ ಸೈರಿಸುವದಕ್ಕೆ ತಾಳ್ಮೆಯನ್ನೂ ಆನಂದ ಪಡುವದಕ್ಕೆ ನಿತ್ಯ ಜೀವದ ಪ್ರತೀಕ್ಷೆಯನ್ನೂ ನಿನ್ನಲ್ಲಿ ಬೆಳಸುತ್ತಾ ಇರಲಿ! ಆಮೆನ್!

ಅಥವಾ oder

ವಿಶ್ವಾಸದ ಮುಖಾಂತರವಾಗಿ ಕ್ರಿಸ್ತನು ನಿನ್ನ ಹೃದಯದಲ್ಲಿ ನಿವಾಸಿಸುವದಕ್ಕೂ ನೀನು ಒಳಮನುಷ್ಯನಲ್ಲಿ ಪವಿತ್ರಾತ್ಮದಿಂದ ಬಲಗೊಳ್ಳುವದಕ್ಕೂ ದೇವರು ತನ್ನ ಕೃಪಾತಿಶಯದಿಂದ ನಿನಗೆ ದಯ ಮಾಡಲಿ! ಆಮೆನ್!

ಅಥವಾ oder

ಕ್ರಿಸ್ತ ಯೇಸುವಿನಲ್ಲಿ ತನ್ನ ನಿತ್ಯ ಮಹಿಮೆಗೆ ನಿನ್ನನ್ನು ಕರೆದ ಸರ್ವ ಕೃಪೆಯುಳ್ಳ ದೇವರು ತಾನೇ ನಿನ್ನನ್ನು ಸಂಸಿದ್ಧ ಮಾಡಿ, ಸ್ಥಿರ ಪಡಿಸಿ, ಬಲ ಪಡಿಸಿ, ನೆಲೆಗೊಳಿಸಿ, ಕಾಪಾಡಿ, ನಿತ್ಯಜೀವದ ಪರಮ ಪದವಿಯಲ್ಲಿ ಶೇರಿಸಲಿ! ಆಮೆನ್!

ಅಥವಾ oder

ಸಮಾಧಾನದ ದೇವರು ತಾನೇ ನಿನ್ನನ್ನು ಪರಿಪೂರ್ಣವಾಗಿ ಪವಿತ್ರ ಮಾಡಲಿ! ಮತ್ತು ನಿನ್ನ ಪೂರ್ಣ ಆತ್ಮ ಪ್ರಾಣ ದೇಹಗಳು ನಮ್ಮ ಯೇಸು ಕ್ರಿಸ್ತ ಒಡೆಯನ ಆಗಮನದಲ್ಲಿ ದೋಷವಿಲ್ಲದ್ದಾಗಿರುವಂತೆ ಕಾಪಾಡಲ್ಪಡಲಿ! ಆಮೆನ್!

ಅಥವಾ oder

ಸಮಾಧಾನದ ದೇವರು ತಾನೇ ನಿನ್ನನ್ನು ಸಕಲ ಸತ್ಕ್ರಿಯೆಗಳಿಗೆ ಸವರಿಸಿ, ತನ್ನ ಸಮ್ಮುಖದಲ್ಲಿ ಸಮರ್ಪಕವಾದದನ್ನು ಯೇಸು ಕ್ರಿಸ್ತನ ಮುಖಾಂತರ ನಿನ್ನಲ್ಲಿ ಉಂಟು ಮಾಡಲಿ! ಆಮೆನ್!

ಪ್ರಾರ್ಥನೆ. Gebet.

ಸರ್ವಶಕ್ತ ದೇವರೇ! ಕರುಣೆಯುಳ್ಳ ತಂದೆಯೇ! ಒಳ್ಳೇದನ್ನೆಲ್ಲಾ ನಮ್ಮಲ್ಲಿ ತೊಡಗಿಸಿ ಸಾಗಿಸಿ ತೀರಿಸುವವನು ನೀನೊಬ್ಬನೇ! ನಾವು ಈ ಮಕ್ಕಳಗೋಸ್ಕರ ನಿನ್ನನ್ನು ಬೇಡಿ ಕೊಳ್ಳುತ್ತೇವೆ. ಅವರು ಕ್ರಿಸ್ತನ ಶರೀರದಲ್ಲಿ ಜೀವವುಳ್ಳ ಅವಯವಗಳಾಗಿ, ಸದ್ವಿಶ್ವಾಸದಿಂದ ನಿನ್ನ ಪರಿಶುದ್ಧ ಸುವಾರ್ತೆಗೆ ವಿಧೇಯರಾಗಿ ಇದ್ದು ಳಿಯುವ ಹಾಗೆ ಅವರನ್ನು ಕಾಪಾಡು! ಅವರು ಇಂದು ಅರಿಕೆ ಮಾಡಿದ ಸತ್ಯವನ್ನು ಎಂದಾದರೂ ಬಿಡದೆ, ಯಾವ ದುರ್ಬೋಧನೆಯಿಂದಲಾದರೂ ಕಾಮವಿಕಾರಾದಿಗಳಿಂದಲಾದರೂ ಮರುಳಾಗಿ ಕೆಟ್ಟು ಹೋಗದೆ ಇರುವಂತೆ ಅವರನ್ನು ನಿನ್ನ ಆತ್ಮದಿಂದ ಬಲಗೊಳಿಸು! ನಮ್ಮೆಲ್ಲರಿಗೆ ತಲೆಯಾಗಿರುವ ಕ್ರಿಸ್ತನಲ್ಲಿ ಅವರು ಎಲ್ಲಾ ಬಗೆಯಿಂದ ಬೆಳೆದು, ಎಲ್ಲಾ ಬುದ್ಧಿ ಶುದ್ಧಿ ನೀತಿಗಳಲ್ಲಿ ಸಂಪೂರ್ಣರಾಗಿ, ಆತನ ಪುರುಷಪರಿಮಾಣಕ್ಕೆ ಮುಟ್ಟುವ ಪದವಿಯನ್ನು ಅವರಿಗೆ ಕೊಡು! ಅವರು ನಿನ್ನನ್ನೂ ನಿನ್ನ ಪ್ರಿಯ ಮಗನಾದ ನಮ್ಮೊಡೆಯನನ್ನೂ ಏಕ ನಿಜ ದೇವರೆಂದು ಹೆಚ್ಚು ಹೆಚ್ಚಾಗಿ ತಿಳಿದು ಕೊಂಡು, ನಿನ್ನನ್ನು ಬಿಡದೆ ಧೈರ್ಯವಾಗಿ ನಡೆನುಡಿಗಳಿಂದ ಸರ್ವರ ಮುಂದೆ ಅರಿಕೆ ಮಾಡಿ, ಸಭೆಯಲ್ಲಿ ನಿನ್ನ ಕೃಪೆಯನ್ನು ಸತ್ಕ್ರಿಯೆಗಳೆಂಬ ಫಲಗಳಿಂದ ಮಹಿಮೆ ಪಡಿಸುವಂತೆ ಅವರಿಗೆ ನಮ್ಮ ಯೇಸು ಕ್ರಿಸ್ತ ಒಡೆಯನ ಮುಖಾಂತರ ದಯ ಮಾಡು! ಆಮೆನ್!

ಅಥವಾ oder

ದೇವರಾದ ಯೆಹೋವನೇ! ಸ್ವರ್ಗೀಯ ತಂದೆಯೇ! ಯಾರೂ ಹೇಳಲಳವಲ್ಲದ ನಿನ್ನ ಜ್ಞಾನ ನೀತಿಗಳಿಗೆ ಎಣೆಯಾದ ನಿನ್ನ ರಾಜ್ಯದ ಮರ್ಮಗಳನ್ನು ಈ ಲೋಕದ ಜ್ಞಾನಿಗಳಿಗೆ ಮರೆ ಮಾಡಿ, ಚಿಕ್ಕ ಮಕ್ಕಳಿಗೆ ತಿಳಿಸುವಾತನೇ! ನೀನು ಈ ಮಕ್ಕಳಿಗೆ ನಿನ್ನ ಸತ್ಯದ ತಿಳುವಿಕೆಯನ್ನು ದಯ ಮಾಡಿರಲಾಗಿ, ಅವರು ನಿನ್ನ ಮಗನಾದ ಯೇಸು ಕ್ರಿಸ್ತನನ್ನೂ ಆತನ ಸುವಾರ್ತೆಯನ್ನೂ ಹೃದಯದಲ್ಲಿ ನಂಬಿ ಕೊಂಡು, ಬಾಯಿ

ಯಿಂದ ಅರಿಕೆ ಮಾಡಿದ್ದಕ್ಕಾಗಿ ನಾವು ನಿನ್ನನ್ನು ಹೊಗಳುತ್ತೇವೆ. ನಿನ್ನ ಪವಿತ್ರಾತ್ಮದಿಂದ ಅವರ ಹೃದಯವನ್ನೂ ಮನಸ್ಸನ್ನೂ ಇನ್ನೂ ಹೆಚ್ಚು ಬೆಳಗಿಸಿ, ಅವರು ಜೀವವುಳ್ಳ ವಿಶ್ವಾಸವೂ ಭಕ್ತಿಯೂ ಸ್ಥಿರತ್ವವೂ ಆತ್ಮೀಕ ಕಾರ್ಯಗಳಲ್ಲಿ ವಿವೇಕವೂ ಆಸಕ್ತಿಯೂ ಉಳ್ಳವರಾಗಿ, ರಕ್ಷಣಾರ್ಥವಾದ ಸಕಲ ವಿಷಯಗಳಲ್ಲಿ ಬೆಳೆದು, ನಿನ್ನ ಪವಿತ್ರವಾದ ಹೆಸರಿನ ಕೀರ್ತಿಗಾಗಿ ವಿಶ್ವಾಸ ಪ್ರೀತಿಗಳ ಸತ್ಫಲಗಳನ್ನು ಫಲಿಸಿ, ಎಲ್ಲಾ ಸದ್ಭಕ್ತರೊಡನೆ ನೀತಿಯ ಕಿರೀಟವನ್ನು ಪಡಕೊಳ್ಳುವ ಹಾಗೆ ಕಡೇ ವರೆಗೂ ನಿನ್ನ ಮಾರ್ಗದಲ್ಲಿ ಬಿಡದೆ ಇದ್ದು ನಡಕೊಳ್ಳುವಂತೆ ಅವರಿಗೆ ದಯಮಾಡು! ನಿನ್ನ ಸಂಗಡಲೂ ಪವಿತ್ರಾತ್ಮದ ಸಂಗಡಲೂ ಯುಗಯುಗಕ್ಕೆ ನಿಜ ದೇವರಾಗಿ ಆಳುತ್ತಾ ಬಾಳುತ್ತಾ ಇರುವ ನಿನ್ನ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನ ಹೆಸರಿನಲ್ಲಿ ನಾವು ಅರ್ಪಿಸಿದ ಬಿನ್ನಹಗಳನ್ನು ಆಲೈಸು! ಆಮೆನ್!

ಸ್ವರ್ಗ ಪೃಥ್ವಿಗಳ ನಿರ್ಮಾಣಕರ್ತನಾದ ಯೆಹೋವನಿಂದ ಆಶೀರ್ವದಿಸಲ್ಪಟ್ಟವರಾಗಿ ಸಮಾಧಾನದಲ್ಲಿ ಹೋಗಿರಿ! ಆಮೆನ್!

ಆಶೀರ್ವಾದವಚನವು. Segen.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

III. ರಾತ್ರಿಭೋಜನವು. Abendmahl.

a. ರಾತ್ರಿಭೋಜನ ಆಗುವ ಮುಂಚಿನ ಆದಿತ್ಯವಾರದಲ್ಲಿ ಅದನ್ನು ಸಭೆಗೆ ತಿಳಿಸುವದು ಹ್ಯಾಗಂದರೆ:

Ankündigung desselben.

ಯೇಸು ಕ್ರಿಸ್ತ ಒಡೆಯನಲ್ಲಿ ಪ್ರಿಯರೇ! ದೇವರ ದಯವಾದರೆ, ಬರುವ ಆದಿತ್ಯವಾರದಲ್ಲಿ ರಾತ್ರಿಭೋಜನವಾಗುವದು. ಅದಕ್ಕೆ ಬನ್ನಿರಿ! ಎಂದು ಯೇಸು ಕ್ರಿಸ್ತನ ಹೆಸರಿನಲ್ಲಿ ಕರೆಯುತ್ತೇನೆ. ಅದಕ್ಕೆ ಬರ ಬೇಕೆಂದಿರುವವರಲ್ಲಿ ಯಾರಿಗಾದರೂ ಆಜ್ಞೆನಿರ್ಣಯವಾಗದೆ, ಎಲ್ಲರಿಗೂ ಅದರಿಂದ ಆಶೀರ್ವಾದವು ದೊರಕುವಂತೆ ಎಲ್ಲರೂ ತಮ್ಮನ್ನು ದೇವರ ಸಹಾಯದಿಂದ ಸಿದ್ಧ ಮಾಡಿ ಕೊಳ್ಳಲಿ! ಬರುವ (—ಲ್ಲಿ —ಘಂಟೆಗೆ) (. . . . ಲ್ಲಿ) ಸನ್ನಾಹಬೋಧನೆ (ಪ್ರಾರ್ಥನೆ) ಆಗುವದು.

ನಮ್ಮ ಪ್ರಿಯ ರಕ್ಷಕನು ನಮ್ಮೆಲ್ಲರನ್ನು ಎಚ್ಚರಿಸಿ, ನಾವು ಪಶ್ಚಾತ್ತಾಪ ಸಹಿತವಾದ ವಿಶ್ವಾಸದಿಂದ ತನ್ನ ಮೇಜಿಗೆ ಬರುವದಕ್ಕೆ ಅಡ್ಡಿಯಾದ್ದನ್ನೆಲ್ಲಾ ತಳ್ಳಿ ಬಿಡುವದಕ್ಕೆ ನಮ್ಮನ್ನು ಬಲ ಪಡಿಸಲಿ! ಆತನು ನಮ್ಮೆಲ್ಲರನ್ನು ಒಬ್ಬೊಬ್ಬನ ಹೃದಯದ ಸ್ಥಿತಿಗೆ ತಕ್ಕ ಹಾಗೆ ಕರುಣಿಸಿ, ನಮ್ಮೆಲ್ಲರಲ್ಲಿ ತನ್ನ ಕೃಪೆಯನ್ನೂ ಆತ್ಮದ ಬಲವನ್ನೂ ಹೆಚ್ಚಿಸಿ, ತನ್ನ ನಿಜ ಅನ್ಯೋನ್ಯದಲ್ಲಿ ನಮ್ಮನ್ನು ಶೇರಿಸಲಿ! ಆಮೆನ್!

b. ಸಿದ್ಧೀಕರಣವು. Beichte.

ರಾತ್ರಿಭೋಜನ ಆಗುವ ಮುಂಚಿನ ದಿನದಲ್ಲಿ ಸಿದ್ಧೀಕರಣವು (ಅಂದರೆ ಪಾಪದ ಅರಿಕೇ ಸಂಬಂಧವಾದ ದೇವಾರಾಧನೆ) ಆಗ ತಕ್ಕದ್ದು. ಆ ಸಮಯದ ಪ್ರಸಂಗವು ತೀರಿದ ಬಳಿಕ ಪಾಪದ ಅರುಹಿಕೆ ಆಗ ತಕ್ಕದ್ದು.

Wenn das Abendmahl gehalten wird, so soll immer am vorhergehenden Tag, wo möglich Abends, ein besonderer Vorbereitungs- oder Beicht-Gottesdienst stattfinden. Die Beichte findet als besonderer Akt nach der Predigt statt. Der Prediger steht hiebei im Altar.

ಪ್ರಬೋಧನವು. Ermahnung.

ಯೇಸು ಕ್ರಿಸ್ತನಲ್ಲಿ ಪ್ರಿಯರೇ! ಒಡೆಯನ ಭೋಜನಕ್ಕೆ ಬರ ಬಯಸುವವರೆಲ್ಲರೂ ಅಪೊಸ್ತಲನಾದ ಪೌಲನು ಬರೆದಂತೆ ಮಾಡ ತಕ್ಕದ್ದು; ಅದೇನಂದರೆ: ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡು, ಈ ರೊಟ್ಟಿ ತಿಂದು, ಈ ಪಾತ್ರೆಯಲ್ಲಿ ಕುಡಿಯಲಿ! ಯಾಕಂದರೆ ಅಯೋಗ್ಯ ವಾಗಿ ತಿಂದು ಕುಡಿಯುವವನು ಒಡೆಯನ ಶರೀರಕ್ಕೂ ರಕ್ತಕ್ಕೂ ಅಪ ರಾಧಿಯಾಗಿ, ತನಗೆ ಆಜ್ಞೆ ನಿರ್ಣಯವನ್ನು ತಿಂದು ಕುಡಿಯುತ್ತಾನೆ. ಹಾ ಗಾದರೆ ನಾವು ನ್ಯಾಯವಿಚಾರಣೆಗೂ ತೀರ್ಪಿಗೂ ಗುರಿಯಾಗದಂತೆ ನಮಗೆ ನಾವೇ ನ್ಯಾಯವಿಚಾರಣೆ ಮಾಡಿ ಕೊಳ್ಳೋಣ! ನಮಗೆ ಪಾಪ ವಿಲ್ಲವೆಂದು ನಾವು ಹೇಳಿದರೆ, ಅಸತ್ಯವಂತರಾಗಿ ನಮ್ಮನ್ನು ನಾವೇ ಮೋ ಸಗೊಳಿಸ್ಯೇವು. ಮನುಷ್ಯನ ಹೃದಯದ ಇಂಗಿತವೆಲ್ಲಾ ಅವನ ಚಿಕ್ಕ ತನದಿಂದಲೇ ಕೆಟ್ಟದು. ಮಾಂಸದಿಂದ ಹುಟ್ಟಿದ್ದು ಮಾಂಸವಾಗಿದೆ, ಹೆಚ್ಚು ಕಡಿಮೆ ಇಲ್ಲ; ನಾವೆಲ್ಲರೂ ಪಾಪ ಮಾಡಿ, ದೇವರ ಮಹಿಮೆಗೆ ತಪ್ಪಿ ಹೋದವರು. ಆದರೆ ಯೆಹೋವನು ಇಂದ್ರಿಯಗಳನ್ನೂ ಹೃದ ಯಗಳನ್ನೂ ಶೋಧಿಸುತ್ತಾನೆ; ಆತನ ದೃಷ್ಟಿಗೆ ಎಲ್ಲವೂ ತೆರೆದದಾಗಿಯೂ ಬೈಲಾಗಿಯೂ ಅದೆ. ದುಷ್ಟತ್ವಕ್ಕೆ ಆತನು ಮೆಚ್ಚನು; ಕೆಟ್ಟವನು ಆತನ ಬಳಿಯಲ್ಲಿ ಇದ್ದುಳಿಯನು. ನಾವು ಪಾಪದಲ್ಲಿ ಇದ್ದು ಕೊಂಡು, ಮಾನ ಸಾಂತರ ಪಡದೆ, ಕಠಿಣರಾಗಿ ಹೋದರೆ, ದೇವರ ನ್ಯಾಯವಾದ ನ್ಯಾಯ ತೀರ್ಪು ಪ್ರಕಟವಾಗುವ ಕೋಪದ ದಿವಸಕ್ಕೆ ಆತನ ಕೋಪವನ್ನು ನಾವೇ ನಮಗೆ ಕೂಡಿಸಿ ಇಟ್ಟು ಕೊಳ್ಳುವವರಾದೇವು; ಅಂದು ಆತನು ಒಬ್ಬೊಬ್ಬನಿಗೆ ಅವನವನ ಕ್ರಿಯೆಗಳಿಗೆ ತಕ್ಕ ಪ್ರತಿಫಲವನ್ನು ಕೊ ಡುವನು; ಆತನಲ್ಲಿ ಮುಖದಾಕ್ಷಿಣ್ಯವೆಂಬದು ಇಲ್ಲಾ. ಹೀಗಿರಲಾಗಿ ನಿಮ್ಮ ಪಾಪಗಳು ಅಳಿದು ಹೋಗುವ ಹಾಗೆ ಮಾನಸಾಂತರ ಪಟ್ಟು, ಯೆಹೋವನ ಕಡೆಗೆ ತಿರುಗಿ ಕೊಳ್ಳಿರಿ! ದುಷ್ಟನು ತನ್ನ ದುರ್ಮಾರ್ಗ ವನ್ನೂ ಕೆಡಕನು ತನ್ನ ಬಗೆಗಳನ್ನೂ ಬಿಟ್ಟು ಬಿಡಲಿ! ನಿಮ್ಮ ಪಾಪಗ

ಳನ್ನು ತಿಳಿದು ಕೊಂಡು, ಪಶ್ಚಾತ್ತಾಪವುಳ್ಳವರಾಗಿ ದೇವರ ಮುಂದೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ! ನಂಬಿಕೆ ಇಲ್ಲದ ಕೆಟ್ಟ ಹೃದಯವು ಒಬ್ಬನಿಗಾದರೂ ಇರದ ಹಾಗೆ ನೋಡಿ ಕೊಳ್ಳಿರಿ! ಇಂದು ದೇವರ ಶಬ್ದವನ್ನು ಕೇಳುವಲ್ಲಿ ನಿಮ್ಮ ಹೃದಯವನ್ನು ಕಠಿಣ ಮಾಡಿ ಕೊಳ್ಳ ಬೇಡಿರಿ! ನಿಮ್ಮ ಸಮಾಧಾನಕ್ಕೆ ಬೇಕಾದ್ದೇನೆಂದು ತಿಳಿದು ಕೊಂಡು, ರಕ್ಷಣೆ ಪಡ ಕೊಳ್ಳಲಿಕ್ಕೆ ತ್ವರೆ ಪಡಿರಿ!

ಇಂಥಾ ಮಾತುಗಳಿಂದ ದೇವರ ವಾಕ್ಯವು ನಮ್ಮನ್ನು ಎಚ್ಚರಿಸಿ, ನಾವು ಆಗದವರೆಂಬದನ್ನು ನಮ್ಮ ನೆನಪಿಗೆ ತಂದು, ಮಾನಸಾಂತರ ಪಡಿರೆಂದು ಬಲವಾಗಿ ಹೇಳುವದಲ್ಲದೆ, ದೇವರಲ್ಲಿಯ ನೆಲೆಗಾಣದ ಕರುಣಾತಿಶಯವನ್ನು ಸಹ ನಮಗೆ ಸಾರಿ ತಿಳಿಸುತ್ತದೆ; ಹ್ಯಾಗಂದರೆ: ನನ್ನ ಜೀವದಾಣೆ! ಪಾಪಿ ಸಾಯ ಬೇಕೆಂಬದು ಅಲ್ಲಾ, ತನ್ನ ದುರ್ಮಾರ್ಗ ಬಿಟ್ಟು, ನನ್ನ ಬಳಿಗೆ ಬಂದು ಬದುಕ ಬೇಕೆಂಬದೇ ನನ್ನ ಇಷ್ಟಾರ್ಥವಾಗಿದೆ ಎಂಬದಾಗಿ ದೇವರಾದ ಯೆಹೋವನು ಹೇಳಿದ್ದಾನೆ. ತಂದೆ ತನ್ನ ಮಕ್ಕಳನ್ನು ಕನಿಕರಿಸುವಂತೆ ಯೆಹೋವನು ತನಗೆ ಭಯ ಪಡುವವರನ್ನು ಕನಿಕರಿಸುವಾತನು. ಮಾನಸಾಂತರ ಪಡುವ ಪಾಪಿಯ ಮೇಲೆ ಸ್ವರ್ಗದಲ್ಲಿ ಸಂತೋಷವು ಉಂಟಾಗಿರುವದು. ಆತನಲ್ಲಿ ವಿಶ್ವಾಸವನ್ನು ಇಡುವವರೆಲ್ಲರೂ ನಾಶವಾಗದೆ ನಿತ್ಯಜೀವವನ್ನು ಹೊಂದ ಬೇಕೆಂತ ದೇವರು ತನ್ನ ಒಬ್ಬನೇ ಮಗನನ್ನು ಕೊಡುವಷ್ಟು ಪ್ರೀತಿ ಲೋಕಕ್ಕೆ ಮಾಡಿದನು. ದೇವರಿಗೆ ಸಂಧಾನವಾಗಿ ಅನ್ಯೋನ್ಯವಾಗಿರಿ! ಯಾಕಂದರೆ ನಾವು ಆತನಲ್ಲಿ ದೇವರ ನೀತಿಯೆಂತಾಗುವ ಹಾಗೆ ದೇವರು ಪಾಪವನ್ನು ಅರಿಯದಾತನನ್ನು ನಮಗೋಸ್ಕರ ಪಾಪವೆಂತಾಗ ಮಾಡಿದನು.

ಈ ಪ್ರಬೋಧಕವಚನಗಳನ್ನೂ ವಾಗ್ದಾನಗಳನ್ನೂ ಕೇಳಿದ ಬಳಿಕ ನಾವು ದೇವರ ಮುಂದೆ ನಮ್ಮನ್ನು ತಗ್ಗಿಸಿ ಕೊಂಡು, ನಮ್ಮ ಪಾಪಗಳನ್ನು ಅರಿಕೆ ಮಾಡಿ, ಆತನ ಕೃಪೆಯನ್ನು ಅರಸಿ ಬೇಡಿ ಕೊಳ್ಳೋಣ!

ಪಾಪದ ಅರುಹಿಕೆ. Sündenbekenntniss.

ಎಲ್ಲರೂ ಮೊಣಕಾಲೂರಿ ಕೊಂಡು ಹೇಳುವದು.

Alle knieen.

ಸ್ವರ್ಗದಲ್ಲಿರುವ ತಂದೆಯಾದ ದೇವರ ಮುಂದೆ ನಾನು ಬಡ ಕಂಗಾಲ ಪಾಪಿಯಾಗಿದ್ದೇನೆಂದು ದುಃಖ ಪಟ್ಟು ಅರಿಕೆ ಮಾಡುತ್ತೇನೆ. ಅಕಟಾ! ನಾನು ಲೆಕ್ಕವಿಲ್ಲದಷ್ಟು ಬಹಳ ಪಾಪಗಳನ್ನು ನಡಿಸಿದ್ದೇನೆ. ದೇವರೇ! ನಿನ್ನ ಅಪ್ಪಣೆಗಳನ್ನು ಬಹಿರಂಗದಲ್ಲಿ ಹೇರಳ ಕರ್ಮಗಳಿಂದ ಮೀರಿದ್ದಲ್ಲದೆ, ಇನ್ನೂ ಹೆಚ್ಚಾಗಿ ಹೃದಂತರಂಗದ ಕೆಟ್ಟತನದಿಂದಲೂ ಅವಿಶ್ವಾಸದಿಂದಲೂ ಅಲ್ಪವಿಶ್ವಾಸದಿಂದಲೂ ತಾಳ್ಮೆ ಅರಿಯದ ಮನದಿಂದಲೂ ಆಲಸ್ಯದಿಂದಲೂ ಒಳ್ಳೇದು ಮಾಡುವದನ್ನು ಮರೆತು ಬಿಡುವದರಿಂದಲೂ ಹೊಟ್ಟೆಕಿಚ್ಚಿನಿಂದಲೂ ಸೊಕ್ಕಿನಿಂದಲೂ ಹಮ್ಮಿನಿಂದಲೂ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಮೊದಲಾದ ದುರ್ಗುಣಗಳಿಂದಲೂ ನಾನಾ ಕುಯುಕ್ತಿ ತಂತ್ರಗಳಿಂದಲೂ ನಿನಗೆ ದ್ರೋಹಿಯಾಗಿ, ನಿನ್ನ ಕೋಪಕ್ಕೂ ಇಹದ ದಂಡನೆಗೂ ಮಾತ್ರವಲ್ಲ, ಪರದ ನಿತ್ಯ ಆಜ್ಞೆ ನಿರ್ಣಯಕ್ಕೆ ಸಹ ಪಾತ್ರನಾಗಿದ್ದೇನೆ. ನನ್ನೊಡೆಯನಾದ ದೇವರೇ! ನಾನು ತಿಳುಕೊಂಡ ಹೇರಳ ಪಾಪಗಳಿಗೂ ನನಗೆ ತಿಳಿಯದೆ ಮರೆಯಾದಂಥವುಗಳಿಗೂ ನಾನು ಪಶ್ಚಾತ್ತಾಪ ಪಟ್ಟು, ಎದೆ ಒಡೆದು ಹೋಗುವ ಹಾಗೆ ಇರುವಲ್ಲಿ, ನೀನು ನನ್ನನ್ನು ಕರುಣಿಸಿ, ನನಗೆ ಕ್ಷಮೆಯನ್ನು ದಯ ಪಾಲಿಸಬೇಕೆಂದು ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನ ಮುಖಾಂತರ ಹೃದಯಪೂರ್ವಕವಾಗಿ ಬೇಡಿ ಕೊಳ್ಳುತ್ತೇನೆ. ಆಮೆನ್!

ಪ್ರಸಂಗಿಯು ಕ್ಷಮಾವಚನವನ್ನು ಹೇಳುವದು.

Der Geistliche spricht die Absolution.

ತಾವು ಬಡ ಕಂಗಾಲ ಪಾಪಿಗಳೇ ಎಂಬದನ್ನು ನಿಜವಾಗಿ ತಿಳಿದು ಕೊಂಡು, ಅರಿಕೆ ಮಾಡಿ, ಯಥಾರ್ಥವಾದ ಪಶ್ಚಾತ್ತಾಪ ಪಡುವ ಹೃದಯದಿಂದ ದೇವರ ಕ್ಷಮಾದಯವನ್ನೂ ಕೃಪೆಯನ್ನೂ ಬಯಸಿ ಬೇಡಿ ಕೊಳ್ಳುವವರೇ! ನಮ್ಮ ಯೇಸು ಕ್ರಿಸ್ತ ಒಡೆಯನ ತಂದೆಯಾದ ಸರ್ವ

ಶಕ್ತ ದೇವರು ಕರುಣೆ ಪಟ್ಟು, ತನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ಮರಣ ತಾಳಿ, ನಿಮ್ಮ ನೀತಿನಿರ್ಣಯ ಕ್ಕೋಸ್ಕರ ಎದ್ದ ಕಾರಣ, ಪಾಪಗಳನ್ನೆಲ್ಲಾ ಕ್ಷಮಿಸಿ ಬಿಡುತ್ತಾನೆ. ಮತ್ತು ಯೇಸು ಕ್ರಿಸ್ತ ಒಡೆಯನ ಹೆಸರನ್ನು ಎತ್ತಿ, ಯಾರ ಪಾಪಗಳನ್ನಾದರೂ ನೀವು ಬಿಟ್ಟರೆ, ಅವರಿಗೆ ಬಿಟ್ಟವೆ; ಯಾರವನ್ನಾದರೂ ಹಿಡಿದರೆ, ಅವರಿಗೆ ಹಿಡಿದವೆ ಎಂಬುವ ಆತನ ವಾಕ್ಯವನ್ನು ಆಧಾರ ಮಾಡಿ ಕೊಂಡು, ನಾನು ಈಗ ನಿಮ್ಮಲ್ಲಿ ನಿಜ ಮಾನಸಾಂತರ ಪಟ್ಟು, ನಂಬುವಂಥವರೆಲ್ಲರಿಗೂ ಸಾರುವದೇನಂದರೆ: ನೀವು ನಿಮ್ಮ ಎಲ್ಲಾ ಪಾಪಗಳಿಂದ ಬಿಡುಗಡೆಯಾ ಗಿದ್ದೀರಿ; ಅವುಗಳ ಹಂಗು ತಡೆ ನಿಮಗೆ ಇನ್ನು ಇರದು; ಯಾಕಂದರೆ ಯೇಸು ಕ್ರಿಸ್ತನು ತಾನು ತಾಳಿದ ಶ್ರಮ ಮರಣಗಳಿಂದ ಪ್ರಾಯಶ್ಚಿತ್ತ ವನ್ನು ಕೊಟ್ಟು, ಪಾಪವನ್ನು ಪರಿಹರಿಸಿ, ಪಾಪವಿಮೋಚನೆಯ ವಾಕ್ಯ ವನ್ನು ಸುವಾರ್ತೆಯಿಂದ ಎಲ್ಲಾ ಲೋಕದಲ್ಲಿ ಸಾರಲಿಕ್ಕೆ ಅಪ್ಪಣೆ ಕೊಟ್ಟಿ ದ್ದಾನೆ. ಹೀಗಿರಲಾಗಿ ನಾನು ಈಗ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ತಿಳಿಸಿದ ಈ ಆದರಣೆಯ ನುಡಿಯನ್ನು ನೀವು ನಿಮ್ಮ ಸಮಾಧಾನಕ್ಕಾಗಿ ಹಿಡಿದು ಕೊಂಡು, ನಿಮ್ಮ ಮನಸ್ಸಾಕ್ಷಿಯನ್ನು ಈ ಆಧಾರದಿಂದ ಸಂತೈಸಿ, ನಿಮ್ಮ ಪಾಪಗಳು ನಿಮಗೆ ನಿಶ್ಚಯವಾಗಿ ಬಿಟ್ಟವೆ ಎಂದು ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ದೃಢವಾಗಿ ನಂಬಿರಿ!

ಆದರೆ ಮಾನಸಾಂತರವೂ ವಿಶ್ವಾಸವೂ ಇಲ್ಲದವರೆಲ್ಲರಿಗೆ ನಾನು ಸಾರಿ ತಿಳಿಸುವದೇನಂದರೆ: ಅವರ ಪಾಪಗಳು ಅವರಿಗೆ ಹಿಡಿದವೆ. ಅವರು ತಿರುಗಿ ಕೊಂಡು, ಮಾನಸಾಂತರ ಪಟ್ಟು, ಕ್ರಿಸ್ತನಲ್ಲಿ ವಿಶ್ವಾಸ ವಿಡದೆ ಹೋದರೆ, ದೇವರು ಅವರನ್ನು ಇಹದಲ್ಲಿಯೂ ಪರದಲ್ಲಿಯೂ ದಂಡಿಸದೆ ಇರನು. ಆದದರಿಂದ ನಾನು ನಮ್ಮೊಡೆಯನೂ ವಿಮೋಚ ಕನೂ ಆಗಿರುವ ಯೇಸು ಕ್ರಿಸ್ತನ ಅಪ್ಪಣೆಯ ಮೇರೆಗೆ ಅದನ್ನು ಅವರಿಗೆ ಸಾರಿ ತಿಳಿಸಿ, ಅವರು ಮಾನಸಾಂತರ ಪಟ್ಟು, ಸುವಾರ್ತೆ ಯನ್ನು ನಂಬಿ, ದೇವರ ಒಲುಮೆಯನ್ನು ಪಡಕೊಳ್ಳ ಬೇಕೆಂದು ಬೇಡಿ ಕೊಳ್ಳುತ್ತೇನೆ.

ಅಥವಾ oder

ಏಕಾಂತದಲ್ಲಿ ಪಾಪಗಳ ಅರಿಕೆ ಮಾಡಿದವರ ತಲೇ ಮೇಲೆ ಕೈಯಿಟ್ಟು
ನುಡಿಯ ತಕ್ಕ ಕ್ಷಮಾವಾಕ್ಯವು.

Bei Privat-Beicht mit Handauflegung.

ಲೋಕಕ್ಕೆ ಆಜ್ಞೆನಿರ್ಣಯಿಸುವದಕ್ಕಲ್ಲ, ಲೋಕವನ್ನು ರಕ್ಷಿಸುವದಕ್ಕಾಗಿಯೇ ಅವತರಿಸಿ ಬಂದ ಯೇಸು ಕ್ರಿಸ್ತನು—ಕಷ್ಟ ಪಟ್ಟು, ಹೊರೆ ಹೊರುವವರೆಲ್ಲರೇ! ನನ್ನ ಬಳಿಗೆ ಬನ್ನಿರಿ! ನಾನು ನಿಮಗೆ ವಿಶ್ರಾಂತಿ ಕೊಡುವೆನು ಎಂಬದಾಗಿ ಕರೆದು, ಅಭಯ ಕೊಟ್ಟಾತನಾಗಿ ನನ್ನ ಬಾಯಿಯಿಂದ ನಿನಗೆ (ನಿಮಗೆ) ಹೇಳಿಸುವದೇನಂದರೆ: ಧೈರ್ಯವಾಗಿರು(-ರಿ)! ನಿನ್ನ (ನಿಮ್ಮ) ಪಾಪಗಳು ನಿನಗೆ (ನಿಮಗೆ) ಬಿಟ್ಟವೆ.

ಪ್ರಾರ್ಥನೆ. Gebet.

ಸರ್ವಶಕ್ತ ದೇವರೇ! ನಮ್ಮ ಸ್ವರ್ಗೀಯ ತಂದೆಯೇ! ನೀನು ಮಹಾ ಕರುಣೆಯಿಂದ ನಿನ್ನ ಒಬ್ಬನೇ ಮಗನನ್ನು ನಮ್ಮ ಪಾಪಗಳಿಗಾಗಿ ಕ್ರೂಜೆಯಲ್ಲಿ ಪ್ರಾಯಶ್ಚಿತ್ತಾರ್ಥಕ ಮರಣ ತಾಳುವದಕ್ಕೆ ಒಪ್ಪಿಸಿ ಕೊಟ್ಟ ಕೃಪಾತಿಶಯವನ್ನು ಕೊಂಡಾಡುತ್ತೇವೆ. ಆತನು ತನ್ನನ್ನೇ ಆಹುತಿಯಾಗಿ ಕೊಟ್ಟು, ಈ ಒಂದೇ ಆಹುತಿಯಿಂದ ಎಲ್ಲಾ ಕಾಲಕ್ಕೂ ಎಲ್ಲಾ ಲೋಕದ ಪಾಪಗಳ ಪರಿಹಾರಕ್ಕೋಸ್ಕರವೂ ಸಲ್ಲುವ ಪ್ರಾಯಶ್ಚಿತ್ತವನ್ನು ಅರ್ಪಿಸಿದ ಮೇಲೆ ಅನ್ಯೋನ್ಯ ಸಂಧಾನದ ನುಡಿಯನ್ನೂ ಪಾಪಗಳ ವಿಮೋಚನೆಯನ್ನೂ ಸಾರಿಸುತ್ತಾ ಬಂದಿದ್ದಾನೆ. ಕರುಣೆಯುಳ್ಳ ತಂದೆಯೇ! ನಮ್ಮ ಪ್ರಿಯ ರಕ್ಷಕನಾದ ಯೇಸು ಕ್ರಿಸ್ತನ ಅಮೂಲ್ಯವಾದ ಮರಣವನ್ನು ನಾವು ಆತನು ಬರುವ ತನಕವೂ ತಕ್ಕಂತೆ ನೆನಸಿ ಸಾರುವ ಹಾಗೆ ನಮಗೆ ಕೃಪೆಯನ್ನು ದಯ ಮಾಡ ಬೇಕೆಂದು ಬೇಡಿಕೊಳ್ಳುತ್ತೇವೆ. ನಮ್ಮ ಸ್ವಂತ ನೀತಿಯಲ್ಲಿ ಅಲ್ಲ, ನಿನ್ನ ದೊಡ್ಡ ಕರುಣೆಯಲ್ಲಿ ಮಾತ್ರ ಭರವಸವನ್ನು ಇಟ್ಟು, ನಿನ್ನ ಮೇಜಿಗೆ ಬರ ಧೈರ್ಯಗೊಂಡಿದ್ದೇವೆ. ನಿನ್ನ ಮೇಜಿನಿಂದ ಬೀಳುವ ತುಂಡುಗಳನ್ನು ಹೆಕ್ಕಿ ತೆಕ್ಕೊಳ್ಳುವದಕ್ಕಾದರೂ ನಾವು ಯೋಗ್ಯರಲ್ಲ; ಆದರೆ ನೀನು, ಒಡೆಯನೇ!

ಎಂದೆಂದಿಗೂ ಏಕಪ್ರಕಾರವಾಗಿರುವಾತನು; ನಿನ್ನ ಕರುಣೆಗೆ ಮಿತಿಮೇರೆ ಇಲ್ಲ. ಇದನ್ನು ತಿಳಿದು, ನಾವು ಬಂದು, ಇಲ್ಲಿ ನಿನ್ನ ಮಗನಾದ ಯೇಸು ಕ್ರಿಸ್ತನ ದೇಹವನ್ನು ತಿಂದು, ಆತನ ರಕ್ತವನ್ನು ಕುಡಿಯುವದರಿಂದ ನಾವು ದೇಹಾತ್ಮಗಳಲ್ಲಿ ವಾಶಿಯಾಗಿ, ತೃಪ್ತಿಯನ್ನೂ ನಿತ್ಯಜೀವವನ್ನೂ ಹೊಂದುವ ಹಾಗೆಯೂ, ನಾವು ಆತನಲ್ಲಿಯೂ ಆತನು ನಮ್ಮಲ್ಲಿಯೂ ಎಂದೆಂದಿಗೂ ವಾಸವಾಗಿರುವ ಹಾಗೆಯೂ ದಯ ಮಾಡ ಬೇಕೆಂದು ಬಿನ್ನೈಸುತ್ತೇವೆ. ಆಮೆನ್!

ಅಥವಾ oder

ಕರುಣೆಯುಳ್ಳ ದೇವರೇ! ನಮ್ಮ ತಂದೆಯೇ! ನೀನು ನಮಗೆ ಅಪಾರ ದಯೆ ತೋರಿಸಿ, ನಿನ್ನ ಮಗನಾದ ಯೇಸು ಕ್ರಿಸ್ತನ ಸಲುವಾಗಿ ನಮ್ಮ ಪಾಪಗಳನ್ನೆಲ್ಲಾ ನಮಗೆ ಮನ್ನಿಸಿದ ಉಪಕಾರವನ್ನು ಅರಿತು, ನಿನ್ನನ್ನು ಮನಃಪೂರ್ವಕವಾಗಿ ಹೊಗಳುತ್ತೇವೆ. ನಂಬಿಕೆಯುಳ್ಳ ದೇವರೇ! ನಮ್ಮನ್ನು ನಿನ್ನ ಕೃಪೆಯಲ್ಲಿ ನೆಲೆಗೊಳಿಸಿ ಕಾಪಾಡು! ನಾವು ಈಗಿನಿಂದ ಪಾಪವನ್ನು ಹಗೆ ಮಾಡಿ, ಅಗಲಿ ಬಿಟ್ಟು, ಸೈತಾನನ ಮತ್ತು ಪ್ರಪಂಚದ ಎಲ್ಲಾ ವಿಘ್ನ ವಿಲೋಭನಗಳನ್ನು ವಿಶ್ವಾಸದಿಂದ ಎದುರಿಸಿ, ಜೈಸಿ, ನೀತಿಯಲ್ಲಿಯೂ ನಿಜ ಪವಿತ್ರುತ್ವದಲ್ಲಿಯೂ ಬದುಕಿ, ಪವಿತ್ರಾತ್ಮದ ಸಹಾಯದಿಂದ ನಿನಗೆ ಸೇವೆ ಮಾಡುವದಕ್ಕೆ ನಮ್ಮನ್ನು ಬಲ ಪಡಿಸು! ನೀನು ಮೆಚ್ಚುವದನ್ನೇ ಮಾಡುವ ಬುದ್ಧಿಯನ್ನು ನಮಗೆ ಕೊಟ್ಟು, ನಿನ್ನ ಸದಾತ್ಮದಿಂದ ನಮ್ಮನ್ನು ನೆಟ್ಟಣ ಹಾದಿಯಲ್ಲಿ ನಡಿಸು! ಆಮೆನ್!

ಆಶೀರ್ವಾದವಚನವು. Segen:

ಎಲ್ಲಾ ಬುದ್ಧಿಯನ್ನು ಮಿಾರುವ ದೇವರ ಸಮಾಧಾನವು ನಿಮ್ಮ ಹೃದಯಗಳನ್ನೂ ಇಂದ್ರಿಯಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡಲಿ! ಆಮೆನ್!

ರಾತ್ರಿಭೋಜನವು. Abendmahlshandlung.

ತಕ್ಕ ಪಾತ್ರಗಳಲ್ಲಿ ಸಾಕಷ್ಟು ರೊಟ್ಟಿ ದ್ರಾಕ್ಷೆರಸಗಳು ಅನುವಾಗಿ ಇಟ್ಟಿರುವ ಮೇಜಿನ ಬಳಿಯಲ್ಲಿ ಪ್ರಸಂಗಿಯು ನಿಂತು ಕೊಂಡು, ಕೂತು ಕೊಂಡಿರುವ ಸಭೆಯವರಿಗೆ ಹೇಳುವದು.

Der Geistliche tritt zum Tisch des Herrn, auf welchem Wein und Brod in genügender Quantität, in passenden Gefässen und in schicklicher Form [das Brod in längern Stücken, welche leicht gebrochen werden können und erst bei der Darreichung selbst zu brechen sind] aufgestellt ist, und hält an die sitzende Gemeinde die folgende Ansprache.

a. ಸಂಬೋಧನೆ. Ansprache.

ಯೇಸು ಕ್ರಿಸ್ತನಲ್ಲಿ ಪ್ರಿಯರೇ! ನಮ್ಮ ಪ್ರಿಯ ರಕ್ಷಕನ ಕೃಪಾಭರಿತವಾದ ರಾತ್ರಿಭೋಜನವನ್ನು ತಕ್ಕೊಳ್ಳ ಬೇಕೆಂದಿದ್ದೇವೆ. ಅದರಲ್ಲಿ ಆತನು ನಮ್ಮ ವಿಶ್ವಾಸವನ್ನು ಬಲಗೊಳಿಸುವದಕ್ಕಾಗಿ ತನ್ನ ದೇಹವನ್ನು ಆಹಾರವೆಂತ, ತನ್ನ ರಕ್ತವನ್ನು ಪಾನವೆಂತ, ಕೊಡ ಬೇಕೆಂದಿದ್ದಾನೆ. ಹೀಗಿರಲಾಗಿ ನಾವು ಆತನ ದೇಹಕ್ಕೂ ರಕ್ತಕ್ಕೂ ಅಪರಾಧಿಗಳಾಗದಂತೆ ಆತನ ಮೇಜಿನ ಮರ್ಮವನ್ನು ತಿಳಿದಿದ್ದೇವೋ? ಏನೋ? ಎಂಬದಾಗಿ ನಾವು ನಮ್ಮನ್ನು ವಿಚಾರಿಸಿ, ಪರೀಕ್ಷಿಸಿ ಕೊಳ್ಳ ಬೇಕು. ಆ ಮರ್ಮವು ಏನೆಂದರೆ:

ದೇವರ ಮಗನಾದ ಯೇಸು ಕ್ರಿಸ್ತನು ನಮಗೋಸ್ಕರ ಅವತರಿಸಿ ಬಂದು, ಮರಣ ತಾಳಿ, ನಮ್ಮ ಪಾಪಗಳೆಂಬ ಸಾಲವನ್ನೆಲ್ಲಾ ತೆತ್ತು, ಸ್ವರ್ಗೀಯ ತಂದೆಯಾದ ದೇವರಿಗೂ ನಮಗೂ ತಿರಿಗಿ ಅನ್ಯೋನ್ಯಸಂಧಾನ ಮಾಡಿ, ನಮಗೆ ನಿತ್ಯಜೀವದ ಆಹಾರವೂ ಪಾನವೂ ಎಂತಾದನು. ಈ ಮಹತ್ತಾದ ಸಂಗತಿಯನ್ನು ನಾವು ಈ ಭೋಜನದಲ್ಲಿ ಜ್ಞಾಪಕ ಮಾಡಿ ಕೊಂಡು, ಸ್ತೋತ್ರದೊಂದಿಗೆ ಒಡೆಯನ ರೊಟ್ಟಿಯನ್ನೂ ದ್ರಾಕ್ಷೆರಸವನ್ನೂ ತೆಕ್ಕೊಳ್ಳುವದರಲ್ಲಿ ಸಂಸ್ಕಾರರೂಪವಾಗಿ ಸಾರುತ್ತೇವೆ.

ಹೀಗಿರಲಾಗಿ ರಾತ್ರಿಭೋಜನಕ್ಕೆ ಬಂದವರೆಲ್ಲರು, ಒಬ್ಬೊಬ್ಬನೂ ಒಬ್ಬೊಬ್ಬಳೂ, ಎಲ್ಲಾದಕ್ಕಿಂತ ಮುಂದಾಗಿ ಪ್ರಾರ್ಥನೆಯೊಂದಿಗೆ ಧ್ಯಾನ ಮಾಡಿ ಕೊಂಡು, ಯೇಸು ಕ್ರಿಸ್ತ ಒಡೆಯನು ತಾನೇ ಕ್ರೂಜೆಯೆಂಬ

ಪೀಠದಲ್ಲಿ ಯಜ್ಞವಾಗಿ, ತನ್ನ ರಕ್ತವನ್ನು ಹರಿಯ ಕೊಟ್ಟದರಿಂದ ನಮ್ಮ ಪಾಪಗಳೆಲ್ಲಾ ಪರಿಹಾರವಾಗಿ, ಆತನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ನಿತ್ಯ ಜೀವವು ಪ್ರಾಪ್ತವಾಯಿತೆಂದು ಚನ್ನಾಗಿ ತಿಳುಕೊಳ್ಳ ಬೇಕು. ಇದೇ ಸಂಗತಿಯನ್ನು ನಾವು ಇಲ್ಲಿ ಮನಃಪೂರ್ವಕವಾದ ವಿಶ್ವಾಸದಿಂದ ನೆನಸಿ, ನಂಬಿ, ಸ್ವೀಕರಿಸ ಬೇಕು. ಇದಲ್ಲದೆ ತನ್ನ ಒಬ್ಬನೇ ಮಗನನ್ನು ನಮಗೋಸ್ಕರ ಕೊಟ್ಟು, ನಿತ್ಯಕ್ಕೂ ನಮ್ಮನ್ನು ಪಾಪ ಸೈತಾನ ಮರಣ ನರಕಾದಿಗಳಿಂದ ವಿಮೋಚಿಸಿದ ದೇವರ ಅಮಿತವಾದ ಪ್ರೀತಿಯನ್ನು ನಾವು ಅರಿತು, ಈಗ ಇಲ್ಲಿ ಮಾತ್ರವಲ್ಲಾ, ಯಾವಾಗಲೂ ಎಲ್ಲೆಲ್ಲಿಯೂ ಕೊಂಡಾಡ ಬೇಕು.

ಹೀಗಿರಲಾಗಿ ನಾವು ಈಗ ಮುಖ್ಯವಾಗಿ ಧ್ಯಾನಕ್ಕೆ ತಂದು ಕೊಳ್ಳ ತಕ್ಕದ್ದೇನಂದರೆ: ನಿಜ ಕುರುಬನು ಕುರಿಗಳಿಗೋಸ್ಕರ, ನಿರಪರಾಧಿ ಅಪರಾಧಿಗಳಿಗಾಗಿ, ತಲೆಯಾದಾತನು ತನ್ನ ಅವಯವಗಳಿಗಾಗಿ, ಒಡೆಯನಾದ ಮದುಮಗನು ಸಭೆ ಎಂಬ ಮದುಮಗಳಿಗಾಗಿ ಮರಣ ತಾಳಿದನು. ಕ್ರಿಸ್ತನು ಪ್ರಧಾನ ಯಾಜಕನಾಗಿ ತಂದೆಯ ಚಿತ್ತಕ್ಕೆ ವಿಧೇಯನಾಗಿ, ಬಡ ಮರ್ತ್ಯರಾದ ನಮ್ಮ ಮೇಲೆ ಇಟ್ಟ ತನ್ನ ಅಪಾರ ಪ್ರೀತಿಯಿಂದ ತನ್ನನ್ನೇ ಸಂಪೂರ್ಣಾಹುತಿಯಾಗಿ ಅರ್ಪಿಸಿ, ದೇವರ ಕೃಪೆಯ ಒಡಂಬಡಿಕೆಯನ್ನು ಮುದ್ರೆಯಿಟ್ಟು ಪರಿಪೂರ್ಣವಾಗಿ ಸ್ಥಿರ ಪಡಿಸಿದ್ದಾನೆ.

ಮತ್ತು ನಮ್ಮ ಯೇಸು ಕ್ರಿಸ್ತ ಒಡೆಯನು ತನ್ನ ಹೆಸರಿನಲ್ಲಿ ನಾವು ನಮ್ಮ ಸ್ವರ್ಗೀಯ ತಂದೆಯ ಹತ್ತರ ಬೇಡುವಂಥಾದ್ದನ್ನೆಲ್ಲಾ ಹೊಂದುವೆವೆಂಬ ಮಾತು ಕೊಟ್ಟಿರಲಾಗಿ, ನಾವು ಈಗ ತಂದೆಯ ಮಹಾ ಪ್ರೀತಿಯನ್ನು ಚನ್ನಾಗಿ ಗ್ರಹಿಸಿ, ನಮ್ಮೊಡೆಯನೂ ರಕ್ಷಕನೂ ಆಗಿರುವ ಯೇಸು ತನ್ನ ದೇಹ ರಕ್ತಗಳನ್ನು ನಮ್ಮ ಪಾಪಗಳಿಗಾಗಿ ಒಂದೇ ಸಾರಿ ಅರ್ಪಿಸಿ, ನಿತ್ಯ ವಿಮೋಚನೆಯನ್ನು ಘಳಿಸಿ ಕೊಂಡು, ಭಕ್ತರೆಲ್ಲರಿಗೆ ಯುಗಯುಗಾಂತರಕ್ಕೂ ತಂದೆಯ ಒಲುಮೆಯನ್ನು ದೊರಕಿಸಿದ್ದಾನೆಂಬದನ್ನು ಸಂದೇಹವಿಲ್ಲದೆ ಪೂರ್ಣ ಭರವಸದಿಂದ ನಂಬುವ ಹಾಗೆ ತಂದೆ ತಾನು ನಮಗೆ ದಯ ಮಾಡ ಬೇಕೆಂದು ಪ್ರಾರ್ಥಿಸ ತಕ್ಕದ್ದು. ಇದ

ಲ್ಲದೆ ನಾವು ನಮ್ಮೊಳಗೆ ಒಬ್ಬರನ್ನೊಬ್ಬರು ಮಾತ್ರವಲ್ಲ, ಎಲ್ಲಾ ಮನುಷ್ಯರನ್ನೂ ನಮ್ಮ ವೈರಿಗಳನ್ನು ಸಹ, ನಿಷ್ಕಪಟವಾಗಿ ಪ್ರೀತಿ ಮಾಡ ಶಕ್ತರಾಗಿ, ಹಳೇ ಮನುಷ್ಯನನ್ನು, ಅವನ ದುರಾಶೆಗಳು ಸಹಿತವಾಗಿ, ಕೊಂದು ಹಾಕಿ, ದೇವರಿಗೆ ಮೆಚ್ಚಿಗೆಯಾಗುವ ಹೊಸ ನಡತೆಯವರು ಆಗುವ ಹಾಗೆ ದೇವರು ತಾನು ಸಹಾಯಕನಾಗುವಂತೆಯೂ, ನಮ್ಮ ತಲೆಯಾದ ಒಡೆಯನೊಡನೆ ನಾವು ಶ್ರಮ ಪಟ್ಟರೆ, ಆತನೊಡನೆ ಆತನ ಮಹಿಮೆಯಲ್ಲಿಯೂ ಆತನ ರಾಜ್ಯದಲ್ಲಿಯೂ ಪಾಲುಗಾರರಾಗುವೆವೆಂಬ ದೃಢಭರವಸವನ್ನು ಪಡಕೊಂಡು, ಎಲ್ಲಾ ತಾಪ ಶ್ರಮ ಶೋಕ ಶೋಧನೆಗಳಲ್ಲಿ ತಾಳ್ಮೆ ಬಲವುಳ್ಳವರಾಗಿರುವಂತೆಯೂ ಬೇಡಿ ಕೊಳ್ಳ ತಕ್ಕದು. ನಾವು ಯಾವಾಗಲೂ ಎಲ್ಲೆಲ್ಲಿಯೂ ಆತ್ಮದಿಂದಲೂ ಸತ್ಯದಿಂದಲೂ ದೇವರನ್ನು ಆರಾಧಿಸುವಂಥ ಪ್ರಜೆಯೂ ದೇವರ ನಿಜ ಮಕ್ಕಳೂ ಎಂದು ಕಾಣಿಸಿ ಕೊಂಡು, ಸ್ಥಿರ ವಿಶ್ವಾಸ ಪ್ರತೀಕ್ಷೆ ಪ್ರೀತಿ ದೀರ್ಘಶಾಂತಿ ವಿಧೇಯತ್ವ ಪವಿತ್ರತ್ವ ಮುಂತಾದ ಸದ್ಧರ್ಮದ ಗುಣಗಳಿಂದ ಶೋಭಿಸುವ ಹಾಗೆ ದೇವರು ನಮಗೆ ದಯ ಮಾಡಲಿ!

ಕಡೆಯಲ್ಲಿ, ಪ್ರಿಯರೇ! ಅಯೋಗ್ಯವಾಗಿ ಈ ರೊಟ್ಟಿಯನ್ನು ತಿಂದು, ಒಡೆಯನ ಪಾತ್ರದಲ್ಲಿ ಕುಡಿಯುವವನು ಒಡೆಯನ ದೇಹ ರಕ್ತಗಳಿಗೆ ಅಪರಾಧಿಯಾಗುವನೆಂದು ಅಪೊಸ್ತಲನಾದ ಪೌಲನು ಹೇಳಿ ಎಚ್ಚರಿಸುವದರಿಂದ, ಒಬ್ಬೊಬ್ಬನೂ ಒಬ್ಬೊಬ್ಬಳೂ ತನ್ನನ್ನು ಈಗ ವಿಚಾರಿಸಿ, ಕ್ರಿಸ್ತನ ಮರಣದ ಮೂಲವಾಗಿ ನನ್ನ ಪಾಪಗಳೆಲ್ಲಾ ಪರಿಹಾರವಾಗಿವೆಂದು ನಾನು ದೃಢವಾಗಿ ನಂಬುವಷ್ಟರ ಮಟ್ಟಿಗೆ ಅದರ ತಾತ್ಪರ್ಯವು ನನ್ನ ಮನಸ್ಸಿಗೆ ಹತ್ತಿ ಖಚಿತವಾಗಿದೇನೋ? ಮತ್ತೊಬ್ಬರು ನನ್ನನ್ನು ಪ್ರೀತಿ ಮಾಡ ಬೇಕೆಂದು ನಾನು ಇಚ್ಛೈಸುವಂತೆ, ಎಲ್ಲಾ ಮನುಷ್ಯರನ್ನು ಕ್ರಿಸ್ತನಿಗಾಗಿ ಪ್ರೀತಿ ಮಾಡಲಿಕ್ಕೆ ನನ್ನ ಮನಸ್ಸು ಹ್ಯಾಗೆ? ದೇವರ ಸಹಾಯದಿಂದ ಪಾಪಕ್ಕೆ ತೀರ ಸತ್ತು, ದೇವರಿಗೂ ಮನುಷ್ಯರಿಗೂ ಸರಿ ಕಾಣುವಂತೆ ನಡಕೊಂಡು, ಕ್ರಿಸ್ತ ಒಡೆಯನು ತನ್ನ ದಿವ್ಯವಾದ ಬೋಧನೆ ನಡತೆ ಮರಣಗಳಿಂದ ಇಟ್ಟ ಮಾದರಿಯನ್ನು ಎಲ್ಲಾದರಲ್ಲಿ

ಅನುಸರಿಸ ಬೇಕೆಂಬದು ನನ್ನ ಸ್ಥಿರ ಮನೋಗತವೋ? ಎಂಬದಾಗಿ ಪರೀಕ್ಷಿಸಿ ಕೊಳ್ಳಿರಿ!

ಆದರೆ ಯಾರ್ಯಾರು ಹಾಗೆ ಬಗೆಯದೆ, ಅಂಥಾ ಎಚ್ಚರಿಕೆಯ ಮಾತಿಗೂ ಶಿಕ್ಷೆಗೂ ಮಣಿಯದೆ, ಯೇಸು ಒಡೆಯನಿಗೂ ಸಭೆಗೂ ಅಪಕೀರ್ತಿ ಬರುವ ಪಾಪಗಳಲ್ಲಿ ನಡದು, ಹೆದರದೆಯೂ, ಮಾನಸಾಂತರ ಪಡದೆಯೂ, ಇನ್ನು ಮುಂದೆಯೂ ಅವನ್ನು ನಡಿಸ ಬೇಕೆಂದಿದ್ದಾರೋ, ಅಂಥವರು ಒಡೆಯನ ಶರೀರವಾಗಿರುವ ದೇವರ ಸಭೆಗೋಸ್ಕರ ಮಾತ್ರವೇ ಸಿದ್ಧವಾಗಿರುವ ಭೋಜನಕ್ಕೆ ಬಾರದಿರಲಿ!

ಪ್ರಾರ್ಥನೆ. Gebet.

ಪ್ರಿಯ ಸ್ವರ್ಗೀಯ ತಂದೆಯೇ! ನಾವು ಬಹಳ ಪಾಪ ಮಾಡಿ, ಕೆಟ್ಟ ಬಗೆ ನಡೆನುಡಿಗಳಿಂದಲೂ ಪ್ರೀತಿಹೀನತೆಯಿಂದಲೂ ನಿನ್ನ ಪವಿತ್ರ ಆಜ್ಞೆಗಳನ್ನು ವಿಧವಿಧವಾಗಿಯೂ ಮೀರುತ್ತಾ ಬಂದಿದ್ದೇವೆ. ಹೃದಯವನ್ನೂ ಇಂದ್ರಿಯಗಳನ್ನೂ ಶೋಧಿಸುವಾತನಾದ ನೀನು ನಮ್ಮ ಕೆಟ್ಟತನವನ್ನೆಲ್ಲಾ ನಮಗಿಂತ ಚನ್ನಾಗಿ ಬಲ್ಲವನಾಗಿದ್ದೀ. ಆದರೆ ನಿನ್ನ ಪ್ರಿಯ ಮಗನೂ ನಮ್ಮ ವಿಮೋಚಕನೂ ಆದ ಯೇಸು ಕ್ರಿಸ್ತನನ್ನು ಹಿಡಿದುಕೊಂಡು, ನಾವು ಕೃಪೆಯನ್ನೂ ಕ್ಷಮೆಯನ್ನೂ ಬೇಡಿ ಕೊಳ್ಳುತ್ತೇವೆ. ಆತನು ಯಜ್ಞದೇಹವಾಗಿ ತನ್ನನ್ನು ಅರ್ಪಿಸಿ, ಸಮಸ್ತ ಪಾಪಗಳನ್ನು ತನ್ನ ರಕ್ತದಿಂದ ಅಳಿಸಿ, ಈಗ ನಮ್ಮನ್ನು ತನ್ನ ಕೃಪಾಭರಿತವಾದ ರಾತ್ರಿಭೋಜನಕ್ಕೆ ಕರೆಯುವ ಮಹಾ ಉಪಕಾರಕ್ಕೋಸ್ಕರ ನಿನ್ನನ್ನು ಹೊಗಳೇ ಹೊಗಳುತ್ತೇವೆ. ನಮಗೋಸ್ಕರ ಮರಣ ತಾಳಿದ ಯೇಸುವಿನ ಯಜ್ಞದೇಹವನ್ನೂ ನಮ್ಮ ಪಾಪಗಳಿಗಾಗಿ ಹರಿದ ಆತನ ರಕ್ತವನ್ನೂ, ಅಂದರೆ ನಮ್ಮ ಜೀವದ ರೊಟ್ಟಿಯೂ ಜೀವದ ನೀರೂ ಆಗಿರುವ ಯೇಸು ಕ್ರಿಸ್ತನನ್ನೇ ನಾವು ಸದ್ವಿಶ್ವಾಸದಿಂದ ನಮ್ಮ ಜೀವಕ್ಕಾಗಿ ಹೊಂದಿ, ನಮ್ಮ ತಲೆಯಾದ ಕ್ರಿಸ್ತನ ಅವಯವಗಳಾಗಿ, ಮನಶ್ಶಾಂತಿಯೂ ಆತ್ಮಬಲವೂ ಉಳ್ಳವರಾಗಿ, ನಿನ್ನ ಪ್ರೀತಿಯನ್ನು ಎಡೆಬಿಡದೆ ತಕ್ಕಂತೆ

ನೆನಸುವವರಾಗಿ, ನಿನಗೆ ಸಂತೋಷದಿಂದ ವಿಧೇಯರಾಗಿ, ಭಕ್ತಿಯಿಂದ ಹುಟ್ಟಿ ಉರಿಯುವ ಪ್ರೀತಿಯನ್ನು ನೆರೆಯವರಿಗೆ ಮಾಡುವವರಾಗಿ ಇದ್ದು ಳಿಯುವ ಹಾಗೆ, ನಿನ್ನ ಪವಿತ್ರಾತ್ಮವನ್ನು ನಮಗೆ ದಯ ಪಾಲಿಸು! ಆಮೆನ್!

ಅಥವಾ oder

b. ಸಂಬೋಧನವು. Ansprache.

ಒಡೆಯನಲ್ಲಿ ಪ್ರಿಯರೇ! ನೀವು ಯೇಸು ಕ್ರಿಸ್ತ ಒಡೆಯನ ಹೆಸರಿನಲ್ಲಿ, ಆತನ ಪಾಪಪ್ರಾಯಶ್ಚಿತ್ತಾರ್ಥಕ ಮರಣದ ನೆನಪಿಗಾಗಿ, ಪರಿಶುದ್ಧ ರಾತ್ರಿಭೋಜನವನ್ನು ತೆಕ್ಕೊಳ್ಳುವದರಿಂದ ಆತನ ದೇಹ ರಕ್ತಗಳನ್ನು ಹೊಂದ ಬೇಕೆಂದಿದ್ದೀರಲ್ಲಾ! ಹೀಗಿರಲಾಗಿ ಅಪೊಸ್ತಲನು ಈ ಭೋಜನಕ್ಕೆ ಬರುವ ಎಲ್ಲರನ್ನು ಎಚ್ಚರಿಸಿ, ಈ ರೊಟ್ಟಿಯನ್ನು ತಿಂದು, ಈ ಪಾತ್ರದಲ್ಲಿ ಕುಡಿಯುವದಕ್ಕಿಂತ ಮುಂಚೆ ಎಲ್ಲರು ತಮ್ಮನ್ನು ತಾವೇ ಚನ್ನಾಗಿ ಪರೀಕ್ಷಿಸಿ ಕೊಳ್ಳ ಬೇಕೆಂಬದಾಗಿ ಪ್ರಬೋಧಿಸಿದ್ದನ್ನು ನೆನಸಿರಿ! ಯಾಕಂದರೆ ತಮ್ಮ ಪಾಪಗಳಿಗೆ ಮನನೊಂದು ಕೊಂಡು, ಅವನ್ನು ಅರಿಕೆ ಮಾಡಿ, ದೇವರ ಕೋಪಕ್ಕೂ ದಂಡನೆಗೂ ಹೆದರಿ ಕೊಂಡು, ನೀತಿಯ ಮೇಲೆ ಹಶಿದು ಬಾಯಾರಿದಂಥಾ ದುಃಖಾಕ್ರಾಂತರಿಗೆ ಮಾತ್ರವೇ ರಾತ್ರಿಭೋಜನವು ಆದರಣೆಗಾಗಿ ನೇಮಿಸಿ ಕೊಟ್ಟದೆ. ಆದರೆ ನಾವು ನಮ್ಮನ್ನು ಪರೀಕ್ಷಿಸಿ ಕೊಂಡು, ನಮ್ಮ ಮನಸ್ಸಾಕ್ಷಿಯನ್ನು ಶೋಧಿಸಿ ನೋಡಿದರೆ, ನಿಶ್ಚಯವಾಗಿ ನಾವೆಲ್ಲರೂ ನಮ್ಮೊಳಗೆ ಪಾಪವೆಂಬ ಹೇಸಿಕೆಯನ್ನೂ ನಿತ್ಯ ಮರಣದ ಬೆದರಿಕೆಯನ್ನೂ ಅಲ್ಲದೆ ಮತ್ತೇನು ಕಂಡೇವು? ಪಾಪದ ಫಲವು ಮರಣವೇ. ಇದಕ್ಕೆ ತಪ್ಪಿಸಿ ಕೊಳ್ಳುವದಕ್ಕೆ ದಾರಿ ನಮ್ಮಲ್ಲಿ ಎಲ್ಲಿಯೂ ಇಲ್ಲ. ಹೀಗಿರಲಾಗಿ ನಮ್ಮ ಯೇಸು ಕ್ರಿಸ್ತ ಒಡೆಯನು ನಮ್ಮನ್ನು ಕನಿಕರಿಸಿ, ನ್ಯಾಯಪ್ರಮಾಣವನ್ನೂ ದೇವರ ಸಮಸ್ತ ಚಿತ್ತವನ್ನೂ ಕೈಕೊಂಡು ಪೂರೈಸಿ, ನಮ್ಮ ಪಾಪಗಳ ಫಲವಾದ ತಾಪ ಶಾಪ ಮರಣಾದಿಗಳನ್ನು ತಾನೇ ಹೊತ್ತು ಕೊಂಡು, ತಾಳಿ, ನಮ್ಮನ್ನು ವಿಮೋಚಿಸಿದನು. ಇದನ್ನು ನಾವು ದೃಢವಾಗಿ ನಂಬಿ, ತನ್ನ ಚಿತ್ತಕ್ಕೆ ಒಳಗಾಗುವದಕ್ಕೆ ಸಂತೋಷ ಪಡುವ

ಹಾಗೆ ಒಡೆಯನು ಆ ರಾತ್ರಿಯಲ್ಲಿ, ಭೋಜನದ ಸಮಯದಲ್ಲಿ, ರೊಟ್ಟಿ ತೆಗೆದು, ಸ್ತೋತ್ರ ಮಾಡಿ, ಅದನ್ನು ಮುರಿದು, ಶಿಷ್ಯರಿಗೆ ಕೊಟ್ಟು—"ತೆಕ್ಕೊಳ್ಳಿರಿ! ತಿನ್ನಿರಿ! ಇದು ನಿಮಗಾಗಿ ಕೊಡಲ್ಪಡುವ ನನ್ನ ದೇಹವಾಗಿದೆ" ಅಂದನು. ಇದರಲ್ಲಿ ತಾನು ಮನುಷ್ಯನಾಗಿ ಹುಟ್ಟಿ, ಲೋಕದಲ್ಲಿ ಮಾಡಿ, ನಡಿಸಿ, ಸಹಿಸಿ, ಸಾಧಿಸಿದ್ದು ಎಲ್ಲವೂ ನಮಗೋಸ್ಕರ, ನಮ್ಮ ಮೇಲಿಗಾಗಿ ಆದಂಥಾದ್ದೇ, ನಾವು ತನ್ನಲ್ಲಿ, ತಾನು ನಮ್ಮಲ್ಲಿ, ವಾಸವಾಗಿ ಬದುಕುವ ನಿಜ ಗುರ್ತನ್ನೂ ಸಾಕ್ಷಿಯನ್ನೂ ಕೊಡುವಂತೆ ತಾನು ತನ್ನ ದೇಹವನ್ನು ಆಹಾರವಾಗಿ ನಮಗೆ ಕೊಡುವಾತನು ಎಂಬದಾಗಿ ಯೇಸು ಹೇಳಿದ ಹಾಗಾಯಿತು.

ಮತ್ತು ಆತನು ಪಾತ್ರವನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಅದನ್ನು ಅವರಿಗೆ ಕೊಟ್ಟು—"ಇದನ್ನು ತಕ್ಕೊಂಡು, ಎಲ್ಲರೂ ಅದರಲ್ಲಿ ಕುಡಿಯಿರಿ! ಇದು ನಿಮಗೋಸ್ಕರವೂ ಅನೇಕರಿಗೋಸ್ಕರವೂ ಪಾಪ ಪರಿಹಾರಕ್ಕಾಗಿ ಹರಿಸಲ್ಪಡುವ ನನ್ನ ರಕ್ತದಲ್ಲಿರುವ ಹೊಸ ಒಡಂಬಡಿಕೆಯ ಪಾತ್ರವಾಗಿದೆ" ಅಂದನು. ಇದರಿಂದ ಯೇಸು ತಾನು ನಮಗೊಲಿದು, ನಮ್ಮ ಪಾಪಗಳನ್ನು ತಾನೇ ಹೊತ್ತು ಕೊಂಡು, ತನ್ನನ್ನು ತಾನೇ ಪಾಪದ ಆಹುತಿಯಾಗಿ ಮರಣಕ್ಕೆ ಒಪ್ಪಿಸಿ ಕೊಟ್ಟು, ತನ್ನ ರಕ್ತವನ್ನು ಹರಿಯ ಕೊಟ್ಟು, ನಮಗೆ ಕೃಪೆಯನ್ನೂ ಪಾಪಪರಿಹಾರವನ್ನೂ ದೊರಕಿಸಿ, ಪಾಪವು ಪರಿಹಾರವಾಗಿ ಎಂದೆಂದಿಗೂ ತಿರಿಗಿ ನೆನಪಿಗೆ ಬಾರದಂತೆ ಹೊಸ ಒಡಂಬಡಿಕೆಯನ್ನು ಸ್ಥಾಪಿಸುವಾತನು ಎಂಬದಕ್ಕೆ ನಿಶ್ಚಯವಾದ ಗುರುತಿಗಾಗಿಯೂ ಸಾಕ್ಷಿಗಾಗಿಯೂ ತಾನು ನಮ್ಮಲ್ಲಿ ಬದುಕಿ, ತನ್ನ ಜೀವವು ನಮ್ಮಲ್ಲಿ ಬೆಳೆಯುವದಕ್ಕಾಗಿಯೂ ತನ್ನ ರಕ್ತವನ್ನು ನಮಗೆ ಕುಡಿಯ ಕೊಡುವಾತನು ಎಂಬದಾಗಿ ತಿಳಿಸಿದಂತಾಯಿತು.

ಕ್ರಿಸ್ತನು ನುಡಿದ ಈ ನುಡಿಗಳನ್ನು ದಿಟವಾಗಿ ನಂಬಿ, ಒಡೆಯನ ಮರಣದ ನೆನಪಿಗಾಗಿಯೂ ತಮ್ಮ ವಿಶ್ವಾಸದ ದೃಢೀಕರಣಕ್ಕಾಗಿಯೂ ರಾತ್ರಿಭೋಜನವನ್ನು ತಕ್ಕೊಳ್ಳುವವರಲ್ಲಿ ಕ್ರಿಸ್ತ ಒಡೆಯನು, ಆತನಲ್ಲಿ ಅವರು, ನೆಲೆಯಾಗುವದರಿಂದ ಅವರು ಎಂದೆಂದಿಗೂ ಬದುಕುವರು.

ಹಾಗಾದರೆ ನಾವು ಈಗ ಈ ರಾತ್ರಿಭೋಜನದಲ್ಲಿ ಯೇಸು ಕ್ರಿಸ್ತ ನನ್ನು ನೆನವರಿಕೆ ಮಾಡಿ, ಆತನು ನಮ್ಮ ಪಾಪಕ್ಕಾಗಿ ಮರಣ ತಾಳಿ, ನಮ್ಮ ನೀತಿನಿರ್ಣಯಕ್ಕಾಗಿ ಎದ್ದದನ್ನು ಸಾರಿ, ಎಂದೆಂದಿಗೂ ಆತನನ್ನು ಹೊಗಳುತ್ತಾ ಇರುವಾ! ಇದಲ್ಲದೆ ನಮ್ಮಲ್ಲಿ ಒಬ್ಬೊಬ್ಬನೂ ಒಬ್ಬೊಬ್ಬಳೂ ತನ್ನ ತನ್ನ ಕ್ರೂಜೆಯನ್ನು ಹೊತ್ತು ಕೊಂಡು, ಆತನನ್ನು ಅನುಚರಿಸ ಬೇಕು. ಮತ್ತು ಆತನ ಅಪ್ಪಣೆಗೆ ಸರಿಯಾಗಿ, ಆತನು ನಮ್ಮನ್ನು ಪ್ರೀತಿ ಮಾಡಿದಂತೆ ನಾವೂ ಒಬ್ಬರನ್ನೊಬ್ಬರು ಪ್ರೀತಿ ಮಾಡಲೂ, ಆತನು ನಮಗೆ ಕ್ಷಮಿಸಿದಂತೆ ನಾವೂ ಒಬ್ಬರಿಗೊಬ್ಬರು ಕ್ಷಮಿಸಲೂ ಬೇಕು. ಯಾಕಂದರೆ ನಾವೆಲ್ಲರೂ ಒಂದೇ ರೊಟ್ಟಿಯಿಂದ ತಿಂದು, ಒಂದೇ ಪಾತ್ರದಲ್ಲಿ ಕುಡಿಯುವವರಾಗಿ, ಒಂದೇ, ಒಂದೇ ಶರೀರ, ಆಗಿದ್ಧೇವೆ. ಹಲವು ದ್ರಾಕ್ಷೆಹಣ್ಣುಗಳಿಂದ ಒಂದೇ ದ್ರಾಕ್ಷೇರಸವು, ಹಲವು ಗೋಧಿಕಾಳುಗಳಿಂದ ಒಂದೇ ರೊಟ್ಟಿ ಹ್ಯಾಗೆ ಉಂಟಾಗುತ್ತದೋ, ಹಾಗೆಯೇ ನಾವೆಲ್ಲರೂ ವಿಶ್ವಾಸದಿಂದ ಕ್ರಿಸ್ತನ ಶರೀರದ ಅವಯುವಗಳಾಗಿ, ನಮ್ಮೆಲ್ಲರನ್ನು, ಹೆಚ್ಚು ಕಡಿಮೆ ಇಲ್ಲದೆ, ಮಹಾ ಪ್ರೀತಿಯಿಂದ ಪ್ರೀತಿ ಮಾಡಿದ ಪ್ರಿಯ ರಕ್ಷಕನಾದ ಕ್ರಿಸ್ತನ ದಾಕ್ಷಿಣ್ಯದಿಂದಾದರೂ ಒಬ್ಬರನ್ನೊಬ್ಬರು ಪ್ರೀತಿ ಮಾಡಿ, ಒಂದೇ ರಸ, ಒಂದೇ ರೊಟ್ಟಿ ಎಂಬಂತೆ ಆಗಿರ ಬೇಕು. ಅಂಥಾ ಪ್ರೀತಿಯನ್ನು ಬರೇ ಮಾತಿನಿಂದಲ್ಲ, ನಡತೆಯಿಂದ ಸಹ ಕಪಟವಿಲ್ಲದೆಯೂ ನಂಬಿಕೆ ತಪ್ಪದೆಯೂ ಒಬ್ಬರಿಗೊಬ್ಬರು ತೋರಿಸ ಬೇಕು. ಕರುಣಾಭರಿತ ಸರ್ವಶಕ್ತ ದೇವರು, ನಮ್ಮ ಯೇಸು ಕ್ರಿಸ್ತ ಒಡೆಯನ ತಂದೆ, ಅದಕ್ಕಾಗಿ ತನ್ನ ಪವಿತ್ರಾತ್ಮದಿಂದ ನಮಗೆ ಸಹಾಯ ಮಾಡಲಿ! ಆಮೆನ್!

ಪ್ರಾರ್ಥನೆ. Gebet.

ಸರ್ವಶಕ್ತನಾದ ದೇವರೇ! ನಮ್ಮ ಯೇಸು ಕ್ರಿಸ್ತ ಒಡೆಯನ ತಂದೆಯೇ! ವಿಶ್ವನಿರ್ಮಾಣಿಕನೇ! ಸಕಲ ಮನುಷ್ಯರ ನ್ಯಾಯಾಧಿಪತಿಯೇ! ನಮ್ಮ ಮನೋವಾಕ್ಕಾಯಗಳಿಂದ ನಾವು ಪವಿತ್ರ ಸ್ವಾಮಿಯಾದ ನಿನಗೆ ವಿರೋಧವಾಗಿ ನಾನಾ ತರದ ಪಾಪಗಳನ್ನು ನಡಿಸಿದದರಿಂದ ನಿನ್ನ ಕೋ

ಪವು ನಮ್ಮ ಮೇಲೆ ಉರಿಯಲಿಕ್ಕೆ ಹತ್ತಿ, ನಮ್ಮನ್ನು ಸಂಹರಿಸುವದೇ ನ್ಯಾಯವು. ನಾವು ಗೈದ ದುಷ್ಕ್ರಿಯೆಗಳಿಗಾಗಿ ಮನನೊಂದು ಕೊಂಡು, ಮನಃಪೂರ್ವಕ ಪಶ್ಚಾತ್ತಾಪ ಪಟ್ಟದ್ದೇವೆ. ಅವುಗಳ ನೆನಪಿನಿಂದ ಬಹಳ ದುಃಖಗೊಳ್ಳುತ್ತೇವೆ; ಅವುಗಳ ಹೊರೆ ಹೊರಲಾರೆವು. ನಮ್ಮನ್ನು ಕನಿಕರಿಸು! ಮಹಾ ಕನಿಕರವುಳ್ಳ ತಂದೆಯೇ, ನಮ್ಮನ್ನು ಕನಿಕರಿಸು! ಯೇಸುವನ್ನೇ ನೋಡಿ, ನಮ್ಮ ಪಾಪಗಳನ್ನೆಲ್ಲಾ ಕ್ಷಮಿಸಿ ಬಿಡು! ಮುಂದಕ್ಕೆ ನಾವು ನಿನ್ನ ಹೆಸರಿನ ಮಾನಕ್ಕಾಗಿಯೂ ಕೀರ್ತಿಗಾಗಿಯೂ ಹೊಸ ಜೀವಿಕೆಯಲ್ಲಿ ನಡೆದು, ಎಡೆಬಿಡದೆ ನಿನಗೆ ಸೇವೆ ಮಾಡುತ್ತಿರುವ ಹಾಗೆ ನಮಗೆ ಬಲವನ್ನು ದಯ ಪಾಲಿಸು!

ನಮ್ಮ ದೇಹಾತ್ಮಗಳನ್ನು ಪವಿತ್ರ ಮಾಡಿ, ನಿನ್ನ ಪ್ರಿಯ ಮಗನ ಕ್ಷೇಮಕರವಾದ ಭೋಜನದಿಂದ ನಮ್ಮನ್ನು ಆತನ ಮಂಗಳವಾದ ಅನ್ಯೋನ್ಯದಲ್ಲಿ ಶೇರಿಸು! ನೀನು ನಿತ್ಯವಾದ ಬಲುಮೆ ಮಮತೆಗಳುಳ್ಳಾತನೇ ಎಂಬದನ್ನು ಹೊಸತಾಗಿ ಅನುಭವ ಮಾಡಿ, ನಾವು ನಿನ್ನ ಮೇಲಿನ ಪ್ರೀತಿಯಲ್ಲಿ ನೆಲೆಗೊಂಡು, ನಿನ್ನ ದಿವ್ಯ ನಾಮದ ಸ್ತೋತ್ರವನ್ನೂ ನಿನ್ನ ಪ್ರಜೆಯ ಹಿತವನ್ನೂ ಚಿಂತಿಸಿ, ಯೋಗ್ಯವಾದ ಭಕ್ತ್ಯಾಸಕ್ತಿಯೊಡನೆ ನಿನಗೊಬ್ಬನಿಗೆ ಬದುಕಿ, ಸೇವೆ ಮಾಡುವ ಹಾಗೆ, ನಮ್ಮ ಯೇಸು ಕ್ರಿಸ್ತ ಒಡೆಯನ ಮುಖಾಂತರ ನಮಗೆ ದಯ ಪಾಲಿಸು! ಆಮೆನ್!

ಸ್ಥಾಪನೆಯ ವಾಕ್ಯವನ್ನು ಹೇಳುವದು.

Lesung der Einsetzungsworte.

ಪ್ರಸಂಗಿಯು "ರೊಟ್ಟಿಯನ್ನು ತೆಗದು ಕೊಂಡು", "ಪಾತ್ರವನ್ನು ತೆಗದು ಕೊಂಡು" ಎಂಬ ಮಾತುಗಳನ್ನು ಹೇಳುವಾಗ್ಯೆ, ಆಯಾ ಪಾತ್ರಗಳನ್ನು ಹಿಡಿದು ಎತ್ತುವದು ಯೋಗ್ಯವಾಗಿರುವದು.

Es erscheint schicklich, dass der Geistliche bei den Worten: "Nahm er das Brod"—"Nahm er den Kelch" die betreffenden Gefässe erfasst und ein wenig erhebt.

ಪ್ರಿಯರೇ! ಕ್ರಿಸ್ತ ಒಡೆಯನು ರಾತ್ರಿಭೋಜನವನ್ನು ಸ್ಥಾಪಿಸಿದ ವಾಕ್ಯವನ್ನು ಈಗ ವಿಶ್ವಾಸದಿಂದ ಲಾಲಿಸಿರಿ!

ಯೇಸು ಒಡೆಯನು ಒಪ್ಪಿಸಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಕ್ಕೊಂಡು, ಸ್ತೋತ್ರ ಮಾಡಿ, ಅದನ್ನು ಮುರಿದು, ಹೇಳಿದ್ದೇನಂದರೆ: "ತೆಕ್ಕೊಳ್ಳಿರಿ! ತಿನ್ನಿರಿ! ಇದು ನಿಮಗೋಸ್ಕರ ಮುರಿಯಲ್ಪಡುವ ನನ್ನ ದೇಹವಾಗಿದೆ. ಇದನ್ನು ನನ್ನ ನೆನಪಿಗಾಗಿ ಮಾಡಿರಿ!" ಹಾಗೆಯೇ ಭೋಜನವಾದ ಮೇಲೆ ಪಾತ್ರವನ್ನು ತೆಕ್ಕೊಂಡು, ಆತನು ಹೇಳಿದ್ದೇನಂದರೆ: "ಈ ಪಾತ್ರವು ನನ್ನ ರಕ್ತದಲ್ಲಿರುವ ಹೊಸ ಒಡಂಬಡಿಕೆಯಾಗಿದೆ. ನೀವು ಕುಡಿಯುವಷ್ಟು ಸಾರಿ ಇದನ್ನು ನನ್ನ ನೆನಪಿಗಾಗಿ ಮಾಡಿರಿ!" ಯಾಕಂದರೆ ಈ ರೊಟ್ಟಿಯನ್ನು ತಿಂದು, ಈ ಪಾತ್ರದಿಂದ ಕುಡಿಯುವಷ್ಟು ಸಾರಿ ಒಡೆಯನ ಮರಣವನ್ನು ಆತನು ಬರುವ ತನಕ ಸಾರುತ್ತೀರಿ.

ರಾತ್ರಿಭೋಜನವನ್ನು ಕೊಡುವದು.

Die Austheilung des Abendmahls.

ಪ್ರಸಂಗಿಯು ಮೊದಲು ತಿಂದು ಕುಡಿಯುವದು. ಹೆಚ್ಚು ಮಂದಿ ಪ್ರಸಂಗಿಗಳು ಇರುವಲ್ಲಿ ಒಬ್ಬರಿಗೊಬ್ಬರು ಕೊಡುವದು. ಹ್ಯಾಗಂದರೆ ಒಬ್ಬನು ಸ್ಥಾಪನೆಯ ವಾಕ್ಯಗಳನ್ನು ಹೇಳುವದು; ಬಳಿಕ ಅವನು ರೊಟ್ಟಿ ದ್ರಾಕ್ಷೆರಸಗಳನ್ನು ತಾನೇ ತೆಗೆದು ಕೊಂಡು, ಮತ್ತೆ ಮಿಕ್ಕಾದವರಿಗೆ ಕೊಡುವದು. ತರುವಾಯ ಸಭೆಯವರು, ಇಬ್ಬರಿಬ್ಬರಾಗಿ ಆದರೂ ಹೆಚ್ಚು ಮಂದಿಯಾಗಿ ಆದರೂ ರಾತ್ರಿಭೋಜನದ ಮೇಜಿನ ಬಳಿಗೆ ಬಂದು, ರಾತ್ರಿಭೋಜನವನ್ನು ಸ್ವೀಕರಿಸುವದು. ಈ ಸಮಯದಲ್ಲಿ ಪ್ರಸಂಗಿಯೊಬ್ಬನು ಮುಂದಣ ಮಾತುಗಳನ್ನು ಹೇಳುವದು.

Zuerst geniesst es der Geistliche oder wo mehrere sind, reichen sie es einer dem andern, etwa in der Weise, dass Ein Bruder die Einsetzungsworte spricht, sodann das Brod und den Wein gleichzeitig selbst nimmt und dem andern gibt; sodann kommen je zwei oder auch mehrere Gemeindeglieder an den Communionstisch, knieen nieder (wenn nämlich eine schickliche Vorrichtung hiezu besteht oder leicht getroffen werden kann) und empfangen das h. Mahl unter Begleitung folgender Worte, welche, wo grössere Gemeinden sind, zugleich, bei kleinern Gemeinden aber zu jedem einzelnen Paar zu sprechen sind.

ತೆಕ್ಕೊಳ್ಳಿರಿ! ತಿನ್ನಿರಿ! ಇದು ನಿಮಗಾಗಿ ಮುರಿಯಲ್ಪಡುವ ನನ್ನ ದೇಹವಾಗಿದೆ. ನನ್ನ ನೆನಪಿಗಾಗಿ ಇದನ್ನು ಮಾಡಿರಿ!

ತೆಕ್ಕೊಂಡು, ಎಲ್ಲರೂ ಇದರಲ್ಲಿ ಕುಡಿಯಿರಿ! ಇದು ಅನೇಕರಿಗೋಸ್ಕರ ಪಾಪಪರಿಹಾರಕ್ಕಾಗಿ ಹರಿಸಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನನ್ನ ರಕ್ತವಾಗಿದೆ. ನೀವು ಕುಡಿಯುವಷ್ಟು ಸಾರಿ ನನ್ನ ನೆನಪಿಗಾಗಿ ಇದನ್ನು ಮಾಡಿರಿ!

ಅಥವಾ oder

ತೆಕ್ಕೊಂಡು ತಿನ್ನಿರಿ! ಇದು ನಿಮಗೋಸ್ಕರ (ನಿಮ್ಮ ಪಾಪಗಳಿಗಾಗಿ) ಒಪ್ಪಿಸಿ ಕೊಡಲ್ಪಟ್ಟ ಯೇಸು ಕ್ರಿಸ್ತನ ದೇಹವಾಗಿದೆ. ಆತನ ನೆನಪಿಗಾಗಿ ಇದನ್ನು ಮಾಡಿರಿ!

ತೆಕ್ಕೊಂಡು ಕುಡಿಯಿರಿ! ಇದು ನಿಮಗೋಸ್ಕರ (ನಿಮ್ಮ ಪಾಪಗಳಿಗಾಗಿ) ಹರಿದ ಯೇಸು ಕ್ರಿಸ್ತನ ರಕ್ತವಾಗಿದೆ. ಆತನ ನೆನಪಿಗಾಗಿ ಇದನ್ನು ಮಾಡಿರಿ!

ಅಥವಾ oder

ನಾವು ಮುರಿಯುವ ರೊಟ್ಟಿ ಕ್ರಿಸ್ತನ ಶರೀರದ ಅನ್ಯೋನ್ಯವಾಗಿದೆ.

ನಾವು ಆಶೀರ್ವದಿಸುವ ಆಶೀರ್ವಾದದ ಪಾತ್ರವು ಕ್ರಿಸ್ತನ ರಕ್ತದ ಅನ್ಯೋನ್ಯವಾಗಿದೆ.

ರಾತ್ರಿಭೋಜನದ ಬಳಿಕ ಆಗ ತಕ್ಕ ಪ್ರಾರ್ಥನೆ.
Gebet nach dem Abendmahl.

ಕೃಪಾಭರಿತವಾದ ರಾತ್ರಿಭೋಜನಕ್ಕಾಗಿ ನಮ್ಮ ಪ್ರಿಯ ರಕ್ಷಕನನ್ನು ಪೂರ್ಣ ಹೃದಯದಿಂದ ಕೊಂಡಾಡಿ ಪ್ರಾರ್ಥಿಸೋಣ!

ನನ್ನ ಮನವೇ! ಯೆಹೋವನನ್ನು, ನನ್ನ ಅಂತರಂಗವೆಲ್ಲವೇ! ಆತನ ಪವಿತ್ರ ನಾಮವನ್ನು ಸ್ತುತಿಸು! ನನ್ನಾತ್ಮನೇ! ಯೆಹೋವನನ್ನು ಸ್ತುತಿಸು! ಆತನ ಉಪಕಾರಗಳನ್ನೆಲ್ಲಾ ಮರೆಯದಿರು! ಆತನು ನಿನ್ನ ಅಕ್ರಮಗಳನ್ನೆಲ್ಲಾ ಕ್ಷಮಿಸಿ, ನಿನ್ನ ರೋಗಗಳನ್ನೆಲ್ಲಾ ವಾಶಿ ಮಾಡಿ, ನಿನ್ನ ಜೀವವನ್ನು ನಾಶನದೊಳಗಿಂದ ಬಿಡಿಸಿ, ಕೃಪೆ ಕರುಣೆಗಳನ್ನು ನಿನ್ನ ಮೇಲೆ ಒಂದು ಕಿರೀಟದಂತೆ ಇಟ್ಟದ್ದಾನೆ. ಯೇಸು ಒಡೆಯನೇ! ನೀನು ನಮ್ಮನ್ನು ಮಹಾ ಕೃಪೆಯಿಂದ ಸ್ವೀಕರಿಸಿ, ಪಾಪ ಮರಣಗಳಿಂದ ವಿಮೋಚಿಸಿ, ನಾವು ನಿನ್ನ ತಂದೆಯ ಮಕ್ಕಳಾಗುವ ಮಂಗಳವಾದ ಪದವಿಯನ್ನು ದೊರಕಿಸಿದ್ದಕ್ಕಾಗಿ ನಿನ್ನನ್ನು ಕೊಂಡಾಡುತ್ತೇವೆ. ನೀನು ಪರಿಶುದ್ಧ ರಾತ್ರಿಭೋಜನವನ್ನು ನಿನ್ನ ಪ್ರೀತಿಯ ನೆನಪಿಗಾಗಿ ಸ್ಥಾಪಿಸಿ, ಈ

ದಿವ್ಯ ಕೃಪಾಕರಣದಿಂದ ನಮ್ಮ ವಿಶ್ವಾಸವನ್ನೂ ಪ್ರತೀಕ್ಷೆಯನ್ನೂ ಹೊಸತಾಗಿ ನೆಲೆಗೊಳಿಸಿ, ಹೆಚ್ಚಿಸಿದ್ದಕ್ಕಾಗಿ ನಿನ್ನನ್ನು ಹೊಗಳೇ ಹೊಗಳುತ್ತೇವೆ. ಈಗ ನಾವು ನಿನ್ನಲ್ಲಿಯೂ ನಿನ್ನ ಕೃಪೆಯಲ್ಲಿಯೂ ಚನ್ನಾಗಿ ಬೇರೂರಿ ಕೊಂಡು, ನಿನ್ನ ಹೆಸರನ್ನು ಸತ್ಕ್ರಿಯೆಗಳಿಂದ ಅರಿಕೆ ಮಾಡುವವರಾಗಿ, ಪವಿತ್ರ ಮನೋವಾಕ್ಕಾಯಗಳಿಂದ ನಿನ್ನನ್ನು ಘನ ಪಡಿಸಿ, ಕಡೆಯಲ್ಲಿ ನೀತಿವಂತರೆಲ್ಲರ ಕೂಡ ನಾವೂ ನಿನ್ನನ್ನು ನಿನ್ನ ದಿವ್ಯ ಮಹಿಮೆಯಲ್ಲಿ ನೋಡಿ, ಕೊಂಡಾಡುವ ಪರಮ ಸದ್ಗತಿಯನ್ನು ನಮಗೆ ದಯಮಾಡು! ಆಮೆನ್!

ಅಥವಾ oder

ಯೇಸು ಕ್ರಿಸ್ತ ಒಡೆಯನೇ! ಯಜ್ಞದೇಹವಾಗಿದ್ದು, ಈಗ ಅಮೃತತನುವಾಗಿರುವ ನಿನ್ನ ದೇಹವನ್ನೂ ನಿನ್ನ ಘಾಯಗಳಿಂದ ಹರಿದ ನಿನ್ನ ರಕ್ತವನ್ನೂ ನೀನು ರಕ್ಷಾದಾಯಕ ವರಗಳಾಗಿ ನಮಗೆ ದಯ ಪಾಲಿಸಿದ್ದಕ್ಕಾಗಿ ನಿನ್ನನ್ನು ಕೊಂಡಾಡುತ್ತೇವೆ. ಈ ವರಗಳ ಬಲದಿಂದ ನೀನು ನಿನ್ನ ಮೇಲೆ ಸ್ಥಿರವಾದ ವಿಶ್ವಾಸವನ್ನೂ ನಿನ್ನ ಮೇಲೆಯೂ ಎಲ್ಲಾ ಮನುಷ್ಯರ ಮೇಲೆಯೂ ಉರಿಯುವ ಪ್ರೀತಿಯನ್ನೂ ನಮ್ಮಲ್ಲಿ ಹುಟ್ಟಿಸು! ತಂದೆಯಾದ ದೇವರ ಸಂಗಡಲೂ ಪವಿತ್ರಾತ್ಮದ ಸಂಗಡಲೂ ಯುಗಯುಗಾಂತರಗಳಿಗೂ ಆಳುತ್ತಾ ಬಾಳುತ್ತಾ ಇರುವ ರಕ್ಷಕಾ! ನಮ್ಮನ್ನು ಸಲುಹೈ! ಆಮೆನ್!

ಆಶೀರ್ವಾದವಚನವು. Segen.

ಕಡೆಗೆ ದೇವರ ಆಶೀರ್ವಾದವನ್ನು ತಕ್ಕೊಳ್ಳಿರಿ!

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

IV. ವಿವಾಹವು. Trauung.

1. ಸಭೆಯಲ್ಲಿ ಸಾರುವದು. Aufgebot.

ಮದುವೆ ಮಾಡಿ ಕೊಳ್ಳಲಿಕ್ಕೆ ನಿಶ್ಚಯ ಮಾಡಿ ಕೊಂಡವರು ನಮ್ಮಲ್ಲಿ ಇದ್ದಾರೆ. (ಸಹಸಭೆಯವರಾದ ನಾವು ಅವರಿಗಾಗಿ ಪ್ರಾರ್ಥನೆ ಮಾಡಿ, ಅವರು ತಮ್ಮ ಒಗತನವನ್ನು ಒಡೆಯನಲ್ಲಿ ತೊಡಗಿ, ಕ್ರೈಸ್ತಧರ್ಮಕ್ಕೆ ಅನುಸಾರವಾಗಿ ನಡಿಸಿ, ಮಂಗಳವಾಗಿ ಮುಗಿಸುವಂತೆ ಬೇಡಿ ಕೊಳ್ಳ ತಕ್ಕದ್ದು. ಅವರು) ಯಾರಂದರೆ: . . . . ಇವರ ಮದುವೇ ಮಾತನ್ನು ಸಾರಿ ತಿಳಿಸಿದ್ದು ಈ ಹೊತ್ತು (—ನೇ) ಸರ್ತಿಗೆ.

ಇವರ ಮದುವೆಗೆ ಏನಾದರೂ ನ್ಯಾಯವಾದ ಅಭ್ಯಂತರವಿರುವ ಪಕ್ಷಕ್ಕೆ ತಿಳಿದವರು ಅದನ್ನು ತಕ್ಕ ಸಮಯದಲ್ಲಿ ತಿಳಿಯ ಪಡಿಸಲಿ! ತಕ್ಕ ಸಮಯದಲ್ಲಿ ಅಡ್ಡಿ ಮಾಡದವರು ಅನಂತರದಲ್ಲಿಯೂ ಅಡ್ಡಿಸಡ್ಡಿ ಮಾಡದಿರಲಿ!

ಸರ್ವಕರ್ತನೂ ಸರ್ವನಿಯಾಮಕನೂ ಆಗಿರುವ ದೇವರು ಅವರಿಗೂ ನಮ್ಮೆಲ್ಲರಿಗೂ ಸದಾ ಪ್ರಸನ್ನ ಸಹಾಯಕನೂ ಆಶೀರ್ವಾದ ದಾಯಕ ತಂದೆಯೂ ಆಗಿರಲಿ! ಆಮೆನ್!

2. ವಿವಾಹಸಂಸ್ಕಾರವು. Trauungshandlung.

ದೇವಾರಾಧನೆಗಾಗಿ ನೆರೆದ ಸಭೆಯಲ್ಲಿ ಮದುಮಕ್ಕಳ ಹೆಸರುಗಳನ್ನು ಸಾರಿದ ಬಳಿಕ ಮದುವೇ ದಿನದಲ್ಲಿ ಮದುಮಕ್ಕಳು ಬಂಧುಜನ ನೆಂಟರಿಷ್ಟರ ಕೂಡ ದೇವಾಲಯಕ್ಕೆ ಬಂದು, ಪ್ರಸಂಗಿಯ ಮುಂದೆ, ಮದುಮಗನು ಬಲಗಡೆಯಲ್ಲಿ, ಮದುಮಗಳು ಎಡಗಡೆಯಲ್ಲಿ ನಿಂತು ಕೊಂಡಿರಲು, ಪ್ರಸಂಗಿಯು ಹೇಳುವದು:

Nachdem an drei vorhergehenden Sonntagen das Aufgebot in drei Morgen- oder Abend-Gottesdiensten stattgefunden hat, kommen am Trauungstag die Brautleute mit ihren Verwandten und Freunden in die Kirche. Der Geistliche steht im Altar, vor ihm zur Rechten der Bräutigamn, zur Linken die Braut. Der Geistliche spricht:

ನಮ್ಮ ಆರಂಭವು ಸ್ವರ್ಗ ಪೃಥ್ವಿಗಳ ನಿರ್ಮಾಣಕರ್ತನಾದ ಯೆಹೋವನ ಹೆಸರಿನಲ್ಲಿ ಆಗಲಿ! ಆಮೆನ್!

ಒಡೆಯನಲ್ಲಿ ಪ್ರಿಯರೇ! ನೀವು ಇಲ್ಲಿ ನೆರೆದ ಸಾಕ್ಷಿಗಳ ಮುಂದೆ ದೇವರ ಹೆಸರಿನಲ್ಲಿ ವಿವಾಹ ಮಾಡಿ ಕೊಂಡು, ಈ ಕಾರ್ಯಕ್ಕೆ ದೇವರ ಆಶೀರ್ವಾದವನ್ನು ಹೊಂದ ಬೇಕೆಂದು ಇಲ್ಲಿಗೆ ಬಂದಿದ್ಧೀರಿ. ಹೀಗಿರಲಾಗಿ ನೀವು ವಿವಾಹದ ವಿಷಯದಲ್ಲಿಯೂ ದಾಂಪತ್ಯಸ್ಥಿತಿಯ ವಿಷಯದಲ್ಲಿಯೂ ದೇವರ ವಾಕ್ಯದಿಂದ ಬೋಧನೆಯನ್ನು ಕೇಳಿ, ಈ ಸ್ಥಿತಿಯಲ್ಲಿ ತಕ್ಕಂತೆ ಶೇರುವ ಹಾಗೆ, ಮೊದಲಾಗಿ ದೇವರು ವಿವಾಹವನ್ನು ನೇಮಕ ಮಾಡಿದ ವಿವರವನ್ನು ಕೇಳಿರಿ! ಅದು ಹ್ಯಾಗಂದರೆ:

ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ತಕ್ಕದಾದ ಸಹಾಯವನ್ನು ಮಾಡಿ ಕೊಡುತ್ತೇನೆ ಎಂಥೇಳಿ, ದೇವರಾದ ಯೆಹೋವನು ಆದಮನೆಂಬ ಆದಿಮನುಷ್ಯನ ಮೇಲೆ ಗಾಢ ನಿದ್ರೆಯನ್ನು ಬೀಳಿಸಿದನು. ಮನುಷ್ಯನು ನಿದ್ದೆ ಮಾಡಲು, ದೇವರು ಅವನ ಪಕ್ಕೆಯ ಎಲುಬುಗಳಲ್ಲಿ ಒಂದು ತೆಕ್ಕೊಂಡು, ಅದಿದ್ದ ಸ್ಥಳವನ್ನು ಮಾಂಸವಿಟ್ಟು ಮುಚ್ಚಿದನು. ಬಳಿಕ ದೇವರಾದ ಯೆಹೋವನು ತಾನು ಮನುಷ್ಯನೊಳಗಿಂದ ತೆಕ್ಕೊಂಡ ಎಲುವಿನಿಂದ ಒಂದು ಹೆಣ್ಣನ್ನು ನಿರ್ಮಿಸಿ, ಮನುಷ್ಯನ ಬಳಿಗೆ ತಂದನು. ಆಗ ಮನುಷ್ಯನು—ಇವಳೀಗ ನನ್ನ ಎಲುವುಗಳಿಂದ ತೆಕ್ಕೊಂಡ ಎಲುವೂ ನನ್ನ ಮಾಂಸದಿಂದ ತೆಕ್ಕೊಂಡ ಮಾಂಸವೂ. ಇವಳಿಗೆ ಮನುಷ್ಯಳೆಂಬ ಹೆಸರು ಸಲ್ಲುವದು, ಯಾಕಂದರೆ ಮನುಷ್ಯನಿಂದ ತೆಕ್ಕೊಳ್ಳಲ್ಪಟ್ಟವಳಾಗಿದ್ಧಾಳೆ ಎಂದು ಹೇಳಿದನು. ಆದದರಿಂದ ಮನುಷ್ಯನು ತನ್ನ ತಂದೆಯನ್ನೂ ತನ್ನ ತಾಯಿಯನ್ನೂ ಬಿಟ್ಟು, ತನ್ನ ಹೆಂಡತಿಗೆ ಕೂಡಿ ಕೊಳ್ಳುವನು; ಮತ್ತು ಅವರು ಒಂದೇ (ಮಾಂಸವು) ಆಗಿರುವರು. (ಉತ್ಪ. ೨, ೧೮. ೨೧. ೨೪.)

೨ನೇದಾಗಿ, ಗಂಡ ಹೆಂಡರ ಪರಸ್ಪರ ಸಂಗತಿಯೂ ಒಕ್ಕಟ್ಟೂ ಎಂಥಾದ್ದಾಗಿದೆಂಬದನ್ನು ತಿಳಿಸುವ ವಾಕ್ಯವನ್ನು ಕೇಳಿರಿ! ಮತ್ತಾಯನ ಸುವಾರ್ತೆಯಲ್ಲಿ (೧೯, ೩—೯ರಲ್ಲಿ) ಬರದಿರುವದೇನಂದರೆ—ಫರಿಸಾಯರು ಯೇಸುವಿನ ಬಳಿಗೆ ಬಂದು, ಆತನನ್ನು ಶೋಧಿಸ ಬೇಕೆಂದು ಆತನ ಹತ್ತರ--ಪುರುಷನು ತನ್ನ ಹೆಂಡತಿಯನ್ನು ಯಾವ ನಿಮಿತ್ತದಿಂದಾದರೂ

ಬಿಟ್ಟು ಬಿಡುವದು ನ್ಯಾಯವೋ? ಎಂತ ಕೇಳಿದ್ದಕ್ಕೆ ಆತನು ಅವರಿಗೆ ಪ್ರತ್ಯುತ್ತರ ಕೊಟ್ಟು ಹೇಳಿದ್ದೇನಂದರೆ—ಆದಿಯಲ್ಲಿ ಉಂಟು ಮಾಡಿದಾತನು ಅವರನ್ನು ಗಂಡೂ ಹೆಣ್ಣೂ ಉಂಟು ಮಾಡಿ, ಪುರುಷನು ತಂದೆಯನ್ನೂ ತಾಯಿಯನ್ನೂ ಬಿಟ್ಟು, ತನ್ನ ಹೆಂಡತಿಗೆ ಕೂಡಿ ಕೊಳ್ಳುವನು; ಮತ್ತು ಅವರಿಬ್ಬರು ಒಂದೇ (ಮಾಂಸವು) ಆಗಿರುವರು ಎಂದು ಹೇಳಿದನೆಂಬದನ್ನು ನೀವು ಓದಲಿಲ್ಲವೋ? ಹೀಗಾದದರಿಂದ ಅವರು ಇನ್ನು ಇಬ್ಬರಲ್ಲ, ಒಂದೇ (ಮಾಂಸವು) ಆಗಿದ್ದಾರೆ. ಹಾಗಾದರೆ ದೇವರು ಜೋಡಿಸಿದ್ದನ್ನು ಮನುಷ್ಯನು ವಿಂಗಡಿಸದಿರಲಿ! ಆತನ ಈ ಮಾತನ್ನು ಕೇಳಿ, ಅವರು ಆತನಿಗೆ—ಹೀಗಿದ್ದರೆ, ತ್ಯಾಗಪತ್ರ ಕೊಟ್ಟು, ಅವಳನ್ನು ಬಿಟ್ಟು ಬಿಡ ಬಹುದೆಂದು ಮೋಶೆ ಆಜ್ಞಾಪಿಸಿದ್ದೇನು? ಅನ್ನಲು, ಆತನು ಅವರಿಗೆ ಹೇಳಿದ್ದೇನಂದರೆ—ಮೋಶೆ ನಿಮ್ಮ ಹೃದಯದ ಕಾಠಿಣ್ಯವನ್ನು ತಿಳಿದು, ನೀವು ನಿಮ್ಮ ಹೆಂಡತಿಯರನ್ನು ಬಿಟ್ಟು ಬಿಡಲೀಸಿದನು; ಆದರೆ ಆದಿಯಲ್ಲಿ ಹಾಗಿದ್ದಿಲ್ಲ! ಮತ್ತು ನಿಮಗೆ ಹೇಳುತ್ತೇನೆ: ಯಾವನಾದರೂ ವ್ಯಭಿಚಾರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು, ಬೇರೊಬ್ಬಳನ್ನು ಮದುವೆ ಮಾಡಿ ಕೊಂಡರೆ, ವ್ಯಭಿಚಾರ ಮಾಡಿಸುತ್ತಾನೆ. ಮತ್ತು ಬಿಡಲ್ಪಟ್ಟವಳನ್ನು ಮದುವೆ ಮಾಡಿ ಕೊಳ್ಳುವವನೂ ವ್ಯಭಿಚಾರ ಮಾಡಿಸುತ್ತಾನೆ.

ಇನೇದಾಗಿ, ಗಂಡ ಹೆಂಡರ ಪರಸ್ಪರ ಋಣಧರ್ಮವನ್ನೂ ಅವರ ಒಗತನವು ಹ್ಯಾಗೆ ನಡೆಯ ಬೇಕೆಂಬ ವಿಧಿಯನ್ನೂ ತಿಳಿಸುವ ವಾಕ್ಯವನ್ನು ಕೇಳಿರಿ! ಅಪೊಸ್ತಲನಾದ ಪೌಲನು ಬರೆದಿರುವದೇನಂದರೆ—ಪುರುಷರೇ! ನಿಮ್ಮ ಹೆಂಡತಿಯರನ್ನು ಪ್ರೀತಿ ಮಾಡಿರಿ! ಕ್ರಿಸ್ತನು ಸಭೆಯನ್ನು ಪ್ರೀತಿ ಮಾಡಿ, ಅದು ಕಳಂಕವಾಗಲಿ ಸುಕ್ಕಾಗಲಿ ಏನೂ ಇಲ್ಲದೆ, ಪವಿತ್ರವಾಗಿಯೂ ನಿರ್ದೋಷವಾಗಿಯೂ ಮಹಿಮೆಯುಳ್ಳದಾಗಿಯೂ ಇರುವಂತೆ ಅದನ್ನು ತನಗೆ ಪ್ರತಿಷ್ಠಿಸಿ, ವಾಕ್ಯದಿಂದ ಸಂಯುಕ್ತವಾದ ನೀರಿನ ತೊಳೆಯುವಿಕೆಯಲ್ಲಿ ಶುದ್ಧೀಕರಿಸಿ, ಪವಿತ್ರ ಮಾಡುವದಕ್ಕಾಗಿ ತನ್ನನ್ನು ತಾನೇ ಅದಕ್ಕೋಸ್ಕರ ಒಪ್ಪಿಸಿ ಕೊಟ್ಟ ಹಾಗೆಯೇ, ಗಂಡಂದಿರು ತಮ್ಮ ಹೆಂಡತಿ

ಯರನ್ನು ತಮ್ಮನ್ನೇ ಎಂಬ ಹಾಗೆ ಪ್ರೀತಿ ಮಾಡ ತಕ್ಕದ್ದು; ತನ್ನ ಹೆಂಡತಿಯನ್ನು ಪ್ರೀತಿ ಮಾಡುವದು ತನ್ನನ್ನೇ ಪ್ರೀತಿ ಮಾಡುವದಾಗಿದೆ. ಯಾಕಂದರೆ ಯಾವನಾದರೂ ತನ್ನ ಸ್ವಂತ ಮಾಂಸಕ್ಕೆ ಎಂದೂ ಹಗೆ ಮಾಡಿದ್ದು ಇಲ್ಲ; ಆದರೆ ಒಡೆಯನು ಸಭೆಯನ್ನು ಹ್ಯಾಗೋ ಹಾಗೆಯೇ ಅದನ್ನು ಸಾಕಿ ಕಾಯುತ್ತಾನೆ. (ಎಫೆ. ೫, ೨೫—೨೯.) ಸ್ತ್ರೀಯರೇ! ನಿಮ್ಮ ಗಂಡಂದಿರಿಗೆ ಕ್ರಿಸ್ತ ಒಡೆಯನಿಗೆಂಬಂತೆ ಒಳಗಾಗಿರ್ರಿ! ಯಾಕಂದರೆ ಕ್ರಿಸ್ತನು ಸಭೆಯ ತಲೆಯಾಗಿರುವಂತೆ ಗಂಡನು ಹೆಂಡತಿಯ ತಲೆಯಾಗಿ ದೇಹರಕ್ಷಕನಾಗಿದ್ಧಾನೆ; ಹಾಗಾದರೆ ಸಭೆಯು ಕ್ರಿಸ್ತನಿಗೆ ಹ್ಯಾಗೋ, ಹಾಗೆಯೇ ಹೆಂಡತಿಯರು ತಮ್ಮ ಗಂಡಂದಿರಿಗೆ ಎಲ್ಲಾದರಲ್ಲಿ ಒಳಗಾಗಿರಲಿ! (ಎಫೆ. ೫, ೨೨—೨೪.)

೪ನೇದಾಗಿ, ನಮ್ಮ ದೇವರಾದ ಯೆಹೋವನು ದಾಂಪತ್ಯಸ್ಥಿತಿಯನ್ನು ಆದಿಯಲ್ಲಿ ಆಶೀರ್ವದಿಸಿದ ವಿವರವನ್ನೂ ಕೇಳಿರಿ! ಅದು ಹ್ಯಾಗಂದರೆ: ದೇವರು ಮನುಷ್ಯನನ್ನು ತನ್ನ ಪ್ರತಿರೂಪವಾಗಿ ನಿರ್ಮಿಸಿದನು, ದೇವರ ಪ್ರತಿರೂಪವಾಗಿ ಅವನನ್ನು ನಿರ್ಮಿಸಿದನು; ಅವರನ್ನು ಗಂಡೂ ಹೆಣ್ಣೂ ನಿರ್ಮಿಸಿದನು. ಮತ್ತು ದೇವರು ಅವರನ್ನು ಆಶೀರ್ವದಿಸಿ, ಅವರಿಗೆ ಹೇಳಿದ್ದೇನಂದರೆ: ಅಭಿವೃದ್ಧಿಯಾಗಿ ಹೆಚ್ಚಿರಿ! ಭೂಮಿಯನ್ನು ತುಂಬಿ, ವಶ ಮಾಡಿ ಕೊಳ್ಳಿರಿ! (ಉತ್ಪ. ೧, ೨೭. ೨೮.) ದಾಂಪತ್ಯಸ್ಥಿತಿಗೆ ದೇವರ ಆಶೀರ್ವಾದವಿರುವದರಿಂದ ಸೊಲೊಮೋನನ ಮಾತು ನಿಜವಾಗಿದೆ. ಅದೇನಂದರೆ: ಹೆಂಡತಿಯನ್ನು ಕಂಡು ಕೊಂಡವನು ಮೇಲಾದ್ದನ್ನು ಕಂಡು ಕೊಂಡಿದ್ಧಾನೆ; ಯೆಹೋವನಿಂದ ಬಂದು ಅನುಗ್ರಹವನ್ನು ಪಡಕೊಂಡಿದ್ಧಾನೆ. (ಸಾಮ. ೧೮, ೨೨.)

೫ನೇದಾಗಿ, ದೇವರು ದಂಪತಿಗಳಿಗೆ ನೇಮಕ ಮಾಡಿದ ಕಷ್ಟತಾಪಾದಿಗಳೆಂಬ ಕ್ರೂಜೆಯನ್ನು ಕಾಣಿಸುವ ಮಾತನ್ನು ಸಹ ನೆನಪಿಗೆ ತಂದು ಕೊಳ್ಳಿರಿ! ಅದೇನಂದರೆ: ದೇವರು ಸ್ತ್ರೀಗೆ ಹೇಳಿದ್ದೇನಂದರೆ—ಬಸುರಿನ ಸಂಬಂಧವಾಗಿ ನಿನಗೆ ಶಾನೆ ಶ್ರಮ ಬೀಳುವಂತೆ ಮಾಡುತ್ತೇನೆ. ವೇದನೆ ಪಟ್ಟು ಮಕ್ಕಳನ್ನು ಹೆರುವಿ; ನಿನ್ನ ಗಂಡನ ಮೇಲೆ ನಿನ್ನ ಮನೋ

ರಥ ಹೋಗುವದು; ಅವನು ನಿನ್ನಾಳ್ವನು. ಬಳಿಕ ಪುರುಷನಿಗೆ ಆತನು ಹೇಳಿದ್ದೇನಂದರೆ: ನೀನು ನಿನ್ನ ಹೆಂಡತಿಯ ಮಾತನ್ನು ಕೇಳಿ, ತಿನ್ನ ಬಾರದೆಂದು ನಾನು ನಿನಗೆ ಅಪ್ಪಣೆ ಕೊಟ್ಟ ಮರದಿಂದ ತಿಂದಿ; ಆದ ಕಾರಣ ನಿನ್ನ ದೆಶೆಯಿಂದ ಭೂಮಿಗೆ ಶಾಪ ಹಿಡಿಯಲಿ! ನೀನು ಬದುಕುವ ಎಲ್ಲಾ ದಿವಸಗಳಲ್ಲಿ ಕಷ್ಟದೊಡನೆ ಅದರ ಹುಟ್ಟುವಳಿ ತಿನ್ನುವಿ; ಅದು ನಿನಗೆ ಮುಳ್ಳುಗಳನ್ನೂ ದತ್ತೂರಿಗಳನ್ನೂ ಹುಟ್ಟಿಸಿ ಕೊಡುವದು; ಹೊಲದ ಪಲ್ಯಗಳನ್ನು ತಿನ್ನುವಿ, ಮುಖ ಬೆವರ್ತು ರೊಟ್ಟಿ ತಿನ್ನುತ್ತಾ ಇರುವಿ, ತಿರಿಗಿ ಮಣ್ಣಿಗೆ ಕೂಡುವ ತನಕ; ಯಾಕಂದರೆ ಅದರೊಳಗಿಂದ ತೆಗೆಯಲ್ಪಟ್ಟಿ. ಮಣ್ಣು ನೀನು, ಮತ್ತು ಮಣ್ಣಿಗೆ ತಿರಿಗಿ ಕೂಡುವಿ. (ಉತ್ಪ. ೩, ೧೬—೧೯.)

೬ನೇದಾಗಿ, ಕ್ರೂಜೇ ಹೊರೆ ಹೊರುವವರನ್ನು ದೇವರು ಸಂತೈಸಿ, ಸಲುಹುವಾತನೆಂಬ ಅಭಯದ ಮಾತನ್ನು ಸಹ ಕೇಳಿ ಮನಸ್ಸಿಗೆ ತಂದು ಕೊಳ್ಳಿರಿ! ಮನುಷ್ಯನು ಹೊರ ಬೇಕಾದ ಕಷ್ಟ ತಾಪಾದಿಗಳೆಂಬ ಕ್ರೂಜೇ ಹೊರೆಗೆ ಕಾರಣವಾದ ಪಾಪವನ್ನು ನಮ್ಮ ಯೇಸು ಕ್ರಿಸ್ತ ಒಡೆಯನು ಹೊತ್ತು ಕೊಂಡು, ನಮ್ಮ ಓಲಾಗಿ ಪಾಪಕ್ಕೆ ಪ್ರಾಯಶ್ಚಿತ್ತ ಸಲ್ಲಿಸಿ, ತಾನು ನಮ್ಮ ಬದಲಾಗಿ ಕ್ರೂಜೆಯನ್ನು ಹೊತ್ತು ಕೊಂಡದರಿಂದ, ತನ್ನನ್ನು ನಂಬಿ ಕೊಳ್ಳುವವರ ಕ್ರೂಜೆಯನ್ನೆಲ್ಲಾ ಪ್ರತಿಷ್ಠಿಸಿ, ಆಶೀರ್ವದಿಸಿ, ಮೇಲಿಗೂ ನಿತ್ಯ ಭಾಗ್ಯಕ್ಕೂ ಕೈಕೂಡಿ ಬರ ಮಾಡಿದ್ದಾನೆ. ಹೀಗಿರಲಾಗಿ ಯೇಸು ಕ್ರಿಸ್ತ ಒಡೆಯನಲ್ಲಿ ನಂಬಿಕೆ ಇಟ್ಟ ಗೃಹಸ್ಥನ ವಿಷಯದಲ್ಲಿ ಕೀರ್ತನೆಗಾರನ ಮಾತು ಪೂರ್ಣ ಖರೆಯಾಗಿದೆ. ಯಾವದಂದರೆ: ಯೆಹೋವನಿಗೆ ಭಯ ಪಟ್ಟು, ಆತನ ಹಾದಿಗಳಲ್ಲಿ ನಡೆದು ಕೊಳ್ಳುವವರೆಲ್ಲರೂ ಭಾಗ್ಯವಂತರು. ನಿನ್ನ ಕೈಗಳ ಕಷ್ಟಾರ್ಜಿತವನ್ನು ತಿನ್ನುವಿ; ನೀನು ಭಾಗ್ಯವಂತನು; ನಿನಗೆ ಒಳ್ಳೇದಾಗುವದು; ನಿನ್ನ ಹೆಂಡತಿ ನಿನ್ನ ಮನೆಯ ಒದೀಲಿಯ ಫಲಭರಿತವಾದ ದ್ರಾಕ್ಷೇ ಬಳ್ಳಿಯಂತೆ, ನಿನ್ನ ಮಕ್ಕಳು ನಿನ್ನ ಮೇಜಿನ ಸುತ್ತಲು ಇರುವ ಇಪ್ಪೇ ಸಸಿಗಳಂತೆ ಇರುವರು. (ಕೀರ್ತ. ೧೨೮, ೧—೩.) ಮತ್ತು ಮುತ್ತೈದೆಯರ ವಿಷಯದಲ್ಲಿ ಪೌಲ ಅಪೊಸ್ತ

ಲನ ಮಾತು ನಿಜವೇ; ಅದೇನಂದರೆ: ಸ್ತ್ರೀ ಸ್ವಸ್ಥ ಮನಸ್ಸುಳ್ಳವಳಾಗಿ ವಿಶ್ವಾಸದಲ್ಲಿಯೂ ಪ್ರೀತಿಯಲ್ಲಿಯೂ ಪವಿತ್ರತ್ವದಲ್ಲಿಯೂ ನೆಲೆಯಾಗಿದ್ದರೆ, ಮಕ್ಕಳನ್ನು ಹೆತ್ತು (ಸಾಕಿ) ರಕ್ಷಿತಳಾಗುವಳು. (೧ ತಿಮೊ. ೨, ೧೫.)

ದಂಪತಿಗಳ ಸ್ಥಿತಿಗತಿಯನ್ನೂ ಧರ್ಮವನ್ನೂ ಕುರಿತು ದೇವರ ವಾಕ್ಯದಲ್ಲಿರುವ ಉಪದೇಶವಿಶೇಷವನ್ನು ಕೇಳಿ, ನೀವು ಈಗ ದೇವರಲ್ಲಿ ವಿಶ್ವಾಸವಿಟ್ಟು, ಒಬ್ಬರಿಗೊಬ್ಬರು ಎಂದೂ ತೀರದ ನಂಬಿಕೆಯೂ ಪ್ರೀತಿಯೂ ಉಳ್ಳ ಗಂಡಹೆಂಡರು ಆಗಲಿಕ್ಕೆ ಮನಸ್ಸಾಗಿದ್ದರೆ, ನಾನು ಕೇಳುವ ಪ್ರಶ್ನೆಗೆ (ಘಟ್ಟಿ ಶಬ್ದದಿಂದ) ಉತ್ತರ ಕೊಡಿರಿ!

ಮದುಮಗನಿಗೆ ಪ್ರಶ್ನೆ. An den Bräutigam.

(-ನೇ! -ಯೇ!) ಇಲ್ಲಿ ನಿಂತು ಕೊಂಡಿರುವ (-ಳನ್ನು, -ಯನ್ನು) ನಿನ್ನ ಹೆಂಡತಿಯಾಗಿ ತೆಕ್ಕೊಂಡು, ಅವಳಗೆಸಾಯುವ ವರೆಗೂ ರೋಗಾರೋಗ್ಯಗಳಲ್ಲಿಯೂ ಸುಖದುಃಖಗಳಲ್ಲಿಯೂ ಬಿಡದೆ ನಂಬಿಗಸ್ತನಾಗಿ ಇರಲಿಕ್ಕೆ ನಿನಗೆ ಮನಸ್ಸಿದ್ದರೆ—ಹೌದು! ಅದೇ ನನ್ನ ಮನಸ್ಸು—ಅನ್ನು!

ಉತ್ತರವು—ಹೌದು, ಅದೇ ನನ್ನ ಮನಸ್ಸು!

ಮದುಮಗಳಿಗೆ ಪ್ರಶ್ನೆ. An die Braut.

(-ಳೇ! -ಯೇ!) ಇಲ್ಲಿ ನಿಂತು ಕೊಂಡಿರುವ (-ನನ್ನು, -ಯನ್ನು) ನಿನ್ನ ಗಂಡನಾಗಿ ತೆಕ್ಕೊಂಡು, ಅವನಿಗೆ ಸಾಯುವ ವರೆಗೂ ರೋಗಾರೋಗ್ಯಗಳಲ್ಲಿಯೂ ಸುಖದುಃಖಗಳಲ್ಲಿಯೂ ಬಿಡದೆ ನಂಬಿಗಸ್ತಳಾಗಿ ಇರಲಿಕ್ಕೆ ನಿನಗೆ ಮನಸ್ಸಿದ್ದರೆ—ಹೌದು! ಅದೇ ನನ್ನ ಮನಸ್ಸು—ಅನ್ನು!

ಉತ್ತರವು—ಹೌದು, ಅದೇ ನನ್ನ ಮನಸ್ಸು!

ಅಥವಾ oder

ಮದುಮಗನಿಗೆ ಪ್ರಶ್ನೆ—(-ನೇ! -ಯೇ!) ಇಲ್ಲಿ ನಿಂತು ಕೊಂಡಿರುವ (-ಳನ್ನು, -ಯನ್ನು) ನೀನು ವಿವಾಹ ಮಾಡಿ ಕೊಂಡು, ಮರಣವು ನಿಮ್ಮನ್ನು ಅಗಲಿಸುವ ತನಕ, ಹೃದಯಪೂರ್ವಕವಾದ ನಂಬಿಕೆಯಿಂದ

ಪ್ರೀತಿ ಮಾಡಿ, ಸುಖದುಃಖಗಳಲ್ಲಿ ಬಿಟ್ಟು ಬಿಡದೆ, ವಿವಾಹವನ್ನು ಭಂಗ ಪಡಿಸದೆ, ದಾಂಪತ್ಯಸ್ಥಿತಿಯಲ್ಲಿ ದೋಷ ಹತ್ತದಂತೆ ಅವಳ ಸಂಗಡ ಬಗತನ ಮಾಡ ಬೇಕೆಂದಿದ್ದೀಯೋ? ಇದು ನಿನ್ನ ನಿಜ ದೃಢ ಮನೋನಿರ್ಧಾರವಾಗಿದ್ದರೆ, ದೇವರ ಮುಂದೆಯೂ ಈ ಸಭೆಯ ಮುಂದೆಯೂ ಯಥಾರ್ಥವಾಗಿ—ಹೌದು! ಅಂದು, ಮಾತು ಕೊಡು!

ಉತ್ತರವು—ಹೌದು, ಮಾತು ಕೊಡುತ್ತೇನೆ!

ಮದುಮಗಳಿಗೆ ಪ್ರಶ್ನೆ—(-ಳೇ! -ಯೇ!) ಇಲ್ಲಿ ನಿಂತು ಕೊಂಡಿರುವ (-ನನ್ನು, -ಯನ್ನು) ನೀನು ವಿವಾಹ ಮಾಡಿ ಕೊಂಡು, ಮರಣವು ನಿಮ್ಮನ್ನು ಅಗಲಿಸುವ ತನಕ, ಹೃದಯಪೂರ್ವಕವಾದ ನಂಬಿಕೆಯಿಂದ ಪ್ರೀತಿ ಮಾಡಿ, ಸುಖದುಃಖಗಳಲ್ಲಿ ಬಿಟ್ಟು ಬಿಡದೆ, ವಿವಾಹವನ್ನು ಭಂಗ ಪಡಿಸದೆ, ದಾಂಪತ್ಯಸ್ಥಿತಿಯಲ್ಲಿ ದೋಷ ಹತ್ತದಂತೆ ಅವನ ಸಂಗಡ ಬಗತನ ಮಾಡ ಬೇಕೆಂದಿದ್ದೀಯೋ? ಇದು ನಿನ್ನ ನಿಜ ದೃಢ ಮನೋನಿರ್ಧಾರವಾಗಿದ್ದರೆ, ದೇವರ ಮುಂದೆಯೂ ಈ ಸಭೆಯ ಮುಂದೆಯೂ ಯಥಾರ್ಥವಾಗಿ—ಹೌದು! ಅಂದು, ಮಾತು ಕೊಡು!

ಉತ್ತರವು—ಹೌದು, ಮಾತು ಕೊಡುತ್ತೇನೆ!

ಹಾಗಾದರೆ, ಒಬ್ಬರಿಗೊಬ್ಬರು ಬಲಗೈ ಕೊಡಿರಿ!

ಬಳಿಕ ಪ್ರಸಂಗಿಯು ಮದುಮಕ್ಕಳ ಬಲಗೈಗಳ ಮೇಲೆ ತನ್ನ ಬಲಗೈಯನ್ನಿಟ್ಟು ಹೇಳುವದು:

Der Geistliche legt seine rechte Hand auf die Hände der Verlobten und spricht:

ನೀವು ಈಗ ಒಬ್ಬರಿಗೊಬ್ಬರು ದಾಂಪತ್ಯ ವಿಶ್ವಾಸ ಪ್ರೀತಿಗಳ ಮಾತು ಕೊಟ್ಟಿರಲಾಗಿ, (ಕ್ರೈಸ್ತಸಭೆಯ ಸೇವಕನಾದ) ನಾನು ನಿಮ್ಮ ವಿವಾಹಬಂಧವನ್ನು ದೇವರ ನೇಮದ ಮೇರೆಗೆ ಎಂದಿಗೂ ಸಡ್ಲಿಸಲಿಕ್ಕೂ ಹರಿಯಲಿಕ್ಕೂ ಬಿಚ್ಚಲಿಕ್ಕೂ ಕೂಡದಂಥಾದ್ದೆಂತಾ ತಂದೆ ಮಗ ಪವಿತ್ರಾತ್ಮ ಆಗಿರುವ ದೇವರ ಹೆಸರಿನಲ್ಲಿ ದೃಢ ಮಾಡುತ್ತೇನೆ. ದೇವರು ಜೋಡಿಸಿದ್ದನ್ನು ಮನುಷ್ಯನು ವಿಂಗಡಿಸದಿರಲಿ! ಆಮೆನ್!

ದಂಪತಿಗಳು ಮೊಣಕಾಲೂರಿ ಕೊಂಡಿರಲಾಗಿ, ಪ್ರಸಂಗಿಯು ಹೇಳುವದು:
Die Neuverheiratheten knieen nieder und der Geistliche spricht:

ಪ್ರಾರ್ಥನೆ ಮಾಡೋಣ! Gebet.

ಸರ್ವಕರ್ತನಾದ ದೇವರೇ! ವಿಶ್ವಕುಟುಂಬಿಯೇ! ಸ್ವರ್ಗೀಯ ತಂದೆಯೇ! ನೀತಿ ಪ್ರೀತಿ ಮಮಕಾರ ಧರ್ಮ ಮುಂತಾದ್ದು ನರಕುಲದಲ್ಲಿ ಪ್ರಬಲವಾಗಿ ಇದ್ದುಳಿಯುವ ಹಾಗೆ ನೀನು ಕುಟುಂಬನೀತಿಯನ್ನು ಸ್ಥಾಪಿಸಿ, ದಂಪತಿಗಳ ಜಗತನವನ್ನು ಆಶೀರ್ವದಿಸಿ, ನರವಂಶವೃದ್ಧಿಗೆ ಮಾರ್ಗ ಮಾಡಿ, ಇಡಿ ಮನುಷ್ಯಜಾತಿಯ ಸ್ಥಿತಿಗತಿಗೆ ಆಧಾರವಾಗಿದ್ದೀ. ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನಿಗೂ ಆತನ ಮದುಮಗಳಾದ ಸಭೆಗೂ ಇರುವ ಐಕ್ಯವಿಶೇಷದ ಮಹಾ ಮರ್ಮಕ್ಕೆ ದಾಂಪತ್ಯಸ್ಥಿತಿ ಒಂದು ಸಾದೃಶ್ಯವಾಯಿತು. ದಯಾಪರನೇ! ನಿನ್ನ ಅಮಿತವಾದ ದಯದಲ್ಲಿ ನಾವು ಭರವಸವಿಟ್ಟು, ಬೇಡುವದೇನಂದರೆ: ಈಗ ಇಲ್ಲಿ ಮದುವೆಯಾದವರಲ್ಲಿ ನೀನು ನಿನ್ನ ನೇಮ ಕಾರ್ಯ ಆಶೀರ್ವಾದಗಳನ್ನು ಕುಂದೂ ಕೊರತೆಯೂ ಹತ್ತದಂತೆ ದಯಾಳುವಾಗಿ ನೆರವೇರಿಸಿ, ಅವರು ಈಗ ತೊಡಗಿದ ಬಗತನದಲ್ಲಿ ಕಡೇ ವರೆಗೂ ಭಕ್ತಿಯುಳ್ಳ ದಂಪತಿಗಳಾಗಿ, ನಿನ್ನ ಹೆಸರಿನ ಕೀರ್ತಿಗೂ ನೆರೆಹೊರೆಯವರ ಹಿತಕ್ಕೂ ಬರುವವರಾಗಿ, ಪ್ರೀತಿಯಿಂದ ನಡದು ಕೊಳ್ಳುವಂತೆ ನಿನ್ನ ಪ್ರಿಯ ಮಗನೂ ನಮ್ಮೊಡೆಯನೂ ಆಗಿರುವ ಯೇಸು ಕ್ರಿಸ್ತನ ಮುಖಾಂತರ ಅವರಿಗೆ ಶಾನೆ ಕೃಪೆಯನ್ನು ದಯ ಮಾಡು! ಆಮೆನ್!

ಅಥವಾ oder

ಎಂದೆಂದಿಗೂ ನಮ್ಮ ಸಹಾಯವೂ ಆಶ್ರಯವೂ ಆಗಿರುವ ನಮ್ಮ ದೇವರಾದ ಯೆಹೋವನೇ! ನಿನ್ನ ಪವಿತ್ರ ನಿಯಮದ ಮೇರೆಗೆ ಒಬ್ಬರಿಗೊಬ್ಬರು ನಿತ್ಯ ಪ್ರೀತಿ ಮಾಡುತ್ತೇವೆಂಬ ಮಾತು ಕೊಟ್ಟ ಈ ಹೊಸ ದಂಪತಿಗಳನ್ನು ನೀನು ಒಲಿದು ನೋಡು! ಅವರನ್ನು ಆಶೀರ್ವದಿಸಿ, ಅವರ ಹೋಗೋಣ ಬರೋಣಗಳನ್ನು ಅನುಕೂಲಿಸು! ನಿನ್ನ ಒಲುಮೆಯುಳ್ಳ ಸುಚಿತ್ತವು ಎಲ್ಲಾ ವಿಷಯದಲ್ಲಿಯೂ ಅವರಲ್ಲಿ ಆಗುವ ಹಾಗೆ

ನಿನ್ನ ಪವಿತ್ರಾತ್ಮದಿಂದ ಅವರನ್ನು ನಡಿಸಿ ಆಳು! ಅವರ ಮನಸ್ಸು ಸಂಪೂರ್ಣತೆಯ ಬಂಧವಾದ ಪ್ರೀತಿಯಿಂದ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿ ಉಳಿಯುವ ಹಾಗೆ ದಯ ಮಾಡು! ಅವರು ಕ್ರಿಸ್ತನ ವಾಕ್ಯಕ್ಕೆ ತಮ್ಮಲ್ಲಿ ಯಾವಾಗಲೂ ಬಹಳ ಇಂಬು ಕೊಟ್ಟು, ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ಸ್ತೋತ್ರದೊಂದಿಗೆಯೂ ತಮ್ಮ ಎಲ್ಲಾ ಸುಖದುಃಖಗಳನ್ನು ನಿನಗೆ ಅರಿಕೆ ಮಾಡುವವರಾಗಿರುವ ಹಾಗೆ ಪವಿತ್ರಾತ್ಮದಿಂದ ಅವರನ್ನು ಎಚ್ಚರಿಸುತ್ತಿರು! ಭೇದಬುದ್ಧಿಗೂ ಕಲಹಕ್ಕೆ ಕಾರಣವಾಗುವ ದುರಾತ್ಮಕ್ಕೂ ತಡೆ ಹಾಕಿ, ಒಬ್ಬರನ್ನೊಬ್ಬರು ತಾಳ್ಮೆಯಿಂದ ಸೈರಿಸುವ ವಿವೇಕವನ್ನೂ ಶಾಂತಿಗುಣವನ್ನೂ ಅವರಲ್ಲಿ ಹುಟ್ಟಿಸು. ಅವರು ತಮ್ಮ ವೃತ್ತಿಯನ್ನು ನಂಬಿಕೆಯಿಂದಲೂ ಸಾಹಸದಿಂದಲೂ ನಡಿಸುವವರಾಗಿ, ತಮ್ಮ ಬದುಕು ಬಾಳಿಗೆ ಅವಶ್ಯವಾದದನ್ನು ಘಳಿಸಿ ಕೊಳ್ಳುವ ಹಾಗೆ ಅವರಿಗೆ ನಿನ್ನ ಆಶೀರ್ವಾದವನ್ನು ದಯಪಾಲಿಸು! ಅವರಿಗೆ ಬರುವ ಕಷ್ಟಾದಿಗಳಿಂದ ಸಹ ವಿಶ್ವಾಸ ತಾಳ್ಮೆಗಳೆಂಬ ಒಳ್ಳೇ ಫಲವನ್ನು ಮಾಗಿಸು! ಅವರ ಮನೆಯನ್ನೂ ಹೃದಯವನ್ನೂ ನಿನ್ನ ನಿವಾಸವಾಗ ಮಾಡು! ಒಬ್ಬರನ್ನೊಬ್ಬರು ಹ್ಯಾಗಾದರೂ ಸ್ವರ್ಗರಾಜ್ಯಕ್ಕೆ ಕರಕೊಂಡು ಹೋಗುವದಕ್ಕೆ ನೋಡಿ, ಯತ್ನ ಮಾಡುವ ಆಸಕ್ತಿಯನ್ನು ಅವರಿಗೆ ದಯಪಾಲಿಸು! ಮತ್ತು ಅವರು ಕಡೇ ವರೆಗೂ ವಿಶ್ವಾಸವನ್ನು ಕೈಕೊಂಡು, ತಮ್ಮ ಭೂಸಂಚಾರವನ್ನು ಮುಗಿಸಿದಾಗ, ನೀನು ಯೇಸು ಕ್ರಿಸ್ತನಿಗಾಗಿ ಅವರನ್ನು ಈ ಪರವಾಸದಿಂದ ನಿನ್ನ ಮೇಲ್ಮನೆಗೆ, ನಿನ್ನ ಸನ್ನಿಧಿಗೆ, ಶಾಶ್ವತ ಸ್ವರ್ಗಪದವಿಗೆ ಕರಕೋ! ಆಮೆನ್!

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ

ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಶೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಗೂ ನಿನ್ನವಾಗಿವೆ! ಆಮೆನ್!

ಆಶೀರ್ವಾದವಚನವು. Segen.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

V. ಹೂಳಿಕೆ. Begräbniss.

1. ಬಾಲ್ಯ ದಾಟಿದವರದು. Erwachsener.

ಅಮರತ್ವವುಳ್ಳ ಒಬ್ಬನೇ ದೇವರಿಗೆ ಯುಗಯುಗಾಂತರಗಳಗೂ ಮಹಿಮೆ ಆಗಲಿ! ಆಮೆನ್!

ಅಥವಾ oder

ಮರಣ ತಾಳಿ, ಈಗ ಯುಗಯುಗಾಂತರಕ್ಕೆ ಬದುಕುವಂಥ ಯೇಸು ಕ್ರಿಸ್ತನಿಗೆ ಇಂದೂ ಎಂದೆಂದಿಗೂ ಸ್ತೋತ್ರವಾಗಲಿ! ಆಮೆನ್!

ಓದೋಣಾಗ ತಕ್ಕ ವಾಕ್ಯಗಳು. Lectionen.

೯೦ನೇ ಕೀರ್ತನೆ. Psalm 90.

ಕರ್ತನೇ! ತಲತಲಾಂತರಗಳಲ್ಲಿ ನೀನು ನಮ್ಮ ವಾಸಸ್ಥಾನವಾಗಿದ್ದೀ. ಬೆಟ್ಟಗಳು ಹುಟ್ಟುವದಕ್ಕಿಂತ ಮುಂಚೆಯೂ, ನೀನು ಭೂಮಿಯನ್ನೂ ಲೋಕವನ್ನೂ ನಿರ್ಮಿಸುವದಕ್ಕಿಂತ ಮುಂಚೆಯೂ, ಯುಗಯುಗದಿಂದ ಯುಗಯುಗಕ್ಕೂ ನೀನು ದೇವರಾಗಿದ್ದೀ. ನೀನು ಮನುಷ್ಯನನ್ನು ನಾಶನಕ್ಕೆ ತಿರುಗಿಸಿ, ಮನುಷ್ಯನ ಮಕ್ಕಳೇ, ತಿರುಗಿರಿ! ಎಂದು ಹೇಳುತ್ತೀ. ಯಾಕಂದರೆ ಸಾವಿರ ವರುಷಗಳು ನಿನ್ನ ದೃಷ್ಟಿಗೆ

ಕಳೆದು ಹೋಗುವ ನಿನ್ನಿನ ದಿವಸದ ಹಾಗೆಯೂ ಒಂದು ರಾತ್ರಿಜಾವದ ಹಾಗೆಯೂ ಅವೆ. ಅವರನ್ನು ಪ್ರವಾಹದಿಂದ ಬಡುಕೊಂಡು ಹೋಗುತ್ತೀ; ನಿದ್ದೆಯಾಗಿದ್ದಾರೆ; ಬೆಳಿಗ್ಯೆ ಬೆಳೆಯುವ ಹುಲ್ಲಿನ ಹಾಗಿದ್ದಾರೆ. ಅದು ಬೆಳಿಗ್ಯೆ ಅರಳಿ, ಬೆಳೆಯುತ್ತದೆ; ಸಂಜೆಯಲ್ಲಿ ಕೊಯ್ಯಲ್ಪಟ್ಟು, ಒಣಗುತ್ತದೆ. ಯಾಕಂದರೆ ನಿನ್ನ ಕೋಪದಿಂದ ಕಳೆದು ಹೋಗಿ, ನಿನ್ನ ಉರಿಯಿಂದ ತಲ್ಲಣಿಸುತ್ತೇವೆ. ನಮ್ಮ ಅಕ್ರಮಗಳನ್ನು ನಿನ್ನ ಮುಂದೆಯೂ, ನಮ್ಮ ಮರೆಯಾದ ಪಾಪವನ್ನು ನಿನ್ನ ಮುಖದ ಬೆಳಕಿನಲ್ಲಿಯೂ ಇಡುತ್ತೀ. ಯಾಕಂದರೆ ನಮ್ಮ ದಿವಸಗಳೆಲ್ಲಾ ನಿನ್ನ ಉಗ್ರದಿಂದ ಹೋಗುತ್ತವೆ; ನಮ್ಮ ವರುಷಗಳನ್ನು ಒಂದು ಕಥೆಯ ಹಾಗೆ ಕಳೆಯುತ್ತೇವೆ. ನಮ್ಮ ವರುಷಗಳ ದಿವಸಗಳು ಎಪ್ಪತ್ತು ವರುಷ, ಬಲದಿಂದಿದ್ದರೆ ಎಂಭತ್ತು ವರುಷ; ಆದರೆ ಅವುಗಳ ಅಹಂಕಾರ ಕಷ್ಟವೂ ಆಯಾಸವೂ ಆಗಿದೆ; ಯಾಕಂದರೆ ಅದು ಬೇಗ ಕೊಯಿದು ಹಾಕಲ್ಪಡುತ್ತದೆ, ಮತ್ತು ನಾವು ಹಾರಿ ಹೋಗುತ್ತೇವೆ. ನಿನ್ನ ಕೋಪದ ಬಲವನ್ನು ತಿಳಿದವನ್ಯಾರು? (ನಿನ್ನ ಭಯದ ಪ್ರಕಾರ ನಿನ್ನ ಉಗ್ರವದೆ). ನಾವು ಜ್ಞಾನವುಳ್ಳ ಹೃದಯವನ್ನು ಹೊಂದುವ ಹಾಗೆ, ನಮ್ಮ ದಿವಸಗಳನ್ನು ಎಣಿಸುವದಕ್ಕೆ ನಮಗೆ ತಿಳಿಯ ಮಾಡು. ಯೆಹೋವನೇ, ತಿರುಗು; ಎಷ್ಟು ಮಟ್ಟಿಗೂ? ನಿನ್ನ ಸೇವಕರ ಮೇಲೆ ಅಂತಃಕರಣ ಪಡು. ಬೆಳಿಗ್ಯೆ ನಿನ್ನ ಕೃಪೆಯಿಂದ ನಮಗೆ ತೃಪ್ತಿ ಮಾಡು; ಆಗ ನಮ್ಮ ದಿವಸಗಳೆಲ್ಲಾ ಉತ್ಸಾಹಧ್ವನಿ ಗೈದು, ಸಂತೋಷ ಪಡುವೆವು. ನೀನು ನಮ್ಮನ್ನು ದೀನ ಮಾಡಿದ ದಿವಸಗಳ ಪ್ರಕಾರವೂ, ನಾವು ಕೇಡನ್ನು ನೋಡಿದ ವರುಷಗಳ ಪ್ರಕಾರವೂ, ನಮ್ಮನ್ನು ಸಂತೋಷ ಪಡಿಸು. ನಿನ್ನ ಸೇವಕರಿಗೆ ನಿನ್ನ ಕೆಲಸವೂ, ಅವರ ಮಕ್ಕಳಿಗೆ ನಿನ್ನ ಪ್ರಭೆಯೂ ತೋರ ಬರಲಿ. ನಮ್ಮ ದೇವರಾದ ಯೆಹೋವನ ರಮ್ಯತೆಯು ನಮ್ಮ ಮೇಲೆ ಇರಲಿ; ನಮ್ಮ ಕೈಗಳ ಕೆಲಸವನ್ನು ನಮ್ಮ ಮೇಲೆ ಸ್ಥಿರ ಪಡಿಸು; ನಮ್ಮ ಕೈಕೆಲಸವನ್ನೇ ಸ್ಥಿರ ಪಡಿಸು.

೧ ಕೊರಿ. ೧೫, ೨೦—೨೮. ೩೫—೫೭. 1 Cor. 15, 20—28. 35—57.

ಆದರೆ ಈಗ ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು, ನಿದ್ದೆ ಹೋದವರಲ್ಲಿ ಪ್ರಥಮಫಲವಾದನು. ಯಾಕಂದರೆ, ಮನುಷ್ಯನಿಂದ ಮರಣವು ಬಂದ ಕಾರಣ, ಮನುಷ್ಯನಿಂದಲೇ ಸತ್ತವರ ಉತ್ಥಾನವೂ. ಹ್ಯಾಗಂದರೆ, ಯಾವ ಪ್ರಕಾರ ಆದಮನಲ್ಲಿ ಎಲ್ಲರು ಸಾಯುತ್ತಾರೋ, ಅದೇ ಪ್ರಕಾರ ಕ್ರಿಸ್ತನಲ್ಲಿ ಎಲ್ಲರು ಬದುಕಿಸಲ್ಪಡುವರು. ಆದರೆ ಒಬ್ಬೊಬ್ಬನು ಸ್ವಂತ ಕ್ರಮದಲ್ಲಿ; ಪ್ರಥಮಫಲ ಕ್ರಿಸ್ತನು; ತರುವಾಯ ಆತನ ಬರುವಿಕೆಯಲ್ಲಿ ಕ್ರಿಸ್ತನವರು. ಆ ಮೇಲೆ ಅಂತ್ಯವು—ಆತನು ಎಲ್ಲಾ ಧೊರೆತನವನ್ನೂ, ಎಲ್ಲಾ ಅಧಿಕಾರ ಬಲಗಳನ್ನೂ ತೆಗೆದು ಹಾಕಿ, ತಂದೆ

ಯಾದ ದೇವರಿಗೆ ರಾಜ್ಯವನ್ನು ಒಪ್ಪಿಸಿದಾಗಲೇ. ಯಾಕಂದರೆ ಎಲ್ಲಾ ಶತ್ರುಗಳನ್ನು ಆತನ ಪಾದಗಳ ಕೆಳಗೆ ಇಟ್ಟಿರುವ ಮಟ್ಟಿಗೂ, ಆತನು ರಾಜ್ಯವಾಳ ಬೇಕು. ಮರಣವು ಕಡೇ ಶತ್ರುವಾಗಿ ಲಯ ಮಾಡಲ್ಪಡುವದು. ಯಾಕಂದರೆ ಎಲ್ಲವುಗಳನ್ನು ಆತನ ಪಾದಗಳ ಕೆಳಗೆ ಇಟ್ಟಿದ್ದಾನೆ. ಆದರೆ ಎಲ್ಲವುಗಳು ಕೆಳಗೆ ಇಟ್ಟವೆ ಎಂದು ಹೇಳುವಾಗ, ಎಲ್ಲವುಗಳನ್ನು ಆತನ ಕೆಳಗೆ ಇಟ್ಟವನು ಹೊರ್ತು ಎಂಬುವದು ತೋರುತ್ತದೆ. ಮತ್ತು ಎಲ್ಲವುಗಳು ಆತನ ಕೆಳಗಾದಾಗ, ದೇವರು ಎಲ್ಲವುಗಳಲ್ಲಿ ಎಲ್ಲಾ ಆಗುವ ಹಾಗೆ, ಎಲ್ಲವುಗಳನ್ನು ಕೆಳಗಾಗ ಮಾಡಿದಾತನಿಗೆ ಮಗನು ತಾನೇ ಕೆಳಗಾಗುವನು.

ಆದರೆ, ಸತ್ತವರು ಹ್ಯಾಗೆ ಎಬ್ಬಿಸಲ್ಪಡುತ್ತಾರೆ? ಯಾವ ಶರೀರದಿಂದ ಬರುತ್ತಾರೆ? ಎಂದು ಒಬ್ಬನು ಹೇಳುವನು. ಮೂಢನೇ! ನೀನು ಬಿತ್ತುವಂಥಾದ್ದು ಸತ್ತ ಹೊರ್ತು, ಬದುಕಿಸಲ್ಪಡದು. ಮತ್ತು ನೀನು ಬಿತ್ತುವಂಥಾದ್ದು, ಉಂಟಾಗುವ ಶರೀರವಲ್ಲ, ಬರೇ ಕಾಳೇ, ಒಂದು ವೇಳೆ ಗೋಧಿಯಾಗಲಿ, ಮಿಕ್ಕಾದವುಗಳಲ್ಲಿ ಒಂದು ಆಗಲಿ, ಬಿತ್ತುತ್ತೀ. ಆದರೆ ದೇವರು ತನ್ನ ಮನಸ್ಸಿಗೆ ಬಂದ ಹಾಗೆ ಅದಕ್ಕೆ ಶರೀರವನ್ನು—ಒಂದೊಂದು ಬೀಜಕ್ಕೆ ಸ್ವಂತ ಶರೀರವನ್ನು—ಕೊಡುತ್ತಾನೆ. ಎಲ್ಲಾ ಮಾಂಸವು ಒಂದೇ ಮಾಂಸವಲ್ಲ. ಆದರೆ ಮನುಷ್ಯನ ಮಾಂಸವು ಬೇರೆ, ಪಶುಗಳ ಮಾಂಸವು ಬೇರೆ, ಮೀನುಗಳದು ಬೇರೆ, ಪಕ್ಷಿಗಳದು ಬೇರೆ. ಇದಲ್ಲದೆ ಆಕಾಶದ ಶರೀರಗಳು ಉಂಟು; ಭೂಮಿಯ ಶರೀರಗಳು ಉಂಟು; ಆದರೆ ಆಕಾಶದವುಗಳ ಮಹಿಮೆ ಬೇರೆ, ಭೂಮಿಯವುಗಳದು ಬೇರೆ. ಸೂರ್ಯನ ಮಹಿಮೆ ಬೇರೆ, ಚಂದ್ರನ ಮಹಿಮೆ ಬೇರೆ, ನಕ್ಷತ್ರಗಳ ಮಹಿಮೆ ಬೇರೆ; ಯಾಕಂದರೆ ನಕ್ಷತ್ರಕ್ಕೆ ನಕ್ಷತ್ರ ಮಹಿಮೆಯಲ್ಲಿ ಹೆಚ್ಚು ಕಡಿಮೆ ಆಗಿದೆ. ಹಾಗೆಯೇ ಸತ್ತವರ ಉತ್ಥಾನವು. ಲಯವಾಗಿ ಬಿತ್ತಲ್ಪಡುವದು, ನಿರ್ಲಯವಾಗಿ ಎಬ್ಬಿಸಲ್ಪಡುವದು; ಅವಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯಲ್ಲಿ ಎಬ್ಬಿಸಲ್ಪಡುವದು; ಅಶಕ್ತಿಯಲ್ಲಿ ಬಿತ್ತಲ್ಪಡುವದು, ಬಲದಲ್ಲಿ ಎಬ್ಬಿಸಲ್ಪಡುವದು; ಪ್ರಾಣಭಾವದ ಶರೀರವು ಬಿತ್ತಲ್ಪಡುವದು, ಆತ್ಮಭಾವದ ಶರೀರವು ಎಬ್ಬಿಸಲ್ಪಡುವದು. ಪ್ರಾಣಭಾವದ ಶರೀರ ಉಂಟು, ಆತ್ಮಭಾವದ ಶರೀರ ಉಂಟು. ಮತ್ತು ಹೀಗೆ ಬರೆದದೆ—ಮೊದಲನೇ ಮನುಷ್ಯನಾದ ಆದಮನು ಬದುಕುವ ಪ್ರಾಣವಾದನು; ಕಡೇ ಆದಮನು ಬದುಕಿಸುವ ಆತ್ಮವಾದನು. ಆದರೆ ಆತ್ಮಭಾವದ್ದು ಮೊದಲನೇದಲ್ಲ, ಪ್ರಾಣಭಾವದ್ದೇ; ತರುವಾಯ ಆತ್ಮಭಾವದ್ದು. ಮೊದಲನೇ ಮನುಷ್ಯನು ಭೂಮಿಯಿಂದ ಉಂಟಾದವನಾಗಿ ಮಣ್ಣಿನವನು; ಎರಡನೇ ಮನುಷ್ಯನು ಪರಲೋ

ಕದಿಂದ ಬಂದ ಕರ್ತನು. ಮಣ್ಣಿನವನು ಎಂಥವನೋ ಅಂಥವರೇ ಮಣ್ಣಿನವರು; ಪರಲೋಕದವನು ಎಂಥವನೋ, ಅಂಥವರೇ ಪರಲೋಕದವರು. ಮತ್ತು ಮಣ್ಣಿನವನ ಹೋಲಿಕೆಯನ್ನು ವಹಿಸಿದ ಹಾಗೆ, ಪರಲೋಕದವನ ಹೋಲಿಕೆಯನ್ನು ಸಹ ವಹಿಸುವೆವು. ಆದರೆ, ಸಹೋದರರೇ, ನಾನು ಹೇಳುವದೇನಂದರೆ— ರಕ್ತ ಮಾಂಸಗಳು ದೇವರ ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳಲಾರವು; ಮತ್ತು ಲಯವು ನಿರ್ಲಯವನ್ನು ಸ್ವತಂತ್ರಿಸಿ ಕೊಳ್ಳದು. ಇಗೋ, ಮರ್ಮವನ್ನು ನಿಮಗೆ ಹೇಳುತ್ತೇನೆ—ಎಲ್ಲರು ನಿದ್ದೆ ಹೋಗೆವು; ಆದರೆ ಕ್ಷಣದಲ್ಲಿ, ರೆಪ್ಪೆ ಬಡಿಯುವದರಲ್ಲಿ ಕಡೇ ತುತೂರಿಯಲ್ಲಿ, ಎಲ್ಲರು ಮಾರ್ಪಡುವೆವು. ಯಾಕಂದರೆ ತುತೂರಿಯ ಧ್ವನಿಯಾಗುವದು; ಆಗ ಸತ್ತವರು ನಿರ್ಲಯವಾಗಿ ಎಬ್ಬಿಸಲ್ಪಡುವರು; ಮತ್ತು ನಾವು ಮಾರ್ಪಡುವೆವು. ಯಾಕಂದರೆ ಈ ಲಯವಾದ್ದು ನಿರ್ಲಯವನ್ನು ಧರಿಸಿ ಕೊಳ್ಳಬೇಕು; ಮತ್ತು ಈ ಮರ್ತ್ಯವಾದ್ದು ಅಮರತ್ವವನ್ನು ಧರಿಸಿ ಕೊಳ್ಳ ಬೇಕು. ಆದರೆ ಈ ಲಯವಾದ್ದು ನಿರ್ಲಯವನ್ನು ಧರಿಸಿ ಕೊಂಡಾಗಲೂ, ಈ ಮರ್ತ್ಯವಾದ್ದು ಅಮರತ್ವವನ್ನು ಧರಿಸಿ ಕೊಂಡಾಗಲೂ, ಬರೆದ ಮಾತು ಉಂಟಾಗುವದು; ಏನಂದರೆ: ಮರಣವು ಜಯದಲ್ಲಿ ನುಂಗಲ್ಪಟ್ಟದೆ. ಮರಣವೇ! ನಿನ್ನ ಕೊಂಡಿಯು ಎಲ್ಲಿ? ಪಾತಾಳವೇ! ನಿನ್ನ ಜಯವು ಎಲ್ಲಿ? ಮರಣದ ಕೊಂಡಿಯು ಪಾಪವೇ; ಪಾಪದ ಬಲವು ನ್ಯಾಯಪ್ರಮಾಣವೇ. ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲವಾಗಿ ನಮಗೆ ಜಯವನ್ನು ಕೊಡುವ ದೇವರಿಗೆ ಸ್ತೋತ್ರವು!

ಅಥವಾ oder

ಒಡೆಯನಲ್ಲಿ ಪ್ರಿಯರೇ! ಸರ್ವಶಕ್ತನೂ ಸರ್ವಜ್ಞನೂ ಆಗಿರುವ ದೇವರಿಗೆ ನಮ್ಮ ಈ ಸಭೆಯವನನ್ನು (-ಳನ್ನು, -ರನ್ನು) ಈ ಕೀಳು ಲೋಕದಿಂದ ಮೇಲ್ಲೋಕಕ್ಕೆ ಕರೆದು ವೈಯುವದು ಸರಿ ಕಂಡ ಮೇಲೆ ನಾವು ಅವನ (-ಳ, -ರ) ದೇಹವನ್ನು ಭೂಮಿಗೆ, ಧೂಳನ್ನು ಧೂಳಿಗೆ ಒಪ್ಪಿಸುತ್ತೇವೆ. ಯಾಕಂದರೆ ಒಡೆಯನು ಒಬ್ಬೊಬ್ಬ ಮನುಜನಿಗೆ ಹೇಳುವದೇನಂದರೆ: ಮಣ್ಣು ನೀನು, ಮಣ್ಣಿಗೆ ತಿರಿಗಿ ಕೂಡ ಬೇಕು.—ಒಬ್ಬ ಮನುಷ್ಯನಿಂದ ಪಾಪವು, ಪಾಪದಿಂದ ಮರಣವು ಲೋಕದಲ್ಲಿ ಪ್ರವೇಶಿಸಿದ ಸಂಗತಿಯಾಗಿ, ಎಲ್ಲರೂ ಪಾಪ ಮಾಡಿದ್ದಲ್ಲಿ, ಮರಣವು ಎಲ್ಲಾ ಮನುಷ್ಯರ ಮೇಲೆ ವ್ಯಾಪಿಸಿತು. ಆದದರಿಂದ ಮಾಂಸವೆಲ್ಲಾ ಅಳಿದು ಹೋಗುವದು;

ಇದರಲ್ಲಿ ಮುಖದಾಕ್ಷಿಣ್ಯವೇನೂ ಇಲ್ಲ. ಹೀಗಿರಲಾಗಿ ನಾವು ಇಲ್ಲಿ ದೀನ ಮನಸ್ಸಾಗಿ, ಬಡ ಪಾಪಿಗಳಾಗಿದ್ದೇವೆಂದು ಅರಿಕೆ ಮಾಡಿ, ದೇವರ ಬಲವಾದ ಕೈಯ ಕೆಳಗೆ ನಮ್ಮನ್ನು ತಗ್ಗಿಸಿ ಕೊಂಡು, ಆತನ ಮುಂದೆ ನಾವು ಬರೇ ಧೂಳಾಗಿದ್ದೇವೆ ಎಂತಲೂ, ನಮ್ಮಲ್ಲಿ ಹುರುಳಿಲ್ಲ, ನಮ್ಮ ದಿನಗಳು ಘೂಳಿಯಂತೆ ಹಾರಿ ಹೋಗುತ್ತವೆ ಎಂತಲೂ, ಸರಿಯಾಗಿ ನೆನಸಿ ಕೊಳ್ಳುವಾ.

ಸ್ತ್ರೀಯಿಂದ ಹುಟ್ಟಿದ ಮನುಷ್ಯನು ತುಸ ಹೊತ್ತು ಬದುಕಿ, ಉಪ ದ್ರವಗಳಿಂದ ತುಂಬಿದವನು; ಹೂವಿನಂತೆ ಅರಳಿ, ಬಾಡಿ ಹೋಗುತ್ತಾನೆ; ನೆರಳನಂತೆ ನಿಲುಗಡೆ ಇಲ್ಲದೆ ಓಡಿ, ಕಾಣದೆ ಹೋಗುತ್ತಾನೆ. ಒಡೆಯ ನೇ! ನಮ್ಮ ದಿವಸಗಳು ಬರೇ ಗೇಣುದ್ದವಾಗಿವೆ; ನಮ್ಮ ಆಯುಸ್ಸು ನಿನ್ನ ಎಣಿಕೆಗೆ ಏನೊಂದೂ ಅಲ್ಲದ ಹಾಗಿದೆ. ಅಕಟಾ! ಇದ್ದೇನೆಂಬುವ ಪ್ರತಿ ಮನುಷ್ಯನು ಬರೇ ಘೂಳಿಯಂತೆಯೇ.

ಆದರೆ ನಮ್ಮ ಯೇಸು ಕ್ರಿಸ್ತ ಒಡೆಯನಿಗೂ, ನಮ್ಮನ್ನು ಪ್ರೀತಿ ಮಾಡಿ, ಕೃಪೆಯಿಂದಲೇ ನಿತ್ಯ ಆದರಣೆಯನ್ನೂ ಒಳ್ಳೇ ಪ್ರತೀಕ್ಷೆಯನ್ನೂ ಕೊಟ್ಟ ತಂದೆಯಾದ ದೇವರಿಗೂ ಸ್ತೋತ್ರವಾಗಲಿ! ಕರುಣಾಪರನಾದ ದೇವರು ಸತ್ತವರೊಳಗಿಂದ ಎದ್ದ ಯೇಸು ಕ್ರಿಸ್ತನ ಉತ್ಥಾನದ ಮೂಲವಾಗಿ ನಮ್ಮ ನ್ನು ಜೀವವುಳ್ಳ ಪ್ರತೀಕ್ಷೆಗೆ ತಿರಿಗಿ ಹುಟ್ಟಿಸಿದ್ದಾನೆ. ಹ್ಯಾಗಂದರೆ: ಆದ ಮನಲ್ಲಿ ಎಲ್ಲರೂ ಹ್ಯಾಗೆ ಮರಣಸ್ಥರೋ ಹಾಗೆಯೇ ಕ್ರಿಸ್ತನಲ್ಲಿ ಎಲ್ಲರೂ ಜೀವದ ಬಾಧ್ಯಸ್ಥರು. ಯಾಕಂದರೆ ಆತನು ತನ್ನ ಮರಣದಿಂದ ನಮ್ಮ ಪಾಪಗಳನ್ನು ಪರಿಹರಿಸಿ, ತನ್ನ ಉತ್ಥಾನದಲ್ಲಿ ಜೀವವನ್ನೂ ಅಕ್ಷಯತ್ವ ವನ್ನೂ ಮೂಡಿಸಿ ತಂದಿದ್ದಾನೆ. ಸತ್ತು ಎದ್ದವರಲ್ಲಿ ಆತನು ಆದಿಮನು ಆಗಿ, ಹೇಳಿರುವದೇನಂದರೆ: ನಾನೇ ಉತ್ಥಾನವೂ ಜೀವವೂ ಆಗಿದ್ದೇನೆ; ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಬದುಕುವನು; ಮತ್ತು ಬದುಕಿ, ನನ್ನಲ್ಲಿ ವಿಶ್ವಾಸವಿಡುವವನು ಎಂದೆಂದಿಗೂ ಸಾಯನು.—ಹೀಗಿರಲಾಗಿ ಜೀವದಲ್ಲಿಯೂ ಮರಣದಲ್ಲಿಯೂ ನಾವು ಆತನನ್ನೇ ಆಶ್ರಯಿಸಿ ಕೊಂ ಡಿರ ತಕ್ಕದ್ದು. ಆತನ ಮುಖಾಂತರ ಮರಣವು ಸೋತು, ಮುಳಗಿ ಹೋ

ಯಿತು. ಆತನಲ್ಲಿ ವಿಶ್ವಾಸವಿಡುವವರು ದೇವರ ಪ್ರಜೆಯಾಗಿ, ವಾಗ್ದಾನ ವಾದ ಶಾಶ್ವತ ಜೀವಕ್ಕೆ ಬಾಧ್ಯರಾಗಿದ್ದಾರೆ. ಆ ವಾಗ್ದಾನವು ಏನಂದರೆ: ಈ ಕ್ಷಯವಾದ್ದು ಅಕ್ಷಯತ್ವವನ್ನೂ, ಈ ಮರ್ತ್ಯವಾದ್ದು ಅಮರತ್ವವ ನ್ನೂ ಧರಿಸಿ ಕೊಳ್ಳುವದು. ಕ್ಷಯವಾದ್ದಾಗಿ ಬಿತ್ತಲ್ಪಡುತ್ತದೆ, ಅಕ್ಷಯ ತ್ವದಲ್ಲಿ ಏಳುತ್ತದೆ; ಅವಮಾನದಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಏಳುತ್ತದೆ. ಮತ್ತು ಭೂಮಿಯವನ, ಅಂದರೆ ಆದಮನ, ಪ್ರತಿರೂಪವನ್ನು ಹೊದ್ದು ಕೊಂಡಂತೆಯೇ ಸ್ವರ್ಗಸ್ಥನಾದಾತನ, ಅಂದರೆ ನಮ್ಮ ಯೇಸು ಕ್ರಿಸ್ತ ಒಡೆಯನ, ಪ್ರತಿರೂಪವನ್ನು ಸಹ ಹೊದ್ದು ಕೊಂಡಿರುವೆವು. ಹ್ಯಾಗಂದರೆ ಆತನು ತನಗೆ ಎಲ್ಲವನ್ನು ಅಧೀನ ಮಾಡ ಬಲ್ಲಂಥ ಯತ್ನಕ್ಕೆ ಸರಿಯಾಗಿ ನಮ್ಮ ಕೀಳು ದೇಹವನ್ನು, ಅದು ತನ್ನ ಮಹಿಮೆಯ ದೇಹಕ್ಕೆ ಸಾರೂಪ್ಯವಾಗುವ ಹಾಗೆ, ಮಾರ್ಪಡಿಸುವನು.

ಮೇಲಣ ವೇದವಾಕ್ಯಗಳಾಗಲಿ ಬೋಧನೆಯಾಗಲಿ ಓದೋಣಾದ ಬಳಿಕ ಒಂದು ಪ್ರಸಂಗವನ್ನು ಮಾಡ ಬಹುದು, ಅಥವಾ ಮುಂದಿನದನ್ನು ಓದಿ ಹೇಳ ಬಹುದು:

Nach dieser Ermahung oder nach obigen Lectionen folgt eine Leichenrede oder Folgendes:

ಈ ಸಮಾಧಿಯ ಬಳಿಯಲ್ಲಿ ನಾವು ದುಃಖಿಸುತ್ತಾ ನಿಂತಿದ್ದರೂ, ಪ್ರತೀಕ್ಷೆ ಇಲ್ಲದವರಂತೆ ನಾವು ದುಃಖಿಸುವವರಲ್ಲ. ನಮ್ಮ ತಲೆಯನ್ನು ಎತ್ತಿ, ಮೇಲೆ ನೋಡುತ್ತೇವೆ, ಯಾಕಂದರೆ ನಮ್ಮ ರಕ್ಷಕನು ಬದುಕುತ್ತಾನೆಂದು ಬಲ್ಲೆವು. ಒಡೆಯನಲ್ಲಿ ನಿದ್ದೆ ಬಿದ್ದವರು ದೇವರ ಕೈಯಲ್ಲಿ ವಿಶ್ರಾಂತಿಯಾಗಿದ್ದಾರೆ; ಅಲ್ಲಿ ಯಾವ ಕಾಟವಾದರೂ ಅವರಿಗೆ ತಗಲದು. ಯಾಕಂದರೆ ಒಡೆಯನಲ್ಲಿ ತೀರಿ ಹೋಗುವವರು ಭಾಗ್ಯವಂತರು; ಅವರು ತಮ್ಮ ಕಷ್ಟಗಳಿಂದ ಬಿಡುಗಡೆಯಾಗಿ, ವಿಶ್ರಮಿಸಿ ಕೊಳ್ಳುವರು, ಮತ್ತು ಅವರ ಕ್ರಿಯೆಗಳು ಅವರ ಹಿಂದೆ ಬರುತ್ತವೆ.

ಇಂಥಾ ಪ್ರತೀಕ್ಷೆಯುಳ್ಳವನು ತಾನು ನೀತಿವಂತರ ಉತ್ಥಾನವನ್ನು ಪಡಕೊಳ್ಳ ಬೇಕೆಂದು, ಕ್ರಿಸ್ತನು ಪವಿತ್ರನಾಗಿರುವಂತೆ ತನ್ನನ್ನು ಪವಿತ್ರ ಮಾಡಿ ಕೊಳ್ಳುವನು. ಯಾಕಂದರೆ ಒಬ್ಬೊಬ್ಬನು ಈ ಜನ್ಮದಲ್ಲಿ ಮಾಡಿ

ದ್ದಕ್ಕೆ, ಅದು ಒಳ್ಳೇದಾಗಲಿ ಕೆಟ್ಟದಾಗಲಿ, ಪ್ರತಿಫಲ ಹೊಂದುವ ಹಾಗೆ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿ ಕೊಂಡು ನಿಲ್ಲ ಬೇಕು. ಹೀಗಿರಲಾಗಿ ಪ್ರಿಯರೇ! ಈ ಪ್ರಪಂಚದ ಆಶೆಗಳಿಂದ ಹುಟ್ಟುವ ನಷ್ಟಕ್ಕೆ ತಪ್ಪಿಸಿ ಕೊಳ್ಳಲಿಕ್ಕೆ ನಾವು ಓಡಿ, ಯಾರೂ ನಮ್ಮಿಂದ ಅಪಹರಿಸಿ ಕೊಳ್ಳಲಾರದಂಥ ಆ ಒಂದೇ ಅವಶ್ಯವಾದದನ್ನು ಹಿಂದಟ್ಟಿ, ಸಾಧಿಸಿ ಕೊಳ್ಳುವಾ! ವಿಶ್ವಾಸದ ಒಳ್ಳೇ ಹೋರಾಟವನ್ನು ಆಡಿ, ಯಾವದಕ್ಕೆ ಕರೆ ಯಲ್ಪಟ್ಟೆವೋ, ಆ ನಿತ್ಯ ಜೀವವನ್ನು ಹಿಡಿದು ಕೊಳ್ಳುವಾ! ವಿವೇಕಬುದ್ಧಿ ಯುಳ್ಳವರು ತಮ್ಮ ಒಡೆಯನ ಬರೋಣವನ್ನು ಯಾವಾಗಲೂ ಎದುರು ನೋಡಿ ಕಾಯುತ್ತಿರುವ ಆಳುಗಳೋಪಾದಿಯಾಗಿ ಮಾಡಿ, ಸಿದ್ಧರಾಗಿ, ಸತ್ಯಕ್ಕೆ ಒಡಂಬಟ್ಟು, ವಿಧೇಯರಾಗಿ, ತಮ್ಮನ್ನು ಪವಿತ್ರ ಮಾಡಿ ಕೊಳ್ಳಲಿ! ಹಾಗೆ ಮಾಡಿ ನಡಕೊಳ್ಳುವವರಲ್ಲಿ ಒಬ್ಬೊಬ್ಬನಿಗೆ ಒಡೆಯನು—"ಮರ ಣದ ಪರ್ಯಂತವೂ ನಂಬಿಕೆಯಿಂದಿರು! ಆಗ ಜೀವದ ಕಿರೀಟವನ್ನು ನಿನಗೆ ಕೊಡುವೆನು" ಎಂದು ಕರೆದು, ಹೇಳುತ್ತಾನೆ.

ಪ್ರಾರ್ಥನೆ. Gebet.

ಒಡೆಯನಾದ ಯೇಸು ಕ್ರಿಸ್ತನೇ! ನೀನು ಮರಣವನ್ನು ಗೆದ್ದು, ಸು ವಾರ್ತೆಯಲ್ಲಿ ಜೀವವನ್ನೂ ಅಕ್ಷಯತ್ವವನ್ನೂ ಮೂಡಿಸಿ ತಂದ ಕಾರಣ ನಿನ್ನನ್ನು ಕೊಂಡಾಡುತ್ತೇವೆ. ಮಹಾ ಸ್ತುತ್ಯ ಮೃತ್ಯುಂಜಯನೇ! ನಿನ್ನಲ್ಲಿ ಭರವಸವಿಟ್ಟದ್ದೇವೆ; ನೀನೇ ಉತ್ಥಾನವೂ ಜೀವವೂ ಆಗಿದ್ದೀ ಎಂದು, ನಿನ್ನನ್ನು ಆರಾಧಿಸಿ ಕೊಂಡಾಡುತ್ತೇವೆ. ನಿನ್ನ ಅನ್ಯೋನ್ಯ ಸಂಸರ್ಗದಲ್ಲಿ ಮಾತ್ರ ದೊರಕುವ ಜೀವವನ್ನೂ ಭಾಗ್ಯವನ್ನೂ ಬಯಸುತ್ತೇವೆ. ನಮಗೂ ನಿನಗೂ ಇರುವ ಪ್ರೀತಿಯ ಅನುಬಂಧವನ್ನು, ಮರಣವಾದರೂ ಅದನ್ನು ಸಡ್ಲಿಸಲಿಕ್ಕೂ ಹರಿದು ಬಿಡಲಿಕ್ಕೂ ಕೂಡದಂತೆ, ಬಿಗಿ ಮಾಡಿ, ಬಲ ಪಡಿಸು! ನಾವು ಪೂರ್ಣವಾಗಿ ನಿನ್ನಲ್ಲಿ ಮಾತ್ರ ಬದುಕುವವರಾಗಿ, ಮರಣದ ಘಳಿಗೆ ಬರುವಾಗ ನಿನ್ನಲ್ಲಿ ಸದ್ಗತಿಯನ್ನು ಹೊಂದುವ ಹಾಗೆ ನಮಗೆ ದಯ ಪಾಲಿಸು! ನಮ್ಮ ಮರಣದಲ್ಲಿ ನಿನ್ನ ಮರಣದ ಮಂಗಳ

ಫಲಾತಿಶಯವನ್ನು ಎಲ್ಲಾ ಬುದ್ಧಿ ಮೀರುವ ಸಮಾಧಾನದೊಂದಿಗೆ ನಮಗೆ ಅನುಭವಿಸ ಕೊಡು! ಮಹಾ ಜಯಶಾಲಿಯೇ! ನಿನ್ನ ಶಕ್ತಿಯಲ್ಲಿ ನಾವು ಎಲ್ಲಾ ಶತ್ರುಗಳನ್ನು ಜಯಿಸಿ, ನಿನ್ನ ನಿತ್ಯರಾಜ್ಯದಲ್ಲಿ ಪ್ರವೇಶ ಹೊಂದುವ ಹಾಗೆ ಮರಣಸಂಕಟದಲ್ಲಿ ನಮ್ಮ ಸಂಗಡ ಇರು! ಮತ್ತು ಆ ಸಮಯ ದಲ್ಲಿ ನಾವು ಪ್ರಾರ್ಥನೆ ಮಾಡಲಿಕ್ಕೆ ಅಶಕ್ತರಾದರೆ, ನಿನ್ನ ಪವಿತ್ರಾತ್ಮವು ನಮಗೋಸ್ಕರ ನಡುವೆ ಬರಲಿ. ನಿನ್ನ ಸ್ವರ್ಗೀಯ ಬೆಳಕೂ ದೈವಬಲವೂ ನಮ್ಮನ್ನು ಸುರಕ್ಷಿತರಾಗಿ ಮರಣವೆಂಬ ಘೋರಾರಣ್ಯವನ್ನು ದಾಟಿಸಿ, ಆಚೆ ನಿನ್ನ ಜನರಿಗೆ ಇಟ್ಟಿರುವ ವಿಶ್ರಾಂತಿಗೆ ಮುಟ್ಟಿಸಲಿ! ಆಹ, ನಮ್ಮೊಡೆ ಯಾ! ಆ ಸಮಯದಲ್ಲಿ ನಮ್ಮನ್ನು ಕಾರ್ಗತ್ತಲೆ ಮುತ್ತಿ ಕೊಂಡು, ನಮ್ಮ ಹೃದಯಕ್ಕೆ ಕಡುನೋವು ಹತ್ತುವಾಗ, ನೀನು ನಮ್ಮನ್ನು ಅಧಿಕಾಧಿಕವಾ ಗಿ ಆದರಿಸಿ, ನಿನ್ನ ಸಮಾಧಾನವನ್ನೂ ನಿನ್ನ ಜೀವದ ಬೆಳಕನ್ನೂ ನಿನ್ನ ಆತ್ಮದ ತ್ರಾಣವನ್ನೂ ನಿನ್ನ ರಾಜ್ಯದ ಅಕ್ಷಯವಾದ ಬಾಧ್ಯತೆಯನ್ನೂ ನಮಗೆ ದಯಪಾಲಿಸು! ಆಮೆನ್!

ಅಥವಾ oder

ಅಮರತ್ವವುಳ್ಳ ಸರ್ವಶಕ್ತ ದೇವರೇ! ಸ್ವರ್ಗೀಯ ತಂದೆಯೇ! ನಿನ್ನ ವರ್ಷಗಳು ತಲತಲಾಂತರಗಳಿಗೂ ಇರುತ್ತವೆ. ಆದರೆ ನಾವು ಕಾಲಾಂತರದಲ್ಲಿ ತೀರಿ ಹೋಗುವವರು; ಯಾಕಂದರೆ ಮಾಂಸವೆಲ್ಲವೂ ಹುಲ್ಲಿನಂತೆ, ಮನುಷ್ಯನ ಮಹಿಮೆಯೆಲ್ಲವೂ ಹುಲ್ಲಿನ ಹೂವಿನಂತೆ; ಹುಲ್ಲು ಬಾಡುತ್ತದೆ, ಅದರ ಹೂವು ಉದುರುತ್ತದೆ. ಒಡೆಯಾ! ನಮ್ಮ ಇರವು ಸ್ಥಿರವಲ್ಲವೆಂದೂ, ನಮ್ಮ ಆಯುಸ್ಸಿನ ದಿವಸಗಳು ಮುಗಿದು ಹೋಗುವವೆಂದೂ ಮರೆಯದೆ, ಮನಸ್ಸಿಗೆ ತಂದು ಕೊಳ್ಳುವ ಬುದ್ಧಿ ಯನ್ನು ನಮಗೆ ಕೊಡು! ನಾವು ಮೃತ್ಯುವಿಗೆ ಹೆದರದೆ, ಮಂಗಳವಾದ ಜೀವಾಂತ್ಯದ ದಾರಿ ನೋಡ ಬಲ್ಲವರಾಗುವಂತೆ ನಿಜ ಭಕ್ತರಾಗಿ ನಡೆದು ಕೊಂಡು, ದಿನಾಲೂ ನಮ್ಮನ್ನು ಮರಣಕ್ಕೆ ಸಿದ್ಧ ಮಾಡಿ ಕೊಳ್ಳುವದಕ್ಕೆ ನಮಗೆ ಸಹಾಯ ಮಾಡು!

ಯೇಸು ಕ್ರಿಸ್ತ ಒಡೆಯನೇ! ಕಡೇ ಘಳಿಗೆ ನಮಗೂ ಬರಲು, ನಮ್ಮ ನ್ನು ಈ ಕೀಳುಲೋಕದಿಂದ ಮೇಲ್ಲೋಕಕ್ಕೆ, ನೀನಿರುವಲ್ಲಿಗೆ, ಕೊಂಡು ಹೋಗು! ನಾವು ಈ ದುಃಖಸಾಗರವನ್ನು ದಾಟುವ ತನಕ, ನಮ್ಮನ್ನು ಸದ್ವಿಶ್ವಾಸದಲ್ಲಿಯೂ ಸದ್ಭಕ್ತಿಯಲ್ಲಿಯೂ ಕಾಪಾಡು! ನೀನೇ ಉತ್ಥಾನ ವೂ ಜೀವವೂ ಆಗಿದ್ದೀ; ನಿನ್ನಲ್ಲಿ ವಿಶ್ವಾಸವಿಡುವವನು ಸತ್ತರೂ ಬದು ಕುವನು; ಮತ್ತು ಬದುಕಿ, ನಿನ್ನಲ್ಲಿ ವಿಶ್ವಾಸವಿಡುವವನು ಎಂದೆಂದಿಗೂ ಸಾಯನು. ಸಾವೆಂಬ ನಿದ್ರೆ ಬಿದ್ದ ನಮ್ಮನ್ನು ಎಬ್ಬಿಸಿ, ಮಹಾ ಆನಂದಕ ರವಾದ ಸ್ವರ್ಗೀಯ ಶಾಶ್ವತ ಜೀವಕ್ಕೆ ಮುಟ್ಟಿಸು! ನಿನ್ನ ಅಪರಿಮಿತವಾದ ಪ್ರೀತಿಯನ್ನು ನೆನಸಿ, ನಿನ್ನನ್ನು ಬೇಡಿ ಕೊಳ್ಳುತ್ತೇವೆ. ಆಮೆನ್!

ಅಥವಾ oder

ಸರ್ವಶಕ್ತನಾದ ನಿತ್ಯಜೀವವುಳ್ಳ ದೇವರೇ! ನಾವು ಸೈತಾನನ ಅಧಿಕಾರದೊಳಗಿಂದ ಬಿಡುಗಡೆಯಾಗಿರುವ ಹಾಗೆಯೂ, ಕ್ರಿಸ್ತನ ಉತ್ಥಾ ನದ ಮೂಲವಾಗಿ ನಮ್ಮ ಮರ್ತ್ಯ ದೇಹಗಳು ಸಹ ಸಮಾಧಿಯಿಂದ ತಿರಿ ಗಿ ಏಳುವ ಹಾಗೆಯೂ, ನಿನ್ನ ಪ್ರಿಯ ಮಗನ ಮರಣದಿಂದ ಪಾಪವನ್ನೂ ಮರಣವನ್ನೂ ಅಳಿಸಿ, ಆತನ ಉತ್ಥಾನದಿಂದ ನೀತಿಯನ್ನೂ ನಿತ್ಯಜೀ ವವನ್ನೂ ದೊರಕಿಸಿ ಕೊಟ್ಟಾತನೇ! ನಾವು ನಿನ್ನ ಕೃಪೆಯ ಸುವಾರ್ತೆ ಯನ್ನು ಎದೆಗುಂಡಿಯಿಂದ ದೃಢವಾಗಿ ನಂಬಿ ಕೊಂಡಿರುವದಕ್ಕೂ ಸಿದ್ಧಿ ಹೊಂದಿದ ಭಕ್ತಗಣದೊಡನೆ ಆನಂದಕರವಾದ ದೇಹೋತ್ಥಾನವನ್ನು ಹೊಂದುವದಕ್ಕೂ ನಿನ್ನ ಮಗನೂ ನಮ್ಮ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಮುಖಾಂತರ ನಮಗೆ ದಯ ಮಾಡು! ಆಮೆನ್!

ಅಥವಾ oder

ಆದ್ಯಂತವಿಲ್ಲದ ದೇವರೇ! ಮನುಷ್ಯನನ್ನು ತಿರಿಗಿ ಧೂಳಿಯೂ ಬೂ ದಿಯೂ ಆಗಲೀಸಿ, ಮನುಜರೇ, ಮರಳಿ ಬನ್ನಿರಿ! ಎಂದು ಹೇಳುವಾತ ನೇ! ಮನುಷ್ಯನು ಬಹಳ ಸೊಗಸಾಗಿ ಕಾಣಿಸುವಲ್ಲಿಯೂ ಬಾಡಿ ಹೋ ಗುವ ಹೊಲದ ಹೂವಿನಂತೆ ಇದ್ದಾನಷ್ಟೇ! ಬಹಳ ವ್ಯರ್ಥ ತೊಂದರೆ

ಗಳಿಂದ ತೊಳಲಿ ಬಳಲಿ, ಕಡೆಗೆ ನೆರಳನಂತೆ ಕಾಣದೆ ಹೋಗುತ್ತಾನೆ. ಆದರೆ ನಿಜ ಜೀವವು ಏನಂದರೆ: ಪರಮವಾದ ಮೇಲೂ ಜೀವದ ಮೂಲವೂ ಆಗಿರುವ ನೀನು ನಿನ್ನ ಪ್ರೀತಿಯ ಮಗನಾದ ಯೇಸು ಕ್ರಿಸ್ತನ ಸಂಗಡ ಪವಿತ್ರಾತ್ಮದಿಂದ ಆಗುವ ಪ್ರಕಾಶೀಕರಣ ಪುನರ್ಜನ್ಮಗಳ ಮೂಲವಾಗಿ ವಿಶ್ವಾಸಿಗಳ ಹೃದಯಗಳೊಳಗೆ ವಾಸವಾಗಿರುವಲ್ಲಿ ನಾವು ಜೀವ ವೃಕ್ಷವಾದ ಕ್ರಿಸ್ತನಲ್ಲಿ ಅಂಟಿಕ್ಕಲ್ಪಟ್ಟು, ಆತನ ಹೋಲಿಕೆಯೊಳಗೆ ಬೆಳೆಯುತ್ತಾ, ಆತನ ಶಕ್ತಿರಸವನ್ನು ಸೇವಿಸುತ್ತಾ ಇದ್ದು, ಆತನ ರಾಜ್ಯನೀತಿಯ ಫಲಗಳನ್ನು ಫಲಿಸುತ್ತಿರುವದೇ.

ನಂಬಿಕೆಯುಳ್ಳ ದೇವರೇ! ನಮ್ಮ ತಂದೆಯೇ! ನಾವು ನಿನ್ನನ್ನು ಬೇಡುವದೇನಂದರೆ: ನಾವು ನಮ್ಮ ದಿವಸಗಳನ್ನು ಎಣಿಸಿ ಕೊಂಡು, ಒಮ್ಮೆ ಸಾಯುವದು, ಆ ಮೇಲೆ ನ್ಯಾಯತೀರ್ಪು ಮನುಷ್ಯರಿಗೆ ನೇಮಕವಾಗಿದೆಂದು ತಕ್ಕ ಹಾಗೆ ನೆನಸಿ ಕೊಳ್ಳುವದಕ್ಕೆ ನಮಗೆ ಬುದ್ಧಿಯನ್ನು ಕಲಿಸಿ, ನಮ್ಮ ಹೃದಯಗಳಲ್ಲಿ ಚನ್ನಾಗಿ ನಾಟಿಸು! ಪ್ರಪಂಚಭಾವದ ಹುರುಳಿಲ್ಲದ ಬಗೆಗಳಿಂದ ನಾವು ಮರುಳಾಗದೆಯೂ, ಆಲಸ್ಯಗಾರರಾಗದೆಯೂ, ಸ್ವರ್ಗದಿಂದ ಬರಲಿಕ್ಕಿರುವ ಮದುಮಗನನ್ನು ಆ ಜಾಣೆಯರಾದ ಕನ್ನಿಕೆಯರಂತೆ ಎದುರು ನೋಡಿ ಕೊಳ್ಳುತ್ತಾ ಇರುವಲ್ಲಿ ಹೊಸ ಹೃದಯಗಳೆಂಬ ಪಾತ್ರಗಳೊಳಗೆ ದಿವ್ಯ ಜ್ಞಾನ, ಆತ್ಮಿಕ ಜೀವ ಮುಂತಾದ ಆತ್ಮಿಕ ವರಗಳೆಂಬ ಎಣ್ಣೆಯನ್ನು ತುಂಬಿಸಿ ಕೊಂಡೇ ಇರುವಂತೆ ದಯ ಮಾಡು! ಪ್ರೀತಿಯಿಂದ ಶೋಭಿಸುವ ವಿಶ್ವಾಸಾಸಕ್ತಿಯಲ್ಲಿಯೂ ಉರಿಯುವ ಬೆಳಕು ನಮ್ಮಲ್ಲಿ ಹೊಳೆಯುತ್ತಾ ಇದ್ದು, ಪಾಪ ಮರಣ ನರಕಗಳ ಭಯಾಂಧಕಾರಗಳನ್ನು ಹೋಗಲಾಡಿಸಿ, ನಮ್ಮ ಅತ್ಯಂತ ಪ್ರಿಯವಾದ ಪರಮ ಒಡವೆಯೂ ಜೀವದಲ್ಲಿಯೂ ಮರಣದಲ್ಲಿಯೂ ನಮ್ಮನ್ನು ಸಂತುಷ್ಟಿ ಪಡಿಸುವ ಲಾಭವೂ ನಮ್ಮ ಸ್ವರ್ಗೀಯ ಮದುಮಗನೂ ನಮ್ಮ ವಿಮೋಚನೆಯೂ ಉತ್ಥಾನವೂ ಜೀವವೂ ಆಗಿರುವ ಯೇಸು ಕ್ರಿಸ್ತನನ್ನು ನಮಗೆ ತೋರ ಮಾಡಲಿ! ಆಮೆನ್!

ಬಳಿಕ ಹೆಣವನ್ನು ಸಮಾಧಿಯಲ್ಲಿ ಇಳಿಸಲು, ಪ್ರಸಂಗಿಯು ಹೇಳುವದು:
Hier wird der Leichnam in das Grab gesenkt, der Geistliche spricht sodann weiter:

ಮಣ್ಣಿನಿಂದ ತೆಗಿಯಲ್ಪಟ್ಟೆ, ಮಣ್ಣಿಗೆ ತಿರಿಗಿ ಕೊಡುತ್ತೇ. ನಿನ್ನ ದೇಹವನ್ನು ಯೇಸು ಕ್ರಿಸ್ತ ಒಡೆಯನು ಕಡೆ ದಿವಸದಲ್ಲಿ ಏಳ ಮಾಡುವನು. ನಿನ್ನ ಆತ್ಮವನ್ನು ದೇವರ ಕೃಪೆ ಕರುಣೆಗಳಿಗೆ ಒಪ್ಪಿಸಿ ಕೊಡುತ್ತೇವೆ. ದೇವರ ಮಗನೂ ನಮ್ಮ ಒಬ್ಬನೇ ರಕ್ಷಕನೂ ಕಾರ್ಯಕರ್ತನೂ ಆಗಿರುವ ಯೇಸು ಕ್ರಿಸ್ತನು ನಮ್ಮ ಪ್ರತೀಕ್ಷೆಯ ಆಧಾರವೂ ನಮ್ಮ ಒಂದೇ ಗತಿಯೂ ಆಗಿದ್ಧಾನೆ. ಆಮೆನ್!

ಅಥವಾ oder
'ಮಧ್ಯ ಜೀವದೊಳಗೆ' ಎಂದು ಮೊದಲಾಗಿರುವ ಗೀತವು.
Das Lied: Mitten wir im Leben etc.

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಸೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ಆಶೀರ್ವಾದವಚನವು. Segen.

ಸಮಾಧಾನದ ದೇವರು ತಾನೇ ನಿಮ್ಮನ್ನು ಸಂಪೂರ್ಣವಾಗಿ ಪವಿತ್ರ ಮಾಡಲಿ! ಮತ್ತು ನಿಮ್ಮ ಪೂರ್ಣ ಆತ್ಮ ಪ್ರಾಣ ದೇಹಗಳು ನಮ್ಮ ಯೇಸು ಕ್ರಿಸ್ತ ಒಡೆಯನ ಆಗಮನದಲ್ಲಿ ದೋಷವಿಲ್ಲದ್ದಾಗಿರುವಂತೆ ಕಾಪಾಡಲ್ಪಡಲಿ! ಆಮೆನ್!

2. ಬಾಲಕರದು. Kindsleichen.

ಬಾಲ್ಯ ದಾಟದವರ ಹೂಳಿಕೆಯಲ್ಲಿ ಮಾಡ ತಕ್ಕ ಪ್ರಾರ್ಥನೆಗಳನ್ನು ಬಿಟ್ಟು, ಕೆಳಗೆ ಬರುವದನ್ನು ಹೇಳುವದು; ಉಳಿದ ಆಚಾರವು ಆ ಹೂಳಿಕೆಯದರ ಹಾಗೆಯೇ.

Dieselben Handlungen mit Ausnahme des folgenden besonderen Gebets statt eines der obigen.

ಪ್ರಾರ್ಥನೆ. Gebet.

ಸ್ವರ್ಗೀಯ ಪ್ರಿಯ ತಂದೆಯೇ! ನೀನು ಈ ಮಗುವಿಗೆ ಒಲಿದು, ಇಹದಲ್ಲಿ ಹೇರಳವಾಗಿರುವ ಆಪತ್ತು ಉಪದ್ರ ಕೋಟಲೆಗಳಿಗೂ ಪಾಪ ಮೋಸ ಕೇಡುಗಳಿಗೂ ಅದನ್ನು ಎಳೆ ಪ್ರಾಯದಲ್ಲಿಯೇ ತಪ್ಪಿಸಿ, ನಿನ್ನ ಪ್ರಿಯ ಕುಮಾರನಾದ ಯೇಸು ಕ್ರಿಸ್ತನ ಮುಖಾಂತರ ಸ್ವರ್ಗದ ಶಾಂತಿನಿವಾಸದಲ್ಲಿ ಶೇರಿಸಿದಿ. ಈ ಮಗುವಿಗೂ ನೀನು ದಯಾಳು ತಂದೆಯಾಗಿದ್ದು, ಸ್ತೋತ್ರಕ್ಕೆ ಯೋಗ್ಯ ಕರ್ತನಾಗಿದ್ದೀ. ಆದರೆ ಅದರ ಮರಣಕ್ಕೆ ದುಃಖಗೊಂಡು, ಕಣ್ಣೀರಿಟ್ಟು ಅಳುವ ತಂದೆ ತಾಯಿಗಳನ್ನು ಆದರಿಸಿ, ಸಂತೈಸಿ, ಅವರ ಹೃದಯಕ್ಕೆ ಮೇಲಿನ ಪರಮಾರ್ಥದ ಒಡವೆಗಳನ್ನು ಅರಸ ಬೇಕೆಂಬ ಹಿತವಾದ ಎಚ್ಚರಿಕೆ ಬರುವ ಹಾಗೆ ದಯಮಾಡು! ಮತ್ತು ನೀನು ಕೊಟ್ಟ ಮಕ್ಕಳು ನಿನ್ನ ಒಲುಮೆಯ ಅಮೂಲ್ಯವಾದ ವರಗಳೆಂತಲೂ ಮಕ್ಕಳ ಪರಾಂಬರಿಕೆಯ ವಿಷಯದಲ್ಲಿ ನೀನು ಪರದಲ್ಲಿ ಲೆಕ್ಕ ಕೇಳುವಿ ಎಂತಲೂ ನೆನಸಿ ಕೊಂಡು, ಮಕ್ಕಳಿಗೆ ತಕ್ಕ ಹಾಗೆ ನಡಿಸುವ ಬುದ್ಧಿಯನ್ನು ಎಲ್ಲಾ ತಂದೆ ತಾಯಿಗಳಿಗೆ ದಯ ಪಾಲಿಸು!

ನಿನ್ನ ಪ್ರಿಯ ಮಗನಾದ ಯೇಸು ಕ್ರಿಸ್ತನಲ್ಲಿ ನೀನು ನಮ್ಮನ್ನೂ ನಮ್ಮ ಮಕ್ಕಳನ್ನೂ ಸ್ವರ್ಗರಾಜ್ಯಕ್ಕೆ ಕರೆದಿದ್ದೀ; ಸ್ನಾನದಲ್ಲಿ ನಮ್ಮನ್ನೂ ಅವರನ್ನೂ ಮಕ್ಕಳೆಂತ ಸ್ವೀಕರಿಸಿ ಕೊಂಡು, ನಿನ್ನ ಕೃಪೆಯ ಒಡಂಬಡಿಕೆಯಲ್ಲಿ ಶೇರಿಸಿ, ನಿನ್ನ ಸ್ವರ್ಗೀಯ ಮಹಾ ಪದವಿಯ ಬಾಧ್ಯತೆಗೆ ನೇಮಿಸಿದ್ದೀ. ಈ ಮಹೋಪಕಾರವನ್ನು ನಾವು ಈಗಲೂ ಇಲ್ಲಿಯೂ ನೆನಸಿ ಕೊಂಡು, ನಿನ್ನನ್ನು ಮನಃಪೂರ್ವಕವಾಗಿ ಕೊಂಡಾಡುತ್ತೇವೆ. ಆದರೆ ಅಂಥಾ ದಯ ಹೊಂದಿದ ನಾವು ಮಕ್ಕಳನ್ನು ಸಾಕಿ, ಬೋಧಿಸಿ,

ನಡಿಸುವದರಲ್ಲಿ ಏನೂ ಕುಂದು ಕೊರತೆ ಆಗದಂತೆ ನಮಗೆ ಕೃಪೆ ಕೊಡು! ನೀನು ಅವರನ್ನು ನಮ್ಮ ಕೈಯೊಳಗಿಂದ ತಿರಿಗಿ ಕೇಳಿ ತೆಗಿಯುವ ದಿನದಲ್ಲಿ ನಮ್ಮ ಹೃದಯವು ನಮಗೆ ಆಜ್ಞೆ ನಿರ್ಣಯ ತೀರಿಸಲಿಕ್ಕೆ ಕಾರಣವಾಗದಂತೆ ತನ್ಮಧ್ಯ ನಾವು ಬೇಸರಗೊಳ್ಳದಂಥಾ, ದಣಿಯದಂಥಾ ಜೋಕೆಯಿಂದ ಅವರ ದೇಹಾತ್ಮಗಳನ್ನು ಕಾಪಾಡಿ, ಚಿಕ್ಕಂದಿನಿಂದಲೇ ಅವರನ್ನು ನಿನ್ನ ಭಯದಲ್ಲಿಯೂ ಪ್ರೀತಿಯಲ್ಲಿಯೂ ಬೆಳಿಸಿ, ನಡಿಸುವದಕ್ಕೆ ನಮ್ಮನ್ನು ಎಚ್ಚರಿಸು! ದೇವರೇ! ನಮ್ಮಲ್ಲಿ ತಂದೆತಾಯಿಗಳಾದವರೆಲ್ಲರಿಗೆ ತಮಗೂ ತಮ್ಮ ಮಕ್ಕಳಿಗೂ ಇಹಪರಗಳಲ್ಲಿ ಸಮಾಧಾನಕ್ಕೆ ಬೇಕಾದದನ್ನು ಈಗಲೇ, ಸಮಯವಿರುವಾಗ, ಚನ್ನಾಗಿ ಗಣನೆಗೆ ತಂದು, ಸಾಧಿಸಿ ಕೊಳ್ಳಲಿಕ್ಕೆ ತಕ್ಕ ಬುದ್ಧಿಯನ್ನು ಕೊಡು! ನಮ್ಮೆಲ್ಲರನ್ನು ನಿಜ ಸ್ವದೇಶವಾಗಿರುವ ಸ್ವರ್ಗರಾಜ್ಯದ ದಾರಿಯಲ್ಲಿ ನಡಿಸಿ, ಕಾಪಾಡು! ನೀನೇ ಕಟ್ಟಿ, ಸಿದ್ಧ ಮಾಡಿದಂಥಾ ದಿವ್ಯ ಪಟ್ಣವನ್ನು ಸೇರಿ, ನಾವು ನಿನ್ನನ್ನು ಸದಾಕಾಲಕ್ಕೆ ದೃಷ್ಟಿಸಿ, ಸ್ತುತಿಸಿ, ಕೊಂಡಾಡಲಿಕ್ಕಾಗುವ ಹಾಗೆ ನಮಗೂ ನಮ್ಮ ಮಕ್ಕಳಿಗೂ ಕೈಕೊಟ್ಟು, ದಯ ಪಾಲಿಸು! ಆಮೆನ್!

ಉಪಗ್ರಂಥವು.

Anhang.

I.

ಉಪದೇಶಿಗಳಿಗೂ ಆಚಾರ್ಯರಿಗೂ ಉದ್ಯೋಗ ಪ್ರವೇಶಾಶೀರ್ವಾದದ ಪದ್ಧತಿ.

Einsegnung von Katechisten und Geistlichen.

1. ಉಪದೇಶಿಗಳ ಉದ್ಯೋಗಪ್ರವೇಶಾಶೀರ್ವಾದದ ಪದ್ಧತಿ.

Einsegnung von Katechisten.

ಉಪದೇಶಿಯ ಉದ್ಯೋಗದಲ್ಲಿ ಶೇರ ಬೇಕೆಂದಿರುವವರಿಗೆ ಆಶೀರ್ವಾದ ಕೊಡುವದಕ್ಕೆ ನಿಶ್ಚಯ ಮಾಡಿದ ದಿವಸದಲ್ಲಿ ದೇವಾರಾಧನೆಯ ಪ್ರಾರ್ಥನೆಗಳು ಮುಗಿದ ಬಳಿಕ, ಉದ್ಯೋಗಪ್ರವೇಶಾಶೀರ್ವಾದ ಕೊಡುವ ಆಚಾರ್ಯನು ಸಮಯೋಚಿತವಾದ ದೇವೋಕ್ತಿಯನ್ನು ವಿವರಿಸುವ ಪ್ರಸಂಗದಲ್ಲಿ ಉಪದೇಶಿಯ ವೃತ್ತಿ ಅಧಿಕಾರಗಳ ವಿಷಯದಲ್ಲಿ ಬೋಧನೆ ಮಾಡಿದನಂತರ, ಒಡೆಯನ ಮೇಜಿನ ಸುತ್ತಣ ಅಪಾತ್ರಯಕ್ಕೆ ಬಂದು, ಅದರ ಬಳಿಯಲ್ಲಿ ನಿಂತಿರುವ ಉಪದೇಶೋದ್ಯೋಗಾರ್ಥಿಗಳಿಗೆ ಹೇಳುವದೇನಂದರೆ:

An dem Einsegnungstage, nach beendigtem Gottesdienste, folgt eine Anrede auf Grund eines Schriftwortes über das Amt und die Pflichten eines Katechisten, worauf der Einsegnende vor den Altar tritt, in dessen Nähe sich die Einzusegnenden gestellt haben, und spricht:

ಒಡೆಯನು ನಿಮ್ಮ ಸಂಗಡ ಇರಲಿ!

ಪ್ರಾರ್ಥನೆ ಮಾಡುವಾ: ಊಳಿಗದವರನ್ನು ನಿನ್ನ ಬೆಳೆಗೆ ಕಳುಹಿಸು ಎಂತಾ, ನಿನ್ನನ್ನು ಬೇಡ ಬೇಕೆಂದು, ನಮಗೆ ಪಟ್ಟಾಗಿ ಬೆಸಗಿದಂಥ, ದಯೆಯುಳ್ಳ ಸರ್ವಶಕ್ತ ದೇವರಾಗಿರುವಂಥ, ನಮ್ಮ ಒಡೆಯನಾದ ಯೇಸು ಕ್ರಿಸ್ತನ ತಂದೆಯೇ, ಮಿತಿಯಿಲ್ಲದ ನಿನ್ನ ಕರುಣೆಗೆ ನಾವು ಮೊರೆ ಇಡುವದೇನಂದರೆ: ನಿನ್ನ ಪವಿತ್ರ ವಾಕ್ಯದ ಒಳ್ಳೇ ನಂಬಿಕೆಯುಳ್ಳ ಬೋ

ಧಕರಾದ ಸೇವಕರನ್ನು ನಮಗೆ ಕಳುಹಿಸ ಬೇಕೆಂತಲೂ, ಪ್ರಸಂಗದಲ್ಲಿಯೂ ನಡತೆಯಲ್ಲಿಯೂ ನಿನ್ನ ಪರಿಶುದ್ಧ ವಾಕ್ಯವನ್ನು ಮಿೀರದೆ, ನಿನ್ನ ಬೆಸಗನ್ನು ಯಥಾರ್ಥವಾಗಿ ನೆರೆವೇರಿಸುವ ಹಾಗೆ, ಅವರ ಹೃದಯದಲ್ಲಿಯೂ ಬಾಯಿಯಲ್ಲಿಯೂ ಸ್ವಸ್ಥವಾದ ನಿನ್ನ ನುಡಿಯನ್ನು ಇಡ ಬೇಕೆಂತಲೂ, ನಾವು ನಿನಗೆ ಒಪ್ಪಾಗಿ ಕಂಡು, ನಮ್ಮ ಪ್ರಾಣಗಳಿಗೆ ಕ್ಷೇಮಕರವಾದದ್ದನ್ನು ಮಾಡುವದಕ್ಕೆ ನಿನ್ನ ನುಡಿಯು ನಮ್ಮನ್ನು ಎಚ್ಚರಿಸಿ, ಬೋಧಿಸಿ, ಸಾಕಿ, ಸಂತೈಸಿ, ಬಲ ಪಡಿಸುವ ಪದವಿಯನ್ನು ನಮಗೆ ಕೊಡ ಬೇಕೆಂತಲೂ, ನಿನ್ನೊಡನೆಯೂ ಪವಿತ್ರಾತ್ಮನೊಡನೆಯೂ ಯುಗಯುಗಾಂತರಕ್ಕೆ ಬಾಳುತ್ತಾ ಆಳುತ್ತಾ ಇರುವ ನಿಜ ದೇವರಾಗಿರುವ ನಿನ್ನ ಪ್ರಿಯ ಮಗನೂ ನಮ್ಮೊಡೆಯನೂ ಆದ ಯೇಸು ಕ್ರಿಸ್ತನ ಹೆಸರಿನಲ್ಲಿ ಬಿನ್ನಹ ಮಾಡುತ್ತೇವೆ. ಆಮೆನ್.

ಕ್ರೈಸ್ತಸಭೆಯೊಳಗಣ ವರಗಳ ಮತ್ತು ಉದ್ಯೋಗಗಳ ವಿಷಯವಾಗಿ ಪವಿತ್ರಾತ್ಮವು ನುಡಿಯುವದನ್ನು ಈಗ ಕೇಳಿರಿ.

ವರಗಳ ವ್ಯತ್ಯಾಸಗಳು ಉಂಟು; ಆದರೆ ಒಂದೇ ಆತ್ಮವು. ಸೇವೆಗಳ ವ್ಯತ್ಯಾಸಗಳು ಉಂಟು; ಒಬ್ಬನೇ ಒಡೆಯನು. ಯತ್ನಗಳ ವ್ಯತ್ಯಾಸಗಳು ಉಂಟು; ಆದರೆ ಎಲ್ಲರಲ್ಲಿ ಎಲ್ಲಾ ಯತ್ನೈಸುವವನು ಒಬ್ಬನೇ ದೇವರು. ಆದರೆ ಒಬ್ಬೊಬ್ಬನಿಗೆ ಆತ್ಮದ ಪ್ರಕಟಣೆಯು ಪ್ರಯೋಜನಕ್ಕಾಗಿ ಕೊಟ್ಟದೆ. ೧ಕೊರಿ. ೧೨, ೪—೭. ಅವನು ಕೆಲವರನ್ನು ಅಪೊಸ್ತಲರಾಗಿಯೂ, ಕೆಲವರನ್ನು ಪ್ರವಾದಿಗಳಾಗಿಯೂ, ಕೆಲವರನ್ನು ಸುವಾರ್ತಿಕರಾಗಿಯೂ, ಕೆಲವರನ್ನು ಕುರುಬರಾಗಿಯೂ, ಬೋಧಕರಾಗಿಯೂ, ಪರಿಶುದ್ಧರ ಪೂರೈಸುವಿಕೆಗೋಸ್ಕರವೂ, ಸೇವೆಯ ಕೆಲಸಕ್ಕೋಸ್ಕರವೂ ಕ್ರಿಸ್ತನ ಶರೀರದ ಕಟ್ಟುವಿಕೆಗೋಸ್ಕರವೂ . . . ಕೊಟ್ಟದ್ಧಾನೆ. ಎಫೆ. ೪, ೧೭. ೧೪.

ಇದಲ್ಲದೆ ಒಡೆಯನಾದ ಕ್ರಿಸ್ತನು ಮೊದಲಾಗಿ ಹನ್ನೆರಡು ಮಂದಿ, ಬಳಿಕ ೭೦ ಮಂದಿ ಶಿಷ್ಯರನ್ನು ಆದು ಕೊಂಡು, ದೇವರಾಜ್ಯವು ಹತ್ತರ ಬಂದದೆಂತ ಸಾರ ಕಳುಹಿಸಿದನೆಂದು ಓದುತ್ತೇವೆ. ಅಂದು ನಮ್ಮ ಒಡೆ

ಯನು ಬಲಹೀನರನ್ನೂ ಎಳೇ ಮಕ್ಕಳನ್ನೂ, ಲೋಕವು ತುಚ್ಛೀಕರಿಸುವ ಕೀಳರನ್ನೂ ದೊಡ್ಡದಾದ ತನ್ನ ಬೆಳೆಗೆ ಕಳುಹಿಸಿದಂತೆ, ಇಂದು ಸಹ ತನ್ನ ಹೆಸರಿನ ಕೀರ್ತಿಗಾಗಿ ಮಾಡುತ್ತಾ ಬರುತ್ತಾನೆ; ಹ್ಯಾಗಂದರೆ ಈಗ ಕೆಲವು ಊಳಿಗದವರನ್ನು ತನ್ನ ಸುವಾರ್ತೆಯ ಊಳಿಗಕ್ಕಾಗಿ ಕಳುಹಿಸುವ ಕೃಪೆಯನ್ನು ನಮಗೆ ಕೊಡುತ್ತಾನೆ. ಸಭೆಯ ಸೇವಕರಿಗೆ ದೇವವಾಕ್ಯದಲ್ಲಿ ನೇಮಕವಾದದ್ದೇನೆಂದು ಕೇಳೋಣ. ೧ ತಿಮೊ. ೩, ೮—೧೩ರಲ್ಲಿ ಬರದದ್ದೇನಂದರೆ: ಸೇವಕರು ಎರಡು ನಾಲಿಗೆಯುಳ್ಳವರೂ ಬಹಳ ದ್ರಾಕ್ಷೇ ರಸದ ಅಭ್ಯಾಸವುಳ್ಳವರೂ ಲೋಭಿಗಳೂ ಆಗಿರದೆ, ಘನವುಳ್ಳವರಾಗಿದ್ದು, ವಿಶ್ವಾಸದ ಮರ್ಮವು ಶುದ್ಧ ಮನಸ್ಸಾಕ್ಷಿಯಲ್ಲಿ ಉಂಟಾದವರಾಗಿರ ಬೇಕು. ಇವರು ಸಹ ಮೊದಲು ಪರೀಕ್ಷಿಸಲ್ಪಡಲಿ, ತರುವಾಯ ನಿರಪರಾಧಿಗಳಾಗಿದ್ದರೆ, ಸೇವಕರಾಗಲಿ. ಅದೇ ಪ್ರಕಾರ ಅವರ ಹೆಂಡತಿಯರು ಚಾಡಿಗಾರ್ತಿಗಳಾಗಿರದೆ ಘನವುಳ್ಳವರೂ ಎಚ್ಚರಿಕೆಯುಳ್ಳವರೂ ಎಲ್ಲಾದರಲ್ಲಿ ನಂಬಿಕೆಯುಳ್ಳವರೂ ಆಗಿರಲಿ. ಸೇವಕರು ಒಬ್ಬಳೇ ಹೆಂಡತಿಯ ಗಂಡಂದಿರೂ ಮಕ್ಕಳನ್ನೂ ಸ್ವಂತ ಮನೆಗಳನ್ನೂ ಚನ್ನಾಗಿ ಆಳುವವರೂ ಆಗಿರಲಿ. ಯಾಕಂದರೆ ಚನ್ನಾಗಿ ಸೇವೆ ಮಾಡಿದವರು ತಮಗೆ ಒಳ್ಳೇ ಬಿರುದನ್ನೂ, ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಲ್ಲಿ ಬಹು ಧೈರ್ಯವನ್ನೂ ಸಂಪಾದಿಸಿ ಕೊಳ್ಳುತ್ತಾರೆ.

ಬಳಿಕ ಆಚಾರ್ಯನು ಉಪದೇಶೋದ್ಯೋಗಾರ್ಥಿಗಳನ್ನು ನೋಡಿ, ಹೇಳುವದು:
Hier wendet sich der Geistliche an die Katechisten und sagt:

ಒಡೆಯನಲ್ಲಿ ಪ್ರಿಯರೇ, ಸಭೆಯಲ್ಲಿ ಕುರುಬರೂ ಬೋಧಕರೂ, ಜನಾಂಗಗಳಲ್ಲಿ ಸುವಾರ್ತಿಕರೂ ಆಗಿ ನೇಮಕರಾದವರಿಗೆ ಸಹಾಯಕರಾಗಿಯೂ ಜತೆಕಾದಾಳುಗಳಾಗಿಯೂ ನೀವು ಕರೆದವರಾದದರಿಂದ, ಅವರ ಅಂಕೆಯೊಳಗಾಗಿ ದೇವರು ತನ್ನ ನೆತ್ತರದ ಕ್ರಯಕ್ಕೆ ಕೊಂಡ ಸಭೆಗೆ ಊಳಿಗ ಮಾಡುವದಕ್ಕೂ ಅವರೊಡನೆ ನಿರ್ಮಾಣಕ್ಕೆಲ್ಲಾ ಅವನ ಸುವಾರ್ತೆಯನ್ನು ಸಾರುವದಕ್ಕೂ ಸಿದ್ಧರಾಗಿದ್ದೀರಿ.

ಹೀಗಿರಲಾಗಿ ನಿಮ್ಮ ಹಂಗು ಎಷ್ಟು ಭಾರಿಯಾದದ್ದೂ, ನಿಮ್ಮ ಉ

ದ್ಯೋಗವು ಎಷ್ಟು ಪರಿಶುದ್ಧವಾದದ್ದೂ ಕಷ್ಟವಾದದ್ದೂ ಆಗಿದೆ ಎಂದು, ಚನ್ನಾಗಿ ಎಣಿಕೆ ಮಾಡಿರಿ. ಅಪೊಸ್ತಲನಾದ ಪೌಲನು ನಿಮ್ಮ ಉದ್ಯೋಗದ ವಿಷಯವಾಗಿ ಬರೆದದ್ದನ್ನು ನೆನಸಿ ಕೊಳ್ಳಿರಿ. ಏನಂದರೆ, ಅಕ್ಷರಗಳಿಂದ ಕಲ್ಲುಗಳ ಮೇಲೆ ಕೆತ್ತಿದ ಮರಣದ ಸೇವೆಯು ಇಸ್ರಾಯೇಲನ ಮಕ್ಕಳು ಮೋಶೆಯ ಮುಖವನ್ನು, ಅವನ ಮುಖದ ಅಳಿದು ಹೋಗುವ ಮಹಿಮೆಯ ಸಲವಾಗಿ ದೃಷ್ಟಿಸಲಾರದ ಹಾಗೆ ಮಹಿಮೆಯುಳ್ಳದ್ದಾದರೆ, ಆತ್ಮದ ಸೇವೆಯು ಅಧಿಕ ಮಹಿಮೆಯಿಲ್ಲದೆ ಇರುವದು ಹ್ಯಾಗೆ? ಯಾಕಂದರೆ ಶಿಕ್ಷೆಯ ನಿರ್ಣಯದ ಸೇವೆಯು ಮಹಿಮೆಯಾಗಿದ್ದರೆ, ನೀತಿಯ ಸೇವೆಯು ಬಹು ಅಧಿಕವಾಗಿ ಮಹಿಮೆಯಲ್ಲಿ ಹೆಚ್ಚುವದು. ಯಾಕಂದರೆ ಈ ಪಕ್ಷದಲ್ಲಿ ಮಹಿಮೆ ಪಟ್ಟದ್ದು ಹೆಚ್ಚಾಗಿರುವ ಮಹಿಮೆಯ ನಿಮಿತ್ತ ಮಹಿಮೆ ಪಟ್ಟದ್ದಲ್ಲ. ಯಾಕಂದರೆ ಅಳಿದು ಹೋಗುವಂಥಾದ್ದು ಮಹಿಮೆಯಿಂದಿದ್ದರೆ, ನೆಲೆಯಾದದ್ದು ಬಹು ಹೆಚ್ಚಾಗಿ ಮಹಿಮೆಯುಳ್ಳದ್ದು. ೨ ಕೊರಿ. ೩, ೭—೧೧. ನಂಬಿಕೆಯಾದ ಊಳಿಗದವರಿಗೆ ಒಡೆಯನೀಯುವ ಜೀತದ ವಿಷಯವಾಗಿ ಅಪೊಸ್ತಲನಾದ ಯೋಹಾನನು ಬರೆದ ಯೇಸು ಕ್ರಿಸ್ತನ ನುಡಿಯನ್ನು ಕೇಳಿರಿ! ಯಾವನಾದರೂ ನನ್ನನ್ನು ಸೇವಿಸಿದರೆ, ನನ್ನನ್ನು ಹಿಂಬಾಲಿಸಲಿ. ಮತ್ತು ನಾನು ಇರುವಲ್ಲಿಯೇ ನನ್ನ ಸೇವಕನೂ ಇರುವನು. ಮತ್ತು ಯಾವನಾದರೂ ನನ್ನನ್ನು ಸೇವಿಸಿದರೆ, ತಂದೆಯು ಅವನನ್ನು ಘನ ಪಡಿಸುವನು. ಯೋಹಾ. ೧೨, ೨೬. ಇದಕ್ಕೆ ಅಪೊಸ್ತಲನಾದ ಪೇತ್ರನ ಮಾತು ನೆರೆ ಒಪ್ಪಿಕೆಯಾಗಿದೆ. ಮುಂದೆಗೆ ಮಾದರಿಗಳಾಗಿಯೇ ಅದನ್ನು ನೋಡಿ ಮೇಯಿಸುವಿರಾದರೆ, ಹಿರೇ ಕುರುಬನು ಪ್ರತ್ಯಕ್ಷವಾಗುವಾಗ್ಯೆ, ಮಹಿಮೆಯ ಅಕ್ಷಯವಾದ ಕಿರೀಟವನ್ನು ಹೊಂದುವಿರಿ. ೧ ಪೇತ್ರ. ೫, ೩. ೪.

ಈಗ, ಒಡೆಯನಲ್ಲಿ ಪ್ರಿಯರೇ, ನಾನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಿರಿ: ನಿಮ್ಮನ್ನು ಕರೆದ ಒಡೆಯನ ಸೇವೆಯಲ್ಲಿ ಶೇರಿ, ಯೇಸು ಕ್ರಿಸ್ತನ ನಂಬಿಕೆಯುಳ್ಳ ಕಾದಾಳುಗಳಾಗಿ ಕಷ್ಟಗಳನ್ನು ತಾಳ ಮನಸ್ಸಾಗಿದ್ಧೀರೋ?

ಉತ್ತರ—ಮನಸ್ಸಾಗಿದ್ಧೇವೆ.

ಪ್ರಶ್ನೆ—ಕ್ರಿಸ್ತ ಯೇಸುವಿನ ವಿಶ್ವಾಸ-ಪ್ರೀತಿಗಳ ವಿಷಯವಾಗಿ ನೀವು ಕೇಳಿದ ಸ್ವಷ್ಟವಾದ ನುಡಿಗಳ ಮಾದರಿಯನ್ನು ಘಟ್ಟಿಯಾಗಿ ಹಿಡಿದು, ನಮ್ಮ ಸುವಾರ್ತಾಪಕ್ಷದ ಸಭೆಯ ಉಪದೇಶದಿಂದ ಕಲಿತು ಕೊಂಡಂಥ ಪರಿಶುದ್ಧ ಬರಹದ ಬೋಧನೆಯನ್ನು ಬೋಧಿಸ ಬೇಕೆಂದು, ನಿಶ್ಚೈಸಿ ಕೊಂಡಿದ್ಧೀರೋ?

ಉ.—ನಿಶ್ಚೈಸಿ ಕೊಂಡಿದ್ಧೇವೆ.

ಪ್ರ.—ಒಡೆಯನಲ್ಲಿ ನಿಮ್ಮ ಯಜಮಾನರಾಗಿರುವವರ ಮಾತು ಕೈಕೊಳ್ಳುತ್ತಾ, ಅವಶ್ಯವಾದರೆ ಅವರು ನಿಮಗೆ ಮಾಡುವ ಗದರಿಕೆ ಶಿಕ್ಷೆಗಳನ್ನು ತಾಳುತ್ತಾ, ಕ್ರಿಸ್ತನ ಸಭೆಯ ಊಳಗದಲ್ಲಿ ಹೆಚ್ಚೆಚ್ಚಾದ ಫಲಫಲಿಸುವ ಉದ್ದಿಶ್ಯವಾಗಿ ಪರಿಶುದ್ಧ ಬರಹಗಳನ್ನು ಇನ್ನೂ ಲೇಸಾಗಿ ಓದಿ ವಿಚಾರಿಸ ಬೇಕೆಂದಿದ್ಧೀರೋ?

ಉ.—ಹೌದು. ಇದರಲ್ಲಿ ದೇವರು ಕೃಪೆಯಾಗಿ ನಮಗೆ ಸಹಾಯ ಮಾಡಲಿ.

ಈ ಪ್ರಶ್ನೋತ್ತರಗಳ ಮೇಲೆ ಆಚಾರ್ಯನು ಹೇಳುವದೇನಂದರೆ: ನೀವೀಗ ನನಗೆ ಕೊಟ್ಟ ಮಾತು ದಿಟವಾದ್ದೆಂಬದಕ್ಕೆ ಗುರುತಾಗಿ ಇಲ್ಲಿ ನೆರವಿ ಕೊಂಡ ಕೂಟದ ಮುಂದೆ ನನಗೆ ನಿಮ್ಮ ಬಲಗೈ ಕೊಡಿರಿ.

Nach diesen Fragen sagt der Geistliche: Zur Bekräftigung dieses Eures Entschlusses gebt mir vor der versammelten Gemeinde Eure rechte Hand.

ಆಗ ಒಬ್ಬೊಬ್ಬನು ಒಡೆಯನ ಮೇಜಿನ ಮುಂದೆ ಬಂದು, ಆಚಾರ್ಯನಿಗೆ ಬಲಗೈ ಕೊಟ್ಟು, ಮೊಣಕಾಲೂರಿ ಕೊಂಡಿರಲಾಗಿ, ಆಚಾರ್ಯನು ಒಬ್ಬೊಬ್ಬನ ತಲೆಯ ಮೇಲೆ ಕೈ ಇಟ್ಟು ನುಡಿಯುವ ಆಶೀರ್ವಾದವೇನಂದರೆ:

Es tritt nun jeder Einzelne vor den Altar und gibt dem Geistlichen die rechte Hand, kniet sodann nieder und wird von ihm unter Handauflegung mit folgenden Worten eingesegnet:

ನಮ್ಮ ಸುವಾರ್ತಾಮತಸಭೆಯ ಉಪದೇಶಿಯ ಉದ್ಯೋಗವನ್ನು ನಿನಗೆ ಒಪ್ಪಿಸಿ, ಈ ಉದ್ಯೋಗವನ್ನು ಮೋಸವೂ ಎಡತಡೆಯೂ ಬಂ

ದೂ ಇಲ್ಲದೆ, ಕಡು ಚುರುಕಾಗಿಯೂ ನಂಬಿಕೆಯಾಗಿಯೂ ನಡಿಸ ಬೇ
ಕೆಂತಲೂ, ಆ ದಿವಸದಲ್ಲಿ ನಮ್ಮ ಒಡೆಯನಾದ ಯೇಸು ಕ್ರಿಸ್ತನ ಪೀಠ
ದ ಮುಂದೆ ನೀತಿಯುಳ್ಳ ನ್ಯಾಯಾಧಿಪತಿಗೆ ಅದರ ಲೆಖ್ಖವನ್ನು ಕೊಡು
ವ ಕಟ್ಟಳೆಯನ್ನು ಚನ್ನಾಗಿ ನೆನಪು ಮಾಡಿ ಕೊಳ್ಳ ಬೇಕೆಂತಲೂ ತಂದೆ
ಮಗ ಪವಿತ್ರಾತ್ಮವೆಂಬ ದೇವರ ಹೆಸರಿನಲ್ಲಿ ನಿನಗೆ ಪಟ್ಟಾಗಿ ಬೆಸಗುತ್ತೇ
ನೆ. ಒಡೆಯನು ನಿನ್ನನ್ನು ಆಶೀರ್ವದಿಸಿ ಬಹಳ ಫಲಫಲಿಸಗೊಡಿಸಲಿ!
ಆಮೆನ್!

ಇಂತು ಉದ್ಯೋಗಪ್ರವೇಶಾಶೀರ್ವಾದವುಂಟಾದನಂತರ ಮಾಡ ತಕ್ಕ ಪ್ರಾರ್ಥನೆ ಏನಂದರೆ:

Einsegnungsgebet:

ಸ್ವರ್ಗದಲ್ಲಿರುವ ತಂದೆಯಾದ ಕರುಣೆಯುಳ್ಳ ದೇವರೇ! ನಿನ್ನ ಪ್ರಿ
ಯ ಮಗನೂ ನಮ್ಮ ಒಡೆಯನೂ ಆದ ಯೇಸು ಕ್ರಿಸ್ತನ ಬಾಯಿಯಿಂ
ದ: ಬೆಳೆಯು ದೊಡ್ಡದು, ಆದರೆ ಊಳಿಗದವರು ಕೊಂಚರು. ಊಳಿಗ
ದವರನ್ನು ತನ್ನ ಬೆಳೆಗೆ ಕಳುಹ ಬೇಕೆಂತ, ಬೆಳೆಯ ಒಡೆಯನನ್ನು ಬೇ
ಡಿರಿ ಎಂದು, ನಮಗೆ ಹೇಳಿದಿಯಲ್ಲವೋ? ನಿನ್ನ ಊಳಿಗದವರಾದ ಇವ
ರಿಗೂ ನಿನ್ನ ಪರಿಶುದ್ಧ ಊಳಿಗಕ್ಕೆ ಕರೆಯಲಾದ ನಮ್ಮೆಲ್ಲರಿಗೂ ನಿನ್ನ
ಪವಿತ್ರಾತ್ಮವನ್ನು ಐಶ್ವರ್ಯವಾಗಿತ್ತು, ನಿನ್ನ ಹೆಸರು ಪರಿಶುದ್ಧವಾಗಿ, ನಿನ್ನ
ಆಳ್ಕೆಯು ಹೆಚ್ಚಿ, ನಿನ್ನ ಅಪ್ಪಣೆಯು ನೆರವೇರುವಂತೆ, ನಿನ್ನ ಸುವಾರ್ತಿಕ
ರ ದೊಡ್ಡ ಗುಂಪಿನೊಡನೆ ಸೈತಾನನಿಗೂ ಮಾಂಸಕ್ಕೂ ಲೋಕಕ್ಕೂ ಮಾ
ಡುವ ಕದನದಲ್ಲಿ ನಂಬಿಗಸ್ತ ಕಲಿಗಳಾಗುವ ಕೃಪೆಯನ್ನು ನಮಗೆ ಕೊ
ಡು! ಇದಲ್ಲದೆ ದೆವ್ವಪೂಜೆಯ ಕಡುಹೇಸಿಗೆಯನ್ನೂ ಮೊಹಮ್ಮದ ಪೋ
ಪರ ಮತ ಮುಂತಾದ, ನಿನ್ನ ಹೆಸರನ್ನು ಬೈದು, ನಿನ್ನ ಆಳ್ಕೆಯನ್ನು ನೀಗಿ,
ನಿನ್ನ ಅಪ್ಪಣೆಯನ್ನೆದುರಿಸುವ ನಿನ್ನ ಎದುರಾಳಿಗಳ ಮೋಸವಾದ ಬೋ
ಧನೆಯನ್ನೂ ಆಜ್ಞೆಯಿಂದ ಅಡ್ಡಗಿಸಿ ನಿಲ್ಲಿಸು! ನಾವು ಮಾಡುವ ಈ ಮನ
ವಿಯನ್ನು ನಿನ್ನ ಪ್ರಿಯ ಮಗನೂ ನಮ್ಮ ಒಡೆಯನೂ ಆದ ಯೇಸು ಕ್ರಿ
ಸ್ತನಿಗಾಗಿ ಕೃಪಾಳುವಾಗಿ ಲಾಲಿಸು! ಆಮೆನ್!

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗಗಳಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು. ಮತ್ತು ಶೋಧನೆಯೊಳಗೆ ನಮ್ಮನ್ನು ಶೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

(ಗೀತವು ಹಾಡೋಣಾದ ಮೇಲೆ ಆಶೀರ್ವಾದ.)

Nach einem Liede der Segen.

ಯೆಹೋವನು ನಿಮ್ಮನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಬೆಳಗಿಸಿ, ನಿಮಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿಮ್ಮ ಮೇಲೆ ಇರಿಸಿ, ನಿಮಗೆ ಸಮಾಧಾನವನ್ನೀಯಲಿ! ಆಮೆನ್!

2. ದೇಶಸ್ಥರಾದ ಆಚಾರ್ಯರಿಗೆ ಉದ್ಯೋಗಪ್ರವೇಶಾಶೀರ್ವಾದವನ್ನು ಕೊಡುವ ಪದ್ಧತಿ.

Einsegnung von eingebornen Geistlichen (Diakonen).

ಬೋಧಕೋದ್ಯೋಗದಲ್ಲಿ ಶೇರಿಸಲಧಿಕಾರವನ್ನು ಹೊಂದಿದ ಆಚಾರ್ಯನು ಬೋಧಕನ ವೃತ್ತಿ ಅಧಿಕಾರಗಳ ವಿಷಯವಾದ ಪ್ರಸಂಗವನ್ನು ಮುಗಿಸಿದ ಬಳಿಕ, ಒಡೆಯನ ಮೇಜಿನ ಸುತ್ತ ಅಪಾತ್ರಯದೊಳಗೆ ಶೇರುವದು. ಉದ್ಯೋಗಪ್ರವೇಶಾಶೀರ್ವಾದಕ್ಕೆ ಸಾಕ್ಷಿಗಳಾಗಲಾಯಿಕೆಯಾದ ಬೇರೆ ಆಚಾರ್ಯರು ಇವನ ಎಡಬಲಗಡೆಗಳಲ್ಲಿ ನಿಲ್ಲುವದು. ಉದ್ಯೋಗಾರ್ಥಿಯು ಅವರಿಗೆದುರಾಗಿ ನಿಂತಿರುವದು.

ಬಳಿಕ ಹಿರಿಯನಾದ ಆಚಾರ್ಯನು ಹೇಳುವದೇನಂದರೆ:

Der mit der Einsegnung beauftragte Geistliche, nach einer Predigt oder Ermahnung über Pflicht und Amt von Pfarrern oder Hirten, tritt vor den Tisch des Herrn mit andern Geistlichen welche zu Zeugen der Einsegnung gewählt worden sind, der Einzusegnende stellt sich ihm gegenüber, worauf dieser spricht:

ನಮ್ಮ ಒಡೆಯನಾದ ಯೇಸು ಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮದ ಅನ್ಯೋನ್ಯವೂ ನಿಮ್ಮೆಲ್ಲರ ಸಂಗಡ ಇರಲಿ! ಆಮೆನ್!

ಅತಿ ಪ್ರಿಯರೇ! ಒಡೆಯನು ತನ್ನ ಕೃಪೆಯಿಂದಲೇ ಇಲ್ಲಿ ನಿಂತಿರುವ ನಮ್ಮ ಸಹೋದರನನ್ನು ತನ್ನ ಸಭೆಯ ಸೇವಕನಾಗುವದಕ್ಕೆ ಸಿದ್ಧ ಮಾಡಿ ಕರೆದ ಮೇಲೆ, ನಾವು ಅವನನ್ನು, ಕ್ರೈಸ್ತಸಭೆಗಳ ಪದ್ಧತಿಯ ಪ್ರಕಾರವಾಗಿ, ಅವನ ಮೇಲೆ ಕೈಗಳನ್ನಿಟ್ಟು ಪ್ರಾರ್ಥನೆ ಮಾಡಿ, ಈ ಉದ್ಯೋಗಕ್ಕೆ ಪ್ರತಿಷ್ಠಿಸುವ ಉದ್ದಿಶ್ಯವಾಗಿ ನೆರವಿ ಕೊಂಡಿದ್ದೇವೆ. ದೇವರು ನಾವೀಗ ಮುಂಕೊಂಡ ಕೆಲಸವನ್ನು ಆಶೀರ್ವದಿಸ ಬೇಕೆಂತ, ಒಂದೇ ಬಗೆಯಿಂದ ಬಿನ್ನಹ ಮಾಡೋಣ:

ಕರುಣೆಯುಳ್ಳ ದೇವರಾದ, ಸ್ವರ್ಗಸ್ಥನಾಗಿರುವ ನಮ್ಮ ತಂದೆಯೇ! ನಿನ್ನ ಒಬ್ಬನೇ ಮಗನೂ ನಮ್ಮ ರಕ್ಷಕನೂ ಆದ ಯೇಸು ಕ್ರಿಸ್ತನ ಕೈಯಿಂದ ಭೂಮಿಯಲ್ಲಿ ನೀನು ಕಟ್ಟಿದ ಪರಿಶುದ್ಧವಾದ ನಿನ್ನ ಸಭೆಯನ್ನು ಇಂದಿನ ವರೆಗೂ ಬಲವಾಗಿ ಬೆನ್ನಾಸರೆಯನ್ನಿತ್ತು, ಕೃಪೆಯಾಗಿ ಸಲಹುತ್ತಾ ಬಂದಿ ಎಂದು, ಹೃತ್ಪೂರ್ವಕ ಕೃತಜ್ಞರಾಗಿ ನಿನ್ನನ್ನು ಹೊಗಳುತ್ತೇವೆ. ನಿನ್ನ ಪವಿತ್ರಾತ್ಮವು ಅದನ್ನು ಬಿಟ್ಟು ಬಿಡಲಿಲ್ಲ. ದಿಟವಾದ ನಿನ್ನ ಸತ್ಯದ ನುಡಿಯನ್ನು ಘಟ್ಟಿಯಾಗಿ ಹಿಡುಕೊಂಡು, ಸಮಾಧಾನ ಸುವಾರ್ತೆಯ ಸನ್ನಾಹ ಮೆಟ್ಟಿದವರಾಗಿರುವ ಕುರುಬರಾದ ಬೋಧಕರನ್ನು ನೀನದಕ್ಕೆ ಎಬ್ಬಿಸುತ್ತಾ ಬರುತ್ತೀ. ನಿನ್ನ ನೆತ್ತರದಿಂದಲೇ ನೀನು ಕೊಂಡು ಕೊಂಡಂಥಾದ್ದನ್ನು ನಿನ್ನ ದಿವ್ಯ ಕೃಪೆಯಿಂದ ಮಾಣದೆ ಕಾಪಾಡು! ನಿನ್ನ ಸತ್ಯದಿಂದ ಅದನ್ನು ಸಾಕು! ಅದರ ಮೇಲೆ ಬೀಳುವ ಅದರ ಹಗೆಗಾರರನ್ನೆಲ್ಲಾ ಸೋಲಿಸು! ನಂಬುಳಿಯಾದ ಊಳಿಗದವರಿಂದ ಪ್ರಾಣಗಳನ್ನುಳಿಸ ಸಮರ್ಥವಾದ ನುಡಿಯ ಅರುಹನ್ನು ಅದರಲ್ಲಿ ಹೆಚ್ಚುವಳಿಯಾಗ ಮಾಡು! ವಿಶೇಷವಾಗಿ, ನಿನ್ನ ಊಳಿಗದವನಾಗ ಬಯಸಿ, ಪರಿಶುದ್ಧವಾದ ಆಚಾರ್ಯಪೀಠವನ್ನು ಪಡೆದು ಕೊಳ್ಳ ಬೇಕೆಂದು, ಇಲ್ಲಿ ನಿಂತು, ಕಾದು ಕೊಳ್ಳುವ ನಮ್ಮ ಪ್ರಿಯ ಸಹೋದರನಿಗಾಗಿ ಬಿನ್ನೈಸುತ್ತೇವೆ. ನಿನ್ನ ಪವಿತ್ರಾತ್ಮದ ವರಗಳ ತುಂಬಿದ ಅಳತೆಯನ್ನು ಅವನಿಗೆ ದಯ ಮಾಡು! ಮೇಲಿನ ಬಲದಿಂದ ಅವನನ್ನು ತುಂಬು! ನಮ್ಮ ಒಡೆಯನಾದ ಯೇಸು ಕ್ರಿಸ್ತನ ಬೋಧನೆಯ ಸ್ವಸ್ಥವಾದ ನುಡಿಗಳನ್ನೂ

ಭಕ್ತಿಗೆ ಅನುಕೂಲವಾದ ಉಪದೇಶವನ್ನೂ ಕೈಕೊಳ್ಳುವದಕ್ಕೆ ಅವನನ್ನು ಬಲ ಪಡಿಸು!

ಮೊದಲಾಗಿ, ಅವನ ನಡೆನುಡಿಗಳೆಲ್ಲಾ ಅವನು ಊಳಿಗದವನಾಗಿರುವ ಸುವಾರ್ತೆಗೆ ಒಪ್ಪಿಕೆಯಾಗಿರುವ ಹಾಗೆ, ದಯ ಮಾಡು! ನಿನ್ನ ದಿವ್ಯ ಪ್ರೀತಿಯಿಂದ ನಮ್ಮಲ್ಲಿಯೂ, ನಮ್ಮ ಪ್ರಿಯ ಸಹೋದರನೊಡಗೂಡಿದ ನಮ್ಮಿಂದಲೂ ಗೇಯಿದು, ಅವನ ಸಾಕ್ಷಿಯಿಂದಲೂ ಹಲಬರನ್ನು ಜೀವಪಥದಲ್ಲಿ ಶೇರಿಸಿ, ಅವನನ್ನು ಯೇಸು ಕ್ರಿಸ್ತನ ತಿಳಿವಿಕೆಯಲ್ಲಿ ನೆಲೆಗೊಳಿಸಿ, ಬೆಳಕಿನಲ್ಲಿರುವ ಪರಿಶುದ್ಧರ ಬಾಧ್ಯತೆಯ ಪಾಲುಗಾರನಾಗುವದಕ್ಕೆ ಹವಣಿಸು! ಆಮೆನ್!

ಒಡೆಯನಲ್ಲಿ ಪ್ರಿಯ ಸಹೋದರನೇ! ಅಧ್ಯಕ್ಷತ್ವವನ್ನು ಬಯಸುವವನು ಒಳ್ಳೇ ಕೆಲಸವನ್ನು ಬಯಸುತ್ತಾನೆಂದು, ದೇವವಾಕ್ಯದಿಂದ ತಿಳಿದಿದ್ಧೀರಿ! ಯಾಕಂದರೆ ಅಧ್ಯಕ್ಷನು ದೇವರ ಗುಟ್ಟುಗಳ ಉಗ್ರಾಣದವನೂ, ದೇವರಿಗೆ ಅನ್ಯೋನ್ಯವಾಗಿರೆಂದು ಮನುಷ್ಯರನ್ನು ಬೇಡಿ ಕೊಳ್ಳುವದಕ್ಕೆ ಕಳುಹಿದವನಾದ ಕ್ರಿಸ್ತನ ರಾಯಭಾರಿಯೂ, ದೇವರ ಮಗನು ತಾನೇ ತನ್ನ ನೆತ್ತರದಿಂದ ಕೊಂಡು ಕೊಂಡ ಸಭೆಯನ್ನು ಸಾಕಿ, ನಡಿಸಿ, ನಿತ್ಯ ಜೀವದ ಮೂಲವಾದ ತಂದೆಯ ಮತ್ತು ಮಗನ ತಿಳುವಿಕೆಯಲ್ಲಿ ಪವಿತ್ರಾತ್ಮದ ಒತ್ತಾಸೆಯಿಂದ ದೃಢ ಪಡಿಸುವದಕ್ಕೆ ನೇಮಕನಾದ ಮೇಲ್ಗಾವಲಿಯೂ ಆಗಿದ್ಧಾನೆ. ಆದದರಿಂದ ನಿಮ್ಮ ಕರಹದ ಘನವಾದ ಅಳವನ್ನು ಸಲೆ ಗಣನೆ ಮಾಡಿ, ನಿಮ್ಮ ಉದ್ಯೋಗವು ನಿಮ್ಮ ಮೇಲೆ ಹೊರಿಸುವ ಭಾರವನ್ನು ಚನ್ನಾಗಿ ತೂಗಿ ನೋಡ ಬೇಕು.

ಮೊದಲಾಗಿ, ಯೇಸು ಕ್ರಿಸ್ತನು ತಾನೇ ಮೂಲೇ ಕಲ್ಲಾಗಿರುವಂಥ ಅಪೊಸ್ತಲ ಪ್ರವಾದಿಗಳು ತಳಹದಿಯಾದಂಥ, ನಮ್ಮ ಸುವಾರ್ತಾಮತದ ಸಭೆಯ ವಿಶ್ವಾಸಸೂತ್ರಗಳಿಗೆ ಅನುಕೂಲವಾಗಿದ್ದು, ತಿಳಿಯಾಗಿಯೂ ಅಚ್ಚಾಗಿಯೂ ಇರುವ ದೇವರ ನುಡಿಯಲ್ಲಿ ನೆಲೆಯಾಗಿರುವಂಥಾದ್ದನ್ನಲ್ಲದೆ ಬೇರೆ ಯಾವ ಬೋಧನೆಯನ್ನೂ ಸಾರ ಬಾರದು. ಇಟ್ಟಿರುವಂಥಾದ್ದನ್ನಲ್ಲದೆ, ಬೇರೆ ತಳಹದಿಯನ್ನು ಯಾರೂ ಹಾಕಲಾರನು; ಅದು ಯಾ

ವದೆಂದರೆ, ಯೇಸು ಕ್ರಿಸ್ತನು ತಾನೇ. ಇಚ್ಛಕವಾದ ಪರಬೋಧನೆಗಳನ್ನು ತೊರೆದು, ಸತ್ಯದ ವಾಕ್ಯವನ್ನು ಹಿರಿಕಿರಿಯರ ಮನಸ್ಸುಗಳಲ್ಲಿ ಜಾಗ್ರತೆಯಾಗಿಯೂ ನಂಬಿಕೆಯಾಗಿಯೂ ನೆಡ ಬೇಕು. ಎಲ್ಲಾದಕ್ಕಿಂತ ಹೆಚ್ಚಾಗಿ, ಪಾಪಪರಿಹಾರವಿರುವ ದೇವನೀತಿಯನ್ನು ನಮ್ಮಿಷ್ಟಕ್ಕೆ ನಾವೇ ಗೇಯಿದು ದುಡಿಯುವ ಪುಣ್ಯದಿಂದಲ್ಲಾ, ಕೃಪೆಯಿಂದಲೇ, ಕ್ರಿಸ್ತನಿಗಾಗಿ, ವಿಶ್ವಾಸದ ಮುಖಾಂತರ, ಪಡೆದು ಕೊಳ್ಳುತ್ತೇವೆಂಬ ಸುವಾರ್ತೆಯ ಸತ್ಯದ ಸ್ತಂಭವನ್ನು ಬಿಗಿ ಹಿಡುಕೊಳ್ಳ ಬೇಕು. ಇದೇ ವಿಶ್ವಾಸದ ಗುಟ್ಟು. ಇದೊಂದೇ ಬೇಸತ್ತ ಮನಸ್ಸಾಕ್ಷಿಯನ್ನು ಸಂತೈಸಿ, ತುಂಬಿಸಿ, ಮಾನಸಾಂತರೋಚಿತವಾದಂಥ, ದೇವರನ್ನು ಮೆಚ್ಚಿಸುವಂಥ, ಫಲಗಳನ್ನು ಫಲಿಸುವ ಬಯಕೆ ಬಲಗಳನ್ನು ಭಕ್ತರಲ್ಲಿ ಹುಟ್ಟಿಸಲಾಪದು.

ಇದಲ್ಲದೆ ಪರಿಶುದ್ಧ ಕೃಪಾಕರಣಗಳನ್ನು, ನಮ್ಮ ಒಡೆಯನಾದ ಯೇಸು ಕ್ರಿಸ್ತನ ಕಟ್ಟಳೆಯ ಪ್ರಕಾರವಾಗಿ, ಸಭೆಯ ಪರಮ ಪರಿಶುದ್ಧ ವಿಶ್ವಾಸದಲ್ಲಿ ಕಟ್ಟಿಸಲೂ, ಭಕ್ತರನ್ನು ದಯಾಮಯವಾದ ಆಚರಣೆಗಳ ಮೂಲವಾಗಿ ದೇವರ ಸಂಪೂರ್ಣತೆಯಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಗೊಡಿಸಲೂ, ತಕ್ಕ ತೆರನಿಂದ ಪ್ರಯೋಗಿಸ ಹಂಗಾಳುಗಳಾಗಿದ್ದೀರಿ.

ಮತ್ತು ನೀವು ಕ್ರೈಸ್ತವಿದ್ಯಾಶಾಲೆಗಳನ್ನು ನೆರೆ ಪರಾಮರಿಕೆ ಮಾಡುತ್ತಾ, ಬಡವರ ಬಳಿಗೆ ಹೋಗುತ್ತಾ, ರೋಗಿಗಳಗೂ ಇಕ್ಕಟ್ಟು ಬಿದ್ದವರಿಗೂ ದೇವರ ಬಲುಮೆಯ ದೂತರೂ ಸಾಕ್ಷಿಗಳೂ ಆಗಿದ್ದು, ಸಾಯುವವರನ್ನು ನಂಬಿಕೆಯಾಗಿ ಎಚ್ಚರಿಸುತ್ತಾ, ಪ್ರೀತಿಯಾಗಿ ಸಂತೈಸುತ್ತಾ ಬರ ಬೇಕು. ನೀವು ಸೇವೆ ಮಾಡುವ ಸಭೆಯಲ್ಲಿ ಕ್ರೈಸ್ತ ನೀತಿಯ ಸಾಧನೆಯನ್ನು ಬರಹಗಳ ಬೆಸಗಳಿಗೂ ನಮ್ಮ ಮತದ ಕಟ್ಟಳೆಗಳಿಗೂ ಅನುಸಾರವಾಗಿ ಕೈಕೊಳ್ಳ ಬೇಕು.

ದೇವಾಲಯದಲ್ಲಿಯೂ ಮನೆಗಳಲ್ಲಿಯೂ, ಸುಕಾಲದಲ್ಲಿಯೂ ಅಕಾಲದಲ್ಲಿಯೂ, ಎಲ್ಲಾ ಮನುಷ್ಯರನ್ನು ನಿಜ ಭಕ್ತಿಸಾಧನೆಗೂ ದೂರಿಲ್ಲದ ಪರಿಶುದ್ಧವಾದ ಪ್ರೀತಿಶಾಂತಿಗಳುಳ್ಳ ನಡತೆಗೂ ಎಚ್ಚರಿಸಿ, ಸಭೆಯವರ

ನ್ನೆಲ್ಲಾ ಮಹಾರಾಣಿ ಮುಂತಾದ ಅಧಿಕಾರಿಗಳಿಗೆ ವಿಧೇಯರಾಗಿದ್ದು, ಅವರಿಗಾಗಿ ದೇವರಿಗೆ ಬಿನ್ನಹ ಮಾಡ ಬೇಕೆಂತ ಬೋಧಿಸ ಬೇಕು. ವಿಶೇಷವಾಗಿ ನಡೆನುಡಿಗಳಲ್ಲಿಯೂ ಒಲುಮೆಯಲ್ಲಿಯೂ ಆತ್ಮದಲ್ಲಿಯೂ ವಿಶ್ವಾಸದಲ್ಲಿಯೂ ನಿರ್ಮಲತ್ವದಲ್ಲಿಯೂ ಮಂದೆಗೆ ಒಳ್ಳೇ ಮಾದರಿಯನ್ನು ತೋರಿಸುತ್ತಾ ಬರ ಬೇಕು. ಮತ್ತು ನಿಮ್ಮ ಅಭಿವೃದ್ಧಿಯು ಎಲ್ಲಾದರಲ್ಲಿ ತೋರುವ ಹಾಗೆ, ದೇವವಾಕ್ಯವನ್ನೋದಿ ವಿಚಾರಿಸುವ ಅಭ್ಯಾಸದಲ್ಲಿ ಜಾಗ್ರತೆಯಾಗಿರ ಬೇಕು. ನಾನು ಕ್ರಿಸ್ತನನ್ನನುಸರಿಸುವಂದದಿ ನನ್ನನ್ನನುಸರಿಸಿರಿ ಎಂದು, ನೀವು ಭಕ್ತರನ್ನು ಧೈರ್ಯವಾಗಿ ಎಚ್ಚರಿಸ ಸಮರ್ಥರಾಗುವ ಹಾಗೆ, ಸುವಾರ್ತೆಯನ್ನು ಮಾತಿನಿಂದಲೂ ಕ್ರಿಯೆಯಿಂದಲೂ ಸಾರ ಬೇಕು. ದೇವವಾಕ್ಯದ ಸೇವಕನು ನಿರಪರಾಧಿಯಾಗಿದ್ದು, ಯಾವ ಕೆಲಸದಲ್ಲಿಯೂ ದೂರಿಗೆ ಗುರಿಯಾಗಿರದೆ, ಸೈತಾನನ ನಿಂದೆಯಲ್ಲಿಯೂ ಉರ್ಲಿನಲ್ಲಿಯೂ ಬೀಳದಂತೆ, ಹೊರಗಿನವರಲ್ಲಿಯೂ ಒಳ್ಳೇ ಹೆಸರುಳ್ಳವನಾಗಿರ ಬೇಕು.

ಒಡೆಯನಲ್ಲಿ ಪ್ರಿಯ ಸಹೋದರನೇ, ನಿನ್ನ ಅಳವನ್ನು ನೋಡಿದರೆ, ನೀನು ಈ ಉದ್ಯೋಗಕ್ಕೆ ತಕ್ಕವನಲ್ಲವೆಂದು ಬಲ್ಲಿ. ಕ್ರಿಸ್ತನು ಹೇಳುವದೇನಂದರೆ: ಕೊಂಬೆಯು ದ್ರಾಕ್ಷೇ ಬಳ್ಳಿಯಲ್ಲಿ ನೆಲೆಯಾಗಿದ್ದ ಹೊರ್ತು ತನ್ನಷ್ಟಕ್ಕೆ ಫಲಫಲಿಸಲಾರದ ಪ್ರಕಾರ, ನೀವು ನನ್ನಲ್ಲಿ ನೆಲೆಯಾಗಿರದಿದ್ದರೆ, ಫಲಫಲಿಸಲಾರಿರಿ. ಆದದರಿಂದ ಕ್ರಿಸ್ತನ ಸರ್ವಶಕ್ತ ಕೃಪೆಯಲ್ಲಿ ಭರವಸವನ್ನಿಟ್ಟು, ಎಂದಿಗೂ ಸಾಲದೆ ಹೋಗದಂಥ, ಅವನ ಬಲದಲ್ಲಿ ಹೆಚ್ಚಳ ಪಡ ಬೇಕೆಂತ ನಿನ್ನನ್ನು ಎಚ್ಚರಿಸಿ ಬೇಡಿ ಕೊಳ್ಳುತ್ತೇನೆ. ಲೋಕಾಂತದ ವರೆಗೆ ತನ್ನವರೊಡನೆ ಇರುತ್ತೇನೆಂದು ಮಾತು ಕೊಟ್ಟವನು ನಿನ್ನ ಬಲಗಡೆಯಲ್ಲಿದ್ದು, ನಿನ್ನನ್ನು ಕಳುಹಿ, ನೀನು ಮಾಡ ಬೇಕೆಂದು ಬೆಸಗಿದ್ದನ್ನು ತಾನು ಕೈಗೂಡಿ ಬರಲೀಸುವನು. ಆದದರಿಂದ ನಿನ್ನ ಪ್ರಯಾಸವು ಒಡೆಯನಲ್ಲಿ ವ್ಯರ್ಥವಾದದ್ದಲ್ಲವೆಂದು ತಿಳುಕೊಂಡು, ಸ್ಥಿರವಾದವನಾಗಿಯೂ, ಕದಲದವನಾಗಿಯೂ, ಒಡೆಯನ ಕೆಲಸದಲ್ಲಿ ಯಾವಾಗಲೂ ಹೆಚ್ಚುವವನಾಗಿಯೂ ಇರು! ಹಾಗಾದರೆ ನಿನ್ನ ಸೇವೆಯ ಎಲ್ಲಾ ಕಾದಾಟ

ಗಳಲ್ಲಿಯೂ ಶೋಧನೆಗಳಲ್ಲಿಯೂ ಆತನ ಕೃಪೆಯೂ ಸಮಾಧಾನವೂ ನಿನ್ನ ಬಲ ಆದರಣೆಗಳಾಗಿ ಇಹದಲ್ಲಿ ದೊರಕಿದ ಬಳಿಕ, ಆ ದಿವಸದಲ್ಲಿ ಒಡೆಯನು ನಿನಗೆ: ಲೇಸಾಯಿತು, ನಂಬಿಕೆಯುಳ್ಳ ಒಳ್ಳೇ ಆಳೇ! ಕೊಂಚವಾದದರ ಮೇಲೆ ನಂಬಿಕೆಯುಳ್ಳವನಾಗಿದ್ದಿ. ಬಹಳವಾದದರ ಮೇಲೆ ನಿನ್ನನ್ನಿರಿಸುತ್ತೇನೆ. ನಿನ್ನ ಒಡೆಯನ ಸಂತೋಷದಲ್ಲಿ ಸೇರು! ಎಂದು, ಹೇಳುವದನ್ನು ಕೇಳುವಿ.

ಈಗ ದೇವರ ಮತ್ತು ನಮ್ಮ ಒಡೆಯನಾದ ಯೇಸು ಕ್ರಿಸ್ತನ ಸನ್ನಿಧಿಯಲ್ಲಿಯೂ, ಈ ಭಕ್ತರ ಕೂಟದ ಮುಂದೆಯೂ, ನಾನು ನಿನ್ನನ್ನು ಕೇಳುವದೇನಂದರೆ:

ಪ್ರಶ್ನೆ.—ನಿನ್ನ ಉದ್ಯೋಗದ ಕೆಲಸವನ್ನು ಎಲ್ಲಾ ವೇಳೆಯಲ್ಲಿಯೂ ಎಲ್ಲಾ ಬಲದಿಂದಲೂ ನಂಬುಗೆಯಾಗಿ ಮಾಡುತ್ತಾ, ದೇವರು ನಮಗೆ ಬುದ್ಧಿಯೂ ನೀತಿಯೂ ಪವಿತ್ರೀಕರಣವೂ ವಿಮೋಚನೆಯೂ ಆಗಲೀಸಿದಂಥ, ಕ್ರೂಜಿತನಾಗಿ ಸತ್ತವರಲ್ಲಿಂದ ಎದ್ದಂಥ ಯೇಸು ಕ್ರಿಸ್ತನನ್ನು ದೇವವಾಕ್ಯಾನುಸಾರವಾಗಿ ಸಾರ ಮನಸ್ಸಾಗಿದ್ಧೀಯಾ?

ದೇವರ ಕೃಪೆಯಿಂದ ನಡೆನುಡಿಯಲ್ಲಿಯೂ ಬಾಳು ಬಳಿಕೆಗಳಲ್ಲಿಯೂ ಮಂದೆಗೆ ಮಾದರಿಯಾಗಿ ನಡಕೊಳ್ಳ ಬೇಕೆಂತ, ಹೃತ್ಪೂರ್ವಕವಾಗಿ ನಿಶ್ಚೈಸಿ ಕೊಂಡಿದ್ಧೀಯಾ?

ನಿನ್ನ ಮನಸ್ಸಿನ ಬಗೆಯೂ ಬಯಕೆಯೂ ಇದೇಯಾಗಿದ್ದರೆ, ಹೌದೆಂತ, ಎಲ್ಲಾನ್ನು ಕಾಂಬ ದೇವರ ಮುಂದೆಯೂ ಬದುಕುವವರಿಗೂ ಸತ್ತವರಿಗೂ ನ್ಯಾಯಾಧಿಪತಿಯಾದ ಯೇಸು ಕ್ರಿಸ್ತನ ಮುಂದೆಯೂ ಅರಿಕೆ ಮಾಡು!

ಉತ್ತರ.—ಇದೇ ನನ್ನ ಮನಸ್ಸು, ದೇವರು ತನ್ನ ಕೃಪೆ ಬಲಗಳಿಂದ ನನಗೆ ಒತ್ತಾಸೆ ಮಾಡಲಾಗಿ, ನಾನು ಹೀಗೆ ಮಾಡ ಮುಂಕೊಂಡಿದ್ಧೇನೆ.

ಬಳಿಕ ಉದ್ಯೋಗಪ್ರವೇಶಾಶೀರ್ವಾದ ಮಾಡುವ ಆಚಾರ್ಯನು ಉದ್ಯೋಗಾರ್ಥಿಗೆ ಹೇಳುವದೇನಂದರೆ: ನೀನೀಗ ಕೊಟ್ಟ ಮಾತು ದಿಟವಾದದ್ದೆಂಬದಕ್ಕೆ ಗುರುತಾಗಿ ಇಲ್ಲಿ ನೆರವಿ ಕೊಂಡ ಕೂಟದ ಮುಂದೆ ನನಗೆ ಬಲಗೈ ಕೊಡು!

Sodann sagt der einsegnende Geistliche zu dem Einzusegnenden: zur Bekräftigung dieses deines Entschlusses gib mir vor der versammelten Gemeinde die rechte Hand.

ಆಶೀರ್ವಾದವನ್ನು ಹೊಂದ ಬಯಸುವವನು ಆಚಾರ್ಯನಿಗೆ ಕೈ ಕೊಟ್ಟು, ಮೊಣಕಾಲೂರಿ ನಿಲ್ಲ
ವದು. ಬಳಿಕ ಉದ್ಯೋಗಪ್ರವೇಶಾಶೀರ್ವಾದವನ್ನು ಕೊಡುವವನು, ಸಾಕ್ಷಿಗಳಾದ ಇಬ್ಬರು ಆಚಾ
ರ್ಯರೊಡನೆ, ಉದ್ಯೋಗಾರ್ಥಿಯ ತಲೆಯ ಮೇಲೆ ಕೈಗಳನ್ನಿಟ್ಟು, ನುಡಿಯುವದೇನಂದರೆ:

Der Einzusegnende gibt seine Rechte und kniet sodann nieder, worauf er mit folgenden Worten eingesegnet wird; während auch zwei andere Geistliche zugleich mit dem Einsegnenden dem Einzusegnenden die Hände auflegen:

ಸುವಾರ್ತಾಮತದ ಸಭೆಯ ಕುರುಬನಾದ ಆಚಾರ್ಯನ ಉದ್ಯೋ
ಗವನ್ನು ನಿನಗೆ ಒಪ್ಪಿಸಿ ಕೊಟ್ಟು, ಪರಿಶುದ್ಧವಾದ ಕೃಪಾಕರಣಗಳನ್ನು
ಬಳಸ ಬೇಕೆಂತಲೂ, ಕ್ರಿಸ್ತನ ಸಾಕ್ಷಿಯ ನುಡಿಯನ್ನು ಜನಾಂಗಗಳಿಗೆ
ತಿಳಿಸಿ, ಅವರನ್ನು ಆ ದೊಡ್ಡ ರಾತ್ರಿಭೋಜನಕ್ಕೆ ಕರೆಯ ಬೇಕೆಂತಲೂ,
ಈ ನಿನ್ನ ಉದ್ಯೋಗವನ್ನು ವಂಚನೆಯೂ ಎಡತಡೆಯೂ ಇಲ್ಲದೆ, ಮಿಗೆ
ಜಾಗ್ರತೆಯಾಗಿಯೂ ನಂಬಿಕೆಯಾಗಿಯೂ ನಡಿಸ ಬೇಕೆಂತಲೂ, ತಂದೆ
ಮಗ ಪವಿತ್ರಾತ್ಮವೆಂಬ ದೇವರ ಹೆಸರಿನಲ್ಲಿ ಬೆಸಗಿ, ಆ ದಿವಸದಲ್ಲಿ ನೀನು
ನಮ್ಮ ಒಡೆಯನಾದ ಯೇಸು ಕ್ರಿಸ್ತನ ಪೀಠದ ಮುಂದೆ ನೀತಿಯುಳ್ಳ
ನ್ಯಾಯಾಧಿಪತಿಗೆ ಲೆಖ್ಖ ಕೊಡ ಬೇಕೆಂಬದನ್ನು ನೆನಪು ಕೊಡುತ್ತೇನೆ.

ನೀನು ಬಹಳ ಫಲವನ್ನು ಫಲಿಸುವಂತೆ ಒಡೆಯನು ನಿನ್ನನ್ನಾಶೀ
ರ್ವದಿಸಲಿ! ಆಮೆನ್!

ಸಾಕ್ಷಿಗಳಾದ ಆಚಾರ್ಯರು ನುಡಿಯ ತಕ್ಕ ಆಶೀರ್ವಾದಗಳು:

Segensworte, welche von den Zeugen der Einsegnung gesprochen werden können:

ಒಡೆಯನು ನಿನ್ನ ಬೆಳಕೂ ನಿನ್ನ ರಕ್ಷಣೆಯೂ ಆಗಿರಲಿ! ಒಡೆಯನು
ನಿನ್ನ ಜೀವದ ಬಲವಾಗಿರಲಿ! ಗುಂಡಿಗೆಯಾಗಿದ್ದು, ಒಡೆಯನಲ್ಲಿ ವಿಶ್ರಾಂತಿ
ಯಾಗಿರು! ಅವನನ್ನು ತಾಳ್ಮೆಯಿಂದ ಕಾದುಕೋ! ಆಮೆನ್!

ಒಡೆಯನಾದ ಯೇಸು ಕ್ರಿಸ್ತನು ನಿನ್ನೊಡನೆಯೂ ನಿನ್ನ ಆತ್ಮದೊ
ಡನೆಯೂ ಇರಲಿ! ಆಮೆನ್!

ಪ್ರಾರ್ಥನೆ. Gebet.

ಸ್ವರ್ಗಸ್ಥನಾದ ತಂದೆಯಾದ ಕರುಣೆಯುಳ್ಳ ದೇವರೇ, ನಿನ್ನ ಪ್ರಿಯ ಮಗನೂ ನಮ್ಮ ಒಡೆಯನೂ ಆದ ಯೇಸು ಕ್ರಿಸ್ತನ ಬಾಯಿಯಿಂದ, ಊಳಿಗದವರನ್ನು ನಿನ್ನ ಬೆಳೆಗೆ ಕಳುಹಿ ಕೊಡ ಬೇಕೆಂತ, ಬೆಳೆಯ ಒಡೆಯನಾದ ನಿನ್ನನ್ನು ಬೇಡಿ ಕೊಳ್ಳ ಬೇಕೆಂಬದಾಗಿ, ನಮಗೆ ಅಪ್ಪಣೆ ಕೊಟ್ಟೆಯಲ್ಲಾ! ಆದ್ದರಿಂದ ಇಲ್ಲಿ ನಿಂತಿರುವ ನಿನ್ನ ಆಳಿಗೆ ನಿನ್ನ ಪವಿತ್ರಾತ್ಮವನ್ನು ಐಶ್ವರ್ಯವಾಗಿ ಕೊಡು ಎಂದು, ನಂಬುವ ಮಕ್ಕಳಾಗಿ ಬಿನ್ನಹ ಮಾಡುತ್ತೇವೆ. ಪರಿಶುದ್ಧವಾದ ತನ್ನ ಉದ್ಯೋಗವನ್ನು ನಡಿಸೋಣದರಲ್ಲಿ ಅವನನ್ನು ನಂಬಿಗಸ್ತನಾಗಲೀಸು! ಕಳದು ಹೋದದ್ದನ್ನರಸುವದಕ್ಕೂ, ಬಲಹೀನವಾದದ್ದನ್ನು ಬಲಪಡಿಸುವದಕ್ಕೂ, ಸಂಶಯ ಪಡುವವರ ಬುದ್ಧಿಯನ್ನು ಸ್ಥಿರ ಪಡಿಸುವದಕ್ಕೂ, ಇಕ್ಕಟ್ಟು ಬಿದ್ದವರನ್ನು ಸಂತೈಸುವದಕ್ಕೂ, ಭಕ್ತರನ್ನು ಯೇಸು ಕ್ರಿಸ್ತನ ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಸ್ಥಾಪಿಸುವದಕ್ಕೂ, ಅವನಲ್ಲಿ ಬುದ್ಧಿಯನ್ನೂ ತ್ರಾಣವನ್ನೂ ಪ್ರೀತಿಯನ್ನೂ ದಯ ಮಾಡು! ಅವನ ಸಾಕ್ಷಿಯು ಬಹಳ ಸಾರ್ಥಕವಾಗುವಂತೆ ಅದನ್ನು ಅಧಿಕವಾಗಿ ಆಶೀರ್ವದಿಸು! ತನ್ನ ಊಳಿಗದಿಂದ ನಿನ್ನ ಹೆಸರನ್ನು ಪರಿಶುದ್ಧ ಮಾಡಿ, ನಿನ್ನ ರಾಜ್ಯವನ್ನು ಹಬ್ಬಿಸಿ, ಒಳ್ಳಿತಾಗಿಯೂ ಹಿತವಾಗಿಯೂ ಸಂಪೂರ್ಣವಾಗಿಯೂ ಇರುವ ನಿನ್ನ ಅಪ್ಪಣೆಯನ್ನು ನೆರೆವೇರಿಸುವ ದಯೆಯನ್ನು ಅವನಿಗೆ ಕೊಡು! ಅವನು ಮಾಡುವ ಕೆಲಸವನ್ನು ಹಲವು ಪ್ರಾಣಗಳ ರಕ್ಷಣೆಗಾಗಿಯೂ, ನಿನ್ನ ಪರಿಶುದ್ಧ ಹೆಸರಿನ ಕೀರ್ತಿಗಾಗಿಯೂ ಮಹಿಮೆಗಾಗಿಯೂ ಸಾರ್ಥಕವಾಗ ಮಾಡು! ಆಮೆನ್.

ಕರ್ತನ ಪ್ರಾರ್ಥನೆ. Das Vater Unser.

ಸ್ವರ್ಗದಲ್ಲಿರುವ ನಮ್ಮ ತಂದೆಯೇ! ನಿನ್ನ ನಾಮವು ಪವಿತ್ರವಾಗಲಿ! ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ಸ್ವರ್ಗದಲ್ಲಿ ಹ್ಯಾಗೋ, ಹಾಗೆಯೇ ಪೃಥ್ವಿಯಲ್ಲಿಯೂ ಆಗಲಿ! ನಮ್ಮ ಅನುದಿನದ ರೊಟ್ಟಿಯನ್ನು ಈ ಹೊತ್ತು ನಮಗೆ ಕೊಡು! ಮತ್ತು ನಾವೂ ನಮ್ಮ ಸಾಲಗಾರರಿಗೆ

ಬಿಡುವ ಮೇರೆಗೆ ನಮ್ಮ ಸಾಲಗಳನ್ನು ನಮಗೆ ಬಿಡು! ಮತ್ತು ಶೋಧನೆಯೊಳಗೆ ನಮ್ಮನ್ನು ಸೇರಿಸದಿರು! ಆದರೆ ಕೇಡಿಗೆ ನಮ್ಮನ್ನು ತಪ್ಪಿಸು! ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಯುಗ ಯುಗಾಂತರಗಳಿಗೂ ನಿನ್ನವಾಗಿವೆ! ಆಮೆನ್!

ಈಗ ಹೋಗಿ, ದೇವರ ಮಂದೆಯನ್ನು, ಅಂಕೆಯಿಂದಲ್ಲ ಮೆಚ್ಚಿಗೆ ಯಿಂದಲೇ, ಕೆಟ್ಟ ಲೋಭದಿಂದಲ್ಲ ಸಿದ್ಧ ಮನಸ್ಸಿನಿಂದಲೇ, ಸೊತ್ತಿನ ಮೇಲೆ ಧೊರೆತನ ಮಾಡುವವರೋಪಾದಿಯಲ್ಲ, ಮಂದೆಯ ಮಾದರಿಗ ಳಾಗಿಯೇ, ಮೇಲುಗಾವಲಿಯಾಗಿ ಮೇಯಿಸು! ಬಳಿಕ ಹಿರೇ ಕುರು ಬನು ಕಾಣಿಸಿ ಕೊಳ್ಳಲು, ಬಾಡದ ಮಹಿಮೆಯ ಕಿರೀಟವನ್ನು ಹೊಂ ದುವಿ.

ಆಶೀರ್ವಾದವಚನವು. Segen.

ಯೆಹೋವನು ನಿನ್ನನ್ನು ಆಶೀರ್ವದಿಸಿ, ಕಾಪಾಡಲಿ! ಯೆಹೋ ವನು ತನ್ನ ಮುಖವನ್ನು ನಿನ್ನ ಮೇಲೆ ಬೆಳಗಿಸಿ, ನಿನಗೆ ಕೃಪಾಳು ಆಗಿರಲಿ! ಯೆಹೋವನು ತನ್ನ ಮುಖವನ್ನು ನಿನ್ನ ಮೇಲೆ ಇರಿಸಿ, ನಿನಗೆ ಸಮಾಧಾನವನ್ನೀಯಲಿ! ಆಮೆನ್!

Die Leidensgeschichte Jesu Christi, unseres HErrn.

Aus den vier Evangelien zusammengefasst.

ನಾಲ್ಕು ಸುವಾರ್ತೆಗಳಿಂದ

ಎತ್ತಿ ಪೋಣಿಸಿದಂಥ ನಮ್ಮ ಒಡೆಯನಾದ

ಯೇಸು ಕ್ರಿಸ್ತನ ಶ್ರಮಚರಿತ್ರವು.

---

೧. ಪ್ರಾರಂಭವು.

ಪಸ್ಕ ಹಬ್ಬಕ್ಕೆ ಮುಂಚೆ ಆರನೆ ದಿವಸದಲ್ಲಿ ಯೇಸು ಬೇಥಾನ್ಯಕ್ಕೆ ಬಂದನು. ಅಲ್ಲಿ ಆತನು ಸತ್ತವರಲ್ಲಿಂದ ಎಬ್ಬಿಸಿದಂಥ, ಸತ್ತಿದ್ದಂಥ ಲಾಜರನು ಇದ್ದನು. ಅಲ್ಲಿ ತೊನ್ನು ಹಿಡಿದವನೆಂಬ ಸೀಮೋನನ ಮನೆಯಲ್ಲಿ ಅವನಿಗೆ ಔತಣ ಮಾಡಿಸಿದರು. ಮಾರ್ಥಳು ಊಳಿಗ ಮಾಡಿದಳು. ಲಾಜರನು ಅವನ ಕೂಡ ಔತಣಕ್ಕೆ ಕೂತವರಲ್ಲಿ ಒಬ್ಬನಾಗಿದ್ದನು.

ಹೀಗಿರಲಾಗಿ, ಮರಿಯಳು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲದ ಚಂದ್ರಕಾಂತ ಭರಣಿಯನ್ನು ಹಿಡುಕೊಂಡು, ಅವನ ಹತ್ತರ ಬಂದು, ಚಂದ್ರಕಾಂತವನ್ನು ಒಡೆದು, ಅವನ ತಲೆಯ ಮೇಲೆ ತೈಲವನ್ನು ಹೊಯಿದು, ಅವನ ಅಡಿಗಳಿಗೆ ಹಚ್ಚಿ, ತನ್ನ ಕೂದಲಿನಿಂದ ಅವನ ಅಡಿಗಳನ್ನು ಒರಸಿದಳು. ತೈಲದ ಪರಿಮಳದಿಂದ ಮನೆ ತುಂಬಲಾಗಿ, ಅವನ ಶಿಷ್ಯರವನಾದಂಥ, ಸೀಮೋನನ ಮಗನಾಗಿರುವಂಥ, ಬಳಿಕ ಅವನನ್ನು ಒಪ್ಪಿಸಿ ಕೊಡಲಿಕ್ಕಿದ್ದಂಥ, ಇಸ್ಕರಿಯೋತೆಂಬ ಯೂದನು, ಈ ತೈಲವನ್ನು ಮುನ್ನೂರು ಪಾವಲಿಗೆ ಮಾರಿ, ಯಾಕೆ ಬಡವರಿಗೆ ಕೊಡಲಿಲ್ಲ? ಅಂದನು. ಆದರೆ ಬಡವರ ಚಿಂತೆಯಿಂದ ಅದನ್ನು ಹೇಳದೆ, ಅವನು ಜಾಳಿಗೆಯನ್ನಿಟ್ಟು ಕೊಂಡು, ಅದರಲ್ಲಿ ಬೀಳುವದನ್ನು ಹೊರುವವನಾಗಿದ್ದದರಿಂದಲೇ ಹೇಳಿದನು. ಬೇರೆ ಶಿಷ್ಯರಾದ ಕೆಲಬರೂ ಕನಲಿ, ಈ ನಷ್ಟವೇತಕ್ಕೆ? ಈ ತೈಲವನ್ನು ಭಾರಿ ಹಣಕ್ಕೆ ಮಾರಿ, ಬಡವರಿಗೆ ಕೊಡ ಬಹುದಿತ್ತು, ಅಂದರು. ಯೇಸು ಅದ

ನ್ನರಿತು, ಅವಳನ್ನು ಬಿಡಿರಿ! ಯಾಕೆ ಈ ಹೆಂಗಸಿಗೆ ಬೇಸರ ಮಾಡುತ್ತೀರಿ? ಅವಳು ನನಗಾಗಿ ಒಳ್ಳೇ ಕೆಲಸ ಗೈದಿದ್ದಾಳೆ. ಯಾಕಂದರೆ ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇದ್ದಾರೆ. ಬೇಕಾದಾಗ ಅವರಿಗೆ ಮೇಲು ಮಾಡ ಬಹುದು. ಆದರೆ ನಾನು ಯಾವಾಗಲೂ ನಿಮ್ಮೊಡನೆ ಇರೆನು. ಇವಳು ಕೈಲಾದಷ್ಟು ಮಾಡಿ, ಈ ತೈಲವನ್ನು ನನ್ನ ಮೈ ಮೇಲೆ ಹೊಯಿದು, ಹೂಳಿಡೋಣಕ್ಕಾಗಿ ನನ್ನ ಮೈಗೆ ತೈಲವನ್ನು ಹಚ್ಚ ಮುಂಕೊಂಡಿದ್ದಾಳೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ. ಈ ಸುವಾರ್ತೆಯು ಎಲ್ಲಾ ಲೋಕದಲ್ಲಿ ಸಾರಲಾಗುವಲ್ಲೆಲ್ಲಾ ಇವಳು ಮಾಡಿದ್ದೂ ಅವಳ ನೆನಪಿಗಾಗಿ ನುಡಿಯಲಾಗುವದು, ಅಂದನು. ಯೋಹಾ. ೧೨, ೧—೮. ಮತ್ತಾ. ೨೬, ೬—೧೩. ಮಾರ್ಕ. ೧೪, ౩—೯.

ಮಾರಣೆ ದಿವಸದಲ್ಲಿ ಹಬ್ಬಕ್ಕೆ ಬಂದ ಶಾನೆ ಜಂಗುಳಿಯು, ಯೇಸು ಯೆರೂಸಲೇಮಿಗೆ ಬರುವದನ್ನು ಕೇಳಿ, ಖರ್ಜೂರಗರಿಗಳನ್ನು ತೆಗೆದು, ಅವನೆದುರಿಗೆ ಹೋಗಿ, ಹೊಸನ್ನಾ, ಒಡೆಯನ ಹೆಸರಿನಲ್ಲಿ ಬರುವಂಥ ಇಸ್ರಯೇಲಿನ ಅರಸನಿಗೆ ಆಶೀರ್ವಾದವೆಂದು, ಕೂಗಿದರು. ಆದರೆ ಯೇಸು ಕತ್ತೇ ಮರಿಯನ್ನು ಕಂಡು ಕೊಂಡು, ಚಿಯೋನಿನ ಮಗಳೇ, ಹೆದರ ಬೇಡ! ಇಗೋ, ನಿನ್ನ ಅರಸನು ಕತ್ತೆಯ ಮರಿಯ ಮೇಲೆ ಕೂತು ಕೊಂಡು ಬರುತ್ತಾನೆಂದು, ಬರೆದಿರುವ ಪ್ರಕಾರ, ಅದರ ಮೇಲೆ ಕೂತು ಕೊಂಡನು. ಆದರೆ ಅವನು ಲಾಜರನನ್ನು ಗೋರಿಯಿಂದ ಕರೆದು, ಸತ್ತವರಲ್ಲಿಂದ ಎಬ್ಬಿಸಿದಾಗ ಅವನೊಡನೆ ಇದ್ದ ಜಂಗುಳಿಯು ಅವನಿಗೆ ಸಾಕ್ಷಿ ಕೊಟ್ಟಿತು. ಅವನು ಆ ಅದ್ಭುತವನ್ನು ಮಾಡಿದನೆಂದು ಕೇಳಿದ್ದರಿಂದ ಅವನೆದುರಿಗೆ ಬಂದರು. ಹೀಗಿರಲಾಗಿ ಫರಿಸಾಯರು, ನಿಮಗೇನೂ ಕೂಡದೆಂದು ನೋಡುತ್ತೀರಲ್ಲೋ? ಇಗೋ, ಲೋಕವು ಅವನ ಬೆನ್ನು ಹಿಡಿದು ಹೋಯಿತೆಂದು, ತಮ್ಮಲ್ಲಿ ಅಂದು ಕೊಂಡರು. ಯೋಹಾ. ೧೨, ೧೨—೧೫; ೧೭—೧೯.

ಆದರೆ ಪಸ್ಕವೆಂಬ ಶೀಯಾದ ರೊಟ್ಟಿಗಳ ಹಬ್ಬವು ಹತ್ತರವಾಗಿರಲು, ಯೇಸು ತನ್ನ ಶಿಷ್ಯರಿಗೆ, ಎರಡು ದಿವಸಗಳ ಮೇಲೆ ಪಸ್ಕವಾಗುವದೆಂದು ಬಲ್ಲಿರಿ. ಆಗ ಮನುಷ್ಯನ ಮಗನು ಕ್ರೂಜಿಸಲ್ಪಡುವದಕ್ಕೆ ಒಪ್ಪಿಸಲಾಗುವನು, ಅಂದನು. ಆಗ ಪ್ರಧಾನಯಾಜಕರೂ ಶಾಸ್ತ್ರಿಗಳೂ ಜನಾಂಗದ ಹಿರಿಯರೂ ಕಾಯಫನೆಂಬ ಪ್ರಧಾನಯಾಜಕನ ಮಠಕ್ಕೆ ನೆರವಿ ಕೊಂಡು, ಯೇಸುವನ್ನು ಮೋಸದಿಂದ ಹಿಡಿದು ಕೊಲ್ಲುವ ಆಲೋಚನೆ ಮಾಡಿದರು. ಆದರೆ ಜನಾಂಗದಲ್ಲಿ ಗುಲ್ಲು ಹುಟ್ಟದ ಹಾಗೆ, ಹಬ್ಬದಲ್ಲಿ ಬೇಡವೇ ಬೇಡ, ಅಂದರು. ಏನಂದರೆ ಜನಾಂಗಕ್ಕೆ ಬೆಬ್ಬರಿಸಿದರು. ಮತ್ತಾ. ೨೬, ೧—೫. ಮಾರ್ಕ. ೧೪, ೧. ೨. ಲೂಕ. ೨೨, ೧. ೨.

ಹನ್ನೆರಡರಲ್ಲಿ ಒಬ್ಬ, ಇಸ್ಕರಿಯೋತೆಂಬ ಯೂದನು ಹೋಗಿ, ಪ್ರಧಾನಯಾಜಕರ ಮತ್ತು ದಳವಾಯಿಗಳ ಕೂಡಾ, ಅವನನ್ನು ಒಪ್ಪಿಸಿ ಕೊಡುವದು ಹ್ಯಾಗೆಂಬದರ ವಿಷಯವಾಗಿ ಮಾತಾಡಿ, ನನಗೇನು ಕೊಡುತ್ತೀರಿ? ನಾನವನನ್ನು ನಿಮಗೆ ಒಪ್ಪಿಸುತ್ತೇನೆ, ಅಂದನು. ಅವರು ಈ ನುಡಿಗೆ ಮೆಚ್ಚಿ, ಹಣ ಕೊಡುತ್ತೇವೆಂತ ಮಾತು ಕೊಟ್ಟು, ಮೂವತ್ತು ರೂಪಾಯಿ ಕೊಡುತ್ತೇವೆಂದರು. ಅದಕ್ಕವನು ಒಡಂಬಟ್ಟು, ಅಂದಿನಿಂದ ಅವನನ್ನು ಜಂಗುಳಿಯಿಲ್ಲದೆ ಅವರಿಗೆ ಒಪ್ಪಿಸುವದಕ್ಕೆ ಒಳ್ಳೇ ಹೊತ್ತನ್ನರಸಿದನು. ಮತ್ತಾ. ೨೬, ೧೪—೧೬. ಮಾರ್ಕ. ೧೪, ೧೦. ೧೧. ಲೂಕ. ೨೨, ೪—೬.

೨. ಯೇಸು ಶಿಷ್ಯರೊಂದಿಗೆ ಮಾಡಿದ ಕಡೇ ಊಟವು.

ಆದರೆ ಅವರು ಪಸ್ಕ ಆಹುತಿಯನ್ನರ್ಪಿಸುವಂಥ, ಶೀಯಾದ ರೊಟ್ಟಿಗಳ ಮೊದಲನೆ ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು, ನಾವೆಲ್ಲಿಗೆ ಹೋಗಿ, ನಿನಗೆ ಪಸ್ಕವನ್ನುಣ್ಣುವದಕ್ಕೆ ಸಿದ್ಧ ಮಾಡ ಬೇಕು? ಎಂದು ಹೇಳಲು, ಆತನು ತನ್ನ ಶಿಷ್ಯರಲ್ಲಿಬ್ಬರಾದ ಪೇತ್ರನನ್ನೂ ಯೋಹಾನನನ್ನೂ ಕಳುಹಿ, ಅವರಿಗೆ, ಪಟ್ಟಣಕ್ಕೆ ಹೋಗಿರಿ, ಅಲ್ಲಿ ನೀರಿನ ಗಡಿಗೆಯನ್ನು ಹೊರುವವನೊಬ್ಬನು ನಿಮಗೆದುರಾಗಿ ಬರುವನು. ಅವನ ಹಿಂದೆ ಹೋಗಿರಿ. ಅವನು ಶೇರುವ ಮನೆಯಲ್ಲಿ ಶೇರಿ, ಮನೇ ಯಜಮಾನನಿಗೆ, ಅಯ್ಯನು, ತನ್ನ ಶಿಷ್ಯರೊಡನೆ ಪಸ್ಕವನ್ನು ಉಣ್ಣಲನುವಾದ ಶಾಲೆ ಎಲ್ಲಿ? ಎಂದು, ನಿನಗೆ ಹೇಳುತ್ತಾನೆಂಬದಾಗಿ ಹೇಳಿರಿ. ಅವನು ಹಾಸಿಕೆ ಹಾಸಿದ ಸಿದ್ಧವಾದ ದೊಡ್ಡ ಮೇಲ್ಮಾಳಿಗೆಯನ್ನು ನಿಮಗೆ ತೋರಿಸುವನು. ಅಲ್ಲಿ ನಮಗೆ ಹವಣಿಸಿರಿ, ಅಂದನು. ಆಗಲಾತನ ಶಿಷ್ಯರು ಹೋಗಿ, ಪಟ್ಟಣದಲ್ಲಿ ಶೇರಿ, ಆತನವರಿಗೆ ಹೇಳಿದಂತೆ ಕಂಡು ಕೊಂಡು, ಪಸ್ಕವನ್ನು ಹವಣಿಸಿದರು. ಮತ್ತಾ. ೨೬, ೧೭—೧೯. ಮಾರ್ಕ. ೧೪, ೧೨—೧೬. ಲೂಕ. ೨೨, ೭—೧೩.

ಬಳಿಕ ಕಡೆವಗಲಲ್ಲಿ ಆತನು ಹನ್ನೆರಡು ಮಂದಿಯ ಕೂಡಾ ಬಂದು, ಹನ್ನೆರಡು ಅಪೊಸ್ತಲರೊಡನೆ ಕೂತು ಕೊಂಡನು. ಆಗಲಾತನು ಅವರಿಗೆ ಹೇಳಿದ್ದೇನಂದರೆ: ತಾಳುವದಕ್ಕಿಂತ ಮುಂಚೆ ಈ ಪಸ್ಕವನ್ನು ನಿಮ್ಮೊಂದಿಗೆ ಉಣ್ಣುವದಕ್ಕೆ ಶಾನೆ ಬಯಸಿದೆನು. ಯಾಕಂದರೆ ನಿಮಗೆ ಹೇಳುತ್ತೇನೆ: ಅದು ದೇವರಾಜ್ಯದಲ್ಲಿ ನೆರವೇರುವನಕ ನಾನಿನ್ನು ಅದನ್ನುಣ್ಣೆನು. ಬಳಿಕ ಆತನು ಗಿಣ್ಣೆ ತಕ್ಕೊಂಡು, ಸ್ತೋತ್ರ ಮಾಡಿ, ಇದನ್ನು ತಕ್ಕೊಂಡು, ನಿಮ್ಮಲ್ಲಿ ಹಂಚಿ ಕೊಳ್ಳಿರಿ. ಯಾಕಂದರೆ ದೇವರಾಜ್ಯವು ಬರುವನಕ ದ್ರಾಕ್ಷೇ ಫಲದಿಂದಿನ್ನು ಕುಡಿಯೆನೆಂದು ನಿಮಗೆ ಹೇಳುತ್ತೇನೆ. ಲೂಕ. ೨೨, ೧೪—೧೮. ಮತ್ತಾ. ೨೬, ೨೦. ಮಾರ್ಕ. ೧೪, ೧೭.

ಇದಲ್ಲದೆ ಅವರಲ್ಲಿ ದೊಡ್ಡವನ್ಯಾರೆಂಬದಾಗಿ, ಅವರಲ್ಲಿ ಹುರುಡು ಹುಟ್ಟಲು, ಅವನವರಿಗೆ ಹೇಳಿದ್ದು: ಜನಾಂಗಗಳ ಅರಸುಗಳು ಅವರ ಮೇಲೆ ಧೊರೆತನ ಮಾಡುತ್ತಾರೆ. ಅವರ ಮೇಲೆ ಅಂಕೆ ನಡಿಸುವವರು ಮೇಲು ಮಾಡುವವರೆಂದ ನ್ನಿಸಿ ಕೊಳ್ಳುತ್ತಾರೆ. ನಿಮ್ಮಲ್ಲಿ ಹೀಗಾಗದು, ನಿಮ್ಮಲ್ಲಿ ಹಿರಿಯನು ಕಿರಿಯನ ಹಾಗೆಯೂ, ನಾಯಕನು ಊಳಿಗದವನ ಹಾಗೆಯೂ ಇರಲಿ. ಯಾಕಂದರೆ ದೊಡ್ಡವನು ಯಾರು? ಊಟಕ್ಕೆ ಕೂತಿರುವವನೋ? ಊಳಿಗ ಮಾಡುವವನೋ? ಊಟಕ್ಕೆ ಕೂತವನಲ್ಲವೋ? ಆದರೆ ನಾನು ನಿಮ್ಮ ನಡುವೆ ಊಳಿಗ ಮಾಡುವವನ ಹಾಗೆ ಇದ್ದೇನೆ. ಮತ್ತು ನೀವು ನನ್ನ ಶೋಧನೆಗಳಲ್ಲಿ ನನ್ನೊಡನೆ ನೆಲೆಯಾದವರು. ನೀವು ನನ್ನ ರಾಜ್ಯದಲ್ಲಿ ನನ್ನ ಮೇಜಿನ ಬಳಿಯ ಉಂಡು ಕುಡಿದು, ಇಸ್ರಯೇಲನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವವರಾಗಿ, ಗದ್ದಿಗೆಗಳ ಮೇಲೆ ಕೂತು ಕೊಳ್ಳುವ ಹಾಗೆ, ನನ್ನ ತಂದೆಯು ನನಗೆ ರಾಜ್ಯವನ್ನು ನೇಮಕ ಮಾಡಿದಂತೆ, ನಿಮಗೆ ನೇಮಕ ಮಾಡುತ್ತೇನೆ. ಲೂಕ. ೨೨, ೨೪—೩೦.

ಯೇಸು, ತಾನು ಲೋಕವನ್ನು ಬಿಟ್ಟು, ತಂದೆಯ ಬಳಿಗೆ ಹೋಗುವ ಘಳಿಗೆಯು ಬಂತೆಂದು ತಿಳಿದು, ಲೋಕದಲ್ಲಿರುವ ತನ್ನವರನ್ನು ಪ್ರೀತಿ ಮಾಡಿ, ಕಡೇವರೆಗೂ ಅವರನ್ನು ಪ್ರೀತಿ ಮಾಡಿದನು. ಮತ್ತು ಊಟವಾದ ಮೇಲೆ ಸೈತಾನನು ಅವನನ್ನು ಒಪ್ಪಿಸಿ ಕೊಡ ಬೇಕೆಂಬದನ್ನು ಸೀಮೋನನ ಮಗನಾದ ಇಸ್ಕರಿಯೋತೆಂಬ ಯೂದನ ಹೃದಯದಲ್ಲಿ ಹಾಕಿರಲಾಗಿ, ತಂದೆಯು ಎಲ್ಲಾನ್ನು ತನ್ನ ಕೈಗಳಲ್ಲಿಕ್ಕಿದ್ದಾನೆಂದೂ, ತಾನು ದೇವರ ಬಳಿಯಿಂದ ಹೊರ ಬಂದು, ದೇವರ ಬಳಿಗೆ ಹೋಗುತ್ತೇನೆಂದೂ ತಿಳಿದು, ಊಟದಿಂದ ಎದ್ದು, ಬಟ್ಟೆಗಳನ್ನು ಮಡಗಿ, ಅಂಗವಸ್ತ್ರವನ್ನು ತಕ್ಕೊಂಡು, ನಡು ಕಟ್ಟಿ ಕೊಂಡನು. ಬಳಿಕ ತೊಳೆಯುವ ಬಟ್ಟಲಿನಲ್ಲಿ ನೀರೆರೆದು, ಶಿಷ್ಯರ ಅಡಿಗಳನ್ನು ತೊಳಿಯಲಿಕ್ಕೂ ನಡುವಿಗೆ ಕಟ್ಟಿದ ಅಂಗವಸ್ತ್ರದಿಂದ ಒರಸಲಿಕ್ಕೂ ತೊಡಗಿದನು.

ಆದರೆ ಸೀಮೋನ್ ಪೇತ್ರನ ಬಳಿಗೆ ಬರಲಾಗಿ, ಇವನಾತನಿಗೆ, ಒಡೆಯನೇ, ನೀನು ನನ್ನ ಅಡಿಗಳನ್ನು ತೊಳಿಯುತ್ತೀಯಾ? ಅಂದನು. ಯೇಸು ಅವನಿಗೆ ಮಾರ್ನುಡಿದು, ನಾನು ಮಾಡುವದನ್ನು ನೀನೀಗಲರಿಯೆ; ಆದರೆ ಬಳಿಕ ತಿಳುಕೊಳ್ಳುವಿ, ಅಂದನು. ಪೇತ್ರನು ಅವನಿಗೆ, ನೀನೆನ್ನ ಅಡಿಗಳನ್ನು ಎಂದಿಗೂ ತೊಳಿಯ ಬಾರದು ಅನ್ನಲು, ಯೇಸು ಅವನಿಗೆ, ನಾನು ನಿನ್ನನ್ನು ತೊಳಿಯದಿದ್ದರೆ, ನನ್ನೊಡನೆ ನಿನಗೆ ಪಾಲಿಲ್ಲವೆಂದು ಮಾರ್ನುಡಿದನು. ಸೀಮೋನ್ ಪೇತ್ರನು ಅವನಿಗೆ, ಒಡೆಯನೇ, ನನ್ನ ಅಡಿಗಳನ್ನು ಮಾತ್ರವಲ್ಲ, ನನ್ನ ಕೈಗಳನ್ನೂ ತಲೆಯನ್ನೂ ತೊಳಿ, ಅನ್ನಲಾಗಿ, ಯೇಸು ಅವನಿಗೆ, ಮಿಂದವನಿಗೆ ಅಡಿಗಳನ್ನು ತೊಳಿಸುವದಲ್ಲದೆ ಮತ್ತೇ

ನೂ ಬೇಕಿಲ್ಲ. ಅವನು ಇಡೀ ಶುದ್ಧನಾಗಿದ್ದಾನೆ. ನೀವು ಶುದ್ಧರಾಗಿದ್ದೀರಿ. ಆದರೆ ಎಲ್ಲರೂ ಅಲ್ಲ, ಅಂದನು. ಯಾಕಂದರೆ ತನ್ನನ್ನು ಒಪ್ಪಿಸಿ ಕೊಡುವವನನ್ನು ತಿಳು ಕೊಂಡನು. ಆದ್ದರಿಂದ ನೀವೆಲ್ಲರು ಶುಚಿಯಾಗಿರುವದಿಲ್ಲ, ಅಂದನು.

ಅವರ ಅಡಿಗಳನ್ನು ತೊಳೆದ ಬಳಿಕ ಅವನು ತನ್ನ ಬಟ್ಟೆಗಳನ್ನು ತಕ್ಕೊಂಡು, ಮರಳಿ ಒರಗಿ, ಅವರಿಗೆ ಹೇಳಿದ್ದೇನಂದರೆ: ನಾನು ನಿಮಗೆ ಮಾಡಿದ್ದೇನೆಂದು ಬಲ್ಲಿರಾ? ನೀವು ನನ್ನನ್ನು ಬೋಧಕನೆಂತಲೂ ಒಡೆಯನೆಂತಲೂ ಕರೆಯುತ್ತೀರಿ. ನೀವು ಹೇಳುವದು ಸರಿಯೇ, ಹಾಗಿದ್ದೇನಲ್ಲವೇ; ಹಾಗಾದರೆ ಒಡೆಯನೂ ಬೋಧಕನೂ ಆಗಿರುವ ನಾನು ನಿಮ್ಮ ಅಡಿಗಳನ್ನು ತೊಳೆದರೆ, ನೀವೂ ಒಬ್ಬರಿಗೊಬ್ಬರು ಅಡಿಗಳನ್ನು ತೊಳಿಯ ಬೇಕು. ಯಾಕಂದರೆ ನಾನು ನಿಮಗೆ ಮಾಡಿದಂತೆ, ನೀವೂ ಮಾಡುವ ಬಗ್ಯೆ, ನಿಮಗೆ ಮಾದರಿ ತೋರಿಸಿದ್ದೇನೆ. ಆಮೆನ್ ಆಮೆನ್ ನಿಮಗೆ ಹೇಳುತ್ತೇನೆ: ಆಳು ಒಡೆಯನಿಗಿಂತ ದೊಡ್ಡವನಲ್ಲ; ಮತ್ತು ಕಳುಹಿಸಲ್ಪಟ್ಟವನು ಕಳುಹಿದವನಿಗಿಂತ ದೊಡ್ಡವನಲ್ಲ. ಇದನ್ನು ತಿಳುಕೊಂಡ ಮೇಲೆ ಅದನ್ನು ಮಾಡುವಿರಾದರೆ, ನೀವು ಭಾಗ್ಯವಂತರು. ನಿಮ್ಮೆಲ್ಲರ ವಿಷಯವಾಗಿ ನಾನು ಮಾತಾಡುವದಿಲ್ಲ. ನಾನು ಆದು ಕೊಂಡವರನ್ನು ಬಲ್ಲೆನು. ಆದರೆ ನನ್ನೊಂದಿಗೆ ರೊಟ್ಟಿಯುಣ್ಣುವವನು ತನ್ನ ಹಿಮ್ಮಡಿಯನ್ನು ನನ್ನ ಮೇಲೆ ಎತ್ತಿದ್ದಾನೆಂಬ ಬರಹವು ನೆರವೇರ ಬೇಕು. ಅದು ಆಗುವಾಗ ನಾನಾಗಿದ್ದೇನೆಂದು ನೀವು ನಂಬುವ ಹಾಗೆ, ಅದು ಆಗುವದಕ್ಕಿಂತ ಮುಂಚೆ, ಈಗಲೇ ನಿಮಗೆ ಹೇಳುತ್ತೇನೆ. ಆಮೆನ್ ಆಮೆನ್ ನಿಮಗೆ ಹೇಳುತ್ತೇನೆ: ನಾನು ಕಳುಹುವವನನ್ನು ಸೇರಿಸಿ ಕೊಳ್ಳುವವನು ನನ್ನನ್ನು ಸೇರಿಸಿ ಕೊಳ್ಳುತ್ತಾನೆ; ಆದರೆ ನನ್ನನ್ನು ಸೇರಿಸಿ ಕೊಳ್ಳುವವನು ನನ್ನನ್ನು ಕಳುಹಿದವನನ್ನು ಸೇರಿಸಿ ಕೊಳ್ಳುತ್ತಾನೆ. ಯೋಹಾ. ೧೩, ೧—೨೦.

ಇದನ್ನು ನುಡಿದ ತರುವಾಯ, ಯೇಸು ಆತ್ಮದಲ್ಲಿ ಕಳವಳಗೊಂಡು, ಆಮೆನ್ ಆಮೆನ್ ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು ಒಪ್ಪಿಸಿ ಕೊಡುವನು ಅಂತ ಸಾಕ್ಷಿಯಾಗಿ ನುಡಿದನು. ಆಗ ಶಿಷ್ಯರು, ಯಾರ ವಿಷಯವಾಗಿ ಹೇಳುತ್ತಾನೆಂದರಿಯದೆ, ಒಬ್ಬರ ಮೇಲೆ ಒಬ್ಬರು ಕಣ್ಣಿಕ್ಕಿದರು. ಮತ್ತು ಅವರು ಶಾನೆ ನೊಂದು ಕೊಂಡು, ಒಡೆಯನೇ, ನಾನೋ? ಬೇರೊಬ್ಬನು, ನಾನೋ? ಎಂದು, ಅವನನ್ನು ಕೇಳ ತೊಡಗಿದರು. ಅವನು ಮಾರ್ನುಡಿದು, ನನ್ನೊಂದಿಗೆ ಬಟ್ಟಲಲ್ಲಿ ಅದ್ದುವ ಹನ್ನೆರಡು ಮಂದಿಯಲ್ಲಿ ಒಬ್ಬನು, ಅಂದನು. ಆದರೆ ಯೇಸುವಿನ ಎದೆಯ ಬಳಿಯಲ್ಲಿ ಯೇಸು ಪ್ರೀತಿ ಮಾಡುವಂಥ ಶಿಷ್ಯನೊಬ್ಬನು ಒರಗಿ ಕೊಂಡಿದ್ದನು. ಹೀಗಿರಲಾಗಿ ಸೀಮೋನ್ ಪೇತ್ರನು ಇವನಿಗೆ, ಅವನು ಯಾರ ವಿಷಯವಾಗಿ ಹೇಳುತ್ತಾನೆಂತ ಕೇಳುವದಕ್ಕೆ ಕಣ್ಣು ಮಿಾಟಿದನು. ಇವನು

ಯೇಸುವಿನ ಎದೆಗೆ ಆತು ಕೊಂಡು, ಅವನಿಗೆ, ಒಡೆಯನೇ, ಯಾರು? ಅನ್ನಲು, ಯೇಸು, ನಾನು ರೊಟ್ಟೀ ತುಂಡು ಅದ್ದಿ, ಯಾರಿಗೆ ಕೊಡುವೆನೋ, ಅವನೇ ಎಂದು ಪ್ರತ್ಯುತ್ತರ ಕೊಟ್ಟನು. ಬಳಿಕ ರೊಟ್ಟೀ ತುಂಡು ಅದ್ದಿ, ಸೀಮೋನನ ಮಗನಾದ ಇಸ್ಕರಿಯೋತೆಂಬ ಯೂದನಿಗೆ ಕೊಟ್ಟನು. ಮತ್ತು, ಮನುಷ್ಯನ ಮಗನು, ಅವನ ವಿಷಯವಾಗಿ ಬರೆದಿರುವ ಪ್ರಕಾರ, ಹೋಗುತ್ತಾನೆ. ಆದರೆ ಮನುಷ್ಯನ ಮಗನನ್ನು ಒಪ್ಪಿಸುವ ಮನುಷ್ಯನಿಗೆ ಅಯ್ಯೋ! ಆ ಮನುಷ್ಯನು ಹುಟ್ಟದೆ ಇದ್ದರೆ, ಅವನಿಗೆ ಲೇಸಾಗಿತ್ತು, ಅಂದನು. ಆಗಲವನನ್ನು ಒಪ್ಪಿಸಿ ಕೊಟ್ಟ ಯೂದನು, ರಬ್ಬೀ, ನಾನೋ? ಅನ್ನಲಾಗಿ, ಅವನಿಗೆ, ನೀನು ಹೇಳಿದ್ದೀ, ಅಂದನು. ಅವನು ತುಂಡು ತಕ್ಕೊಂಡ ಮೇಲೆ, ಸೈತಾನನು ಅವನೊಳಗೆ ಹೊಕ್ಕನು. ಆಗ ಯೇಸು ಅವನಿಗೆ, ನೀನು ಮಾಡುವದನ್ನು ಬೇಗ ಮಾಡು, ಅಂದನು. ಇದನ್ನವನಿಗೆ ಯಾವ ಕೆಲಸಕ್ಕೆ ನುಡಿದನೆಂತ ಒರಗಿ ಕೊಂಡವರಲ್ಲಿ ಒಬ್ಬನಿಗೂ ಗೊತ್ತಾಗಲಿಲ್ಲ. ಯೂದನು ಜಾಳಿಗೆಯುಳ್ಳವನಾದ್ದರಿಂದ, ಯೇಸು ಅವನಿಗೆ, ಹಬ್ಬಕ್ಕಾಗಿ ನಮಗೆ ಬೇಕಾದ್ದನ್ನು ಕೊಂಡುಕೋ, ಇಲ್ಲವೆ, ಬಡವರಿಗೆ ಏನಾದರೂ ಕೊಡು ಅನ್ನುತ್ತಾನೆಂಬದಾಗಿ ಕೆಲವರು ನೆನಸಿದರು. ಆದರೆ ಅವನು ತುಂಡು ತಕ್ಕೊಂಡು, ಕೂಡಲೆ ಹೊರಟನು. ಆಗ ಇರುಳಾಗಿತ್ತು. ಯೋಹಾ. ೧೩, ೨೧—೩೦. ಮತ್ತಾ. ೨೬, ೨೧—೨೫. ಮಾರ್ಕ. ೧೪, ೧೮—೨೧. ಲೂಕ. ೨೨, ೨೧—೨೩.

ಆದರೆ ಯೂದನು ಹೋದ ಮೇಲೆ ಯೇಸು ಹೇಳಿದ್ದು: ಈಗ ಮನುಷ್ಯನ ಮಗನು ಮಹಿಮೆ ಪಟ್ಟಿದ್ದಾನೆ; ಮತ್ತು ದೇವರು ಅವನಲ್ಲಿ ಮಹಿಮೆ ಪಟ್ಟಿದ್ದಾನೆ. ದೇವರು ಅವನಲ್ಲಿ ಮಹಿಮೆ ಪಟ್ಟದ್ದರೆ, ದೇವರು ಸಹ ಅವನನ್ನು ತನ್ನಲ್ಲಿಯೇ ಮಹಿಮೆ ಪಡಿಸುವನು. ಮತ್ತು ಕೂಡಲೆ ಅವನನ್ನು ಮಹಿಮೆ ಪಡಿಸುವನು. ಯೋಹಾ. ೧೩, ೩೧. ೩೨.

ಆದರೆ ಅವರು ಊಟ ಮಾಡುವಲ್ಲಿ, ಯೇಸು ರೊಟ್ಟಿಯನ್ನು ತಕ್ಕೊಂಡು, ಹರಸಿ, ಅದನ್ನು ಮುರಿದು, ಶಿಷ್ಯರಿಗೆ ಕೊಟ್ಟು, ತಕ್ಕೊಳ್ಳಿರಿ, ತಿನ್ನಿರಿ. ಇದೇ ನಿಮಗಾಗಿ ಕೊಡಲಾಗುವ ನನ್ನ ದೇಹವು. ನನ್ನ ನೆನಪಿಗಾಗಿ ಅದನ್ನು ಮಾಡಿರಿ, ಅಂದನು. ಅದೇ ಪ್ರಕಾರ ಊಟವಾದ ಬಳಿಕ, ಅವನು ಗಿಣ್ಣಿಯನ್ನು ತಕ್ಕೊಂಡು, ಹರಸಿ, ಅದನ್ನವರಿಗೆ ಕೊಟ್ಟು, ಹೇಳಿದ್ದು: ಇದರಲ್ಲಿ ನೀವೆಲ್ಲರು ಕುಡಿಯಿರಿ! ಇದು ನಿಮಗಾಗಿಯೂ, ಹಲಬರಿಗಾಗಿಯೂ, ಪಾಪಪರಿಹಾರಕ್ಕಾಗಿ ಎರೆದ ಹೊಸ ಒಡಂಬಡಿಕೆಯ ನೆತ್ತರವಾದ ನೆತ್ತರವು. ನೀವು ಕುಡಿಯುವಾಗೆಲ್ಲಾ ನನ್ನ ನೆನಪಿಗಾಗಿ ಅದನ್ನು ಮಾಡಿರಿ. ಅವರೆಲ್ಲರು ಅದರಲ್ಲಿ ಕುಡಿದರು. ಆಗಲವನವರಿಗೆ ಹೇಳಿದ್ದು: ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಿಮ್ಮೊಡನೆ ಅದನ್ನು ಹೊಸತಾಗಿ ನನ್ನ ತಂದೆಯ ರಾ

ಜ್ಯದಲ್ಲಿ ಕುಡಿಯುವಂಥ ಆ ದಿನದ ವರೆಗೆ ಇನ್ನೂ ದ್ರಾಕ್ಷೆಯ ಫಲದಲ್ಲಿ ಕುಡಿಯೆನು. ಮತ್ತಾ. ೨೬, ೨೬—೨೯. ಮಾರ್ಕ. ೧೪, ೨೨--೨೫. ಲೂಕ. ೨೨, ೧೯. ೨೦.

ಮಕ್ಕಳೇ, ಇನ್ನೂ ತುಸ ಹೊತ್ತು ನಿಮ್ಮೊಡನೆ ಇದ್ದೇನೆ. ನನ್ನನ್ನರಸುವಿರಿ. ಮತ್ತು ನಾನು ಹೋಗಿ ಬಿಡುವಲ್ಲಿಗೆ ನೀವು ಬರಲಾರಿರೆಂದು, ಯೆಹುದಿಯರಿಗೆ ಹೇಳಿದಂತೆ ಈಗ ನಿಮಗೂ ಹೇಳುತ್ತೇನೆ. ನೀವೂ ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂಬ ಹೊಸ ಅಪ್ಪಣೆಯನ್ನು ನಿಮಗೆ ಕೊಡುತ್ತೇನೆ. ಒಬ್ಬರ ಮೇಲೆ ಒಬ್ಬರು ಪ್ರೀತಿಯುಳ್ಳವರಾಗಿದ್ದರೆ, ಇದರಿಂದಲೇ ನನ್ನ ಶಿಷ್ಯರಾಗಿದ್ದೀರೆಂಬದನ್ನು ಎಲ್ಲರು ತಿಳುಕೊಳ್ಳುವರು. ಸೀಮೋನ್ ಪೇತ್ರನು ಅವನಿಗೆ, ಒಡೆಯನೇ, ಎಲ್ಲಿಗೆ ಹೋಗುತ್ತೀ? ಅನ್ನಲು, ಯೇಸು ಅವನಿಗೆ ಮಾರ್ನುಡಿದು, ನಾನು ಹೋಗುವಲ್ಲಿಗೆ ನೀನು ಈಗ ನನ್ನನ್ನು ಹಿಂಬಳಿಸಲಾರೆ. ಆದರೆ ಬಳಿಕ ನನ್ನನ್ನು ಹಿಂಬಳಿಸುವಿ, ಅಂದನು. ಪೇತ್ರನು ಅವನಿಗೆ, ಒಡೆಯನೇ, ಯಾಕೆ ನಿನ್ನನ್ನು ಈಗ ಹಿಂಬಳಿಸಲಾರೆನು? ನಿನಗಾಗಿ ನನ್ನ ಪ್ರಾಣವನ್ನಿಕ್ಕುತ್ತೇನೆ. ಅನ್ನಲು, ಯೇಸು ಅವನಿಗೆ ಮಾರ್ನುಡಿದು, ನನಗಾಗಿ ನಿನ್ನ ಪ್ರಾಣವನ್ನಿಕ್ಕುತ್ತೀಯಾ? ಸೀಮೋನ್, ಸೀಮೋನ್, ಇಗೋ, ಸೈತಾನನು ನಿಮ್ಮನ್ನು ಗೋಧಿಯಂತೆ ಕೇರ ಬೇಕಾಗಿ ಕೇಳಿ ಕೊಂಡಿದ್ದಾನೆ. ಆದರೆ ನಿನ್ನ ವಿಶ್ವಾಸವು ಜರಿದು ಹೋಗದ ಹಾಗೆ, ನಿನಗಾಗಿ ನಾನು ಬಿನ್ನೈಸಿದೆನು. ಮತ್ತು ನೀನು ತಿರುಗಿ ಕೊಳ್ಳಲು, ನಿನ್ನ ಸಹೋದರರನ್ನು ನಿಲವರಿಸು, ಅಂದನು. ಅವನವನಿಗೆ, ಒಡೆಯನೇ, ನಿನ್ನೊಂದಿಗೆ ಶೆರೆಗೂ ಮರಣಕ್ಕೂ ಹೋಗ ಸಿದ್ಧವಾಗಿದ್ದೇನೆ ಅನ್ನಲು, ಯೇಸು, ಪೇತ್ರನೇ, ನೀನು ನನ್ನನ್ನರಿಯೆ ಎಂಬದಾಗಿ, ಮೂರು ಸಲ ಅಲ್ಲಗಳೆಯುವದಕ್ಕಿಂತ ಮುಂಚೆ ಈ ಹೊತ್ತು ಕೋಳಿ ಕೂಗುವದಿಲ್ಲವೆಂತಾ ನಿನಗೆ ಹೇಳುತ್ತೇನೆ, ಅಂದನು. ಯೋಹಾ. ೧೩, ೩೩—೩೮. ಲೂಕ. ೨೨, ೩೧—೩೪.

ಮತ್ತು ಅವನವರಿಗೆ ನುಡಿದದ್ದು: ನಾನು ನಿಮ್ಮನ್ನು ಜಾಳಿಗೆಯೂ, ಚೀಲವೂ, ಮೆಟ್ಟುಗಳೂ, ಇಲ್ಲದವರಾಗಿ ಕಳುಹಿಸಲಾಗಿ, ನಿಮಗೆ ಏನಾದರೂ ಕೊರತೆಯಾಯಿತೋ? ಅವರು, ಇಲ್ಲವೇ ಇಲ್ಲ, ಅಂದರು. ಆಗಲವನವರಿಗೆ ಹೇಳಿದ್ದು: ಆದರೆ ಈಗ ಜಾಳಿಗೆಯುಳ್ಳವನು ಅದನ್ನೂ ಚೀಲವನ್ನೂ ತಕ್ಕೊಳ್ಳಲಿ. ಇಲ್ಲದವನು ತನ್ನ ಬಟ್ಟೆಯನ್ನು ಮಾರಿ, ಕತ್ತಿಯನ್ನು ಕೊಂಡು ಕೊಳ್ಳಲಿ. ಯಾಕಂದರೆ ಅಂಕೆ ಇಲ್ಲದವರೊಡನೆ ಅವನು ಎಣಿಕೆಯಾದನೆಂಬ ಬರಹವು ನನ್ನಲ್ಲಿ ನೆರವೇರ ಬೇಕೆಂದು, ನಿಮಗೆ ಹೇಳುತ್ತೇನೆ. ಯಾಕಂದರೆ ನನ್ನ ವಿಷಯವಾದ ಮಾತುಗಳಿಗೆ ಕಡೆಯುಂಟು. ಅವರು, ಒಡೆಯನೇ, ಇಗೋ, ಇಲ್ಲಿ ಎರಡು ಕತ್ತಿ ಎಂದು ನುಡಿಯಲು, ಅವನವರಿಗೆ, ಸಾಕು, ಅಂದನು. ಲೂಕ. ೨೨, ೩೫—೩೮.

೩. ಗೆತ್ಸೇಮನೆಯಲ್ಲಿ ನಡದ ಹೋರಾಟವು.

ಎದುರಾಳಿಗಳು ಯೇಸುವನ್ನು ಹಿಡಿದು, ಕೊಂಡು ಹೋದದ್ದು.

ಬಳಿಕ ಅವರು ಕೀರ್ತನೆಯನ್ನು ಹಾಡಿದನಂತರ, ಯೇಸು ಇನ್ನು ಹಲವು ಮಾತುಗಳನ್ನು ಅವರಿಗೆ ಹೇಳಿದ ಮೇಲೆ, (ಯೋಹಾ. ೧೪—೧೭.) ವಾಡಿಕೆಯ ಪ್ರಕಾರ ಕೀದ್ರೋನ್ ಹಳ್ಳದ ದಾರಿಯಿಂದ ಇಪ್ಪೇ ಗುಡ್ಡಕ್ಕೆ ಹೊರಟನು. ಅವನ ಶಿಷ್ಯರು ಅವನನ್ನು ಅಲ್ಲಿಗೆ ಹಿಂಬಳಿಸಿದರು. ಆಗ ಯೇಸು ಅವರಿಗೆ, ನೀವೆಲ್ಲರು ಈ ಇರುಳಲ್ಲಿ ನನ್ನಲ್ಲಿ ಎಡವುವಿರಿ. ಯಾಕಂದರೆ "ಕುರುಬನನ್ನು ಹೊಡೆಯುವೆನು, ಕುರಿಗಳು ಚದರಿ ಹೋಗುವವು" ಎಂದು, ಬರೆದದೆ. ಆದರೆ ನಾನು ಎದ್ದ ಮೇಲೆ, ನಿಮ್ಮ ಮುಂದಾಗಿ ಗಲಿಲಾಯಕ್ಕೆ ಹೋಗುವೆನು. ಪೇತ್ರನು ಅವನಿಗೆ, ಎಲ್ಲರೂ ನಿನ್ನಲ್ಲಿ ಎಡವಿದರೂ, ನಾನು ಎಂದಿಗೂ ಎಡವುವದಿಲ್ಲವೆಂದು ಮಾರ್ನುಡಿಯಲು, ಯೇಸು ಅವನಿಗೆ, ಆಮೆನ್ ನಿನಗೆ ಹೇಳುತ್ತೇನೆ: ಇಂದು, ಈ ಇರುಳಲ್ಲಿಯೇ, ಕೋಳಿಯು ಇಮ್ಮೆ ಕೂಗುವದಕ್ಕಿಂತ ಮುಂಚೆ, ಮುಮ್ಮೆ ನನ್ನನ್ನು ಅಲ್ಲಗಳೆಯುವಿ, ಅಂದನು. ಆದರೆ ಪೇತ್ರನು ಇನ್ನು ಅವನಿಗೆ, ನಾನು ನಿನ್ನೊಡನೆ ಸಾಯ ಬೇಕಾದರೂ, ನಿನ್ನನ್ನು ಅಲ್ಲಗಳೆಯುವದೇ ಇಲ್ಲವನ್ನುತ್ತಾನೆ. ಅಂತು ಶಿಷ್ಯರೆಲ್ಲರೂ ನುಡಿದರು. ಮತ್ತಾ. ೨೬, ೩೦—೩೫. ಮಾರ್ಕ. ೧೪, ೨೬—೩೧. ಲೂಕ. ೨೨, ೩೯. ಯೋಹಾ. ೧೮, ೧.

ಆಗ ಯೇಸು ಅವರೊಂದಿಗೆ ಗೆತ್ಸೇಮನೆ ಎಂಬ ಹಳ್ಳಿಗೆ ಬಂದನು. ಅಲ್ಲಿ ಇದ್ದ ತೋಟದೊಳಗೆ ಯೇಸುವೂ ಅವನ ಶಿಷ್ಯರೂ ಶೇರಿದರು. ಆದರೆ ಯೇಸು ಹಲವು ಸಲ ತನ್ನ ಶಿಷ್ಯರೊಡನೆ ಅಲ್ಲಿ ಕೂಡಿ ಕೊಂಡದರಿಂದ, ಅವನನ್ನು ಒಪ್ಪಿಸಿ ಕೊಟ್ಟ ಯೂದನೂ ಆ ಜಾಗ ತಿಳಿದವನಾಗಿದ್ದನು. ಆ ಜಾಗಕ್ಕೆ ಬರಲಾಗಿ, ಅವನವರಿಗೆ: ನಾನು ಅಲ್ಲಿಗೆ ಹೋಗಿ, ಪ್ರಾರ್ಥನೆ ಮಾಡುವಷ್ಟರೊಳಗೆ ಇಲ್ಲಿ ಕೂತು ಕೊಳ್ಳಿರಿ! ನೀವು ಶೋಧನೆಯೊಳಗೆ ಶೇರದಂತೆ ಪ್ರಾರ್ಥನೆ ಮಾಡಿರಿ! ಎಂದು ಹೇಳಿ, ಪೇತ್ರನನ್ನೂ ಜೆಬೆದಾಯನ ಮಕ್ಕಳಿಬ್ಬರಾದ ಯಾಕೋಬ ಯೋಹಾನರನ್ನೂ ಕರಕೊಂಡು, ದುಃಖಗೊಂಡು, ಬೆರ್ಚಿ, ಕಳವಳಗೊಳ್ಳಲೆಸಗಿ: ನನ್ನ ಪ್ರಾಣವು ಮರಣದ ವರೆಗೂ ದುಃಖಾಕ್ರಾಂತವಾಗಿದೆ. ಇಲ್ಲಿ ಇದ್ದು, ನನ್ನ ಕೂಡ ಎಚ್ಚರಿಕೆಯಾಗಿರ್ರಿ! ಎಂದು, ಅವರಿಗೆ ಹೇಳಿ, ಹೆಚ್ಚು ಕಡಿಮೆ ಕಲ್ಲೆಸೆಯುವಷ್ಟು ದೂರಕ್ಕೆ ಅವರನ್ನು ಬಿಟ್ಟು ಹೋಗಿ, ಮೊಣಕಾಲೂರಿ, ಮೋರೆಯಲ್ಲಿ ಬಿದ್ದು ಕೊಂಡು, ಸಾಧ್ಯವಾಗಿದ್ದರೆ, ಈ ಘಳಿಗೆ ನನ್ನಿಂದ ದಾಟಿ ಹೋಗಲೆಂದು ಪ್ರಾರ್ಥಿಸಿ, ಅಪ್ಪಾ, ನನ್ನ ತಂದೆಯೇ, ನಿನಗೆಲ್ಲಾ ಸಾಧ್ಯವಾಗಿದೆ, ನಿನಗೆ ಮನಸ್ಸಿದ್ದರೆ, ಈ ಗಿಣ್ಣೆಯು ನನ್ನ ಬಳಿ

ಯಿಂದ ದಾಟ ಹೋಗಲಿ. ಆದಾಗ್ಯೂ ನನ್ನ ಚಿತ್ತವಲ್ಲಾ ನಿನ್ನದೇ ಆಗಲಿ, ಅಂದನು. ಬಳಿಕ ತನ್ನ ಶಿಷ್ಯರ ಬಳಿಗೆ ಬಂದು, ಅವರು ನಿದ್ದೆ ಮಾಡುವದನ್ನು ಕಂಡು, ಪೇತ್ರನಿಗೆ: ಇಂತು ಒಂದೇ ಘಳಿಗೆಯಾದರೂ ನನ್ನೊಡನೆ ಎಚ್ಚರವಾಗಿರಲಾರಿರಾ? ಶೋಧನೆಯಲ್ಲಿ ಶೇರದಂತೆ ಎಚ್ಚರವಾಗಿದ್ದು, ಪ್ರಾರ್ಥಿಸಿರಿ! ಆತ್ಮವು ಸಿದ್ಧವಾಗಿದೆ, ಆದರೆ ಮಾಂಸಕ್ಕೆ ಬಲವಿಲ್ಲ, ಅಂದನು. ಮರಳಿ ಅವನು ತಿರಿಗಿ ಹೋಗಿ, ನನ್ನ ತಂದೆಯೇ, ಈ ಗಿಣ್ಣಿಯು ನಾನದನ್ನು ಕುಡಿದ ಹೊರ್ತು ನನ್ನ ಬಳಿಯಿಂದ ದಾಟ ಹೋಗಲಾರದಿದ್ದರೆ, ನಿನ್ನ ಚಿತ್ತವಾಗಲಿ ಎಂದು, ಪ್ರಾರ್ಥಿಸಿದನು. ಆದರೆ ಸ್ವರ್ಗದಿಂದ ದೂತನೊಬ್ಬನು ಆತನಿಗೆ ಕಾಣಿಸಿ ಕೊಂಡು, ಆತನನ್ನು ಬಲ ಪಡಿಸಿದನು. ಮತ್ತು ಆತನು ದೊಡ್ಡ ಕಾದಾಟದಲ್ಲಿದ್ದು, ಇನ್ನೂ ಬೆಸೆಯಾಗಿ ಪ್ರಾರ್ಥಿಸಿದನು. ಇದಲ್ಲದೆ ಅವನ ಬೆವರು ನೆಲಕ್ಕೆ ಬೀಳುವ ನೆತ್ತರದ ತಟಕುಗಳೋಪಾದಿಯಾಗಿತ್ತು. ಮತ್ತು ಅವನು ತಿರಿಗಿ ಬರಲಾಗಿ, ಅವರು ದುಃಖದಿಂದ ನಿದ್ದೆ ಮಾಡುವದನ್ನು ಕಂಡನು. ಯಾಕಂದರೆ ಅವರ ಕಣ್ಣುಗಳು ಭಾರವಾಗಿದ್ದವು. ಮತ್ತು ಅವನಿಗೆ ಏನು ಮಾರ್ನುಡಿಯು ಬೇಕೆಂದರಿಯಲಿಲ್ಲ. ಬಳಿಕ ಅವರನ್ನು ಬಿಟ್ಟು, ತಿರಿಗಿ ಹೋಗಿ, ಮೂರನೆ ಸಲ ಅದೇ ಮಾತು ನುಡಿದು, ಪ್ರಾರ್ಥನೆ ಮಾಡಿದನು. ಮತ್ತು ಪ್ರಾರ್ಥನೆಯಿಂದ ಎದ್ದು, ಮೂರನೆ ಸಲ ತನ್ನ ಶಿಷ್ಯರ ಬಳಿಗೆ ಬಂದು, ಅವರಿಗೆ ನುಡಿದದ್ದೇನಂದರೆ: ಇನ್ನು ಮಲಗಿ ಕೊಂಡು, ತೀರುಗಡೆಯಾಗಿರ್ರಿ. ಸಾಕು. ಘಳಿಗೆ ಬಂದದೆ. ಇಗೋ, ಮನುಷ್ಯನ ಮಗನು ಪಾಪಿಗಳ ಕೈಗಳಲ್ಲಿ ಒಪ್ಪಿಸಲಾಗುತ್ತಾನೆ, ಏಳಿರಿ! ಹೋಗುವಾ! ಇಗೋ, ನನ್ನನ್ನು ಒಪ್ಪಿಸುವವನು ಹತ್ತರವಾಗಿದ್ದಾನೆ. ಯೋಹಾ. ೧೮, ೧. ೨. ಮತ್ತಾ. ೨೬, ೩೬—೪೬. ಮಾರ್ಕ. ೧೪, ೩೨—೪೨. ಲೂಕ. ೨೨, ೪೦—೪೬.

ಕೂಡಲೇ ಅವನಿನ್ನೂ ಮಾತಾಡುತ್ತಿರುವಾಗ, ಹನ್ನೆರಡು ಮಂದಿಯಲ್ಲಿ ಒಬ್ಬನಾದ ಯೂದನು ಜಂಗುಳಿಯನ್ನೂ, ಪ್ರಧಾನಯಾಜಕರ ಮತ್ತು ಫರಿಸಾಯರ ಬಂಟರನ್ನೂ, ಬೆಳಕುಗಳು ದೀಪಗಳು ಕತ್ತಿಗಳು ಡೊಣ್ಣೆಗಳು ಇವುಗಳೊಂದಿಗೆ ಕೊಂಡು ಬಂದು, ಅವರ ಮುಂದೆ ನಡೆದನು. ಆಗ ಯೇಸು ತನ್ನ ಮೇಲೆ ಬರುವದನ್ನೆಲ್ಲಾ ತಿಳಿದು, ಹೊರಗೆ ಹೋಗಿ, ಅವರಿಗೆ, ಯಾರನ್ನು ಅರಸುತ್ತೀರಿ? ಅನ್ನಲು, ಅವರವನಿಗೆ, ನಜರೇತಿನವನಾದ ಯೇಸುವನ್ನೆಂದು ಮಾರ್ನುಡಿದರು. ಯೇಸು ಅವರಿಗೆ, ಅದು ನಾನೇ, ಅಂದನು. ಆದರೆ ಆತನನ್ನು ಒಪ್ಪಿಸಿ ಕೊಟ್ಟ ಯೂದನೂ ಅವರೊಡನೆ ನಿಂತಿದ್ದನು. ಯೇಸು ಅವರಿಗೆ, ಅದು ನಾನೇ ಅನ್ನಲಾಗಿ, ಅವರು ಹಿಂದಕ್ಕೆ ಹೋಗಿ, ನೆಲಕ್ಕೆ ಬಿದ್ದರು. ಮರಳಿ ಅವನವರಿಗೆ, ಯಾರನ್ನರಸುತ್ತೀರಿ? ಎಂದು ಕೇಳಲಾಗಿ, ನಜರೇತಿನವನಾದ ಯೇಸುವನ್ನು, ಅಂದರು.

ನೀನು ನನಗಿತ್ತವರಲ್ಲಿ ಒಬ್ಬನನ್ನಾದರೂ ನಾನು ಕಳಕೊಳ್ಳಲಿಲ್ಲವೆಂಬ ಮಾತು ಈಡೇರುವ ಹಾಗೆ, ಯೇಸು, ಅದು ನಾನೇ ಎಂದು ನಿಮಗೆ ಹೇಳಿದ್ದೇನೆ. ಆದದರಿಂದ ನನ್ನನ್ನರಸುತ್ತೀರಾದರೆ, ಇವರನ್ನು ಹೋಗಲೀಸಿರಿ ಎಂದು ಮಾರ್ನುಡಿದನು. ಆದರೆ ಅವನನ್ನು ಒಪ್ಪಿಸುವವನು, ನಾನು ಮುದ್ದಿಡುವವನೇ ಅವನು; ಅವನನ್ನು ಹಿಡುಕೊಂಡು ಬಿಗಿದು, ಕೊಂಡು ಹೋಗಿರಿ! ಎಂದು, ಅವರಿಗೆ ಗುರ್ತು ಹೇಳಿಕೊಟ್ಟಿದ್ದನು. ಕೂಡಲೇ ಅವನು ಯೇಸುವಿನ ಹತ್ತರ ಬಂದು, ರಬ್ಬೀ, ಲೇಸಾಗಲಿ! ಎಂದು, ಅವನಿಗೆ ಮುದ್ದಿಟ್ಟನು. ಆದರೆ ಯೇಸು ಅವನಿಗೆ, ಗೆಳೆಯನೇ, ಯಾತಕ್ಕೆ ಬಂದಿ? ಮುದ್ದಿನಿಂದ ಮನುಷ್ಯನ ಮಗನನ್ನು ಒಪ್ಪಿಸುತ್ತೀಯಾ? ಅಂದನು. ಯೋಹಾ. ೧೮, ೩—೯. ಮತ್ತಾ. ೨೬, ೪೭—೫೦. ಮಾರ್ಕ. ೧೪, ೪೩—೪೫. ಲೂಕ. ೨೨, ೪೭. ೪೮.

ಆಗಲವರು ಹತ್ತರ ಬಂದು, ಯೇಸುವಿನ ಮೇಲೆ ಕೈ ಹಾಕಿ, ಅವನನ್ನು ಹಿಡಿದರು. ಅವನ ಬಳಿಯುವರು ಆಗುವದನ್ನು ನೋಡಿ, ಒಡೆಯನೇ, ಕತ್ತಿಯಿಂದ ಹೊಡೆಯಲೋ? ಅಂದರು. ಮತ್ತು ಅವರಲ್ಲಿ ಒಬ್ಬನಾದ ಸೀಮೋನನೆಂಬ ಪೇತ್ರನು ಕತ್ತಿಯುಂಟಾದವನಾಗಿದ್ದು, ಅದನ್ನು ಹಿರಿದು, ಪ್ರಧಾನಯಾಜಕನ ಬಂಟನನ್ನು ಹೊಡೆದು, ಅವನ ಬಲಕಿವಿಯನ್ನು ಕಡಿದು ಬಿಟ್ಟನು. ಆ ಬಂಟನ ಹೆಸರು ಮಲ್ಕನು. ಆದರೆ ಯೇಸು ಮಾರ್ನುಡಿದು, ಈ ವರೆಗೆ ಬಿಡಿರಿ! ಎಂದು, ಅವನ ಕಿವಿಯನ್ನು ಮುಟ್ಟಿ, ವಾಶಿ ಮಾಡಿ, ಪೇತ್ರನಿಗೆ ಹೇಳಿದ್ದು: ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು! ಯಾಕಂದರೆ ಕತ್ತಿ ಹಿಡಿದವರೆಲ್ಲರು ಕತ್ತಿಯಿಂದ ಮಡಿದು ಹೋಗುವರು. ತಂದೆಯು ನನಗಿಕ್ಕಿದ ಪಾತ್ರದಲ್ಲಿ ನಾನು ಕುಡಿಯ ಬೇಡವೋ? ಇಲ್ಲವೆ, ನಾನೀಗಲಾದರೂ ನನ್ನ ತಂದೆಯನ್ನು ಬೇಡಲಾರೆನೆಂದು ನೆನಸುತ್ತೀಯಾ? ಬೇಡಿದರೆ, ನನಗೆ ಹನ್ನೆರಡು ಗಣಕ್ಕಿಂತ ಹೆಚ್ಚು ದೂತರನ್ನು ಕಳುಹಿಸುವನಲ್ಲವೋ? ಹಾಗಾದರೆ ಇಂತು ಆಗ ಬೇಕೆಂಬ ಬರಹಗಳು ನೆರೆವೇರುವದು ಹ್ಯಾಗೆ? ಯೋಹಾ. ೧೮, ೧೦. ೧೧. ಮತ್ತಾ. ೨೬, ೫೧—೫೪. ಮಾರ್ಕ. ೧೪, ೪೬. ೪೭. ಲೂಕ. ೨೨, ೪೯—೫೧.

ಆ ಘಳಿಗೆಯಲ್ಲಿ ಯೇಸು ತನ್ನ ಹತ್ತರ ಬಂದ ಪ್ರಧಾನಯಾಜಕರಿಗೂ ದೇವಾಲಯದ ದಳವಾಯಿಗಳಿಗೂ ಹಿರಿಯರಿಗೂ ಹೇಳಿದ್ದು: ಕಳ್ಳನ ಮೇಲೆ ಬಂದಂತೆ, ಕತ್ತಿಗಳಿಂದಲೂ ಡೊಣ್ಣೆಗಳಿಂದಲೂ ನನ್ನನ್ನು ಹಿಡಿಯ ಹೊರಟು ಬಂದಿರಾ? ದಿನಾಲು ದೇವಾಲಯದಲ್ಲಿ ಬೋಧಿಸುತ್ತಾ ಬಂದಲ್ಲಿ ನೀವು ನನ್ನನ್ನು ಹಿಡಿಯಲಿಲ್ಲಾ. ಆದರೆ ಇದು ನಿಮ್ಮ ಘಳಿಗೆಯೂ ಕತ್ತಲೆಯ ಅಧಿಕಾರವೂ ಆಗಿದೆ. ಪ್ರವಾದಿಗಳ ಬರಹಗಳು ತುಂಬುವಂತೆ, ಇದೆಲ್ಲಾ ಉಂಟಾಯಿತು. ಆಗ ಶಿಷ್ಯರೆ

ಲ್ಲರು ಅವನನ್ನು ಬಿಟ್ಟು, ಓಡಿ ಹೋದರು. ಮತ್ತು ಮೈಗೆ ನಾರುಮಡಿಯನ್ನು ಸುತ್ತಿ ಕೊಂಡ ತರುಳನೊಬ್ಬನು ಅವನನ್ನು ಹಿಂಬಾಲಿಸುವವನಾಗಿದ್ದನು. ತರು ಳರು ಅವನನ್ನು ಹಿಡಿಯಲು, ಅವನು ನಾರುಮಡಿಯನ್ನು ಬಿಟ್ಟು ಬಿಟ್ಟು, ಬತ್ತಲೆ ಯಾಗಿ ಅವರಿಗೆ ತಪ್ಪಿಸಿ ಕೊಂಡು, ಓಡಿ ಹೋದನು. ಮತ್ತಾ. ೨೬, ೫೫. ೫೬. ಮಾರ್ಕ. ೧೪, ೪೮—೫೨. ಲೂಕ. ೨೨, ೫೨. ೫೩.

೪. ಮಂತ್ರಿಸಭೆಯ ಮುಂದಣ ವಿಚಾರಣೆ.

ಪೇತ್ರನು ಒಡೆಯನನ್ನು ಅಲ್ಲಗಳೆದದ್ದು.

ಆದರೆ ದಳದವರ ಗುಂಪೂ ಸಹಸ್ರಾಧಿಪತಿಯೂ ಯೆಹುದಿಯರ ಬಂಟ ರೂ ಯೇಸುವನ್ನು ಹಿಡಿದು, ಅವನನ್ನು ಕಟ್ಟಿ, ಮೊದಲು ಅನ್ನನ ಬಳಿಗೆ ಕೊಂಡು ಹೋದರು. ಯಾಕಂದರೆ ಇವನು ಆ ವರ್ಷದ ಪ್ರಧಾನಯಾಜಕನಾದ ಕಯಫ ನಿಗೆ ಮಾವನಾಗಿದ್ದನು. ಆ ಕಯಫನು ಜನಾಂಗಕ್ಕಾಗಿ ಒಬ್ಬ ಮನುಷ್ಯನು ಮ ಡಿದು ಹೋಗುವದು ಲೇಸೆಂಬ ಆಲೋಚನೆಯನ್ನು ಯೆಹುದಿಯರಿಗೆ ಹೇಳಿದವ ನು. ಆದರೆ ಸೀಮೋನ್ ಪೇತ್ರನೂ ಬೇರೊಬ್ಬ ಶಿಷ್ಯನೂ ಯೇಸುವನ್ನು ದೂರ ದಿಂದ ಪ್ರಧಾನಯಾಜಕನ ಮಠದ ವರೆಗೆ ಹಿಂಬಳಿಸಿದರು. ಆ ಶಿಷ್ಯನ ಗುರುತು ಪ್ರಧಾನಯಾಜಕನಿಗೆ ತಿಳಿದಿರುವದರಿಂದ, ಅವನು ಯೇಸುವಿನೊಂದಿಗೆ ಪ್ರಧಾನ ಯಾಜಕನ ಅಂಗಳದಲ್ಲಿ ಹೊಕ್ಕನು. ಆದರೆ ಪೇತ್ರನು ಬಾಗಲಿನ ಹತ್ತರ ಹೊರಗೆ ನಿಂತಿದ್ದನು. ಹೀಗಿರಲಾಗಿ, ಪ್ರಧಾನಯಾಜಕನಿಗೆ ಗೊತ್ತಾದ ಆ ಬೇರೆ ಶಿಷ್ಯನು ಹೊರಗೆ ಹೋಗಿ, ಬಾಗಲು ಕಾಯುವವಳೊಡನೆ ಮಾತಾಡಿ, ಪೇತ್ರನನ್ನು ಒಳಗೆ ಕರಕೊಂಡು ಬಂದನು. ಇವನು ಒಳಗೆ ಹೋಗಿ, ಕಡೆಯನ್ನು ನೋಡ ಬಯಸಿ, ಆಳುಗಳೊಡನೆ ಕೂತು ಕೊಂಡನು. ಆದರೆ ಬಾಗಲು ಕಾಯುವವಳಾದ ಹೆಂಗಸು ಪೇತ್ರನಿಗೆ: ನೀನೂ ಈ ಮನುಷ್ಯನ ಶಿಷ್ಯನಲ್ಲವೋ? ಅಂದಾಗ, ಅವನು: ಅಲ್ಲ, ಅವನ ಗುರ್ತು ನನಗಿಲ್ಲ, ನೀನು ಹೇಳುವದನ್ನರಿಯೆನೆಂದು, ಅಲ್ಲಗಳೆದು, ಹೊರಗೆ ಬಾಗಲಿಗೆ ಹೋದನು. ಆಗ ಕೋಳಿ ಕೂಗಿತು. ಆದರೆ ಬಂಟರೂ ಆಳುಗಳೂ, ಛಳಿಯಾಗಿದ್ದದರಿಂದ, ಅಂಗಳದ ನಡುವೆಯಲ್ಲಿ ಇದ್ದಲ ಬೆಂಕಿಯನ್ನು ಹೊತ್ತಿಸಿ, ಛಳಿ ಕಾಸಿ ಕೊಳ್ಳುತ್ತಿದ್ದರು. ಪೇತ್ರನೂ ಇವರ ಬಳಿಯಲ್ಲಿ ನಿಂತು, ಛಳಿ ಕಾಸಿ ಕೊಳ್ಳುತ್ತಿದ್ದನು. ಯೋಹಾ. ೧೮, ೧೨—೧೪. ೨೪, ೧೫—೧೮. ಮತ್ತಾ. ೨೬, ೫೭. ೫೮. ೬೯. ೭೦. ಮಾರ್ಕ. ೧೪, ೫೩. ೫೪. ೬೮. ಲೂಕ. ೨೨, ೫೪—೫೬.

ಹೀಗಿರಲಾಗಿ, ಪ್ರಧಾನಯಾಜಕನು ಅವನ ಶಿಷ್ಯರ ವಿಷಯವಾಗಿಯೂ ಅವ ನ ಬೋಧನೆಯ ವಿಷಯವಾಗಿಯೂ ಯೇಸುವನ್ನು ಕೇಳಲು, ಯೇಸು ಅವನಿಗೆ

ಮಾರ್ನುಡಿದು: ನಾನು ಬೈಲಾಗಿ ಲೋಕದ ಮುಂದೆ ಮಾತಾಡಿದ್ದೇನೆ. ನಾನು ಯಾವಾಗಲೂ ಯೆಹುದಿಯರು ಕೂಡಿ ಬರುವ ಸಭೆಮನೆಯಲ್ಲಿಯೂ ದೇವಾಲಯದಲ್ಲಿಯೂ ಬೋಧಿಸಿದೆನು. ಮರೆಯಲ್ಲಿ ನಾನೇನೊಂದನ್ನೂ ನುಡಿಯಲಿಲ್ಲ. ಯಾತಕ್ಕೆ ನನ್ನನ್ನು ಕೇಳುತ್ತೀ? ಕೇಳಿದವರನ್ನು ಕರೆದು, ನಾನವರಿಗೆ ನುಡಿದದ್ದೇನೆಂದು ಕೇಳು. ಇಗೋ, ನಾನು ನುಡಿದದ್ದನ್ನು ಇವರು ಬಲ್ಲರು, ಅಂದನು. ಅವನಿದನ್ನು ನುಡಿಯಲಾಗಿ, ಬಂಟರಲ್ಲಿ ಹತ್ತರ ನಿಂತವನೊಬ್ಬನು ಯೇಸುವಿಗೆ ಪೆಟ್ಟು ಹೊಡೆದು, ಪ್ರಧಾನಯಾಜಕನಿಗೆ ಹೀಗೆ ಮಾರ್ನುಡಿಯುತ್ತೀಯಾ? ಅನ್ನಲು, ಯೇಸು ಅವನಿಗೆ, ನಾನು ಕೆಟ್ಟದ್ದನ್ನು ನುಡಿದೆನಾದರೆ, ಕೆಟ್ಟದರ ವಿಷಯವಾಗಿ ಸಾಕ್ಷಿ ಕೊಡು. ಒಳ್ಳೇದನ್ನು ನುಡಿದೆನಾದರೆ, ಯಾತಕ್ಕೆ ನನ್ನನ್ನು ಹೊಡಿಯುತ್ತೀ? ಎಂದು, ಮಾರ್ನುಡಿದನು. ಯೋಹಾ. ೧೮, ೧೯—೨೩.

ಬೆಳಗಾದ ಮೇಲೆ, ಪ್ರಧಾನಯಾಜಕರೂ ಜನಾಂಗದ ಹಿರಿಯರೂ ಶಾಸ್ತ್ರಿಗಳೂ ಮಂತ್ರಿಸಭೆಯವರೆಲ್ಲರೂ ನೆರವಿ ಕೊಂಡು, ಅವನನ್ನು ತಮ್ಮ ಮಂತ್ರಿಸಭೆಗೆ ಕೊಂಡು ಹೋದರು. ಆಗಲವರೆಲ್ಲರು ಯೇಸುವನ್ನು ಸಾಯಲೀಸ ಬೇಕೆಂದು, ಅವನ ಮೇಲೆ ಅಪಸಾಕ್ಷಿಯನ್ನರಸಿದರು. ಆದರೆ ದೊರಕಿಸಿ ಕೊಳ್ಳಲಿಲ್ಲ. ಹಲಬರಾದ ಅಪಸಾಕ್ಷಿಯವರು ಬಂದರೂ, ದೊರಕಿಸಿ ಕೊಳ್ಳಲಿಲ್ಲ. ಅವರ ಸಾಕ್ಷಿಗಳು ಒಪ್ಪಿಗೆಯಾಗಲಿಲ್ಲಾ. ಕಡೆಯಲ್ಲಿ ಅಪಸಾಕ್ಷಿಯವರಿಬ್ಬರು ಬಂದು, ಕೈಕೆಲಸವಾದ ದೇವಾಲಯವನ್ನು ಕೆಡವಿ ಮೂರು ದಿವಸದೊಳಗೆ ಕೈಕೆಲಸವಲ್ಲದ ಬೇರೊಂದನ್ನು ಕಟ್ಟುವೆನೆಂದು, ಅವನು ಹೇಳಿದ್ದನ್ನು ಕೇಳಿದ್ದೇವೆ, ಅಂದರು. ಹಾಗೂ ಅವರ ಸಾಕ್ಷಿಯು ಒಪ್ಪಿಗೆಯಾಗಲಿಲ್ಲ.

ಬಳಿಕ ಪ್ರಧಾನಯಾಜಕನು ಎದ್ದು, ನಡುವೆಯಲ್ಲಿ ನಿಂತು, ಯೇಸುವಿಗೆ: ಇವರು ನಿನ್ನ ಮೇಲೆ ಕೊಡುವ ಸಾಕ್ಷಿಗೆ ನೀನೇನೂ ಮಾರ್ನುಡಿಯುವದಿಲ್ಲವೋ? ಎಂದು ಕೇಳಲು, ಅವನು ಸುಮ್ಮನೆ ಇದ್ದು, ಏನೂ ಮರುಮಾತು ಹೇಳಲಿಲ್ಲ. ಮತ್ತು ಮಂತ್ರಿಸಭೆಯವರು, ನೀನು ಕ್ರಿಸ್ತನಾಗಿದ್ದೀಯಾ? ನಮಗೆ ಹೇಳು, ಅನ್ನಲು, ಅವನವರಿಗೆ: ನಿಮಗೆ ಹೇಳಿದರೆ, ನೀವು ನಂಬುವದೇ ಇಲ್ಲ; ಆದರೆ ನಾನು ಕೇಳಿದರೂ, ನೀವು ಮಾರ್ನುಡಿಯುವದೇ ಇಲ್ಲ; ಮತ್ತು ಬೀಳ್ಕೊಡರಿ, ಅಂದನು. ಮರಳಿ ಪ್ರಧಾನಯಾಜಕನು ಅವನನ್ನು: ನೀನು ಆಶೀರ್ವದಿಸಲುಚಿತನ ಮಗನಾದ ಕ್ರಿಸ್ತನಾಗಿದ್ದೀಯಾ? ನಮಗೆ ಹೇಳೆಂದು, ನಿನಗೆ ಬದುಕುವ ದೇವರ ಆಣೆ ಇಡುತ್ತೇನೆ ಅನ್ನಲಾಗಿ, ಯೇಸು ಅವನಿಗೆ: ನೀನು ನುಡಿದದ್ದು ಅಹುದು. ಆದರೆ ನಿಮಗೆ ಹೇಳುತ್ತೇನೆ, ಈಗಿನಿಂದ ಮನುಷ್ಯನ ಮಗನು ದೇವರ ಬಲದ ಬಲಗಡೆಯಲ್ಲಿ ಕೂತು ಕೊಂಡು, ಸ್ವರ್ಗದ ಮೇಘಗಳ ಮೇಲೆ ಬರುವದನ್ನು ನೋ

ಡುವಿರಿ, ಅಂದನು. ಆಗ ಪ್ರಧಾನಯಾಜಕನು ತನ್ನ ಉಡುವುಗಳನ್ನು ಹರಕೊಂಡು: ದೂಷಿಸಿದ್ಧಾನೆ. ಸಾಕ್ಷಿಯು ನಮಗಿನ್ನ್ಯಾತಕ್ಕೆ? ಇಗೋ, ಈಗಲೇ ಅವನ ದೂಷಣೆಯನ್ನು ಕೇಳಿದಿರಿ. ನಿಮಗೆ ಹ್ಯಾಗೆ ತೋರುತ್ತದೆ? ಅನ್ನಲು, ಅವರು, ಅವನು ಮರಣಕ್ಕೆ ಗುರಿಯಾಗಿದ್ಧಾನೆಂದು ಮಾರ್ನುಡಿದರು. ಮತ್ತಾ. ೨೬, ೫೯—೬೬. ಮಾರ್ಕ. ೧೪, ೫೫—೬೪. ಲೂಕ. ೨೨, ೬೬—೭೧.

ಸೀಮೋನ್ ಪೇತ್ರನು ನಿಂತು ಛಳಿ ಕಾಸಿ ಕೊಳ್ಳುತ್ತಿರಲಾಗಿ, ಹೆಂಗಸರಲ್ಲಿ ಒಬ್ಬಳು ಅವನನ್ನು ನೋಡಿ, ಅಲ್ಲಿದ್ದವರಿಗೆ, ಇವನೂ ನಜರೇತಿನವನಾದ ಯೇಸುವಿನೊಡನೆ ಇದ್ದವನು, ಅಂದಳು. ಆಗಲವನು, ಆ ಮನುಷ್ಯನನ್ನರಿಯೆನೆಂದು, ಆಣೆ ಇಟ್ಟು, ಮರಳಿ ಅಲ್ಲಗಳೆದನು. ಯೋಹಾ. ೧೮, ೧೭—೧೮. ಮತ್ತಾ. ೨೬, ೫೭. ೫೮. ೬೯-೭೨. ಮಾರ್ಕ. ೧೪, ೫೩. ೫೪. ೬೬—೬೯. ಲೂಕ. ೨೨, ೫೪-೫೮.

ಬಳಿಕ, ತುಸ ಹೊತ್ತು ಕಳೆದು ಹೋದನಂತರ, ಅಲ್ಲಿ ನಿಂತಿದ್ದವರು ಪೇತ್ರನ ಹತ್ತರ ಬಂದು: ನೀನೂ ಅವರಲ್ಲಿ ಒಬ್ಬನು. ನಿಶ್ಚಯವಾಗಿ, ನಿನ್ನ ನುಡಿಯು ನಿನ್ನನ್ನು ಪ್ರಕಟಿಸುತ್ತದೆ. ನೀನು ಗಲಿಲಾಯದವನೇ. ನಿನ್ನ ನುಡಿಯು ಹೋಲಿಕೆಯಾಗಿದೆ, ಅಂದರು. ಮತ್ತು ಪೇತ್ರನು ಕಿವಿ ಕಡಿದು ಬಿಟ್ಟವನ ನೆಂಟನಾದ ಪ್ರಧಾನ ಯಾಜಕನ ಆಳುಗಳಲ್ಲೊಬ್ಬನು: ನಾನು ನಿನ್ನನ್ನು ತೋಟದಲ್ಲಿ ಅವನೊಂದಿಗೆ ನೋಡಲಿಲ್ಲವೋ? ಅನ್ನಲಾಗಿ, ಪೇತ್ರನು ಮರಳಿ ಅಲ್ಲಗಳೆದು, ನೀನು ಹೇಳುವ ಆ ಮನುಷ್ಯನನ್ನು ನಾನರಿಯೆನೆಂತ, ಶಪಿಸಿ ಕೊಳ್ಳಲೂ, ಆಣೆ ಇಟ್ಟು ಕೊಳ್ಳಲೂ, ತೊಡಗಿದನು. ಕೂಡಲೇ ಅವನು ಇನ್ನೂ ಮಾತಾಡುತ್ತಿರುವಾಗ, ಕೋಳಿಯು ಎರಡನೆ ಸಲ ಕೂಗಿತು. ಮತ್ತು ಒಡೆಯನು ತಿರುಗಿ ಕೊಂಡು, ಪೇತ್ರನ ಮೇಲೆ ಕಣ್ಣಿಟ್ಟಾಗ, ಪೇತ್ರನು, ಕೋಳಿ ಎರಡು ಸಲ ಕೂಗುವದಕ್ಕಿಂತ ಮುಂಚೆ ಮೂರು ಸಲ ನನ್ನನ್ನು ಅಲ್ಲಗಳೆಯುವಿ ಎಂದು, ಒಡೆಯನು ಹೇಳಿದ ಮಾತು ನೆನಪು ಮಾಡಿ ಕೊಂಡನು. ಆಗ ಪೇತ್ರನು ಹೊರಗೆ ಹೋಗಿ, ಕಹಿಯಾಗಿ ಅತ್ತನು. ಯೋಹಾ. ೧೮, ೨೫—೨೭. ಮತ್ತಾ. ೨೬, ೭೩—೭೫. ಮಾರ್ಕ. ೧೪, ೭೦—೭೨. ಲೂಕ. ೨೨, ೫೯—೬೨.

ಇದಲ್ಲದೆ ಯೇಸುವನ್ನು ಹಿಡುಕೊಂಡಿರುವ ಜನರು ಅವನನ್ನು ಎಕ್ಕರಿಸಿ, ಅವನ ಮೋರೆಗೆ ಉಗುಳಿ, ಅವನನ್ನು ಗುದ್ದಿದರು. ಕೆಲವರು ಅವನ ಮೋರೆಗೆ ಮುಸುಕು ಹಾಕಿ, ಅವನನ್ನು ಬಡದು, ಕ್ರಿಸ್ತನೇ, ನಿನ್ನನ್ನು ಗುದ್ದಿದವನು ಯಾರೆಂದು, ನಮಗೆ ಪ್ರವಾದಿಸು, ಅಂದರು. ಮತ್ತು ಬೇರೆ ಹಲವು ದೂಷಣೆಗಳನ್ನು ಅವನ ಮೇಲೆ ಹೇಳಿದರು. ಮತ್ತು ಬಂಟರು ಅಂಗೈಯಿಂದ ಅವನನ್ನು ಬಡದರು. ಮತ್ತಾ. ೨೬, ೬೭. ೬೮. ಮಾರ್ಕ. ೧೪, ೬೫. ಲೂಕ. ೨೨, ೬೩—೬೫.

೫. ಪಿಲಾತನ ಮುಂದೆ ನಡೆದ ಸಂಗತಿಗಳು.

ಬಳಿಕ ಪ್ರಧಾನಯಾಜಕರೆಲ್ಲರೂ ಜನಾಂಗದ ಹಿರಿಯರೂ ಯೇಸುವನ್ನು ಕೊಲ್ಲ ಸಮ್ಮತರಾಗಿ, ಹೊತ್ತಾರೆಯಾಗಿ ಅವನ ಕೈ ಕಟ್ಟಿ, ಅವನನ್ನು ಕಯಫನ ಬಳಿಯಿಂದ ನ್ಯಾಯಸ್ಥಾನಕ್ಕೆ ಕೊಂಡು ಹೋಗಿ, ಸುಭೇದಾರನಾದ ಪೊಂತೀಯ ಪಿಲಾತನಿಗೆ ಒಪ್ಪಿಸಿದರು. ಯೋಹಾ. ೧೮, ೨೮. ಮತ್ತಾ. ೨೭, ೧. ೨. ಮಾರ್ಕ. ೧೫, ೧. ಲೂಕ. ೨೩, ೧.

ಆಗಲವನನ್ನು ಒಪ್ಪಿಸಿ ಕೊಟ್ಟ ಯೂದನು, ಅವನಿಗೆ ಆಜ್ಞೆನಿರ್ಣಯವಾಯಿತೆಂದು ನೋಡಿ, ಮಾನಸಾಂತರವಾಗಿ, ಪ್ರಧಾನಯಾಜಕರಿಗೂ ಹಿರಿಯರಿಗೂ ಆ ಮೂವತ್ತು ರೂಪಾಯಿಗಳನ್ನು ತಿರಿಗಿ ತಂದು, ಅಪರಾಧವಿಲ್ಲದ ನೆತ್ತರವನ್ನು ಒಪ್ಪಿಸಿ ಕೊಟ್ಟು, ಪಾಪ ಮಾಡಿದೆನು, ಅಂದನು. ಆದರೆ ಅವರು, ನಮಗೇನು? ನೀನೇ ನೋಡಿಕೋ, ಅನ್ನಲವನು ಆ ರೂಪಾಯಿಗಳನ್ನು ದೇವಾಲಯದಲ್ಲಿ ಬಿಸಾಡಿ, ಹೊರಗೆ ಹೋಗಿ, ಉರ್ಲು ಹಾಕಿ ಕೊಂಡನು. ಆದರೆ ಪ್ರಧಾನಯಾಜಕರು ಆ ರೂಪಾಯಿಗಳನ್ನು ತಕ್ಕೊಂಡು, ಅವು ನೆತ್ತರದ ಬೆಲೆಯಾಗಿರುವದರಿಂದ, ಅವನ್ನು ಬೊಕ್ಕಸದಲ್ಲಿ ಹಾಕ ಬಾರದೆಂದು ಆಲೋಚನೆ ಮಾಡಿ, ಅವುಗಳಿಗೆ ಪರದೇಶಿಗಳನ್ನು ಹೂಣುವ ಉದ್ದಿಶ್ಯವಾಗಿ ಕುಂಬಾರನ ಹೊಲವನ್ನು ಕೊಂಡು ಕೊಂಡರು. ಆದದರಿಂದ ಇಂದಿನ ವರೆಗೆ ಆ ಹೊಲಕ್ಕೆ ನೆತ್ತರದ ಹೊಲವೆಂಬ ಹೆಸರುಂಟಾಯಿತು. ಪ್ರವಾದಿಯಾದ ಯೆರೆಮಿಾಯನ ನುಡಿಯು ಆಗ ನೆರೆವೇರಿತು, ಏನಂದರೆ: ಅವರು ಇಸ್ರಯೇಲನ ಮಕ್ಕಳ ಕೈಯಿಂದ ಕ್ರಯ ಮಾಡಿದ ವಿಕ್ರಯವಾದವನ ಕ್ರಯವಾದ ಮೂವತ್ತು ರೂಪಾಯಿ ತಕ್ಕೊಂಡು, ಒಡೆಯನು ನನಗೆ ನೇಮಿಸಿದಂತೆ, ಕುಂಬಾರನ ಹೊಲಕ್ಕೆ ಕೊಟ್ಟರು. ಮತ್ತಾ. ೨೭, ೩—೧೦.

ಆದರೆ ಯೆಹುದಿಯರು ಹೊಲೆಯಾಗದೆ ಪಸ್ಕವನ್ನು ತಿನ್ನುವ ಬಗ್ಯೆ ನ್ಯಾಯಸ್ಥಾನದಲ್ಲಿ ಶೇರಲಿಲ್ಲ. ಆದದರಿಂದ, ಪಿಲಾತನು ಅವರ ಬಳಿಗೆ ಹೊರಗೆ ಬಂದು, ಈ ಮನುಷ್ಯನ ಮೇಲೆ ಯಾವ ದೂರು ತರುತ್ತೀರಿ? ಅನ್ನಲು, ಅವನಿಗೆ ಮಾರ್ನುಡಿದು, ಇವನು ಕೆಡಕನಲ್ಲದಿದ್ದರೆ, ನಾವವನನ್ನು ನಿನಗೆ ಒಪ್ಪಿಸುತ್ತಿದ್ದಿಲ್ಲ, ಅಂದರು. ಆಗ ಪಿಲಾತನು ಅವರಿಗೆ: ನೀವವನನ್ನು ತಕ್ಕೊಂಡು, ನಿಮ್ಮ ನೇಮದ ಪ್ರಕಾರ ಅವನಿಗೆ ನ್ಯಾಯ ತೀರಿಸಿರಿ ಅನ್ನಲು, ಯೆಹುದಿಯರು ಅವನಿಗೆ, ನಾವು ಯಾವನನ್ನಾದರೂ ಕೊಲೆ ಮಾಡಿಸುವದಕ್ಕೆ ಅಧಿಕಾರ ಇಲ್ಲದವರಾಗಿದ್ದೇವೆ, ಅಂದರು. ಎಂಥ ಮರಣದಿಂದ ತಾನು ಸಾಯುವೆನೆಂತ, ಯೇಸು ಸೂಚಿಸಿದ ಮಾತು ಇಂತು ಈಡೇರಿತು. ಯೋಹಾ. ೧೮, ೨೮—೩೨.

ಬಳಿಕ ಪ್ರಧಾನಯಾಜಕರೂ ಹಿರಿಯರೂ ಅವನ ಮೇಲೆ ದೂರು ಹೇಳಲೆ ಸಗಿ, ಇವನು ಜನಾಂಗವನ್ನು ಮಾರ್ಮಲಿಸಿ, ತಾನು ಕ್ರಿಸ್ತನೆಂಬ ಅರಸನಂದು ಕೊಂಡು, ಕೈಸರನಿಗೆ ತೆರಿಗೆ ಕೊಡುವದಕ್ಕೆ ಅಡ್ಡಿ ಮಾಡುವದನ್ನು ಕಂಡೆವು, ಅಂದರು. ಲೂಕ. ೨೩, ೨.

ಹೀಗಿರಲಾಗಿ ಪಿಲಾತನು ತಿರಿಗಿ ನ್ಯಾಯಸ್ಥಾನದಲ್ಲಿ ಶೇರಿ, ಯೇಸುವನ್ನು ಕರೆದು, ಅವನಿಗೆ: ನೀನು ಯೆಹುದಿಯರ ಅರಸನಾಗಿದ್ಧೀಯಾ? ಅನ್ನಲು, ಯೇಸು ಅವನಿಗೆ: ನಿನ್ನಿಂದ ನೀನೇ ಇದನ್ನು ಹೇಳುತ್ತೀಯಾ? ಹೆರರು ನನ್ನ ವಿಷಯವಾಗಿ ನಿನಗೆ ಹೇಳಿದ್ಧಾರೋ? ಎಂದು, ಮಾರ್ನುಡಿಯಲು, ಪಿಲಾತನು: ನಾನು ಯೆಹುದಿಯನೋ? ನಿನ್ನ ಜನಾಂಗವೂ ಪ್ರಧಾನಯಾಜಕರೂ ನಿನ್ನನ್ನು ನನಗೆ ಒಪ್ಪಿಸಿದರು. ಏನು ಮಾಡಿದ್ಧೀ? ಎಂದು, ಮಾರ್ನುಡಿದನು. ಯೇಸು ಮಾರ್ನುಡಿದದ್ದು: ನನ್ನ ರಾಜ್ಯವು ಈ ಲೋಕದ್ದಲ್ಲ, ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ, ನಾನು ಯೆಹುದಿಯರಿಗೆ ಒಪ್ಪಿಸಲಾಗದಂತೆ ನನ್ನ ಬಂಟರು ಕಾದುತ್ತಿದ್ದರು. ಆದರೆ ಈಗ ನನ್ನ ರಾಜ್ಯವು ಇಲ್ಲಿಯದಲ್ಲ. ಪಿಲಾತನು ಅವನಿಗೆ: ಹಾಗಾದರೆ, ನೀನು ಅರಸನೋ? ಅನ್ನಲು, ಯೇಸು, ನಾನು ಅರಸನಾಗಿದ್ಧೇನೆಂದು, ನೀನು ಹೇಳುತ್ತೀ; ನಾನು ಸತ್ಯಕ್ಕೆ ಸಾಕ್ಷಿ ಕೊಡುವದಕ್ಕಾಗಿಯೇ ಹುಟ್ಟಿ, ಅದಕ್ಕಾಗಿಯೇ ಲೋಕಕ್ಕೆ ಬಂದಿದ್ಧೇನೆ. ಸತ್ಯದವರೆಲ್ಲರು ನನ್ನ ಶಬ್ದವನ್ನು ಕೇಳುತ್ತಾರೆಂದು ಮಾರ್ನುಡಿದನು. ಪಿಲಾತನವನಿಗೆ: ಏನು ಸತ್ಯವು? ಅಂದನು. ಇದನ್ನು ಹೇಳಿ, ಮರಳಿ ಯೆಹುದಿಯರ ಬಳಿಗೆ ಹೊರಗೆ ಹೋಗಿ, ಅವರಿಗೆ ಹೇಳಿದ್ದು: ನಾನು ಈ ಮನುಷ್ಯನಲ್ಲಿ ಯಾವ ಅಪರಾಧವನ್ನಾದರೂ ಕಾಣೆನು. ಯೋಹಾ. ೧೮, ೩೩—೩೮. ಮತ್ತಾ. ೨೭, ೧೧. ಮಾರ್ಕ. ೧೫, ೨. ಲೂಕ. ೨೩, ೩. ४.

ಮತ್ತು ಪ್ರಧಾನಯಾಜಕರೂ ಹಿರಿಯರೂ ಅವನ ಮೇಲೆ ಶಾನೆ ದೂರುಗಳನ್ನು ಹೇಳಿದರು. ಆಗ ಪಿಲಾತನು ಮರಳಿ ಅವನನ್ನು ಕೇಳಿ, ನೀನೇನೂ ಮಾರ್ನುಡಿಯುವದಿಲ್ಲವೋ? ಇಗೋ, ನಿನ್ನ ಮೇಲೆ ಎಷ್ಟು ದೂರು ಹೇಳುತ್ತಾರೆಂದು ಕೇಳುವದಿಲ್ಲವೋ? ಅನ್ನಲು, ಅವನಿಗೆ ಒಂದು ನುಡಿಯನ್ನಾದರೂ ಮಾರ್ನುಡಿಯದೆ ಇರುವದರಿಂದ, ಸುಭೇದಾರನು ಶಾನೆ ಬೆರಗಾದನು. ಮಾರ್ಕ. ೧೫, ೩—೫. ಮತ್ತಾ. ೨೭, ೧೨—೧೪.

ಆದರೆ ಅವರು, ಅವನು ಗಲಿಲಾಯದಿಂದ ತೊಡಗಿ, ಇಲ್ಲಿಯ ವರೆಗೂ ಯೆಹುದ ದೇಶದಲ್ಲೆಲ್ಲಾ ಬೋಧಿಸುತ್ತಾ, ಜನಾಂಗವನ್ನು ಎಬ್ಬಿಸುತ್ತಾನೆಂದು, ಘಟ್ಟಿಯಾಗಿ ಹೇಳಿದರು. ಪಿಲಾತನು ಗಲಿಲಾಯವೆಂಬದನ್ನು ಕೇಳಲು, ಆ ಮನುಷ್ಯ ಗಲಿಲಾಯದವನೋ? ಎಂದು ಕೇಳಿದನು. ಮತ್ತು ಅವನು ಹೆರೋದನ ಅಧಿಕಾರ

ಕ್ಕೊಳಗಾದವನೆಂದು ತಿಳಿದು, ಆ ದಿವಸಗಳಲ್ಲಿ ಯೆರೂಸಲೇಮಿನಲ್ಲಿದ್ದ ಹೆರೋದನ ಬಳಿಗೆ ಅವನನ್ನು ಕಳುಹಿಸಿದನು. ಆದರೆ ಹೆರೋದನು ಯೇಸುವನ್ನು ನೋಡಿ, ಶಾನೆ ಮೆಚ್ಚಿ ಕೊಂಡನು. ಯಾಕಂದರೆ ಅವನ ವಿಷಯವಾಗಿ ಹಲವು ಮಾತುಗಳನ್ನು ಕೇಳಿದ್ದರಿಂದ, ಹಲವು ದಿವಸಗಳಿಂದ ಅವನನ್ನು ನೋಡ ಬೇಕೆಂದಿದ್ದನು. ಮತ್ತು ಅವನಿಂದ ಆಗುವ ಒಂದು ಅದ್ಭುತವನ್ನು ನೋಡ ಕೋರುತ್ತಿದ್ದನು. ಆದರೆ ಹಲವು ಮಾತುಗಳಿಂದ ಅವನನ್ನು ವಿಚಾರಿಸಲಾಗಿ, ಅವನವನಿಗೆ ಏನೂ ಮಾರ್ನುಡಿಯಲಿಲ್ಲ. ಆದರೆ ಪ್ರಧಾನಯಾಜಕರೂ ಶಾಸ್ತ್ರಿಗಳೂ ಅವನ ಮೇಲೆ ಪಟ್ಟಾಗಿ ದೂರು ಹೇಳುತ್ತಾ ನಿಂತಿದ್ದರು. ಹೆರೋದನು ತನ್ನ ದಳದವರೊಡನೆ ಅವನನ್ನು ಆಗಡ ಮಾಡಿ, ಅಣಕಿಸಿ, ಮಿರುಗು ತೊಡಿಕೆಯನ್ನವನಿಗೆ ಹೊದ್ದಿಸಿ, ಅವನನ್ನು ಮರಳಿ ಪಿಲಾತನ ಬಳಿಗೆ ಕಳುಹಿದನು. ಅದೇ ದಿವಸದಲ್ಲಿ ಪಿಲಾತ ಹೆರೋದರು ಒಬ್ಬರಿಗೊಬ್ಬರು ಸ್ನೇಹಿತರಾದರು. ಯಾಕಂದರೆ ಮುಂಚೆ ಅವರು ಒಬ್ಬರಿಗೊಬ್ಬರು ಹಗೆಯವರಾಗಿದ್ದರು. ಲೂಕ. ೨೩, ೫—೧೨.

ಬಳಿಕ ಪಿಲಾತನು ಪ್ರಧಾನಯಾಜಕರನ್ನೂ ಆಳ್ವವರನ್ನೂ ಜನಾಂಗವನ್ನೂ ನೆರಸಿ, ಅವರಿಗೆ ನುಡಿದದ್ದು: ಈ ಮನುಷ್ಯನನ್ನು ನನ್ನ ಬಳಿಗೆ, ಜನಾಂಗವನ್ನು ತಿರುಗ ಬೀಳಿಸುವವನೆಂದು, ತಂದಿರಿ. ಇಗೋ, ನಾನು ನಿಮ್ಮ ಮುಂದೆ ವಿಚಾರಣೆ ಮಾಡಿ, ನೀವು ಅವನ ಮೇಲೆ ಹೇಳುವ ದೂರುಗಳಲ್ಲಿ ಒಂದು ಅಪರಾಧವನ್ನಾದರೂ ಈ ಮನುಷ್ಯನಲ್ಲಿ ಕಾಣಲಿಲ್ಲ; ಹೆರೋದನೂ ಕಾಣಲಿಲ್ಲ. ಅವನ ಬಳಿಗೆ ನಿಮ್ಮನ್ನು ಕಳುಹಿದೆನಲ್ಲವೋ? ಮತ್ತು ಇಗೋ, ಮರಣಕ್ಕೆ ಪಾತ್ರವಾದದ್ದೊಂದಾದರೂ ಅವನು ಗೈದದ್ದಿಲ್ಲ. ಆದದರಿಂದ ಅವನನ್ನು ದಂಡಿಸಿ ಬಿಡಿಸುತ್ತೇನೆ. ಲೂಕ. ೨೩, ೧೩—೧೬.

ಆದರೆ ಹಬ್ಬದ ವೇಳೆಯಲ್ಲಿ ಸುಭೇದಾರನು ಜನಾಂಗಕ್ಕೆ ಅವರು ಬಯಸುವ ಶೆರೆಯವನೊಬ್ಬನನ್ನು ಬಿಡಿಸುವದು ವಾಡಿಕೆಯಾಗಿತ್ತು. ಆ ವೇಳೆಯಲ್ಲಿ ಹೆಸರ್ವಾಸಿಯಾದ ಬರಬ್ಬನೆಂಬ ಒಬ್ಬ ಶೆರೆಯವನಿದ್ದನು. ಇವನು ಪಟ್ಟಣದಲ್ಲಿ ಉಂಟಾದ ಒಂದು ಕಲಹಕ್ಕಾಗಿಯೂ ಕೊಲೆಗಾಗಿಯೂ ಶೆರೆಯಲ್ಲಿ ಬಿದ್ದವನಾಗಿದ್ದನು. ಬಳಿಕ ಜಂಗುಳಿಯವರು ಏರಿ ಬಂದು, ಯಾವಾಗಲೂ ತಮಗೆ ಮಾಡುತ್ತಾ ಬಂದಂತೆ ಮಾಡ ಬೇಕೆಂದು, ಬೇಡಿ ಕೊಳ್ಳಲೆಸಗಿದರು. ಅವರು ಕೂಡಿ ಕೊಂಡಿರಲಾಗಿ, ಪಿಲಾತನು ಅವರಿಗೆ, ನಿಮಗೆ ಯಾರನ್ನು ಬಿಡಿಸ ಬೇಕು? ಬರಬ್ಬನನ್ನೋ? ಯೆಹುದಿಯರ ಅರಸನಾದ ಕ್ರಿಸ್ತನೆಂಬ ಯೇಸುವನ್ನೋ? ಅಂದನು. ಯಾಕಂದರೆ ಪ್ರಧಾನಯಾಜಕರು ಹೊಟ್ಟೆಕಿಚ್ಚಿನಿಂದ ಅವನನ್ನು ಒಪ್ಪಿಸಿದರೆಂದು, ತಿಳುಕೊಂಡನು.

ಅವನು ಪೀಠದ ಮೇಲೆ ಕೂತಿರುವಾಗ, ಅವನ ಹೆಂಡತಿಯು: ನಿನಗೆ ಆ ನೀತಿವಂತನ ತಳ್ಳಿ ಬೇಡ. ಯಾಕಂದರೆ ಈ ಹೊತ್ತು ಅವನಿಗಾಗಿ ಕನಸಿನಲ್ಲಿ ಶಾನೆ ತಾಳಿದೆನೆಂದು, ಅವನ ಬಳಿಗೆ ಹೇಳಿ ಕಳುಹಿದಳು. ಮತ್ತಾ. ೨೭, ೧೫—೧೯. ಮಾರ್ಕ. ೧೫, ೬—೧೦. ಲೂಕ. ೨೩, ೧೭. ಯೋಹಾ. ೧೮, ೩೯.

ಆದರೆ ಪ್ರಧಾನಯಾಜಕರೂ ಹಿರಿಯರೂ ಬರಬ್ಬನನ್ನು ಬೇಡಿ ಕೊಂಡು, ಯೇಸುವನ್ನು ಅಳಿಸ ಬೇಕೆಂದು, ಜಂಗುಳಿಯವರನ್ನು ಎಬ್ಬಿಸಿ, ಸಮ್ಮತಿ ಪಡಿಸಿದರು. ಆಗ ಸುಭೇದಾರನು ಮಾರ್ನುಡಿದು, ಅವರಿಗೆ: ಇಬ್ಬರಲ್ಲಿ ಯಾರನ್ನು ನಿಮಗೆ ಬಿಡಿಸ ಬೇಕೆಂದು ಕೇಳಲು, ಎಲ್ಲರೂ ಕೂಡಾ: ಇವನನ್ನು ತೆಗದು ಹಾಕು! ಬರಬ್ಬನನ್ನು ನಮಗೆ ಬಿಡಿಸು! ಎಂದು ಕೂಗಿದರು. ಬರಬ್ಬನು ಕೊಲೆಗಾರನಾಗಿದ್ದನು. ಮರಳಿ ಪಿಲಾತನು, ಯೇಸುವನ್ನು ಬಿಡಿಸ ಮನಸ್ಸಾಗಿದ್ದು, ಅವರಿಗೆ: ಹಾಗಾದರೆ ಕ್ರಿಸ್ತನೆಂಬ ಯೇಸುವಿಗೇನು ಮಾಡಲಿ? ಎಂದು ಕೇಳಲು, ಅವರೆಲ್ಲರು: ಅವನನ್ನು ಕ್ರೂಜಿಸು! ಕ್ರೂಜಿಸು! ಎಂದು ಕೂಗಿದರು. ಆದರೆ ಮೂರನೆ ಸಲ ಅವರಿಗೆ: ಯಾಕೆ? ಇವನೇನು ಕೇಡು ಮಾಡಿದನು? ನಾನು ಮರಣಕ್ಕೆ ಹೇತುವಾದ ಒಂದನ್ನಾದರೂ ಅವನಲ್ಲಿ ಕಂಡು ಕೊಳ್ಳಲಿಲ್ಲ. ಆದದರಿಂದ ಅವನನ್ನು ದಂಡಿಸಿ ಬಿಡಿಸುತ್ತೇನೆ, ಅನ್ನಲಾಗಿ, ಅವರು ಅವನನ್ನು ಕ್ರೂಜಿಸ ಬೇಕೆಂದು, ದೊಡ್ಡ ಕೂಗಿನಿಂದ ಬೇಡಿ ಕೊಂಡು, ತೊಂದರೆ ಪಡಿಸಿದರು. ಅವರ ಕೂಗು ಮತ್ತು ಪ್ರಧಾನಯಾಜಕರದು ಗೆದ್ದಿತು. ಮತ್ತಾ. ೨೭, ೨೦—೨೩. ಮಾರ್ಕ. ೧೫, ೧೧—೧೪. ಲೂಕ. ೨೩, ೧೮—೨೩. ಯೋಹಾ. ೧೮, ೪೦.

ಬಳಿಕ ಪಿಲಾತನು ಯೇಸುವನ್ನು ತಕ್ಕೊಂಡು, ಬಾರುಗಳಿಂದ ಹೊಡಿಸಿದನು. ಮತ್ತು ಸುಭೇದಾರನ ದಳದವರು ಯೇಸುವನ್ನು ನ್ಯಾಯಸ್ಥಾನದೊಳಗೆ ಕೊಂಡು ಹೋಗಿ, ಕಾವಲಿಯವರನ್ನೆಲ್ಲಾ ಅವನ ಹತ್ತರ ಕೂಡಾ ಕರೆದು, ಅವನ ಉಡಿಕೆಯನ್ನು ತೆಗದು ಬಿಟ್ಟು, ರಕ್ತಾಂಬರದ ಒಲ್ಲಿಯನ್ನು ಅವನಿಗೆ ಹೊದ್ದಿಸಿ, ಮುಳ್ಳುಗಳಿಂದ ಮುಡಿಯನ್ನು ಹೆಣೆದು, ಅವನ ತಲೆಯ ಮೇಲೆ ಮಡಗಿ, ಅವನ ಬಲಕೈಯಲ್ಲಿ ಬೆತ್ತವನ್ನಿರಿಸಿ, ಅವನ ಮುಂದೆ ಮೊಣಕಾಲೂರಿ, ಯೆಹುದಿಯರ ಅರಸನೇ! ಲೇಸಾಗಲಿ! ಎಂದು, ಅವನನ್ನಣಕಿಸಿದರು. ಮತ್ತು ಅವನಿಗೆ ಪೆಟ್ಟು ಹೊಡದು, ಅವನ ಮೇಲೆ ಉಗುಳಿ, ಬೆತ್ತವನ್ನು ತಕ್ಕೊಂಡು, ಅವನ ತಲೆಯ ಮೇಲೆ ಬಡದರು. ಯೋಹಾ. ೧೯, ೧—೩. ಮತ್ತಾ. ೨೭, ೨೭—೩೦. ಮಾರ್ಕ. ೧೫, ೧೬—೧೯.

ಆಗ ಪಿಲಾತನು ಮರಳಿ ಹೊರಗೆ ಬಂದು, ಅವರಿಗೆ ಹೇಳಿದ್ದು: ಇಗೋ, ನಾನವನಲ್ಲಿ ಯಾವ ಅಪರಾಧವನ್ನಾದರೂ ಕಾಣೆನೆಂದು, ನೀವು ತಿಳುಕೊಳ್ಳುವಂ

ತೆ, ಅವನನ್ನು ನಿಮ್ಮ ಬಳಿಗೆ ಹೊರ ಬರಲೀಸುತ್ತೇನೆ. ಅಂತು ಯೇಸು ಮುಳ್ಳಿನ ಮುಡಿಯನ್ನೂ ರಕ್ತಾಂಬರವನ್ನೂ ಹೊದ್ದು ಕೊಂಡು, ಹೊರಗೆ ಬರಲು, ಪಿಲಾತನವರಿಗೆ: ಇಗೋ, ಮನುಷ್ಯನು! ಅಂದನು. ಪ್ರಧಾನಯಾಜಕರೂ ಬಂಟರೂ ಅವನನ್ನು ನೋಡಲಾಗಿ, ಅವನನ್ನು ಕ್ರೂಜಿಸು! ಕ್ರೂಜಿಸು! ಎಂದು ಕೂಗಿದರು. ಪಿಲಾತನವರಿಗೆ: ನೀವೇ ಅವನನ್ನು ಕೊಂಡು ಹೋಗಿ, ಕ್ರೂಜಿಸಿರಿ! ಯಾಕಂದರೆ ನಾನು ಅವನಲ್ಲಿ ಯಾವ ಅಪರಾಧವನ್ನಾದರೂ ಕಾಣೆನು, ಅಂದನು. ಯೆಹುದಿಯರು ಅವನಿಗೆ ಮಾರ್ನುಡಿದು: ನಮಗೆ ನೇಮವುಂಟು. ನಮ್ಮ ನೇಮದ ಪ್ರಕಾರ ಅವನು ಸಾಯ ಬೇಕು. ಯಾಕಂದರೆ ತಾನು ದೇವರ ಮಗನೆಂದು ಮಾಡಿ ಕೊಂಡಿದ್ದಾನೆ, ಅಂದರು. ಯೋಹಾ. ೧೯, ೪—೧೫.

ಪಿಲಾತನು ಈ ಮಾತು ಕೇಳಿ, ಹೆಚ್ಚಾಗಿ ಹೆದರಿ ಕೊಂಡು, ಮರಳಿ ನ್ಯಾಯಸ್ಥಾನದಲ್ಲಿ ಶೇರಿ, ಯೇಸುವಿಗೆ: ನೀನು ಎಲ್ಲಿಂದ ಇದ್ದೀ? ಅಂದನು. ಆದರೆ ಯೇಸು ಅವನಿಗೆ ಮರುಮಾತನ್ನೀಯಲಿಲ್ಲ. ಹೀಗಿರಲಾಗಿ ಪಿಲಾತನವನಿಗೆ: ನನ್ನೊಡನೆ ನೀನು ಮಾತಾಡುವದಿಲ್ಲವೋ? ನಿನ್ನನ್ನು ಕ್ರೂಜಿಸುವ ಅಧಿಕಾರವೂ, ನಿನ್ನನ್ನು ಬಿಡಿಸುವ ಅಧಿಕಾರವೂ ನನಗುಂಟೆಂದು, ನೀನರಿಯೆಯಾ? ಅಂದನು. ಯೇಸು ಮಾರ್ನುಡಿದದ್ದು: ನಿನಗೆ ಮೇಲಿನಿಂದ ಕೊಟ್ಟರದಿದ್ದರೆ, ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿದ್ದಿಲ್ಲ. ಆದದರಿಂದ ನಿನಗೆ ನನ್ನನ್ನು ಒಪ್ಪಿಸಿದವನಿಗೆ ಹೆಚ್ಚಾದ ಪಾಪವುಂಟು. ಆಗಿನಿಂದ ಪಿಲಾತನು ಅವನನ್ನು ಬಿಡಿಸಲರಸಿದನು. ಆದರೆ ಯೆಹುದಿಯರು: ಇವನನ್ನು ಬಿಡಿಸಿದರೆ, ನೀನು ಕೈಸರನ ಸ್ನೇಹಿತನಲ್ಲ. ತನ್ನನ್ನು ಅರಸನೆಂದು ಮಾಡಿ ಕೊಳ್ಳುವವನು ಯಾರಾದರೂ ಕೈಸರನಿಗೆ ಎದುರಾಡುತ್ತಾನೆಂದು ಕೂಗಿದರು.

ಪಿಲಾತನು ಈ ಮಾತು ಕೇಳಲು, ಯೇಸುವನ್ನು ಹೊರಗೆ ಕರಕೊಂಡು ಬಂದು, ಕಲ್ಲುಕಟ್ಟಣೆಯೆಂದು, ಇಬ್ರಿಯ ನುಡಿಯಲ್ಲಿ ಗಬ್ಬಥವೆಂದನ್ನಿಸುವ ಸ್ಥಳದಲ್ಲಿ ಪೀಠದ ಮೇಲೆ ಕೂತು ಕೊಂಡು, ಪಸ್ಕಕ್ಕೆ ಸಿದ್ಧ ಮಾಡುವ ದಿವಸದ ಹೆಚ್ಚು ಕಡಿಮೆ ಆರನೆ ತಾಸಿನಲ್ಲಿ ಯೆಹುದಿಯರಿಗೆ: ಇಗೋ, ನಿಮ್ಮ ಅರಸನು! ಅಂದನು. ಆದರೆ ಅವರು: ಅವನನ್ನು ತೆಗದು ಹಾಕು! ತೆಗದು ಹಾಕು! ಕ್ರೂಜಿಸು! ಎಂದು ಕೂಗಿದರು. ಪಿಲಾತನವರಿಗೆ: ನಿಮ್ಮ ಅರಸನನ್ನು ಕ್ರೂಜಿಸಲೋ? ಅನ್ನಲಾಗಿ, ಪ್ರಧಾನಯಾಜಕರು: ಕೈಸರನಲ್ಲದೆ, ನಮಗೆ ಅರಸನಿಲ್ಲವೆಂದು ಮಾರ್ನುಡಿದರು.

ಆಗ ಪಿಲಾತನು ಗುಲ್ಲು ಹೆಚ್ಚುವದಲ್ಲದೆ ಏನೂ ಉಪಯೋಗವಿಲ್ಲವೆಂದು ನೋಡಿ, ನೀರು ತಕ್ಕೊಂಡು, ಜಂಗುಳಿಯ ಮುಂದೆ ಕೈಗಳನ್ನು ತೊಳೆದು, ಈ ನೀತಿವಂತನ ನೆತ್ತರಕ್ಕೆ ನಿರಪರಾಧಿಯಾಗಿದ್ದೇನೆ, ನೀವೇ ನೋಡಿ ಕೊಳ್ಳಿರಿ! ಅನ್ನಲಾಗಿ,

ಜನಾಂಗವೆಲ್ಲಾ ಮಾರ್ನುಡಿದದ್ದು: ಅವನ ನೆತ್ತರವು ನಮ್ಮ ಮೇಲೆಯೂ ನಮ್ಮ ಮಕ್ಕಳ ಮೇಲೆಯೂ ಬರಲಿ! ಆಗ ಪಿಲಾತನು ಜಂಗುಳಿಯನ್ನು ಮೆಚ್ಚಿಸ ಬೇಕೆಂದು, ಕಲಹ ಕೊಲೆಗಳಿಗಾಗಿ ಶೆರೆಯಲ್ಲಿ ಬಿದ್ದಿರುವಂಥ, ಅವರು ಬೇಡಿ ಕೊಂಡಂಥ ಬರಬ್ಬನನ್ನು ಅವರಿಗೆ ಬಿಡಿಸಿದನು. ಆದರೆ ಯೇಸುವನ್ನು ಬಾರುಗಳಿಂದ ಹೊಡಿಸಿ, ಕ್ರೂಜಿಸುವದಕ್ಕೆ ಅವರ ಕೈಗೆ ಒಪ್ಪಿಸಿದನು. ಮತ್ತಾ. ೨೭, ೨೪—೨೬. ಮಾರ್ಕ. ೧೫, ೧೫. ಲೂಕ. ೨೩, ೨೪. ೨೫. ಯೋಹಾ. ೧೯, ೧೬.

೬. ಯೇಸು ಕ್ರೂಜೆಯಲ್ಲಿ ತೂಗುತ್ತಾ ಮರಣ ತಾಳಿದ್ದು.

ದಳದವರು ಅವನನ್ನಣಕಿಸಿದ ಬಳಿಕ, ರಕ್ತಾಂಬರವನ್ನು ಅವನ ಮೈಯಿಂದ ತೆಗದು, ಅವನ ಉಡವುಗಳನ್ನವನಿಗೆ ಹೊದ್ದಿಸಿ, ಅವನನ್ನು ಕ್ರೂಜಿಸುವದಕ್ಕೆ ಕೊಂಡು ಹೋದರು. ಅವನು ತನ್ನ ಕ್ರೂಜೆಯನ್ನು ಹೊತ್ತು ಕೊಂಡು, ಕಪಾಲಸ್ಥಳವೆಂತಲೂ, ಇಬ್ರಿಯ ನುಡಿಯಲ್ಲಿ ಗೊಲ್ಗೊಥವೆಂತಲೂ, ಅನ್ನಿಸಿ ಕೊಳ್ಳುವ ಜಾಗಕ್ಕೆ ಹೊರಟನು. ಅವನನ್ನು ಕೊಂಡು ಹೋಗುವಾಗ, ಅವರು ಹೊಲದಿಂದ ಬಂದಂಥ, ಅಲೆಕ್ಸಂದ್ರನಿಗೂ ರೂಫನಿಗೂ ತಂದೆಯಾದಂಥ, ಕುರೇನೆಯವನಾದ ಸೀಮೋನನೆಂಬವನನ್ನು ಹಿಡಿದು, ಯೇಸುವಿನ ಕ್ರೂಜೆಯನ್ನು ಹೊತ್ತು ಕೊಂಡು ಹೋಗುವಂತೆ ಅವನಿಗೆ ಒತ್ತಾಯ ಮಾಡಿ, ಅವನ ಮೇಲೆ ಕ್ರೂಜೆಯನ್ನು ಮಡಗಿದರು. ಮತ್ತಾ. ೨೭, ೩೧. ೩೨. ಮಾರ್ಕ. ೧೫, ೨೦. ೨೧. ಲೂಕ. ೨೩, ೨೬. ಯೋಹಾ. ೧೯, ೧೬. ೧೭.

ದೊಡ್ಡ ಜನ ಜಂಗುಳಿಯು, ಅವನಿಗಾಗಿ ಬಡಕೊಂಡು ಅಳುವ ಹೆಂಗಸರೊಡನೆ, ಅವನನ್ನು ಹಿಂಬಳಿಸಲಾಗಿ, ಯೇಸು ಅವರ ಕಡೆಗೆ ತಿರುಗಿ ಕೊಂಡು, ನುಡಿದದ್ದು: ಯೆರೂಸಲೇಮಿನ ಮಗಳಂದಿರೇ, ನನಗಾಗಿ ಅಳ ಬೇಡಿರಿ. ನಿಮಗಾಗಿಯೂ ನಿಮ್ಮ ಮಕ್ಕಳಿಗಾಗಿಯೂ ಅಳಿರಿ; ಯಾಕಂದರೆ ಇಗೋ, ಬಂಜೆಯರೂ ಹೆರದ ಬಸುರುಗಳೂ ಹಾಲು ಕೊಡದ ಮೊಲೆಗಳೂ ಮಂಗಳವೆಂದು ಜನರು ಹೇಳುವ ದಿವಸಗಳು ಬರುತ್ತವೆ. ಆಗ ಬೆಟ್ಟಗಳಿಗೆ, ನಮ್ಮ ಮೇಲೆ ಬೀಳಿರೆಂತಲೂ, ಗುಡ್ಡಗಳಿಗೆ ನಮ್ಮನ್ನು ಮುಚ್ಚಿರೆಂತಲೂ, ಅವರು ಹೇಳ ತೊಡಗುವರು. ಯಾಕಂದರೆ ಹಶಿ ಮರದಲ್ಲಿ ಇಂತು ಮಾಡಿದರೆ, ಒಣ ಮರದಲ್ಲಿ ಏನಾಗುವದು? ಲೂಕ. ೨೩, ೨೭—೩೧.

ಆದರೆ ಬೇರೆ ಇಬ್ಬರು ಕೆಡಕರನ್ನು ಸಹ ಅವನೊಂದಿಗೆ ಕೊಲೆಯಾಗುವದಕ್ಕೆ ಕೊಂಡು ಹೋದರು. ಲೂಕ. ೨೩, ೩೨.

ಮತ್ತು ಅವರು ಗೊಲ್ಗೊಥವೆಂಬ ಸ್ಥಳಕ್ಕೆ ಬರಲಾಗಿ, ಬೋಳ ದ್ರಾಕ್ಷೇ ರಸ ವನ್ನವನಿಗೆ ಕುಡಿಯ ಕೊಟ್ಟರು. ಆದರೆ ಅವನದನ್ನು ರುಚಿ ನೋಡಿ, ಕುಡಿಯ ಲೊಲ್ಲದೆ, ತಕ್ಕೊಳ್ಳಲಿಲ್ಲ. ಮತ್ತಾ. ೨೭, ೩೩. ೩೪. ಮಾರ್ಕ. ೧೫, ೨೩.

ಅಲ್ಲಿ ಅವರು ಅವನನ್ನೂ ಅವನೊಂದಿಗೆ ಕಳ್ಳರಿಬ್ಬರನ್ನೂ, ಅವನ ಬಲಗಡೆ ಯಲ್ಲಿ ಒಬ್ಬನನ್ನು, ಎಡಗಡೆಯಲ್ಲಿ ಒಬ್ಬನನ್ನು, ಕ್ರೂಜಿಸಿದರು. ಅವನು ಅನ್ಯಾಯ ಗಾರರಲ್ಲಿ ಎಣಿಕೆಯಾದನೆಂಬ ಬರಹವು ಅಂತು ನೆರವೇರಿತು. ಮೂರನೆ ತಾಸಿಗೆ ಅವನನ್ನು ಕ್ರೂಜಿಸಿದರು. ಮತ್ತಾ. ೨೭, ೩೮. ಲೂಕ. ೨೩, ೩೩. ಯೋಹಾ. ೧೯, ೧೮. ಮಾರ್ಕ. ೧೫, ೨೫. ೨೭. ೨೮.

ಆದರೆ ಯೇಸು ಹೇಳಿದ್ದು: ತಂದೆಯೇ, ಅವರಿಗೆ ಬಿಡು. ತಾವು ಮಾಡುವ ದೇನಂದರಿಯರು. ಲೂಕ. ೨೩, ೩೪.

ಮತ್ತು ಅವನ ದೂರು ಬರಿಸಿ, ಅವನ ತಲೆಯ ಮೇಲ್ಗಡೆಯಲ್ಲಿ ಹಚ್ಚಿದರು. ಏನಂದರೆ ಪಿಲಾತನು ಮೇಲ್ಬರಹವನ್ನು ಬರೆದು, ಕ್ರೂಜೆಯ ಮೇಲೆ ಇರಿಸಿದನು. ಅವನು ಬರೆದದ್ದೇನಂದರೆ: ಯೆಹುದಿಯರ ಅರಸನಾಗಿರುವ ನಜರೇಥಿನವನಾದ ಯೇಸು. ಈ ಮೇಲ್ಬರಹವನ್ನು ಯೆಹುದಿಯರಲ್ಲಿ ಹಲಬರು ಓದಿ ಕೊಂಡರು. ಯಾಕಂದರೆ ಯೇಸು ಕ್ರೂಜಿತನಾದ ಸ್ಥಳವು ಪಟ್ಟಣಕ್ಕೆ ಹತ್ತರವಾಗಿತ್ತು. ಮತ್ತು ಅದು ಇಬ್ರಿಯ ಗ್ರೇಕ ಲತೀನ ನುಡಿಗಳಲ್ಲಿ ಬರೆದಿತ್ತು. ಹೀಗಿರಲಾಗಿ ಯೆಹುದಿ ಯರ ಪ್ರಧಾನಯಾಜಕರು ಪಿಲಾತನಿಗೆ: ಯೆಹುದಿಯರ ಅರಸನೆಂದಲ್ಲ, ಯೆಹುದಿ ಯರ ಅರಸನಾಗಿದ್ಧೇನೆಂದು ಹೇಳಿದವನೆಂದು ಬರೆಯ ಬೇಕು ಅನ್ನಲು, ಪಿಲಾತನು: ನಾನು ಬರೆದದ್ದನ್ನು ಬರೆದಿದ್ಧೇನೆಂದು ಮಾರ್ನುಡಿದನು. ಮತ್ತಾ. ೨೭, ೩೭. ಲೂಕ. ೨೩, ೩೮. ಮಾರ್ಕ. ೧೫, ೨೬. ಯೋಹಾ. ೧೯, ೧೯—೨೨.

ಇದಲ್ಲದೆ ದಳದವರು ಯೇಸುವನ್ನು ಕ್ರೂಜಿಸಿದ ಬಳಿಕ, ಅವನ ಉಡವುಗಳ ನ್ನು ತೆಗದು, ಒಬ್ಬೊಬ್ಬ ದಳದವನಿಗೆ ಒಂದೊಂದು ಪಾಲಾಗಿ ನಾಲ್ಕು ಪಾಲು ಮಾಡಿದರು. ಅಂಗಿಯನ್ನು ಸಹ ತಕ್ಕೊಂಡರು. ಆದರೆ ಅಂಗಿಯು ಹೊಲಿಗೆಯಿ ಲ್ಲದೆ, ಮೇಲಿನಿಂದಲೇ ಇಡಿ ನೇಯಿದದ್ದಾಗಿರುವದರಿಂದ, ಅದನ್ನು ಕತ್ತರಿಸದೆ, ಯಾರಿಗೆ ಆಗುವದೆಂಬದಕ್ಕೆ ಚೀಟು ಹಾಕುವಾ ಎಂದು, ತಮ್ಮೊಳಗೆ ಹೇಳಿ ಕೊಂ ಡರು. ನನ್ನ ಉಡಿಕೆಗಳನ್ನು ಪಾಲಿಟ್ಟು ಕೊಂಡು, ನನ್ನ ಅಂಗಿಗೆ ಚೀಟು ಹಾಕಿದ ರು ಎಂಬ ಬರಹವು ನೆರವೇರುವಂತೆ, ದಳದವರು ಇಂತು ಮಾಡಿದರು. ಮತ್ತು ಅಲ್ಲಿ ಕೂತು ಕೊಂಡು, ಅವನನ್ನು ಕಾಯುತ್ತಿದ್ದರು. ಯೋಹಾ. ೧೯, ೨೩. ೨೪. ಮತ್ತಾ. ೨೭, ೩೫. ೩೬. ಮಾರ್ಕ. ೧೫, ೨೪. ಲೂಕ. ೨೩, ೩೪.

ಜನಾಂಗವು ನೋಡುತ್ತಾ ನಿಂತಿತು. ಹಾದು ಹೋಗುವವರು ತಮ್ಮ ತಲೆಗ ಳನ್ನಲ್ಲಾಡಿಸಿ: ಅಹಾ, ದೇವಾಲಯವನ್ನು ಕೆಡವಿ, ಮೂರು ದಿವಸದೊಳಗೆ ಕಟ್ಟು ವವನೇ! ನಿನ್ನನ್ನು ನೀನೇ ರಕ್ಷಿಸಿಕೋ! ನೀನು ದೇವರ ಮಗನಾಗಿದ್ದರೆ, ಕ್ರೂಜೆ ಯಿಂದ ಇಳಿದು ಬಾ! ಎಂದು, ಅವನಿಗೆ ಬೈದರು. ಅದೇ ಮೇರೆಗೆ ಪ್ರಧಾನಯಾ ಜಕರು ಶಾಸ್ತ್ರಿಗಳ ಮತ್ತು ಹಿರಿಯರ ಕೂಡ ಅವನನ್ನಣಕಿಸಿ: ಹೆರರನ್ನು ರಕ್ಷಿಸಿದ ನು. ತನ್ನನ್ನು ರಕ್ಷಿಸಿ ಕೊಳ್ಳಲಾರನು. ದೇವರು ಆದು ಕೊಂಡ ಕ್ರಿಸ್ತನೆಂಬ ಇಸ್ರ ಯೇಲನ ಅರಸನಾಗಿದ್ದರೆ, ಈಗ ಕ್ರೂಜೆಯಿಂದ ಇಳಿದು ಬರಲಿ. ಅದನ್ನು ನೋ ಡಲು, ಅವನಲ್ಲಿ ವಿಶ್ವಾಸವಿಡುತ್ತೇವೆ. ದೇವರನ್ನು ನಂಬಿದನು. ಅವನಿಗೆ ಒಲಿದರೆ, ಅವನನ್ನು ತಪ್ಪಿಸಲಿ. ದೇವರ ಮಗನಾಗಿದ್ದೇನೆಂದು ಹೇಳಿದನಲ್ಲವೋ? ಅಂದರು. ಲೂಕ. ೨೩, ೩೫. ೩೬. ಮತ್ತಾ. ೨೭, ೩೯—೪೩. ಮಾರ್ಕ. ೧೫, ೨೯—೩೨.

ಮತ್ತು ತೂಗಾಡುವ ಕೆಡಕರಲ್ಲಿ ಒಬ್ಬನು: ನೀನು ಕ್ರಿಸ್ತನಾಗಿದ್ದರೆ, ನಿನ್ನನ್ನೂ ನಮ್ಮನ್ನೂ ರಕ್ಷಿಸು! ಎಂದು, ಅವನಿಗೆ ಬೈಯಲಾಗಿ, ಬೇರೊಬ್ಬನು ಅವನನ್ನು ಗದ ರಿಸಿ, ಅದೇ ಆಜ್ಞೆಗೊಳಗಾದ ನೀನೂ ದೇವರಿಗೆ ಹೆದರುವದಿಲ್ಲವೋ? ನಾವಾದರೂ ನ್ಯಾಯವಾಗಿ ಆಜ್ಞೆಗೊಳಗಾದೆವು; ಯಾಕಂದರೆ ನಾವು ಗೈದ ಕೆಲಸಗಳಿಗೆ ತಕ್ಕ ಫಲವನ್ನು ಅನುಭವಿಸುತ್ತೇವೆ. ಆದರೆ ಇವನು ಸಮವಲ್ಲದ್ದೇನೂ ಗೇಯಲಿಲ್ಲ ವೆಂದು ಹೇಳಿ, ಯೇಸುವಿಗೆ: ಒಡೆಯನೇ, ನಿನ್ನ ರಾಜ್ಯದಲ್ಲಿ ಬರುವಾಗ, ನನ್ನನ್ನು ನೆನಸು, ಅಂದನು. ಯೇಸು ಅವನಿಗೆ: ಆಮೆನ್ ನಿನಗೆ ಹೇಳುತ್ತೇನೆ, ಈ ಹೊತ್ತು ನನ್ನೊಂದಿಗೆ ಪರದೈಸದಲ್ಲಿರುವಿ ಎಂದು ನುಡಿದನು. ಲೂಕ. ೨೩, ೩೯—೪೩.

ಆದರೆ ಯೇಸುವಿನ ಕ್ರೂಜೆಯ ಹತ್ತರ ಅವನ ತಾಯಿಯೂ, ಅವನ ತಾಯಿ ಯ ಸಹೋದರಿಯಾಗಿರುವ ಕ್ಲೋಫನ ಹೆಂಡತಿಯಾದ ಮರಿಯಳೂ, ಮಗ್ದಲದ ವಳಾದ ಮರಿಯಳೂ, ನಿಂತಿದ್ದರು. ಯೇಸು ತನ್ನ ತಾಯಿಯೂ ತಾನು ಪ್ರೀತಿ ಮಾಡಿದ ಶಿಷ್ಯನೂ ಹತ್ತರ ನಿಂತಿರುವದನ್ನು ನೋಡಿ, ತನ್ನ ತಾಯಿಗೆ: ಸ್ತ್ರೀಯೇ, ಇಗೋ, ನಿನ್ನ ಮಗನು! ಅಂದನು. ಬಳಿಕ ಆ ಶಿಷ್ಯನಿಗೆ: ಇಗೋ, ನಿನ್ನ ತಾಯಿ ಯು! ಅಂದನು. ಆ ಘಳಿಗೆಯಿಂದ ಆ ಶಿಷ್ಯನು ಅವಳನ್ನು ತನ್ನ ಮನೆಯಲ್ಲಿ ಶೇ ರಿಸಿ ಕೊಂಡನು. ಯೋಹಾ. ೧೯, ೨೫—೨೭.

ಹೆಚ್ಚು ಕಡಿಮೆ ಆರನೆ ತಾಸಾದಾಗ ದೇಶವೆಲ್ಲಾದರ ಮೇಲೆ ಒಂಭತ್ತನೆ ತಾ ಸಿನ ವರೆಗೂ ಕತ್ತಲಾಯಿತು. ಸೂರ್ಯನು ಕತ್ತಲಾದನು. ಹೆಚ್ಚು ಕಡಿಮೆ ಒಂ ಭತ್ತನೆ ತಾಸಿನಲ್ಲಿ ಯೇಸು: ಎಲೀ! ಎಲೀ! ಲಮ್ಮಾಸಬಖ್ತಾನಿ ಎಂದು, ದೊಡ್ಡ ಧ್ವನಿ ಯಿಂದ ಕೂಗಿದನು; ಹಾಗಂದರೆ, ನನ್ನ ದೇವನೇ! ನನ್ನ ದೇವನೇ! ಯಾಕೆ ನನ್ನನ್ನು ಬಿಟ್ಟು ಬಿಟ್ಟಿ? ಅಲ್ಲಿ ನಿಂತವರಲ್ಲಿ ಕೆಲವರು ಅದನ್ನು ಕೇಳಿ: ಇಗೋ, ಎಲೀಯನನ್ನು

ಕರೆಯುತ್ತಾನೆ, ಅಂದರು. ಲೂಕ. ೨೩, ೪೪. ೪೫. ಮತ್ತಾ. ೨೭, ೪೫—೪೭. ಮಾರ್ಕ. ೧೫, ೩೩—೩೫.

ತರುವಾಯ ಯೇಸು, ಎಲ್ಲಾ ಈಗ ನೆರವೇರಿತೆಂದು ತಿಳುಕೊಂಡು, ಬರಹವು ನೆರವೇರುವಂತೆ, ಬಾಯಾರುತ್ತದೆಂದು, ನುಡಿದನು. ಹುಳಿ ರಸ ತುಂಬಿದ ಪಾತ್ರವು ಅಲ್ಲಿ ಇರಲಾಗಿ, ಅವರು ಪಾಚಿಯನ್ನು ಹುಳಿ ರಸದಿಂದ ತುಂಬಿಸಿ, ಹಿಸ್ಸೋಪಿನ ಕೋಲಿಗೆ ಸುತ್ತಿ, ಅವನ ಬಾಯಿಗೆ ತಗಲಿಸಿ, ಅವನಿಗೆ ಕುಡಿಯ ಕೊಟ್ಟರು. ಉಳಿದವರು: ಬಿಡು! ಎಲೀಯನು ಬಂದು, ಅವನನ್ನು ರಕ್ಷಿಸುವನೇನೋ? ನೋಡೋಣ! ಅಂದರು. ಯೋಹಾ. ೧೯, ೨೮. ೨೯. ಮತ್ತಾ. ೨೭, ೪೮. ೪೯. ಮಾರ್ಕ. ೧೫, ೩೬.

ಯೇಸು ಹುಳಿರಸವನ್ನು ತಕ್ಕೊಂಡ ಮೇಲೆ, ನೆರವೇರಿತು! ಅಂದನು. ಮತ್ತು ಯೇಸು ಮರಳಿ ದೊಡ್ಡ ಧ್ವನಿಯಿಂದ ಕೂಗಿ: ತಂದೆಯೇ! ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸಿ ಕೊಡುತ್ತೇನೆ, ಅಂದನು. ಇದನ್ನು ನುಡಿದು, ತಲೆ ಬಾಗಿಸಿ, ಪ್ರಾಣ ಬಿಟ್ಟನು. ಯೋಹಾ. ೧೯, ೩೦. ಲೂಕ. ೨೩, ೪೬. ಮತ್ತಾ. ೨೭, ೫೦. ಮಾರ್ಕ. ೧೫, ೩೭.

ಆಗ ಇಗೋ, ದೇವಾಲಯದ ತೆರೆ ಮೇಲಿನಿಂದ ಕೆಳಗಿನ ವರೆಗೆ ಎರಡಾಗಿ ಹರಿದು ಹೋಯಿತು. ಗೋರಿಗಳು ತೆರೆದು ಹೋದವು. ಮಲಗಿದ್ದ ಹಲಬರಾದ ಪವಿತ್ರರ ಶರೀರಗಳು ಎಬ್ಬಿಸಲಾದವು. ಅವನು ಎದ್ದ ಮೇಲೆ, ಅವರು ಗೋರಿಗಳಿಂದ ಹೊರಟು, ಪವಿತ್ರ ಪಟ್ಟಣದಲ್ಲಿ ಶೇರಿ, ಹಲಬರಿಗೆ ಕಾಣಿಸಿ ಕೊಂಡರು. ಮತ್ತಾ. ೨೭, ೫೧—೫೩. ಮಾರ್ಕ. ೧೫, ೩೮. ಲೂಕ. ೨೩, ೪೫.

ಆದರೆ ಅವನೆದುರಿನಲ್ಲಿ ಹತ್ತರ ನಿಂತ ಶತಾಧಿಪತಿಯೂ, ಅವನೊಂದಿಗೆ ಯೇಸುವನ್ನು ಕಾಯುವವರೂ, ಭೂಕಂಪವನ್ನೂ ಅವನು ಅಂತು ಕೂಗಿ ಪ್ರಾಣ ಬಿಟ್ಟದ್ದನ್ನೂ ನೋಡಿ, ಶಾನೆ ಹೆದರಿ, ದೇವರನ್ನು ಹೊಗಳಿ: ನಿಶ್ಚಯವಾಗಿ ಈ ಮನುಷ್ಯನು ನೀತಿವಂತನಾಗಿಯೂ ದೇವರ ಮಗನಾಗಿಯೂ ಇದ್ದನು, ಅಂದರು. ಮತ್ತು ಆ ನೋಟಕ್ಕೆ ಕೂಡಿ ಬಂದ ಜಂಗುಳಿಯವರೆಲ್ಲರು ಆದದ್ದನ್ನು ನೋಡಿ, ಎದೆ ಬಡಕೊಂಡು, ತಿರಿಗಿ ಹೋದರು. ಮತ್ತಾ. ೨೭, ೫೪. ಮಾರ್ಕ. ೧೫, ೩೯. ಲೂಕ. ೨೩, ೪೭. ೪೮.

ಆದರೆ ಅವನ ಗುರ್ತದವರೆಲ್ಲರೂ, ಅವನೊಂದಿಗೆ ಗಲಿಲಾಯದಿಂದ ಬಂದು, ಅವನನ್ನು ಹಿಂಬಳಿಸಿ, ಅವನಿಗೆ ಊಳಿಗ ಮಾಡಿದ ಹೆಂಗಸರೂ, ಇದನ್ನೆಲ್ಲಾ ನೋಡುತ್ತಾ, ದೂರದಲ್ಲಿ ನಿಂತಿದ್ದರು. ಅವರಲ್ಲಿ ಮಗ್ದಲದವಳಾದ ಮರಿಯಳೂ, ಚಿಕ್ಕ ಯಾಕೋಬನಿಗೂ ಯೋಸೆಗೂ ತಾಯಿಯಾದ ಮರಿಯಳೂ, ಜೆಬೆದಾಯನ ಮಕ್ಕಳ ತಾಯಿಯಾದ ಸಲೋಮೆಯೂ, ಅವನೊಂದಿಗೆ ಯೆರೂಸಲೇಮಿಗೆ ಏರಿ ಬಂದ

ಹಲಬರಾದ ಬೇರೆ ಹೆಂಗಸರೂ ಇದ್ದರು. ಮತ್ತಾ. ೨೭, ೫೫. ೫೬. ಮಾರ್ಕ. ೧೫, ೪೦. ೪೧. ಲೂಕ. ೨೩, ೪೯.

ಬಳಿಕ ಯೆಹುದಿಯರು ದೊಡ್ಡದಾದ ಆ ಸಬ್ಬತಿಗೆ ಸಿದ್ಧ ಮಾಡುವ ದಿವಸವು ಇರಲಾಗಿ, ಸಬ್ಬತಿನಲ್ಲಿ ಹೆಣಗಳು ಕ್ರೂಜೆಯಲ್ಲಿರದಂತೆ, ಅವರ ಕಾಲುಗಳನ್ನು ಮುರಿದು, ಅವರನ್ನಿಳಿಸ ಬೇಕೆಂದು, ಪಿಲಾತನನ್ನು ಬೇಡಿ ಕೊಂಡರು. ಆಗ ದಳದವರು ಬಂದು, ಯೇಸುವಿನೊಡನೆ ಕ್ರೂಜಿತನಾದ ಮೊದಲನೆಯವನ ಕಾಲುಗಳನ್ನೂ ಎರಡನೆಯವನ ಕಾಲುಗಳನ್ನೂ ಮುರಿದು, ಯೇಸುವಿನ ಬಳಿಗೆ ಬಂದು, ಅವನು ಮುಂಚೆಯೇ ಸತ್ತಿರುವದನ್ನು ನೋಡಿ, ಅವನ ಕಾಲುಗಳನ್ನು ಮುರಿಯಲಿಲ್ಲ. ಆದರೆ ದಳದವರಲ್ಲಿ ಒಬ್ಬನು ಈಟಿಕ್ಕಿ ಅವನ ಪಕ್ಕೆಯನ್ನು ತಿವಿದನು. ಕೂಡಲೇ ನೀರೂ ನೆತ್ತರವೂ ಹೊರಗೆ ಬಂದವು. ನೋಡಿದವನು ಸಾಕ್ಷಿ ಕೊಟ್ಟಿದ್ದಾನೆ. ಅವನ ಸಾಕ್ಷಿಯು ನಿಜವಾಗಿದೆ. ಮತ್ತು ನೀವೂ ನಂಬುವಂತೆ, ಸತ್ಯವನ್ನು ಹೇಳುತ್ತಾನೆಂದು, ಅವನು ಬಲ್ಲನು. ಯಾಕಂದರೆ, ಅವನ ಎಲುವೊಂದೂ ಮುರಿದು ಹೋಗದೆಂಬ ಬರಹವು ನೆರವೇರುವಂತೆ, ಇವು ಉಂಟಾದವು. ಮತ್ತು ಬೇರೆ ಬರಹವು: ತಾವು ತಿವಿದವನನ್ನು ನೋಡುವರೆಂದು, ಹೇಳುತ್ತದೆ. ಯೋಹಾ. ೧೯, ೩೧—೩೭.

೭. ಯೇಸು ಹೂಳಿಡೋಣವಾದದ್ದು.

ಬಳಿಕ, ಇಗೋ, ಸಬ್ಬತಿನ ಮುಂಚಿನ ದಿವಸವಾದ ಸಿದ್ಧ ಮಾಡುವ ದಿವಸವಾಗಿದ್ದದರಿಂದ, ಆಗಲೇ ಕಡೆವಗಲು ಬಂದ ಕಾರಣ, ಯೆಹುದಿಯರ ಪಟ್ಟಣವಾದ ಅರಿಮಥಾಯದ ಯೋಸೆಫನೆಂಬ ಹೆಸರ್ವಾಶಿ ಮಂತ್ರಿಯಾದ ಐಶ್ವರ್ಯವುಳ್ಳ ಒಬ್ಬ ಮನುಷ್ಯನು ಬಂದನು. ಇವನು ಒಳ್ಳೆಯವನೂ ನೀತಿವಂತನೂ ಆಗಿದ್ದು, ಅವರ ಆಲೋಚನೆಗೂ ಕೆಲಸಕ್ಕೂ ಸಮ್ಮತಿ ಪಡದೆ ಇದ್ದನು. ಅವನೂ ದೇವರಾಜ್ಯವನ್ನು ಎದುನೋರ್ಡುವವನಾಗಿ ಯೇಸುವಿನ ಶಿಷ್ಯನಾಗಿದ್ದನು. ಆದರೆ ಯೆಹುದಿಯರ ಭಯದಿಂದ ಮರೆಯಾಗಿ ಇದ್ದನು. ಇವನು ಗುಂಡೆಗೊಂಡು, ಪಿಲಾತನ ಬಳಿಗೆ ಬಂದು, ಯೇಸುವಿನ ದೇಹವನ್ನು ಕೊಂಡು ಹೋಗುವ ಅಪ್ಪಣೆಯನ್ನು ಕೇಳಿದನು. ಆದರೆ ಪಿಲಾತನು, ಅವನು ಇಷ್ಟರೊಳಗೆ ಸತ್ತು ಹೋದನೋ ಎಂದು ಚೋದ್ಯಗೊಂಡು, ಶತಾಧಿಪತಿಯನ್ನು ಕರೆದು, ಅವನು ಸತ್ತು ಆಯಿತೋ? ಎಂದು, ವಿಚಾರಿಸಿ, ಶತಾಧಿಪತಿಯಿಂದ ತಿಳುಕೊಳ್ಳಲು, ಹೆಣವನ್ನು ಯೋಸೆಫನಿಗೆ ಕೊಡ ಬೇಕೆಂದು ಬೆಸಗಿದನು. ಆಗಲವನು ನಾರುಮಡಿಯನ್ನು ಕೊಂಡು ಕೊಂಡು ಬಂದು, ಅವನನ್ನಿಳಿಸಿ, ಗೋರಿಯಲ್ಲಿ ಮಡಗಿದನು. ಮತ್ತಾ. ೨೭, ೫೭—೫೯. ಮಾರ್ಕ. ೧೫, ೪೨—೪೬. ಲೂಕ. ೨೩, ೫೦—೫೩. ಯೋಹಾ. ೧೯, ೩೮.

ಇದಲ್ಲದೆ ಮೊದಲು ಇರುಳಲ್ಲಿ ಯೇಸುವಿನ ಬಳಿಗೆ ಬಂದ ನಿಕೊದೇಮನು ಬೋಳವೂ ಅಗರೂ ಬೆರಿಕೆಯಾದ ಹೆಚ್ಚು ಕಡಿಮೆ ನೂರು ಶೇರು ತಕ್ಕೊಂಡು ಬಂದನು. ಮತ್ತು ಯೇಸುವಿನ ಶವವನ್ನು ತಕ್ಕೊಂಡು, ಯೆಹುದಿಯರು ಹೂಣಿಡುವ ವಾಡಿಕೆಯ ಪ್ರಕಾರ ಅದನ್ನು ಸುಗಂಧಗಳೊಂದಿಗೆ ಬಟ್ಟೆಗಳಿಂದ ಕಟ್ಟಿದರು. ಯೋಹಾ. ೧೯, ೩೯. ೪೦.

ಆದರೆ ಅವನು ಕ್ರೂಜಿತನಾದ ಬಳಿಯಲ್ಲಿ ತೋಟವೂ, ತೋಟದಲ್ಲಿ ಯಾರೂ ಎಂದೂ ಇಟ್ಟಿರದಂಥ, ಯೋಸೆಫನು ತನಗಾಗಿ ಬಂಡೆಯಲ್ಲಿ ತೋಡಿಸಿದಂಥ ಹೊಸ ಸಮಾಧಿಯುಂಟು. ಆ ಸಮಾಧಿಯು ಸರಿಸವಾದದರಿಂದ, ಯೆಹುದಿಯರು ಸಿದ್ಧ ಮಾಡುವ ದಿವಸದ ಸಲವಾಗಿ ಯೇಸುವನ್ನು ಅಲ್ಲಿ ಮಡಗಿದರು. ಆದರೆ ಮಗ್ದಲದವಳಾದ ಮರಿಯಳೂ, ಯೋಸೆಯ ಮರಿಯ ಮುಂತಾದ ಗಲಿಲಾಯದಿಂದ ಅವನೊಂದಿಗೆ ಬಂದ ಹೆಂಗಸರೂ ಅಲ್ಲಿ ಸಮಾಧಿಗೆದುರಾಗಿ ಕೂತು ಕೊಂಡು, ಸಮಾಧಿಯನ್ನೂ ಅವರವನ ಶವವನ್ನು ಅದರಲ್ಲಿ ಮಡಗಿದ ತೆರವನ್ನೂ ನೋಡಿದರು. ಬಳಿಕ ಯೋಸೆಫನು ಸಮಾಧಿಯ ಬಾಗಲಿಗೆ ದೊಡ್ಡ ಕಲ್ಲು ಹೊರಳಿಸಿ ಹೋದನು. ತರುವಾಯ ಅವರು ತಿರಿಗಿ ಹೋಗಿ, ಸುಗಂಧಗಳನ್ನೂ ತೈಲಗಳನ್ನೂ ಹವಣಿಸಿ, ಕಟ್ಟಳೆಯ ಮೇರೆಗೆ ಸಬ್ಬತಿನಲ್ಲಿ ತೀರುಗಡೆಯಾಗಿದ್ದರು. ಯೋಹಾ. ೧೯, ೪೧. ೪೨. ಮತ್ತಾ. ೨೭, ೬೦. ೬೧. ಮಾರ್ಕ. ೧೫, ೪೬. ೪೭. ಲೂಕ. ೨೩, ೫೩—೫೬.

ಆದರೆ ಸಿದ್ಧ ಮಾಡುವ ದಿವಸ ಕಳದ ಮಾರಣೆ ದಿವಸದಲ್ಲಿ ಪ್ರಧಾನಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ ಬಂದು: ಒಡೆಯಾ, ಆ ಮೋಸಗಾರನು ಬದುಕುತ್ತಿರುವಾಗ ಮೂರು ದಿವಸದ ಮೇಲೆ ಏಳುತ್ತೇನೆಂದು, ನುಡಿದದ್ದನ್ನು ನೆನಸಿ ಕೊಂಡೆವು. ಹೀಗಿರಲಾಗಿ ಅವನ ಶಿಷ್ಯರು ಇರುಳಲ್ಲಿ ಬಂದು, ಅವನನ್ನು ಕದ್ದು ಕೊಂಡು ಹೋಗಿ, ಸತ್ತವರಲ್ಲಿಂದ ಎದ್ದಿದ್ದಾನೆಂದು ಜನರಿಗೆ ನುಡಿದರೆ, ಎರಡನೆ ಮೋಸವು ಮೊದಲನೇದಕ್ಕಿಂತ ಕಡೆಯಾಗದಂತೆ, ಸಮಾಧಿಯನ್ನು ಮೂರನೆ ದಿನದ ವರೆಗೆ ಭದ್ರ ಮಾಡ ಬೆಸಂಗೊಡು, ಅಂದರು. ಪಿಲಾತನವರಿಗೆ: ನಿಮಗೆ ಕಾವಲಿಯುಂಟು. ಹೋಗಿ, ನಿಮ್ಮ ಕೈಲಾದಷ್ಟು ಭದ್ರ ಮಾಡಿರಿ, ಅನ್ನಲಾಗಿ, ಅವರು ಹೋಗಿ, ಕಲ್ಲಿಗೆ ಮುದ್ರೇ ಹಾಕಿ, ಸಮಾಧಿಯನ್ನು ಕಾವಲಿಯಿಂದ ಭದ್ರ ಮಾಡಿದರು. ಮತ್ತಾ. ೨೭, ೬೨—೬೬.

1875

URGY

F THE

ELICAL MISSION CHURCHES

IN

STERN INDIA

-ವಲಂಬಿತವಾದ

ನ್ ಮಿಶನ್ ಸಭೆಗಳ

ಧನಾಪದ್ಧತಿ

MISSIONS-BIBLIOTHEK IN BASEL

GALORE

K & TRACT DEPOSITORY

1878 Cc XIV. 105

VierFarbSelector Standard* - Euroskala Offset
Copyright 4/1999 YxyMaster GmbH www.yxymaster.com